" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು
## ನೂರ ನಲವತ್ತೈದನೆಯ ಅಧಿವೇಶನ

## ವಿಷಯಾನುಕ್ರಮಣಿಕೆ (Index)

ದಿನಾಂಕ: 22ನೇ ಡಿಸೆಂಬರ್ 2021
ಬುಧವಾರ

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1027-ಏತ ನೀರಾವರಿ ಯೋಜನೆಗಳ ಭೂ ಸಂತ್ರಸ್ಥರಿಗೆ ಪರಿಹಾರ ನೀಡುವ ಬಗ್ಗೆ**
-ಶ್ರೀ ಎಂ.ಎ.ಗೋಪಾಲಸ್ವಾಮಿ
-ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1075-ಡೀಮ್ಡ್ ಫಾರೆಸ್ಟ್ ಕಾರಣದಿಂದ ತಡೆಹಿಡಿಯಲಾದ ಭೂ ಮಂಜೂರಾತಿ ಪ್ರಕರಣಗಳ ಕುರಿತು**
-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
-ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1101-ಕೊಡಗು ಜಿಲ್ಲೆಯಲ್ಲಿ ಆರ್.ಟಿ.ಸಿ.ಯಲ್ಲಿ ಕಾಫಿ ಮತ್ತು ಕರಿಮೆಣಸುಗಳನ್ನು 3 ಅಥವಾ 6 ತಿಂಗಳಿಗೊಮ್ಮೆ ನಮೂದಿಸುತ್ತಿರುವುದರಿಂದ ಆಗುತ್ತಿರುವ ತೊಂದರೆ ಬಗ್ಗೆ**
-ಶ್ರೀಮತಿ ಎಸ್.ವೀಣಾ ಅಚ್ಚಯ್ಯ
-ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1045-ವಸತಿ ಯೋಜನೆಗಳ ಫಲಾನುಭವಿಗಳ ಸಾಲ ಮನ್ನಾ ಮಾಡುವ ಬಗ್ಗೆ**
-ಶ್ರೀ ಆರ್.ಬಿ.ತಿಮ್ಮಾಪೂರ
-ಶ್ರೀ ವಿ.ಸೋಮಣ್ಣ(ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**1108-ರಾಜ್ಯದಲ್ಲಿರುವ ಗೋಮಾಳಗಳ ಕುರಿತು**
-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1041-ಲೋಕೋಪಯೋಗಿ ಇಲಾಖೆಯಲ್ಲಿ ವಿದ್ಯುತ್ ವಿಭಾಗದ ಅಭಿಯಂತರರ ಕುರಿತು**
-ಶ್ರೀಮತಿ ಭಾರತಿ ಶೆಟ್ಟಿ
-ಶ್ರೀ ಸಿ.ಸಿ.ಪಾಟೀಲ್(ಲೋಕೋಪಯೋಗಿ ಸಚಿವರು)

**1132-ಹಿಂದೂ ಧಾರ್ಮಿಕ ಯಾತ್ರಾರ್ಥಿಗಳಿಗೆ ಕಾಶಿ, ಕೈಲಾಸ-ಮಾನಸ ಸರೋವರಗಳಿಗೆ ಸಹಾಯ ಧನ ಕುರಿತು**
-ಡಾ: ತೇಜಸ್ವಿನಿ ಗೌಡ
-ಶ್ರೀಮತಿ ಶಶಿಕಲಾ ಅ. ಜೊಲ್ಲೆ(ಮುಜರಾಯಿ ಹಜ್ ಹಾಗೂ ವಕ್ಫ್ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**1111- ರಾಜ್ಯದ ರೈತರ ಜಮೀನಿನ ಅಕ್ರಮ-ಸಕ್ರಮದ ಅರ್ಜಿಗಳ ಬಗ್ಗೆ**
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1117-ಬೀದರ್ ಜಿಲ್ಲೆಯ ವಸತಿ ಯೋಜನೆಗಳ ಬಗ್ಗೆ**
-ಶ್ರೀ ವಿಜಯಸಿಂಗ್
-ಶ್ರೀ ವಿ.ಸೋಮಣ್ಣ(ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2. ಪ್ರಕಟಣೆ**

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕಾಪ್ರಾಡಿ ಗ್ರಾಮ ವರಾಹಿ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ಸಮೀಪ ನದಿ ದಂಡೆ ಸಂರಕ್ಷಣಾ ಕಾಮಗಾರಿಗೆ ಅನುದಾನ ಒದಗಿಸುವ ಬಗ್ಗೆ.**
-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
-ಶ್ರೀ ವಿ.ಸೋಮಣ್ಣ(ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಆ) ವೈದ್ಯಕೀಯ ಶಿಕ್ಷಣ ಇಲಾಖೆಯ ಖಾಯಂ ಶುಶ್ರೂಷಕಾಧಿಕಾರಿಗಳಿಗೆ ಕೋವಿಡ್-19 ಪ್ರೋತ್ಸಾಹ ಧನ, ರಿಸ್ಕ್ ಅಲೋಯನ್ಸ್ ಮಂಜೂರು ಮಾಡುವ ಬಗ್ಗೆ.**
-ಶ್ರೀ ಪ್ರಕಾಶ್ ಕೆ.ರಾಥೋಡ್
-ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**ಇ) ರಾಜ್ಯದ ಎಲ್ಲಾ ಗ್ರಂಥಾಲಯ ಮೇಲ್ವಿಚಾರಕರ ಸಮಸ್ಯೆಗಳ ಬಗ್ಗೆ**
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ವಿ.ಸೋಮಣ್ಣ(ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಈ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗೋಶಾಲೆ ತೆರೆಯುವ ಬಗ್ಗೆ.**
-ಶ್ರೀ ಕೆ.ಹರೀಶ್ ಕುಮಾರ್
-ಶ್ರೀ ಪ್ರಭು ಬಿ.ಚವ್ಹಾಣ್ (ಪಶು ಸಂಗೋಪನೆ ಸಚಿವರು)

**ಉ) ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಳೆದ 8 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನಿವೃತ್ತ ಡಾ:ಓ.ಎಸ್.ಸಿದ್ದಪ್ಪ ಅವರನ್ನು ಬದಲಾಯಿಸುವ ಬಗ್ಗೆ.**
-ಶ್ರೀ ಆರ್.ಪ್ರಸನ್ನ ಕುಮಾರ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಊ) ಕರ್ನಾಟಕ ಪವರ್ ಕಾರ್ಪೋರೇಷನ್‌ನಲ್ಲಿ ವಿವಿಧ ತಾಂತ್ರಿಕ ಹುದ್ದೆಗಳನ್ನು ಭರ್ತಿ ಮಾಡಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ಬಗ್ಗೆ.**

-ಡಾ: ಕೆ.ಗೋವಿಂದರಾಜ್

-ಶ್ರೀ ವಿ.ಸುನೀಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**ಋ) ಬೆಂಗಳೂರು ನಗರದಲ್ಲಿ ರಾಜಕಾಲುವೆ** ಮೋರಿ **ಪಕ್ಕದಲ್ಲಿರುವ ಮನೆಗಳ ನಿರ್ಮಾಣ ಕುರಿತು.**

-ಯು.ಬಿ.ವೆಂಕಟೇಶ್

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
(ಮುಖ್ಯಮಂತ್ರಿಗಳ ಪರವಾಗಿ)

**ಎ) ದೇಶದಾದ್ಯಂತ ಕೆಳದಿ ಅರಸರ ಧಾರ್ಮಿಕ ಕೊಡುಗೆಯನ್ನು ದಾಖಲಿಸಲು ಹಾಗೂ ಆ ಸ್ಥಳಗಳನ್ನು ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ.**

-ಡಾ:ತೇಜಸ್ವಿನಿಗೌಡ

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಏ) ಕುಣಬಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ.**

-ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**ಐ) ಕೋಲಾರ ಜಿಲ್ಲೆ ಬಂಗಾರಪೇಟೆ ಕಾಮಸಂದ್ರ ಬಳಿ ಯರಗೋಳ್ ಅಣೆಕಟ್ಟು ಇನ್ನೂ ಉದ್ಘಾಟನೆಯಾಗದಿರುವ ಬಗ್ಗೆ.**

-ಶ್ರೀ ಗೋವಿಂದರಾಜು

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಒ) ಒಳಮೀಸಲಾತಿಯನ್ನು ಜಾರಿಗೊಳಿಸಲು ನ್ಯಾಯಮೂರ್ತಿ ಶ್ರೀ ಎ.ಜೆ.ಸದಾಶಿವ ಆಯೋಗ ವರದಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ.**

-ಶ್ರೀ ಆರ್.ಬಿ.ತಿಮ್ಮಾಪೂರ

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**ಓ) ಕುಡಿಯುವ ನೀರಿನಲ್ಲಿ ಯುರೇನಿಯಂ ಸಾಂದ್ರತೆ ಹೆಚ್ಚಾಗಿರುವ ಬಗ್ಗೆ.**

- -ಶ್ರೀ ಕೆ.ಎ.ತಿಪ್ಪೇಸ್ವಾಮಿ

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ**

**"ಬಿ.ಬಿ.ಎಂ.ಪಿ.ಯ ರಾಜಕಾಲುವೆ, ರಸ್ತೆ, ಮೂಲಭೂತ ಸೌಕರ್ಯ, ಯೋಜನೆ, ಘನತ್ಯಾಜ್ಯ ನಿರ್ವಹಣೆ ವಿಭಾಗಗಳಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ."**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**5. ಪ್ರಕಟಣೆ**

**6. ಕಾರ್ಯದರ್ಶಿಯವರ ವರದಿ**

**7. ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು(ಎರಡನೇ ತಿದ್ದುಪಡಿ) ವಿಧೇಯಕ, 2021**

-ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)(ಬೆಂಗಳೂರು ಹೊರತುಪಡಿಸಿ)

-ಶ್ರೀ ಕೆ.ಎ.ತಿಪ್ಪೇಸ್ವಾಮಿ

**(ವಿಧೇಯಕ ಅಂಗೀಕೃತವಾಯಿತು)**

**ಆ) ಕರ್ನಾಟಕ ಭೂ ಕಂದಾಯ (ತಿದುಪಡಿ) ವಿಧೇಯಕ, 2021**

-ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**(ವಿಧೇಯಕ ಅಂಗೀಕೃತವಾಯಿತು)**

**ಇ) ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021**

-ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ಸಿ.ಎಂ.ಇಬ್ರಾಹಿಂ
-ಶ್ರೀ ಪಿ.ಆರ್.ರಮೇಶ್
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಅಲ್ಲಂ ವೀರಭದ್ರಪ್ಪ
-ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಅರವಿಂದ ಕುಮಾರ್ ಅರಳಿ
-ಶ್ರೀ ಎನ್.ಅಪ್ಪಾಜಿಗೌಡ

**(ವಿಧೇಯಕ ಅಂಗೀಕೃತವಾಯಿತು)**

**ಈ) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2021**

-ಶ್ರೀ ಅರೆಬೈಲು ಶಿವರಾಂ ಹೆಬ್ಬಾರ್(ಕಾರ್ಮಿಕ ಸಚಿವರು) (ಕೃಷಿ ಸಚಿವರ ಪರವಾಗಿ)

-ಶ್ರೀ ಮರಿತಿಬ್ಬೇಗೌಡ
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**(ವಿಧೇಯಕ ಅಂಗೀಕೃತವಾಯಿತು)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉ) ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕ, 2021**

ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)
-ಶ್ರೀ ಸಿ.ಎಂ.ಇಬ್ರಾಹಿಂ
-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಮರಿತಿಬ್ಬೇಗೌಡ
-ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
-ಶ್ರೀ ಪ್ರಕಾಶ್ ಕೆ.ರಾಥೋಡ್
-ಶ್ರೀ ಅಲ್ಲಂ ವೀರಭದ್ರಪ್ಪ
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಎನ್.ರವಿಕುಮಾರ್
-ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
-ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)
-ಶ್ರೀ ಪ್ರತಾಪಸಿಂಹ ನಾಯಕ್ ಕೆ.
-ಡಾ: ತೇಜಸ್ವಿನಿ ಗೌಡ
-ಶ್ರೀ ಎನ್.ಅಪ್ಪಾಜಿಗೌಡ
-ಶ್ರೀ ಎಸ್.ವ್ಹಿ.ಸಂಕನೂರ
-ಶ್ರೀ ಪಿ.ಆರ್.ರಮೇಶ್
-ಶ್ರೀ ಅ.ದೇವೇಗೌಡ

**(ವಿಧೇಯಕ ಅಂಗೀಕೃತವಾಯಿತು)**

**7. ಪ್ರಕಟಣೆ**

**8. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಊ) ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು(ತಿದ್ದುಪಡಿ) ವಿಧೇಯಕ, 2021**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಶ್ರೀ ಪಿ.ಆರ್.ರಮೇಶ್
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಡಾ: ತೇಜಸ್ವಿನಿ ಗೌಡ
-ಶ್ರೀ ಬಿ.ಕೆ.ಹರಿಪ್ರಸಾದ್
-ಡಾ:ಸಿ.ಎನ್.ಅಶ್ವಥ್ ನಾರಾಯಣ(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)
-ಶ್ರೀ ಎನ್.ರವಿಕುಮಾರ್
-ಶ್ರೀ ಮರಿತಿಬ್ಬೇಗೌಡ
-ಶ್ರೀ ಕೆ.ಟಿ.ಶ್ರೀಕಂಠೇಗೌಡ

**(ವಿಧೇಯಕ ಅಂಗೀಕೃತವಾಯಿತು)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಋ) ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾನಿಲಯ ವಿಧೇಯಕ, 2021**

-ಡಾ:ಸಿ.ಎನ್.ಅಶ್ವಥ್ ನಾರಾಯಣ(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು)
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ಸಿ.ಎಂ.ಲಿಂಗಪ್ಪ
-ಶ್ರೀ ಮರಿತಿಬ್ಬೇಗೌಡ
-ಡಾ:ವೈ.ಎ.ನಾರಾಯಣಸ್ವಾಮಿ
-ಶ್ರೀ ನಸೀರ್ ಅಹ್ಮದ್
-ಶ್ರೀ ಎನ್.ಅಪ್ಪಾಜಿಗೌಡ
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಪ್ರಕಾಶ್ ಕೆ.ರಾಥೋಡ್
-ಡಾ: ತೇಜಸ್ವಿನಿ ಗೌಡ
-ಶ್ರೀ ಸಿ.ಎಂ.ಇಬ್ರಾಹಿಂ
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)

**(ವಿಧೇಯಕ ಅಂಗೀಕೃತವಾಯಿತು)**

**ಎ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ)(ಎರಡನೇ ತಿದ್ದುಪಡಿ) ವಿಧೇಯಕ, 2021**

-ಡಾ:ಸಿ.ಎನ್.ಅಶ್ವಥ್ ನಾರಾಯಣ(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಮರಿತಿಬ್ಬೇಗೌಡ
-ಶ್ರೀ ಶಶೀಲ್ ಜಿ.ನಮೋಶಿ
-ಡಾ:ವೈ.ಎ.ನಾರಾಯಣಸ್ವಾಮಿ
-ಶ್ರೀ ಪುಟ್ಟಣ್ಣ
-ಶ್ರೀ ಚಿದಾನಂದ್ ಎಂ.ಗೌಡ
-ಶ್ರೀ ಅರುಣ ಶಹಾಪುರ
-ಶ್ರೀ ಎಸ್.ವ್ಹಿ.ಸಂಕನೂರ

**(ವಿಧೇಯಕ ಅಂಗೀಕೃತವಾಯಿತು)**

**9. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**

**ವಿಷಯ: "ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ"**

-ಶ್ರೀ ಯು.ಬಿ.ವೆಂಕಟೇಶ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**1240/22-12-2021/10-50/ಬಿಕೆಪಿ-ಜಿಆರ್**

# ಕರ್ನಾಟಕ ವಿಧಾನ ಪರಿಷತ್ತು

**ಬುಧವಾರ, 22ನೇ ಡಿಸೆಂಬರ್, 2021**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 10 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠದಲ್ಲಿ ಉಪಸ್ಥಿತರಿದ್ದರು**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## 1. ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ಪ್ರಶ್ನೆ ಸಂಖ್ಯೆ 1027
### (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಎಂ.ಎ.ಗೋಪಾಲ ಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ನಮ್ಮ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ೫ ಏತ ನೀರಾವರಿ ಯೋಜನೆಗಳು ನಡೆಯುತ್ತಿವೆ. ಆದರೆ ಇಲ್ಲಿ ದಾಖಲೆಗಳನ್ನು ಕೇವಲ ೨ ಏತ ನೀರಾವರಿ ಯೋಜನೆಗೆ ಸಂಬಂಧಪಟ್ಟಂತೆ ಕಾಚೇನಹಳ್ಳಿ ಮತ್ತು ನುಗ್ಗೆಹಳ್ಳಿ ಏತ ನೀರಾವರಿ ಯೋಜನೆಗೆ ಮಾತ್ರ ಸಂಬಂಧಪಟ್ಟ ದಾಖಲೆಗಳನ್ನು ಕೊಟ್ಟಿದ್ದಾರೆ. ಹಿರಿಸಾವೆ, ಕಲ್ಲೇಸ್ವಾಮಿನಹಳ್ಳಿ, ಬಾಗೂರು ಹೋಬಳಿ ಈ ರೀತಿಯಲ್ಲಿ ೫ ಏತ ನೀರಾವರಿ ಯೋಜನೆಗಳು ನಡೆಯುತ್ತಿವೆ. ಏತ ನೀರಾವರಿ ಯೋಜನೆಗೆ ಕೆಲಸ ನಡೆಯುತ್ತಿದೆ, ಆದರೆ, ಗುತ್ತಿಗೆದಾರರಿಗೆ ಸರಿಯಾದ ಸಮಯಕ್ಕೆ ಹಣ ಬಿಡುಗಡೆಯಾಗುತ್ತಿಲ್ಲ. ಉದಾಹರಣೆಗೆ ಈ ಹಿರಿಸಾವೆ ಹೋಬಳಿ ಏತ ನೀರಾವರಿ ಯೋಜನೆಗೆ ೫೬ ಕೋಟಿ ರೂಪಾಯಿಗಳದ್ದು ಇದೆ. ಅಲ್ಲಿ ಸುಮಾರು ೧೦೦ ಎಕರೆ ಜಮೀನಿಗೆ ಸಂಬಂಧಪಟ್ಟಂತೆ ರೈತರಿಗೆ ದಾಖಲೆಗಳನ್ನು ಕೊಟ್ಟಿಲ್ಲ, ಅದನ್ನು ಅವರಿಗೆ ಒದಗಿಸುವಂತಹ ಕೆಲಸ ಮಾಡಿಲ್ಲ. ಮಾನ್ಯ ಸಚಿವರಿಗೆ ತಪ್ಪು ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. ಅದು ೧೨೭ ಎಕರೆ. ಅದರಲ್ಲಿ ಒಬ್ಬರಿಗೆ ಬಿಟ್ಟು ಉಳಿದವರಿಗೆಲ್ಲಾ ಹಣ ಪಾವತಿ ಮಾಡಲಾಗಿದೆ. ಉಳಿದಂತಹದ್ದು ೧೮೫ ಎಕರೆಯನ್ನು ನೇರ ಖರೀದಿ ಮಾಡಲಾಗುತ್ತಿದ್ದು, ಅದಕ್ಕೆ ಹಣ ಎಷ್ಟು ಬರುತ್ತದೆ, ಅದು ನೇರವಾಗಿ ಅವರಿಗೆ ಹಣ ಕೊಡಲಾಗುತ್ತದೆ. ಅದರ ಪ್ರಶ್ನೆ ಇಲ್ಲ. ಇನ್ನು ಉಳಿದಂತೆ ೫೬ ಎಕರೆ, ೧೨೧, ಎಕರೆ, ೧೪ ಎಕರೆ ಇನ್ನು ಅದು ಅವಾರ್ಡ್ ಹಂತದಲ್ಲಿದೆ. ಅವಾರ್ಡ್ ಮುಗಿದ ಮೇಲೆ ಅವರಿಗೆ ಹಣ ಕೊಡುತ್ತೇವೆ. ಯಾವುದೇ ಕಾರಣಕ್ಕೂ ಯಾರು ಜಮೀನನ್ನು ಕಳೆದುಕೊಂಡಿದ್ದಾರೆ, ಅವರಿಗೆ ಪರಿಹಾರ ಕೊಡುವಲ್ಲಿ ಸರ್ಕಾರ ಹಿಂದೆ- ಮುಂದೆ ನೋಡುವ ಪ್ರಶ್ನೆಯೇ ಇಲ್ಲ. ಅದರಲ್ಲೂ ವಿಶೇಷವಾಗಿ ನೀರಾವರಿ ಯೋಜನೆಗೆ ಸಂಬಂಧಪಟ್ಟಂತೆ ಯಾವ ಅಧಿಕಾರಿ ಈ ರೀತಿಯಲ್ಲಿ ವಿಳಂಬ ಮಾಡುತ್ತಾರೆ, ತಕ್ಷಣ ಅವರ ಜೊತೆ ಮಾತನಾಡಿ ಅವರಿಗೆ ತಕ್ಷಣ ಹಣ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ . ಯಾರದ್ದು ಒಬ್ಬರದ್ದು ನಿಂತಿದೆ, ಅವರು ದಾಖಲೆಗಳನ್ನು ಕೊಟ್ಟಿಲ್ಲದೇ ಇರುವುದರಿಂದ ಪೆಂಡಿಂಗ್ ಆಗಿದೆ. ದಾಖಲೆಗಳನ್ನು ಕೊಟ್ಟರೆ ತಕ್ಷಣ ಅವರಿಗೂ ಹಣವನ್ನು ಬಿಡುಗಡೆ ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ಎ.ಗೋಪಾಲ ಸ್ವಾಮಿ:-** ಮಾನ್ಯ ಸಭಾಪತಿಯವರೆ, ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ೩೦೦ಕ್ಕೂ ಹೆಚ್ಚು ಎಕರೆ ರೈತರ ಜಮೀನು ಭೂಸ್ವಾಧೀನವಾಗಿದೆ. ಕೇವಲ ಏತ ನೀರಾವರಿ ಯೋಜನೆಯ ಗುತ್ತಿಗೆದಾರರಿಗೆ ಮಾತ್ರ ಕೊಡುತ್ತಿದ್ದಾರೆ. ನನ್ನ ತೋಟಿ ದೊಡ್ಡೇರಿ ಇರಬಹುದು. ಇದರ ಯಾವುದೇ ದಾಖಲೆಯನ್ನು ಒದಗಿಸಿಲ್ಲ. ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನೇ ಕೊಟ್ಟಿಲ್ಲ. ದಯವಿಟ್ಟು ಅದನ್ನು ಸರಿಪಡಿಸಬೇಕು ಮತ್ತು ದಾಖಲೆಗಳನ್ನು ಮಾಡಬೇಕಾದರೆ ಪೋಡಿ ಮಾಡುವುದು ಇರಬಹುದು, ದರಖಾಸ್ತು ಮಾಡುವುದು ಇರಬಹುದು. ಅದು ಯಾವುದು ಸಹ ರೈತರ ಜೊತೆಗೆ ಕಂದಾಯ ಇಲಾಖೆಯವರು ಹೊಂದಾಣಿಕೆ ಮಾಡಿಕೊಳ್ಳುತ್ತಿಲ್ಲ. ಹೀಗಾಗಿ, ರೀತಿಯ ಸಮಸ್ಯೆಗಳಾಗುತ್ತಿವೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳಿಗೆ ನಾನು ಸೂಚನೆಯನ್ನು ಕೊಡುತ್ತೇನೆ. ಅದು ಖಾತೆ ಇರಬಹುದು, ವಿಭಾಗ ಪತ್ರ ಇರಬಹುದು ಪೌತಿ ಖಾತೆ ಇರಬಹುದು, ಸರ್ವೆ ಇರಬಹುದು. ಇದೆಲ್ಲವನ್ನು ತಕ್ಷಣ ಮಾಡುವಂತೆ ಸೂಚನೆಯನ್ನು ನಾನು ತಕ್ಷಣ ಕೊಡುತ್ತೇನೆ.

**ಶ್ರೀ ಎಂ.ಎ.ಗೋಪಾಲ ಸ್ವಾಮಿ:-** ಮಾನ್ಯ ಸಭಾಪತಿಯವರೆ, ಗುತ್ತಿಗೆದಾರರಿಗೆ ಏನು ಬಿಡುಗಡೆಯಾಗುತ್ತದೆ, ಅದೇ ರೀತಿ ರೈತರಿಗೂ ಬಿಡುಗಡೆ ಮಾಡುವಲ್ಲಿ ಸಚಿವರು ಭರವಸೆ ಕೊಡಬೇಕು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ನಾನು ಇದರ ಕಡೆ ಗಮನ ಕೊಡುತ್ತೇನೆ. ತಕ್ಷಣ ಅವರಿಗೆ ಪರಿಹಾರ ಕೊಡುವಂತಹ ವ್ಯವಸ್ಥೆ ಮಾಡುತ್ತೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಶ್ನೆ ಸಂಖ್ಯೆ1075**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಕುಂದಾಪುರದಲ್ಲಿ ಡೀಮ್ಡ್ ಫಾರೆಸ್ಟ ಯಾವುದು ಇಲ್ಲ. ಉಡುಪಿಯಲ್ಲಿ 38 ಇದೆ, ಕಾರ್ಕಳದಲ್ಲಿ ಯಾವುದು ಇಲ್ಲ, ಬೈಂದೂರುನಲ್ಲಿ 4 ಇದೆ. ಬ್ರಹ್ಮಾವರದಲ್ಲಿ 38 ಇದೆ. ಕಾಪು ಯಾವುದು ಇಲ್ಲ, ಹೆಬ್ರಿಯಲ್ಲಿ ಯಾವುದು ಇಲ್ಲ ಎಂದು ಹೇಳಿದ್ದೀರಿ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೆ, ಅದು ನಮೂನೆ-50 ರಲ್ಲಿದ್ದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ನಮೂನೆ 53ರಲ್ಲಿ ಕುಂದಾಪುರದಲ್ಲಿ 1385 ಡೀಮ್ಡ್ ಫಾರೆಸ್ಟ ಯಾವುದು ಇಲ್ಲ. ಉಡುಪಿಯಲ್ಲಿ 243 ಇದೆ, ಕಾರ್ಕಳದಲ್ಲಿ 1727, ಬೈಂದೂರುನಲ್ಲಿ 190 ಇದೆ. ಬ್ರಹ್ಮಾವರದಲ್ಲಿ 1758 ಇದೆ. ಕಾಪು 52 ಹೆಬ್ರಿಯಲ್ಲಿ 599 ಇದೆ. ಒಟ್ಟು 7754 ಕುಟುಂಬಗಳಿಗೆ ಡೀಮ್ಡ್ ಫಾರೆಸ್ಟ ಎನ್ನುವಂತಹ ಹೆಸರಿನಿಂದ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ತೊಂದರೆಯನ್ನು ಅನುಭವಿಸಲಿಕ್ಕೆ ಪರೋಕ್ಷವಾಗಿ ತಮ್ಮ ಇಲಾಖೆ ಕಾರಣವೇ? ಇದು ಒಂದು ಪ್ರಶ್ನೆ. ನಮ್ಮಲ್ಲಿ C.R.Z., ಸಮಸ್ಯೆ ಆಯಿತು. ಯಾರು ಸಹ ಸಮುದ್ರದ ಬದಿಯಲ್ಲಿ ಮರಳು ಎತ್ತುವಂತಿಲ್ಲ ಎಂದು ಹೇಳಿದರು. ಅವರೆಲ್ಲರೂ Green Bench Court ಗೆ ಹೋಗಿ ಸರಿ ಮಾಡಿಕೊಂಡು ಬಂದರು. ಇಲ್ಲಿ 7754 ಕುಟುಂಬಗಳಿಗೆ ೨೦ ವರ್ಷಗಳಿಂದ ಒಂದು ನಿವೇಶನವಾಗಲಿ, ಅಥವಾ ಮನೆ ಕಟ್ಟಲಿಕ್ಕೆ ಆಗಲಿ ತೋಟ ಮಾಡುವುದಕ್ಕಾಗಲಿ, ಯಾವುದೇ ರೀತಿಯ ಬೆಳವಣಿಗೆಗೆ ಪೂರಕವಾಗದ ರೀತಿಯಲ್ಲಿ ವಾತಾವರಣವನ್ನು ನಿರ್ಮಾಣ ಮಾಡಿದ್ದು, ಇಲ್ಲಿಯತನಕ ಕೋರ್ಟಿಗೆ ಹೋಗುವಂತಹ ಕೆಲಸವನ್ನು ಮಾಡಿಲ್ಲ. ಅದು ಅಲ್ಲದೆ ಡೀಮ್ಡ್ ಫಾರೆಸ್ಟ ಎಂದು, ಕಲಂ ೯೪ (ಸಿ) ಎಂದು ಹೇಳಿದ್ದೀರಿ. ಕಲಂ ೯೪ (ಸಿ) ಎಂದು ಹೇಳಿದರೆ ಹೇಗೆ? ಕಲಂ ೯೪ (ಸಿ) ಎಂದು ಹೇಳಿದರೆ ಯಾರು ಮನೆಯನ್ನು ಕಟ್ಟಿಕೊಂಡಿದ್ದಾನೆ, ಆ ಮನೆಯನ್ನು ಖಾಯಂ ಮಾಡುವಂತಹದ್ದು ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳುವುದು ಸರಿ ಇದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಹಾಗಾದರೆ, ಕಲಂ ೯೪ (ಸಿ) ರಡಿಯಲ್ಲಿ ಅವರು ಎಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಮರದ ಮೇಲೆ ಮನೆಯನ್ನು ಕಟ್ಟಿಕೊಂಡು ಇರಬೇಕಾ ಅಥವಾ ಕೆಳಗಡೆ ಕಟ್ಟಿಕೊಂಡು ಇರಬೇಕಾ? ಕೆಳಗಡೆ ಮನೆಯನ್ನು ಕಟ್ಟಿಕೊಂಡಿದ್ದರೆ ಅದು ಡೀಮ್ಡ್ ಫಾರೆಸ್ಟ ಹೇಗೆ ಆಗುತ್ತದೆ? ಒಂದು

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ವೇಳೆ ಅರಣ್ಯದ ಮೇಲೆ ಮನೆಯನ್ನು ಕಟ್ಟಿಕೊಂಡಿದ್ದರೆ ಅದು ಡೀಮ್ಡ್ ಫಾರೆಸ್ಟ್ ವ್ಯಾಪ್ತಿಗೆ ಬರುತ್ತದೆ. ಇದಕ್ಕೆ ತಾವು ಏನು ಹೇಳುತ್ತೀರಿ; ಇದಕ್ಕೆ ನಿಮ್ಮ ಹತ್ತಿರ ವಿಷಯವೇ ಇಲ್ಲವೇ?

**ಶ್ರೀ ವಿ.ಸುನಿಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೆ, ...

**ಸಭಾಪತಿಯವರು:-** ಶ್ರೀ ಸುನಿಲ್ ಕುಮಾರ್‌ರವರೆ, ಅವರು ಬೇಕಾದರೆ ನಿಮ್ಮನ್ನು ಎದ್ದೇಳಿಸುತ್ತಾರೆ, ತಾವು ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಇಲ್ಲಿಗೆ ೭ ವರ್ಷ ಕಳೆಯಿತು, ನೋಡಿ ೯೪-ಸಿ ಬಂದು ಎಷ್ಟು ವರ್ಷವಾಯಿತು?

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ೭ ವರ್ಷ ನಾವು ಇರಲಿಲ್ಲ. ನಾವು ಬಂದು ೩ ವರ್ಷವಾಯಿತು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಅದು ಯಾರೇ ಇರಲಿ, ನಮ್ಮ ಪ್ರಶ್ನೆ ಅವರು ಇವರು ಎನ್ನುವ ಪ್ರಶ್ನೆ ಇಲ್ಲ. ಈಗ ನೀವು ಇದ್ದೀರಿ, ನೀವು ಇಲ್ಲ ಎನ್ನುವ ವಿಷಯ ಅಲ್ಲ. ಇದು ಜನರ ಸಮಸ್ಯೆ. ಇದು ನಮ್ಮ ಸಮಸ್ಯೆ ಅಲ್ಲ. ನಮ್ಮನ್ನು ಆಯ್ಕೆ ಮಾಡಿದಂತಹ ಜನರ ಸಮಸ್ಯೆ. ನೀವು ಹೇಳತಕ್ಕಂತಹದ್ದು, ಈ ಡೀಮ್ಡ್ ಫಾರೆಸ್ಟ್ ಇದೆ, ಕಲಂ ೯೪-ಸಿ ಇದೆ. ಎಲ್ಲಿ ಜಾಗ ಇದೆ, ಅಲ್ಲಿ ಕುಳಿತುಕೊಳ್ಳಿ ಎಂದು ಸರ್ಕಾರದವರೇ ಹಿಂದೆ ಆದೇಶ ಮಾಡಿದ್ದಾರೆ. ಆದರೆ, ಅಲ್ಲಿ ಮನೆ ಕಟ್ಟುವಂತಿಲ್ಲವೆಂದು ಇವತ್ತು ಹೇಳುತ್ತಿದ್ದಾರೆ. ಈ ಕಲಂ ೯೪-ಸಿ ಯಿಂದ ಏನು ತೊಂದರೆಯಾಗುತ್ತಿದೆ ಎಂದರೆ ಕಲಂ ೯೪-ಸಿ ಅಡಿಯಲ್ಲಿ ಒಂದು ಮನೆಯನ್ನು ಕಟ್ಟಿಕೊಂಡರೆ ಅದಕ್ಕೆ ಮೆಸ್ಕಾಂ ನಿಂದ ವಿದ್ಯುತ್ ತರಬೇಕು, ಕುಡಿಯುವ ನೀರು ಬೇಕು, ರಸ್ತೆ ಬೇಕು. ಸ್ಕೂಲ್‌ನ ವ್ಯವಸ್ಥೆಯಾಗಬೇಕು, ಒಂದೊಂದು ಮನೆಗಳಿಗೆ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಕೂಡ ಅದನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿ, ಬಹುಶಃ ಅದನ್ನು ಯಾವುದಾದರೊಂದು ರೀತಿಯಲ್ಲಿ ನೀವು ಪರಿಹಾರವನ್ನು ನಿಖರವಾಗಿ ಮಾಡಬೇಕು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಶ್ರೀ ಎಸ್. ಆರ್. ಪಾಟೀಲ್‌ರವರು ಇದು ನನ್ನ ಕೊನೆಯ ಭಾಷಣ ಎಂದು ಹೇಳಿದರು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ಆ ರೀತಿಯಲ್ಲಿ ಏನೂ ಇಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಹಾಗೆಯೇ ನನ್ನದೂ ಸಹ ಇದು ನನ್ನ ಕೊನೆಯ ಹೋರಾಟ. ಏಕೆಂದರೆ, ಇದಕ್ಕೆ ನೀವು ನಿಖರವಾಗಿ ಮಾಡಬೇಕು.

(ಗೊಂದಲ

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್ ರವರು ದೆಹಲಿಯಲ್ಲಿ ಇದ್ದವರು ಇಲ್ಲಿಗೆ ಏತಕ್ಕೆ ಬಂದರು?

**ಸಭಾಪತಿಯವರು:-** ಶ್ರೀ ಅಶೋಕ್‌ರವರೆ ಆ ವಿಷಯವನ್ನು ಬಿಟ್ಟುಬಿಡಿ. ಈ ವಿಷಯಕ್ಕೆ ಬನ್ನಿ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ನಾನು ತಮ್ಮನ್ನು ಕೇಳುವುದೇನೆಂದರೆ, ನಮೂನೆ ೫೦ ರಲ್ಲಿ ಯಾವತ್ತು ಅರ್ಜಿ ಕೊಡಲಿಕ್ಕೆ ಎನ್ನುವುದು ತಮಗೆ ಗೊತ್ತೇ? ನಮೂನೆ ೫೦ ರಲ್ಲಿ ಅರ್ಜಿ ಕೊಡಲಿಕ್ಕೆ ದಿನಾಂಕ:೧೯-೦೪-೧೯೯೧ರಲ್ಲಿ ಬಂತು. ನಮೂನೆ ೫೪ ರಲ್ಲಿ ಅರ್ಜಿ ಕೊಡಲಿಕ್ಕೆ ದಿನಾಂಕ:೦೧-೧೧-೧೯೯೮ ರಲ್ಲಿ ಬಂತು. ಈ ರೀತಿಯಲ್ಲಿ ಉತ್ತರ ಕೇಳಿ ಕೇಳಿ ಇಲ್ಲಿಗೆ ಎಷ್ಟು ವರ್ಷಗಳಾಯಿತು?. ನಾನು ಅದಕ್ಕಾಗಿಯೇ ನಾನು ಶಾಲು ತೆಗೆದುಕೊಂಡು ಬಂದಿದ್ದೇನೆ. ಇಲ್ಲಿಯೇ ಮಲಗುತ್ತೇನೆ. ನೀವು ನಿಖರವಾಗಿ ಹೇಳದಿದ್ದರೆ, ನಾನು ಇಲ್ಲಿಂದ ಹೇಳುವುದಿಲ್ಲ. ನೀವು ಸಮಯವನ್ನು ಹೇಳಬೇಕು. ಇಂತಿಷ್ಟು ಸಮಯದೊಳಗಡೆ ಈ ಡೀಮ್ಡ್ ಫಾರೆಸ್ಟ್ ವ್ಯವಸ್ಥೆಯನ್ನು ಸರಿಪಡಿಸುತ್ತೇವೆಂದು ಹೇಳಬೇಕು. ಇದು ನನ್ನ ಸ್ವಂತದ್ದು ಅಲ್ಲ, ಇದರಲ್ಲಿ ನನ್ನ ಭೂಮಿ ಇಲ್ಲ.

**ಸಭಾಪತಿಯವರು:-** ಶ್ರೀಯುತ ಪ್ರತಾಪಚಂದ್ರ ಶೆಟ್ಟಿಯವರೆ, ತಾವು ಕುಳಿತುಕೊಳ್ಳಿ, ಸಚಿವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ಹಿರಿಯ ಸದಸ್ಯರಾದ ಸನ್ಮಾನ್ಯ ಶ್ರೀ ಪ್ರತಾಪಚಂದ್ರ ಶೆಟ್ಟಿಯವರು ಬಹಳ ಉದ್ವೇಗದಿಂದ ಮಾತನಾಡಿದ್ದಾರೆ. ಇದು ಜನರ ಸಮಸ್ಯೆ. ಈಗಾಗಲೇ ಈ ಡೀಮ್ಡ್ ಫಾರೆಸ್ಟ್ ಎನ್ನುವುದು ಏನಿದೆ, ಅದೇ ಅವೈಜ್ಞಾನಿಕವಾದುದು. ಹಿಂದೆ ಡಿ.ಸಿ. ಗಳಾಗಿ ಕೆಲಸ ಮಾಡಿದಂತಹವರು, ಬಹಳಷ್ಟು ಡಿ.ಸಿ., ಗಳು ಸರ್ಕಾರದ ಲ್ಯಾಂಡ್‌ಗಳೇನಿವೆ, ಅವೆಲ್ಲಾ ಅರಣ್ಯ ಇಲಾಖೆಗೆ ಸೇರಿದ್ದೆಂದು ಬರೆದು ಹೋಗಿದ್ದಾರೆ.

**ಸಭಾಪತಿಯವರು:-** ಹೌದು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್.ಅಶೋಕ್:-** ಅದಕ್ಕೆ ಸರ್ವೆ ಆಗಿಲ್ಲ. ಮತ್ತೆ ಅರಣ್ಯ ಇಲಾಖೆಯವರು ಸಹ ಏನೂ ಕೇಳಿಲ್ಲ. ಇವರೇ ಏಕಾಏಕಿ ಬರೆದುಬಿಟ್ಟು ಹೋದರು. ಅದೇ ದೊಡ್ಡ ತಲೆನೋವಾಗಿದೆ. ಇವತ್ತು ರಾಜ್ಯದಲ್ಲಿ ಒಟ್ಟು ೧೦,೧೧,ಲಕ್ಷ ಎಕರೆ ಜಮೀನು ಡೀಮ್ಡ್ ಫಾರೆಸ್ಟ್ ಇದೆ. ಈ ಡೀಮ್ಡ್ ಫಾರೆಸ್ಟ್ ನಲ್ಲಿ ಇವತ್ತು ಬಹಳಷ್ಟು ರೈತರು ಬಹಳಷ್ಟು ಚೆನ್ನಾಗಿ ಉಳುಮೆ ಮಾಡುತ್ತಿದ್ದಾರೆ, ವ್ಯವಸಾಯ ಮಾಡುತ್ತಿದ್ದಾರೆ. ನಾವು ಈಗ ಸರ್ಕಾರದ ಯೋಜನೆಗಳಿಗೂ ತೆಗೆದುಕೊಳ್ಳಲಿಕ್ಕೆ ಆಗದೇ ಇರುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಬಿಟ್ಟಿದ್ದಾರೆ. ಒಂದು ಬಾರಿ ಅರಣ್ಯ ಭೂಮಿ ಅಂದರೆ ಗೊತ್ತು ಅಲ್ಲವೇ? ಈ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿ ನೂರೆಂಟು ಆದೇಶಗಳಾಗಿವೆ. ಬಹಳ ಕಠಿಣವಾಗಿ ಆದೇಶಗಳನ್ನು ಮಾಡಿದ್ದಾರೆ.

(ಮುಂದು)

**(1241) 22.12.2021 11.00 ಎಸ್‌ವಿ-ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್.ಅಶೋಕ್ (ಮುಂದು):-**

ಮತ್ತೆ, ಈಗ Green Bench ಅಂದರೆ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು ಚೆನ್ನೈನಲ್ಲಿ ಪ್ರಾರಂಭವಾಗಿದ್ದು, ಆ ಒತ್ತಡಗಳೂ ನಮ್ಮ ಮೇಲಿವೆ. ನಾನು ಇದರ ಬಗ್ಗೆ ಮಂಗಳೂರು ಭಾಗದ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರಿಂದ ಮನವಿಯನ್ನು ಪಡೆದುಕೊಂಡಿದ್ದೇನೆ. ಈಗಾಗಲೇ ಕಳೆದ 6-7 ತಿಂಗಳಿನಿಂದ ಇದರ ಬಗ್ಗೆ ಸರ್ಕಾರ day-to-day meeting ಮಾಡುತ್ತಿದೆ. ನಾನು ಹಿಂದೆ ಇದ್ದಂತಹ ಅರಣ್ಯ ಸಚಿವರೊಂದಿಗೆ ಮಾತನಾಡಿದ್ದೇನೆ. ಸುಮಾರು 10 ಲಕ್ಷ ಹೆಕ್ಟೇರ್‌ನಷ್ಟು ಜಮೀನಿನಲ್ಲಿ 6.64 ಲಕ್ಷ ಹೆಕ್ಟೇರ್‌ನಷ್ಟು ಜಮೀನನ್ನು ಕಂದಾಯ ಇಲಾಖೆಗೆ ವಾಪಸ್ ಜಿಲ್ಲಾವಾರು ಬಿಟ್ಟುಕೊಡುವುದಕ್ಕೆ ಅರಣ್ಯ ಇಲಾಖೆಯು ಒಪ್ಪಿಕೊಂಡಿದೆ. ಉಳುಮೆ ಯಾರು ಮಾಡುತ್ತಿದ್ದಾರೆಯೋ ಅವರಿಗೆ ಕೊಡಲಾಗುವುದು. ಆದ್ದರಿಂದ 6.64 ಹೆಕ್ಟೇರ್‌ನಷ್ಟು ಜಮೀನನ್ನು ವಾಪಸ್ ಕಂದಾಯ ಇಲಾಖೆಗೆ ಪಡೆಯುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಹಿಂದೆ ಇದ್ದವರು ಪ್ರಕರಣವನ್ನು ದಾಖಲಿಸಿದ್ದು, ಅರಣ್ಯ ಇಲಾಖೆಯವರಿಂದ Affidavit ಹಾಕಿಸಿ ಜಮೀನನ್ನು ವಾಪಸ್ ಕಂದಾಯ ಇಲಾಖೆಗೆ ಕೊಡುತ್ತೇವೆ ಎನ್ನುವಂತಹ ಸ್ಥಿತಿಗೆ ನಾವು ತಂದಿದ್ದೇವೆ. ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರು ಭಯ ಬೀಳುವಂತಹ ಅವಶ್ಯಕತೆ ಇರುವುದಿಲ್ಲ. ನಾವು ಅವರ ಜೊತೆಯಿದ್ದೇವೆ. ಇದನ್ನು ವಾಪಸ್ ಪಡೆದು ರೈತರಿಗೆ ಹಾಗೂ ಯಾರು ಮನೆ ಕಟ್ಟಿಕೊಂಡಿದ್ದಾರೆಯೋ ಅವರಿಗೆ ಕೊಡುವಂತಹ ವ್ಯವಸ್ಥೆಯನ್ನು ಖಡಾಖಂಡಿತವಾಗಿ ಮಾಡುತ್ತೇವೆ. ಅದಕ್ಕೆ ಹಿಂಜರಿಕೆ ಇಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಚಿವರೇ, ತಾವು ಕಂದಾಯ ಸಚಿವರಾಗಿ ಎಷ್ಟು ವರ್ಷಗಳು ಕಳೆದಿದೆ? ನಾನು ಈ ಉತ್ತರವನ್ನು ಮೂರ್ನಾಲ್ಕು ಕಂದಾಯ ಸಚಿವರಿಂದ ಕೇಳುತ್ತಾ ಬಂದಿದ್ದೇನೆ. ನೀವು

ಏನು ಹೇಳಿದರೂ ನಮಗೆ ನಂಬಿಕೆ ಬರುವುದಿಲ್ಲ. ನಮಗೆ ನಂಬಿಕೆ ಬರುವ ಹಾಗೆ ನೀವು ಏನಾದರೂ ಮಾಡಬೇಕು.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ಮಾನ್ಯ ಕಂದಾಯ ಸಚಿವರು ಅಧಿವೇಶನದಲ್ಲಿಯೇ ಉತ್ತರಿಸುತ್ತಿದ್ದಾರಲ್ಲವೇ?

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸುನಿಲ್ ಕುಮಾರ್ ಅವರೇ, ಎಲ್ಲಾ ಸಚಿವರು ಅಧಿವೇಶನದಲ್ಲಿಯೇ ಹೇಳುವುದು. ಮನೆಗೆ ಬಂದು ಯಾರೂ ಹೇಳಿ ಹೋಗುವುದಿಲ್ಲ. ಇದನ್ನು ಹಗುರವಾಗಿ ತೆಗೆದುಕೊಳ್ಳಬೇಡಿ. ತಾವು ಸಚಿವರಿದ್ದೀರಿ. ತಮ್ಮದೆಲ್ಲಾ ಓಡುತ್ತದೆ, ಕೆಲಸಗಳು ಆಗುತ್ತದೆ. ಪಾಪ.. ಮುಗ್ಧರಿಗೆ ಕಲಂ 94 ಸಿ..

**ಸಭಾಪತಿಯವರು:-** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ಈಗ ಕಂದಾಯ ಸಚಿವರು ಹೇಳಿದ್ದಾರಲ್ಲವೇ?

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಇಲ್ಲ ಮಾನ್ಯ ಸಭಾಪತಿಯವರೇ, ಹಾಗೆ ಹೇಳುವುದಕ್ಕಾಗುವುದಿಲ್ಲ. ಕಲಂ 97 ಸಿ ಅಡಿಯಲ್ಲಿ ಮಂಜೂರಾತಿ ಹಕ್ಕು ಪತ್ರ ಕೊಟ್ಟು ಅದನ್ನು ಅರಣ್ಯ ಎಂದು ಹೇಳಿ ತಡೆಯುವುದಾದರೆ ಒಬ್ಬರು ಕೊಡುತ್ತಾರೆ, ಒಬ್ಬರು ತಡೆಯುತ್ತಾರೆ ಎನ್ನುವಂತಹ ನಾಟಕವನ್ನು ಏಕೆ ಮಾಡಬೇಕು?

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು ಹಿಂದಿನ ಜಿಲ್ಲಾಧಿಕಾರಿಗಳಾಗಿದ್ದವರು ಮಾಡಿರುವುದು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಯಾವ ಹಿಂದಿನ ಜಿಲ್ಲಾಧಿಕಾರಿಯನ್ನು ಕೇಳುವುದು. ಕೊಟ್ಟಿರುವುದು ಯಾರು? ಜಿಲ್ಲಾಧಿಕಾರಿಯೇ ಅಥವಾ ಸರ್ಕಾರವೇ? ಕಲಂ 94 ಸಿ ಅನ್ನು ಕೊಟ್ಟಿರುವುದು ಯಾರು? ಬೇರೆ ವಿಚಾರ ಆಮೇಲೆ ಚರ್ಚೆ ಮಾಡೋಣ. ಕನಿಷ್ಠ ನೀವೇ ಕೊಟ್ಟಿರುವಂತಹ ಕಲಂ 94 ಸಿ ಅಡಿಯಲ್ಲಿ ಹಕ್ಕುಪತ್ರವನ್ನು ಕೊಡಬೇಕು. Deemed forest ಅನ್ನು ತೆಗೆಯಬೇಕು. ಇದಕ್ಕೆ ಏಕೆ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಬೇಕು?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, once it is decided that it is ‘Deemed Forest,’ ಸರ್ವೋಚ್ಚ ನ್ಯಾಯಾಲಯಕ್ಕೆ ಎಲ್ಲವನ್ನೂ ವಿವರಿಸಲಾಗುತ್ತಿದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, Deemed forest ಎಂದು ತೀರ್ಮಾನವಾಗಿದ್ದು ಹೇಗೆ?

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಗಳು ಕೊಟ್ಟಿದ್ದಾರೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಯಾರು ಕೊಟ್ಟಿದ್ದು?

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಹಿಂದೆ ಏನಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಆದರೆ ನಾನು ಕಂದಾಯ ಸಚಿವನಾದ ನಂತರ ಅರಣ್ಯ ಇಲಾಖೆಯೊಂದಿಗೆ ಒಂದಲ್ಲಾ ಎರಡು ಅಧಿಕೃತವಾದ ಸಭೆಗಳನ್ನು ನಡೆಸಿದ್ದೇನೆ. ಇದನ್ನು ಬಿಟ್ಟು ಕೊಡಲಾಗುವುದು ಎಂದು ಅರಣ್ಯ ಇಲಾಖೆಯವರು ದಾಖಲೆಯಲ್ಲಿ ಹೇಳಿದ್ದಾರೆ. ಸುಮ್ಮನೆ ಮೌಖಿಕವಾಗಿ ಹೇಳಿರುವುದಲ್ಲ. ಅರಣ್ಯ ಇಲಾಖೆಯವರು ಬಿಟ್ಟುಕೊಡುವುದಾಗಿ ಹೇಳಿರುವುದು ಸಭೆಯ ನಡವಳಿಗಳಲ್ಲಿ ದಾಖಲಾಗಿದೆ. ಅದರ ಬಗ್ಗೆ Affidavit ಹಾಕುವುದಕ್ಕೆ ಈಗ ಕಾನೂನು ಇಲಾಖೆಯೊಡನೆ ಕೂಡ ಮಾತನಾಡಿದ್ದೇನೆ. ಅರಣ್ಯ ಇಲಾಖೆಯವರು ಯಾವ ರೀತಿಯ Affidavit ಹಾಕಬೇಕೆಂದು ಕಾನೂನು ಇಲಾಖೆಯವರು ಪರಿಶೀಲಿಸುತ್ತಿದ್ದಾರೆ. ಕಾನೂನು ಇಲಾಖೆಯ ಒಪ್ಪಿಗೆ ತೆಗೆದುಕೊಂಡು immediate ಆಗಿ Affidavit ಹಾಕಲಾಗುತ್ತದೆ. ಇಲಾಖೆಯವರೇ ಬಿಟ್ಟುಕೊಡಲು ಒಪ್ಪಿರುವುದರಿಂದ ನ್ಯಾಯಾಲಯ ಈ ವಿಷಯದಲ್ಲಿ ತಲೆ ಹಾಕುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. 100 ಪ್ರತಿಶತ ಬಿಟ್ಟುಕೊಡುತ್ತಾರೆ. ನಾನು move ಮಾಡಿದ್ದೇನೆ. ಹಿಂದೆ ಯಾರು ಮಾಡಿದ್ದರೋ, ಮಾಡಿಲ್ಲವೋ ನನಗೆ ಗೊತ್ತಿಲ್ಲ. ನಾನಂತೂ move ಮಾಡಿದ್ದೇನೆ. ನ್ಯಾಯ ಒದಗಿಸಿ ಕೊಡುತ್ತೇನೆ. 6.64 ಲಕ್ಷ ಹೆಕ್ಟೇರ್ Deemed Forest ಅನ್ನು ಕಂದಾಯ ಇಲಾಖೆಯು ವಾಪಸ್ ಪಡೆಯುತ್ತದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಚಿವರೇ, ಈಗ...

**ಸಭಾಪತಿಯವರು:-** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ಸಾಕು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾವೇನು ಇಲ್ಲಿ ಶಾಸ್ತ್ರ ಮಾಡುವುದಕ್ಕೆ ಇಲ್ಲಿಗೆ ಬರುವುದಾ? ಒಂದು ಕೇಳುವುದು, ಸರ್ಕಾರ ಒಂದು ಉತ್ತರ ಕೊಡುವುದು.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ಮತ್ತೇನು ಮಾಡಬೇಕು?

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನನಗೆ ನಿಖರವಾದ ಉತ್ತರ ಕೊಡಬೇಕು. ನನ್ನ ಒಂದು ಪ್ರಶ್ನೆಗೆ ನೀವು ಉತ್ತರ ಕೊಡಿ. ಕಲಂ 94 ಸಿ ಅಡಿಯಲ್ಲಿನ ಹಕ್ಕುಪತ್ರವನ್ನು ಒಬ್ಬರಿಗೆ ಹೇಗೆ ಮಂಜೂರು ಮಾಡುತ್ತಾರೆ? ಅವನು ಅಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾನೆ. ಅವನು ಅಲ್ಲಿ ವಾಸ್ತವ್ಯ ಇದ್ದಾನೆ. ಆದ್ದರಿಂದ ಅವರಿಗೆ ಕಲಂ 94 ಸಿ ಅಡಿಯಲ್ಲಿ ಹಕ್ಕುಪತ್ರ ನೀಡಬೇಕೆಂಬ ತೀರ್ಮಾನವನ್ನು ಸರ್ಕಾರ ಕೈಗೊಂಡ ಮೇಲೆ ಮಂಜೂರು ಮಾಡುತ್ತಾರೆ. ಅರಣ್ಯ ಇಲಾಖೆಯು ಅದನ್ನು Deemed Forest ಎಂದು ಹೇಳಿ ಏನೂ ಮಾಡಲು ಬಿಡದಿದ್ದರೆ ನೀವೇನು ಹೇಳುತ್ತೀರಿ? ಸರ್ಕಾರ ಕೊಡುತ್ತದೆ. ಅವನು ಆಗುವುದಿಲ್ಲ ಎನ್ನುತ್ತಾನೆ. ನಾವು ಉಚ್ಚ ನ್ಯಾಯಾಲಯಕ್ಕೆ ಹೋಗುತ್ತೇವೆ, ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುತ್ತೇವೆ ಎಂದರೆ ಅರ್ಥವೇನು?

**ಸಭಾಪತಿಯವರು:-** ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರೇ, ಅವರು ಹೇಳುವುದು...

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಕಲಂ 94 ಸಿ ಅಡಿಯಲ್ಲಿ ಅವರಿಗೆ ಕೊಟ್ಟಿರುವುದಕ್ಕೆ ಸರ್ಕಾರ ಬದ್ಧವಾಗಿದೆ. ಅರಣ್ಯ ಇಲಾಖೆಯೊಂದಿಗೆ ಮಾತನಾಡಿ ನ್ಯಾಯ ಒದಗಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರೇ, ಕಲಂ 94 ಸಿ ಅಡಿಯಲ್ಲಿ grant ಮಾಡಿದರೆ ಅದು Deemed Forest ಅಥವಾ ಮತ್ತೊಂದೋ once for all that site has to be handed over. ಅದರಲ್ಲಿ ನೀವು intervene ಆಗಬಾರದು.

**ಸಭಾಪತಿಯವರು:-** ಅವರು ವಾಪಸ್ ಕೊಡಬೇಕಲ್ಲವೆ?

**ಶ್ರೀ ಆರ್.ಅಶೋಕ್:-** ಮಾನ್ಯ ವಿರೋಧಪಕ್ಷದ ನಾಯಕರೇ, ನೀವು ವಕೀಲರಿದ್ದೀರಿ. ನೀವೇ ಸಲಹೆಯನ್ನು ಕೊಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರೇ, ಕಲಂ 94 ಸಿ ಅಡಿಯಲ್ಲಿ grant ಆದ ಮೇಲೆ ಸಬೂಬು ಏನೂ ಹೇಳಬಾರದು. ಇದು deemed ಇದೆ ಅಥವಾ ಇನ್ನೇನೋ ಇದೆ ಎಂಬುದನ್ನು ಅವರಿಗೆ ಹೇಳಬಾರದು. ಅವರಿಗೆ ರಕ್ಷಣೆ ಬೇಕಲ್ಲವೆ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ಅವರನ್ನು ಬಿಡಿಸಬಾರದು, ಅಲ್ಲಿಯೇ ಮುಂದುವರೆಸಬೇಕು ಎಂದು ಸಚಿವರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳುತ್ತಿರುವು ಅದನ್ನೇ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಮ್ಮ ಕೂಗಿರುವುದು ಅದ್ದೇ. ಅರ್ಜಿ ಹಾಕಿದಾಗ ಕಂದಾಯ ಇಲಾಖೆಯವರು ಬಂದು, ಪಂಚಾಯಿತಿಯವರು ಬಂದು ಜಂಟಿ ಸರ್ವೇ ನಡೆಸಿ ಅಲ್ಲಿ ವಾಸ್ತವ್ಯ ಇದ್ದಾರೆ ಎನ್ನತಕ್ಕಂತಹ ನೆಲೆಯಲ್ಲಿ 94 ಸಿ ಅಡಿಯಲ್ಲಿ ಅವರಿಗೆ ಮಂಜೂರಾತಿಯನ್ನು ಮಾಡುತ್ತಾರೆ. ಆ ಮಂಜೂರಾತಿ ಮಾಡಿದ ನಂತರ ಅದು Deemed Forest ಆಗಿದ್ದು, ಕೊಡುವುದಕ್ಕಾಗುವುದಿಲ್ಲ. ಒಂದೇ ಸರ್ಕಾರದ ಎರಡು ಮುಖ ಹೇಗೆ? ಒಂದು ಕೊಡಿ ಎನ್ನುತ್ತಾರೆ, ಒಂದು ಕೊಡಬೇಡಿ ಎನ್ನುತ್ತಾರೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಕಲಂ 94 ಸಿ ಕೊಟ್ಟಿರುವುದಕ್ಕೆ ನಾವು ಬದ್ಧರಿದ್ದೇವೆ. ಈಗ ಅರಣ್ಯ ಇಲಾಖೆಯವರು ತೊಂದರೆ ಮಾಡುತ್ತಿದ್ದರೆ ಇಲಾಖೆಯ ಜೊತೆ ನಾನು ಮಾತನಾಡುತ್ತೇನೆ. ಮಾತನಾಡಿ ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಚಿವರೇ, ಇಲ್ಲಿ ಮಾತನಾಡಲು ನೆಂಟಸ್ತಿಕೆಯೇನಲ್ಲ. ನನಗೆ ಒಂದಕ್ಕೆ ಉತ್ತರ ಕೊಡಿ. ಕಲಂ 94 ಸಿ ಕೊಟ್ಟಿರುವುದು ಯಾರು?

**ಸಭಾಪತಿಯವರು:-** ಯಾರು ಕೊಟ್ಟಿರುವುದು ಹೇಳಿ?

**ಶ್ರೀ ಆರ್.ಅಶೋಕ್ (ಕುಳಿತುಕೊಂಡು):-** ಅವರು ಕೊನೆಯ ದಿನ ಎಂದು ಹೇಳಿದರು. ಮಾತನಾಡಲಿ ಬಿಡಿ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಚಿವರೇ, ಅದನ್ನೆಲ್ಲಾ ಬಿಡಿ. ನಿಮ್ಮ ಭಿಕ್ಷೆಯನ್ನು ನಾವು ತೆಗೆದುಕೊಳ್ಳುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸುನಿಲ್ ಕುಮಾರ್ ಅವರೇ, ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಅವರು ಕುಳಿತುಕೊಳ್ಳಬೇಕಲ್ಲವೇ?

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಯಾರ ಭಿಕ್ಷೆಯಿಂದಲೂ ನಾನು ಬಂದವನಲ್ಲ. ಯಾರ ಭಿಕ್ಷೆಯೂ ನನಗೆ ಬೇಕಾಗಿಲ್ಲ.

**(ಗೊಂದಲ)**

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರೇ, ನೀವು ಸಭಾಪತಿಯಾಗಿ ಕೆಲಸ ಮಾಡಿದವರು. ನಿಮ್ಮ ಬಗ್ಗೆ ನಮಗೂ ತಿಳಿದಿದೆ. ಮಾತನಾಡಲಿಕ್ಕೆ ಉದಾರೀಕರಣ ಬೇಡ.

**ಸಭಾಪತಿಯವರು:-** ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರೇ, ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರಿಗೆ ಹೇಳಿ. ಹೇಗೆ ಬೇಕಾದರೆ ಹಾಗೆ ಮಾತನಾಡುವುದೇ? ಇದನ್ನೇನು ಮನೆಯೆಂದು ತಿಳಿದಿದ್ದಾರೆಯೇ?

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಸರ್ಕಾರ ಈ ವಿಷಯವನ್ನು ಇತ್ಯರ್ಥ ಮಾಡುವವರೆಗೆ ನಾನು ಇಲ್ಲಿಯೇ ಕುಳಿತುಕೊಳ್ಳುತ್ತೇನೆ. ನೀವು ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಿ.

**ಸಭಾಪತಿಯವರು:-** ಆಯಿತು ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಶ್ರೀಮತಿ ವೀಣಾ ಅಚ್ಚಯ್ಯ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ಸದನದ ಬಾವಿಗೆ ಬಂದರು)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಏನಾದರೊಂದು settle ಮಾಡಿ. ಒಂದು ನಿಮಿಷದ ಕೆಲಸವಿದು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಕೇಳಿ. ನೀವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಹೀಗೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಮಾಡಿ ಕೊಡುತ್ತೇವೆ, ಬಿಡಿಸಿ ಕೊಡುತ್ತೇವೆ ಎಂದು ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ಹರಿಪ್ರಸಾದ್ ಅವರೇ, ಒಂದು ನಿಮಿಷ ಕೇಳಿ. ಮಂತ್ರಿಗಳಿಗೆ ಹೀಗೆಯೇ ಹೇಳಬೇಕು ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಸರಿಪಡಿಸುವ ಜವಾಬ್ದಾರಿ ನಮ್ಮದು ಎಂದು ಹೇಳಿದ್ದಾರೆ. Affidavit ಕೊಟ್ಟು ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಿಂತ ಇನ್ನೇನು ಮಾಡುವುದಕ್ಕಾಗುತ್ತದೆ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಲಂ 94 ಸಿ ಅಡಿಯಲ್ಲಿ grant ಮಾಡಿರುವವರಿಗೆ disturb ಆಗಬಾರದು.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮುಗಿಸಿಬಿಡುತ್ತೇನೆ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತನಾಡಿದ್ದಾರೆ. Deemed forest ಸಮಸ್ಯೆ ಉದ್ಭವವಾಗಿದ್ದು ಈ ಸರ್ಕಾರ ಬಂದ ನಂತರವಲ್ಲ. ಈ ಸಮಸ್ಯೆ 1993-94ರಲ್ಲಿ ಪ್ರಾರಂಭವಾದದ್ದು. ಅಂದಿನಿಂದ ನಮ್ಮ ಜಿಲ್ಲೆಯೂ ಸೇರಿಸಿಕೊಂಡಂತೆ ಮಲೆನಾಡಿನ ಭಾಗದ ಜನ ಬಹಳ ಒದ್ದಾಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ ಯಾರು 57ರಡಿಯಲ್ಲಿ, 53ರಡಿಯಲ್ಲಿ ಅರ್ಜಿಯನ್ನು ಕೊಟ್ಟಿದ್ದಾರೆಯೋ ಅವರು ಉಳುಮೆ ಮಾಡಿಕೊಂಡು ಕೃಷಿ ಮಾಡುತ್ತಿದ್ದರೂ ಅವರಿಗೆ ಮಂಜೂರಾತಿ ಮಾಡಲು ಸಾಧ್ಯವಾಗಿರುವುದಿಲ್ಲ. ಏಕೆಂದರೆ Deemed Forest ಇದೆ ಎನ್ನುವ ಕಾರಣಕ್ಕಾಗಿ. Deemed Forest ಅನ್ನು ಅಂದಿನ ಕಾಲದಲ್ಲಿ ಇದ್ದ ಕಂದಾಯ ಇಲಾಖೆಯವರು ಅವೈಜ್ಞಾನಿಕವಾಗಿ ಮಾಡಿದ್ದಾರೆ ಎಂದು ಮಾನ್ಯ ಕಂದಾಯ ಸಚಿವರು ಹೇಳಿದರು. ಈಗ ನಮ್ಮ ಸರ್ಕಾರ ಬಂದ ನಂತರ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ Deemed Forest ಸಮಸ್ಯೆಗೆ ಒಂದು ತಾತ್ವಿಕವಾದ ಅಂತ್ಯ ಕಾಣಬೇಕು ಎನ್ನುವ ಹಿನ್ನೆಲೆಯಲ್ಲಿ ಅದರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ Affidavit ಹಾಕಿ ಸುಮಾರು 10 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಭೂಮಿಯನ್ನು ವಾಪಸ್ ತೆಗೆದುಕೊಳ್ಳಬೇಕು ಎನ್ನುವ ತೀರ್ಮಾನವನ್ನು ಮಾಡಲಾಗಿದೆ. ಇದು ಯಾರ ಕಾರಣಕ್ಕಾಗಿ ಮಾಡಿರುವುದು? ಯಾರು ಫಾರಂ 53ರ ಅಡಿಯಲ್ಲಿ ಕೃಷಿ ಚಟುವಟಿಕೆ ಮಾಡುತ್ತಿದ್ದಾರೆಯೋ ಅವರಿಗೆ ಮಂಜೂರಾತಿ ಮಾಡಿಕೊಡಬೇಕು ಎನ್ನುವ ಕಾರಣಕ್ಕೆ ಇದನ್ನು ಮಾಡಿದ್ದು. ಕಲಂ 94 ಸಿ ಅಡಿಯಲ್ಲಿ ಸರ್ಕಾರಿ ಜಮೀನಿನಲ್ಲಿ ಯಾರು ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ ಅಂತಹವರಿಗೆ ಮಂಜೂರಾತಿ ಕೊಡಬೇಕು ಎನ್ನುವ ಕಾರಣಕ್ಕಾಗಿಯೇ ಕಲಂ 94 ಅನ್ನು ನಾವೇ ಜಾರಿಗೆ ತಂದಿದ್ದೇವೆ. ಈಗ ಅವರಿಗೆ ಮಂಜೂರಾತಿ ಮಾಡುವುದಕ್ಕೆ Deemed Forest ಅಡ್ಡ ಬಂದಿದೆ. ಅದನ್ನು ಪರಿಹರಿಸುತ್ತೇವೆಂದು ಕಂದಾಯ ಸಚಿವರು ಹೇಳುತ್ತಿದ್ದಾರೆ. Affidavit ಹಾಕುತ್ತಿದ್ದೇವೆ. ಅದು ಹಾಕಿದ ತಕ್ಷಣ ಎಲ್ಲವೂ ಕೂಡ ಬಗೆಹರಿಯಲು ಸಾಧ್ಯವಾಗುತ್ತದೆ. ಇದನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇವೆ. ನಮ್ಮ ಸರ್ಕಾರ Deemed Forest ಸಮಸ್ಯೆಯನ್ನು ಸರಿ ಮಾಡುವುದಕ್ಕೆ ಬದ್ಧವಾಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಅರಣ್ಯ ಸಚಿವರು ಅದನ್ನೇ ಹೇಳಿದ್ದಾರೆ, ಕಂದಾಯ ಸಚಿವರು ಸಹ ಅದನ್ನೇ ಹೇಳಿದ್ದಾರೆ. ವಿಷಯ ಇಷ್ಟು ಸ್ಪಷ್ಟವಾಗಿರುವಾಗ ಅದರಲ್ಲಿ ಇನ್ನೇನಿದೆ?

(ಮುಂದು)

**(1242) 22-12-2021 (11.10) ಕೆಜಿ – ಎಂ.ಡಿ (ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಹರಿಪ್ರಸಾದ್‌ರವರೇ, ತಾವು ಒಂದು ನಿಮಿಷ ನನ್ನ ಮಾತು ಕೇಳಿ. ತಾವು ಹಿರಿಯರು. ತಮಗೆ ಅನುಭವ ಇದೆ. ಸಚಿವರು ಇದ್ದ ಪರಿಸ್ಥಿತಿಯಲ್ಲಿ ಎಲ್ಲವನ್ನು ಹೇಳಿದ್ದಾರೆ. ಈಗ ಸಚಿವರು ತಕ್ಷಣ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. 6 ಲಕ್ಷ hectare ಅನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ, affidavit ಕೊಟ್ಟಿದ್ದೇವೆ ಮಾಡುತ್ತೇವೆಂದು ಹೇಳಿದ್ದಾರೆ.

**ಶ್ರೀ ವಿ.ಸುನಿಲ್ ಕುಮಾರ್ (ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಯಾವ ಯಾವ ಜಿಲ್ಲೆಯಲ್ಲಿ, ಯಾವ ಯಾವ ತಾಲ್ಲೂಕುಗಳಲ್ಲಿ ಸರ್ವೆ ನಂಬರ್ ಸಮೇತವಾಗಿ ಸರ್ವೆ ಮಾಡಿದ್ದಾರೆ. ಯಾವುದು deemed forest ಇದೆ, ಯಾವುದು ವಾಪಸ್ಸು ತೆಗೆದುಕೊಳ್ಳುತ್ತಿದ್ದೇವೆಂದು ಸರ್ವೆ ಮಾಡಿದೆ. ಇದರಲ್ಲಿ ಇನ್ನೇನು ಸ್ಪಷ್ಟತೆ ಇದೆ?

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಅವರು ಹೇಳುವ ಪ್ರಕಾರ, deemed forest ನಲ್ಲಿ ನಮೂನೆ 53 ರಲ್ಲಿ ಬರುವುದರಲ್ಲಿ ಮಾಡಿಕೊಡುವುದಕ್ಕೆ Supreme Court ಗೆ ಹೋಗಿದ್ದಾರೆಂದು ಹೇಳಿದ್ದಾರೆ. ಈಗಾಗಲೇ, Supreme Court ನವರು deemed forest ಏನು, ಅರಣ್ಯ ಪ್ರದೇಶದಲ್ಲಿ ಇರುವಂಥದ್ದಕ್ಕೆ mining ಗೆ ಎಷ್ಟು ಅನುಮತಿ ಕೊಟ್ಟಿದ್ದಾರೆಂದು ತಾವು ನೋಡಿದ್ದೀರಿ. ಬಡವರಿಗೆ ಬಂದಾಗ ಕಾನೂನನ್ನು ಹೇಳುತ್ತಾರೆ. Mining issues ನಲ್ಲಿ ಯಾವ ಯಾವ ರಾಜ್ಯದಲ್ಲಿ forest ನಲ್ಲಿ ಅನುಮತಿ ಕೊಟ್ಟಿದ್ದಾರೆಂದು ಕೇಳಿ ತಿಳಿದುಕೊಳ್ಳಲಿ.

**ಸಭಾಪತಿಯವರು:-** ಇವರಿಗೆ ಮನೆ ವಿಚಾರ ಬಂದಾಗ, ಆ ಮನೆಯನ್ನು ಅವರಿಂದ ಬಿಡಿಸಲಾರದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ್ದು ಹೌದು ಅಲ್ಲವೇ; ಬಿಡಿಸಿಕೊಳ್ಳಲಾರದಂತಹ ಜವಾಬ್ದಾರಿ ಸರ್ಕಾರದ್ದು ಎಂದು ಹೇಳಿದ್ದಾರೆ. ಅಲ್ಲಿಗೆ ಮುಗಿಯಿತು.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಇದರ ನಡುವೆ deemed forest ನಲ್ಲಿ ಇರುವಂತಹ 94(C) ನಲ್ಲಿರುವಂತಹ ಮನೆಗಳನ್ನು ನಮ್ಮ ಸರ್ಕಾರ ಬಂದ ನಂತರ ಏನಾದರೂ ಒಕ್ಕಲು ಎಬ್ಬಿಸಿದ್ದೇವೆಯೇ ಹೇಳಲಿ? ನಾವು ಯಾರನ್ನು ಒಕ್ಕಲು ಎಬ್ಬಿಸಿಲ್ಲ. ಆ ಮನೆಗಳಲ್ಲಿ ಇದ್ದವರಿಗೆ ಎಲ್ಲರಿಗೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಟ್ಟಿದ್ದೇವೆ. ಈಗ ಅವರಿಗೆ ಹಕ್ಕುಪತ್ರಗಳನ್ನು ಕೊಡುವುದಕ್ಕೆ ಬೇಕಾದಂತಹ ಕಾನೂನು ಪ್ರಕ್ರಿಯೆಗಳನ್ನು ಪ್ರಾರಂಭ ಮಾಡಿದ್ದೇವೆ.

**ಸಭಾಪತಿಯವರು:-** ಇದನ್ನು ನಾನು Suo moto Half an Hour Discussion ಗೆ convert ಮಾಡಿ ನಾಳೆಗೆ ತೆಗೆದುಕೊಳ್ಳುತ್ತೇನೆ. ಶೆಟ್ಟರ್‌ರವರೇ, ಬಾವಿಯಿಂದ ಹೊರಗಡೆ ಬದು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ. ಪ್ರತಾಪಚಂದ್ರಶೆಟ್ಟಿರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)**

**ಸಭಾಪತಿಯವರು:-** ಯಾರು ಮಾತನಾಡಬೇಡಿ. ನಾನೇ Half an Hour Discussion ಗೆ convert ಮಾಡಿಕೊಟ್ಟಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಈಗ ಸರ್ಕಾರದಿಂದ commitment ಆಗಿ solve ಆಗಿದೆ ಬಿಡಿ.

**(ಗೊಂದಲ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**:- ಮಾನ್ಯ ಸಭಾಪತಿಯವರೇ, ಅವರಿಗೆಲ್ಲಾ ಕೋಟಿಗಟ್ಟಲೇ, ನಮಗೆಲ್ಲಾ ಇದೆ.

**(ಗೊಂದಲ)**

**ಸಭಾಪತಿಯವರು:-** ಪ್ರತಾಪ್‌ಚಂದ್ರ ಶೆಟ್ಟಿಯವರೇ, ದಯವಿಟ್ಟು ಮಾತನಾಡಬೇಡಿ. ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಈಗ ಅವರು ರಾಜಕಾರಣದ ಬಗ್ಗೆ ಮಾತನಾಡಿದರೆ, ನಾನು ಮಾತನಾಡುತ್ತೇನೆ. Deemed forest ನ ಸಮಸ್ಯೆ ಅವರ ಸರ್ಕಾರದ ಪಾಪದ ಕೂಸು. ಇದು ನಮ್ಮದಲ್ಲ. ಅವರ ಸರ್ಕಾರ ಇದ್ದಾಗ, deemed forest ಸಮಸ್ಯೆಯನ್ನು ಮಾಡಿದ್ದಾರೆ. ಈಗ ನಾವು ಅವರ ಪಾಪದ ಕೂಸನ್ನು ಸರಿ ಮಾಡುತ್ತಿದ್ದೇವೆ. ನಮ್ಮ ಸರ್ಕಾರ ಬಂದ ನಂತರ ಅದನ್ನು ಸರಿ ಮಾಡುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷನಾಯಕರೇ, ಎಲ್ಲ common ಆಗಿ ಮಾತನಾಡುತ್ತಾರೆ, ಹೋಗಲಿ ಬಿಡಿ ಸಾಕು.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಈ ಹಂತದಲ್ಲಿನ ನಡವಳಿಯನ್ನು ಕಡತಕ್ಕೆ ಹೋಗಬಾರದೆಂದು ತಿಳಿಸಿರುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಇರಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಈ ವಿಷಯ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ convert ಆಗಿ matter settle ಆಗಿದೆ. ಈ ಇಲಾಖೆಯಲ್ಲಿ ಹತ್ತಾರು ಮಂತ್ರಿಗಳು ಭಾಗವಹಿಸುತ್ತಾರೆಂದರೆ, ಮಾನ್ಯ ಅಶೋಕ್‌ರವರು ಸಮರ್ಥರಿಲ್ಲವೇ? I know he is capable.

**(ಗೊಂದಲ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ನಾನು ಒಂದು ವಿಷಯವನ್ನು ಹೇಳುತ್ತೇನೆ. ಅದು ತಮಗೆ convince ಆಗುತ್ತದೆಯೋ ಅಥವಾ ಇಲ್ಲವೋ ನೋಡಿ. CRZ (Coastal Regulation Zone) ಎನ್ನುವುದು ಸಮುದ್ರ ಬಳಿಯಲ್ಲಿರುವಂತಹ ಒಂದು ಏರಿಯಾ.

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು, ಒಂದು ನಿಮಿಷ ಕೇಳಿ.

**ಶ್ರೀ ಕೆ.ಪ್ರತಾಪ್ ಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ತಮಗೆ ಅರ್ಥವಾಗುತ್ತದೆಯೋ ಇಲ್ಲವೋ ಒಂದು ನಿಮಿಷ ಪ್ರಯತ್ನ ಮಾಡಿ.

**ಸಭಾಪತಿಯವರು:-** ತಮ್ಮದು ನನಗೆ ಅರ್ಥವಾಗುವುದು ಬಹಳ ಕಷ್ಟ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಸಮುದ್ರದ ಬದಿಯಲ್ಲಿರುವಂತಹ CRZ ನಲ್ಲಿ ಮರಳು ತೆಗೆಯುವುದಕ್ಕೆ ಆಗಲಿಲ್ಲ. CRZ ಕಾಯಿದೆಯಿಂದಾಗಿ Supreme Court ಮತ್ತು Green Bench ಅದಕ್ಕೆ ಆಕ್ಷೇಪವನ್ನು ತಂದರು. ಆದರೆ, ಅಲ್ಲಿನ ಜನರು ಒಟ್ಟಾಗಿ Supreme Courtಗೆ ಹೋಗಿ ಅದನ್ನು ಸರಿಮಾಡಿಸಿಕೊಂಡು ಬಂದರು. ಇದೇ ಸರ್ಕಾರ ಇಷ್ಟು ವರ್ಷಗಳಾದರೂ ಸಹ, ಈ ಜನರ ಪರವಾಗಿ ನಾವು Supreme Courtಗೆ ಹೋಗುತ್ತೇವೆ, ನಾವು Supreme Court ಗೆ ಹೋಗುತ್ತವೆಂದು ಹೇಳಿ, ವರ್ಷಗಳಟ್ಟಲೇ ಬಂದರು. ಆದರೆ, CRZ ನವರು ಹೇಗೆ ಮಾಡಿಕೊಂಡು ಬಂದರು?

**ಸಭಾಪತಿಯವರು:-** ಆಯಿತು ಬಿಡಿ. ವೀಣಾ ಅಚ್ಚಯ್ಯನವರೇ, ತಮ್ಮ ಪ್ರಶ್ನೆ ಕೇಳಿ.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ 1101**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಸಮಸ್ಯೆ ಏನೆಂದರೆ, ಕೊಡಗು ಜಿಲ್ಲೆಯಲ್ಲಿ ಬಹು ವಾರ್ಷಿಕ ವಾಣಿಜ್ಯ ಬೆಳೆಗಳಾದ ಕಾಫಿ ಮತ್ತು ಕರಿಮೆಣಸುಗಳನ್ನು ಬೆಳೆಯುತ್ತೇವೆ. ನಾವು ಮೂರು ತಿಂಗಳಿಗೊಮ್ಮೆ ಆರ್.ಟಿ.ಸಿ.ಯನ್ನು ತೆಗೆಯುವಾಗ ಅದು ಬದಲಾವಣೆಯಾಗಿರುತ್ತದೆ ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮೂರು ತಿಂಗಳಿಗೊಮ್ಮೆ ಯಾರಾದರೂ ರೈತರು ಹೋಗಿ ಆರ್.ಟಿ.ಸಿ.ಯನ್ನು ತೆಗೆದಾಗ, ಆರ್.ಟಿ.ಸಿ.ಯ ಕಲಂನಲ್ಲಿ ಒಂದು ಕಾಫಿ ಎಂದು ನಮೂದಾಗಿರುತ್ತದೆ, ಇಲ್ಲವೆಂದರೆ, ಆ ಕಲಂನಲ್ಲಿ ಖಾಲಿಯಾಗಿ ಬಿಟ್ಟಿರುತ್ತಾರೆ. ಇದು ಈ ರೀತಿಯಾಗಬಾರದು . ಈ ರೀತಿಯಾದರೆ ನಮಗೆ ಬಹಳ ಕಷ್ಟವಾಗುತ್ತದೆ. ಅಲ್ಲಿನ ಅಧಿಕಾರಿಗಳು ನಮಗೆ Mobile App ಕೊಟ್ಟಿದ್ದಾರೆ. ಅದು ನಮಗೆ ಅನ್ವಯಿಸುವುದಿಲ್ಲ. ಇದು ನಮಗೆ ಕಷ್ಟವಾಗುತ್ತದೆ. ನಾವೆಲ್ಲರೂ remote village ನಲ್ಲಿರುವುದರಿಂದ Mobile App ಎಲ್ಲ ಬರುವುದಕ್ಕೆ ಕಷ್ಟವಾಗುತ್ತದೆ. ಅಲ್ಲಿನ ರೈತರು ತುಂಬ ಕಷ್ಟದಲ್ಲಿದ್ದಾರೆ. ಮತ್ತೆ ಸರ್ಕಾರದಿಂದ ಕೊಡುವಂತಹ ಯಾವುದೇ ಪರಿಹಾರವಾಗಲಿ ಅಥವಾ ನಾವು ತೆಗೆದುಕೊಳ್ಳುವಂತಹ ಯಾವುದೇ ಸಾಲಕ್ಕೂ ಸಹ ಸಮಸ್ಯೆಯಾಗಿದೆ. ಅದಕ್ಕೆ 4 ರಿಂದ 6 ತಿಂಗಳಲ್ಲಿ ಆರ್.ಟಿ.ಸಿ.ಯಲ್ಲಿ ಬೆಳೆಯ ನಮೂನೆಯನ್ನು ತೆಗೆದುಹಾಕುವ ಈ ಅವೈಜ್ಞಾನಿಕ ಕ್ರಮವನ್ನು ಕೊಡಗು ಜಿಲ್ಲೆಯ ಮಟ್ಟಿಗೆಯಾದರೂ ಅದನ್ನು ಬದಲಾವಣೆ ಮಾಡಬೇಕು. ಏಕೆಂದರೆ, ನಾವು ಕಾಫಿ, ಕರಿಮೆಣಸು ಹಾಗೂ ಅಡಿಕೆ ಬೆಳೆಗಳನ್ನು ಬೆಳೆಯುತ್ತೇವೆ. ಆ ಬೆಳೆಗಳ ನಮೂದು ಆರ್.ಟಿ.ಸಿ.ಯಲ್ಲಿ ಅದೇ ತರಹ ಇರಲಿ. ಆರ್.ಟಿ.ಸಿ. ಬರುವಾಗ ಅದು ಬದಲಾವಣೆ ಆಗುವುದು ಬೇಡವೆಂದು ಅಲ್ಲಿನ ಜನರ ಮನವಿ ಇದೆ. ಹಾಗಾಗಿ, ಅದನ್ನು ಬದಲಾವಣೆ ಮಾಡುವಂತಹ ಅವಶ್ಯಕತೆ ಇಲ್ಲ. ನಾನು ಕೊಡಗು ಜಿಲ್ಲೆಗೆ ಸೀಮಿತವಾಗಿ ಹೇಳುತ್ತಿದ್ದೇನೆ. ನಾವು ಬಹುವಾರ್ಷಿಕ ಬೆಳೆಗಳನ್ನು ಬೆಳೆಯುತ್ತೇವೆ. ನಾವು ಅಲ್ಲಿ ತಿಂಗಳಿಗೆ ಒಂದು ಬೆಳೆಯನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಆ ನಿಟ್ಟಿನಲ್ಲಿ ಕೊಡಗು ಜಿಲ್ಲೆಗೆ ಈ ಒಂದು ನಿಯಮವನ್ನು ಪಾಲನೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಾಗಿದೆ. ಕೊಡಗು ಜಿಲ್ಲೆಯ ಆರ್.ಟಿ.ಸಿ.ಯಲ್ಲಿ ಬಹುವಾರ್ಷಿಕ ಬೆಳೆಗಳ ನಮೂದು ಏನು ಬರುತ್ತಿದೆ, ಅದು ಮೂರು ತಿಂಗಳಿಗೆ, ಆರು ತಿಂಗಳಿಗೆ ಈ ರೀತಿ ಬದಲಾವಣೆಯಾಗುವುದು, ಇಲ್ಲವೆಂದರೆ ಆರ್.ಟಿ.ಸಿ. ಕಲಂ ಖಾಲಿ ಬಂದರೆ, ಅಲ್ಲಿನ ರೈತರಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಇದರಿಂದ ತೊಂದರೆಯಾಗುತ್ತಿದೆ. ಇದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಹಾಗಾಗಿ, ಇದನ್ನು ನಾವು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ. ಏಕೆಂದರೆ. ಆರ್.ಟಿ.ಸಿ.ಯಲ್ಲಿ ಕಾಫಿ, ಕರಿಮೆಣಸು ಬೆಳೆಗಳ ನಮೂದು ನಿರಂತರವಾಗಿ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇರಬೇಕು. ಏಕೆಂದರೆ, ಈ ಬೆಳೆಗಳು 3-6 ತಿಂಗಳ ಬೆಳೆಗಳಲ್ಲ. ಆದ್ದರಿಂದ, ನಾನು ಕೃಷಿ ಇಲಾಖೆಯೊಂದಿಗೆ ಮಾತನಾಡಿ, ಅದನ್ನು ಬದಲಾವಣೆ ಮಾಡದಂತೆ ಮಾಡುವ ಬಗ್ಗೆ ಬಹುವಾರ್ಷಿಕ ಬೆಳೆಗಳ ನಮೂದು ಏನಿರುತ್ತದೆ ಅದನ್ನು ಹಾಗೆಯೇ ಆರ್.ಟಿ.ಸಿ.ಯಲ್ಲಿ ಮುಂದುವರಿಸುವುದಕ್ಕೆ ನಾನು ವ್ಯವಸ್ಥೆಯನ್ನು ಮಾಡುತ್ತೇನೆ. ನಾನು ಮೌಖಿಕ ಉತ್ತರದಲ್ಲಿ ಹೇಳುತ್ತಿದ್ದೇನೆ. ನಾನು ಅದನ್ನು ಮಾಡಿಕೊಡುತ್ತೇನೆ.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ತಪ್ಪು ಇದೆ. ಇದನ್ನು ಜನರಿಗೆ ತಿಳಿಸುವುದಕ್ಕೆ ಆಗುವುದಿಲ್ಲ. ಹಾಗಾಗಿ, ಮಾನ್ಯ ಸಚಿವರ ಹೇಳಿಕೆಯನ್ನು ಜನರಿಗೆ ತಿಳಿಸಬೇಕಾಗುತ್ತದೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಆಗಬಹುದು. ಮಾನ್ಯ ಸದಸ್ಯರು ಹೇಳುವುದು ಸರಿ ಇದೆ ಎಂದು ಹೇಳಿದ್ದೇನೆ. ಅದನ್ನು ಸರಿಮಾಡುತ್ತೇನೆಂದು ಸಹ ಹೇಳಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 1045**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಒಂದು ಊಟದ ಹಾಲ್, ಒಂದು ಕೋಣೆ ಇರುವಂತಹ ಮನೆಯನ್ನು ಕಟ್ಟುವುದಕ್ಕೆ ಸುಮಾರು 10 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಸರ್ಕಾರ ಇದಕ್ಕೆ 1.50 ರಿಂದ 2 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಬಡವರು ಸಾಲ ಮಾಡುವುದಕ್ಕೆ ಹೋದರೆ, ಅವರಿಗೆ ಯಾರು ಸಾಲ ಕೊಡುವುದಿಲ್ಲ. ಹೊರಗಡೆ ಸಾಲ ಮಾಡಿ ಮನೆ ಕಟ್ಟಿ ಮನೆಯನ್ನು ಓಪನ್ ಮಾಡುತ್ತಾರೆ. ನಂತರ ಆ ಸಾಲಕ್ಕೆ ಅಂಜಿ ಆ ಮನೆಯಲ್ಲಿ ಇರುವುದಿಲ್ಲ, ಆ ಊರನ್ನೇ ಬಿಟ್ಟು ಹೋಗುವಂತಹ ವಾತಾವರಣ ಇದೆ. ಕೋವಿಡ್-19 ಬಂದ ನಂತರ ಅವರ ಪರಿಸ್ಥಿತಿ ಹೇಳತೀರದ್ದಾಗಿದೆ. ಅದಕ್ಕೆ ಕೊನೆಯ ಪಕ್ಷ ಕೋವಿಡ್ ಸಂದರ್ಭದಲ್ಲಿ ಏನಾಗಿದೆ, ಅವರ ಸಾಲವನ್ನಾದರೂ ಸಹ ಮನ್ನಾ ಮಾಡುವಿರಾ? ಇಲ್ಲದಿದ್ದರೆ, ಅವರು ಊರು ಬಿಟ್ಟು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಸಚಿವರೇ, ಒಂದು ಮನೆಯನ್ನು ಕಟ್ಟುವುದಕ್ಕೆ ಕನಿಷ್ಠ ಪಕ್ಷ ಎಷ್ಟು ಹಣ ಬೇಕೆಂದು ಹೇಳಿ ಅದನ್ನು ಇತ್ಯರ್ಥಪಡಿಸಲಿ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ತಿಮ್ಮಾಪೂರರವರು ರಾಜ್ಯದಲ್ಲಿ ವಸತಿ ಯೋಜನೆಗಳಲ್ಲಿ ಸಾಲ ಪಡೆದಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳ ಸಂಖ್ಯೆ ಎಷ್ಟು ಅವರ ಮಾಹಿತಿ ಕೊಡಿ ಎಂಬ ಬಹಳ ಸರಳವಾದ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ನಾವು ಉತ್ತರವನ್ನು ಕೊಟ್ಟಿದ್ದೇವೆ.

**ಶ್ರೀ ಆರ್.ಬಿ.ತಿಮ್ಮಾಪೂರ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಂಖ್ಯೆಯ ಮಾಹಿತಿಯನ್ನು ಕೊಟ್ಟಿಲ್ಲ.

**ಶ್ರೀ ವಿ.ಸೋಮಣ್ಣ**:- ಮಾನ್ಯ ಸಭಾಪತಿಯವರೇ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಯಾವುದೇ ಸಾಲ ಕೊಟ್ಟಿಲ್ಲ. 2000 ಸಾಲಿನಲ್ಲಿಯೇ ಅಡಮಾನ ಎನ್ನುವುದನ್ನು ಸಹ ತೆಗೆದು ಹಾಕಿದ್ದೇವೆ. ಇಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆತರುವುದಕ್ಕೆ ಬಯಸುತ್ತೇನೆ. ಯಾವುದಾದರೂ ಒಂದು ಬ್ಯಾಂಕಿನವರು ನಿರ್ದಿಷ್ಟವಾಗಿ ಕೇಳಿರುವಂತಹ ಅಡಮಾನ, ಆಗ 20 ಸಾವಿರ, 40 ಸಾವಿರ, 60 ಸಾವಿರ ರೂಪಾಯಿಗಳು ತರಹ ಇತ್ತು. ಶ್ರೀ ರಾಜೀವ್ ಗಾಂಧಿ ನಿಗಮ ಆಗುವವರೆಗೆ 2000 ರಿಂದ 2009ನೇ ಸಾಲಿನವರೆಗೂ ಬಹುತೇಕ ಗೊಂದಲಗಳು ಆಗಿದ್ದನ್ನು ಎಲ್ಲವನ್ನು ಈಗಾಗಲೇ ಸರಿ ಮಾಡಿದ್ದೇವೆ. ಇವತ್ತು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಆಗಿರಬಹುದು, ಬೇರೆಯವರಿಗೆ ಆಗಿರಬಹುದು ಏನು ಸಾಲ ಕೊಡುತ್ತಿದ್ದರು ಅದು ನೂರಕ್ಕೆ ನೂರರಷ್ಟು ಸಾಲ ಇತ್ತು. ಅದನ್ನು ಸಹ, ಮನ್ನಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಲಾಗಿದೆ. 2009 ರಲ್ಲಿ ನಾನು ಸಚಿವನಾಗಿದ್ದಂತಹ ಸಂದರ್ಭದಲ್ಲಿ ಯಾವ, ಯಾವುದು ಅಡಮಾನವೆಂದು ಇಟ್ಟಿದ್ದರು, ಆ ಅಡಮಾನವನ್ನು ತೆಗೆದು ಹಾಕಿ ಎಲ್ಲವನ್ನು ಸಹ ಮುಕ್ತಿಗೊಳಿಸಿದ್ದೇವೆ. ಮಾನ್ಯ ಸದಸ್ಯರಾದ ತಿಮ್ಮಾಪೂರರವರಲ್ಲಿ ವಿನಂತಿಯನ್ನು ಮಾಡುತ್ತೇನೆ. ಯಾವುದಾದರೊಂದು ನಿರ್ದಿಷ್ಟವಾಗಿ ಹಳೆಯ ಸಾಲಗಳನ್ನು ತೆಗೆದುಕೊಂಡು, ಬ್ಯಾಂಕಿನವರು ಬಂದು ತೊಂದರೆ ಕೊಟ್ಟಿರುವಂತಹ ಒಂದು ನಿರ್ದಶನವಿದ್ದರೆ, ಅದರಲ್ಲೂ ವಿಶೇಷವಾಗಿ ರಾಜೀವ್‌ಗಾಂಧಿ ನಿಗಮದಿಂದ ಕೊಟ್ಟಿರುವಂತಹ ಸಾಲಗಳಿರಬಹುದು, ಪ್ರಧಾನ ಮಂತ್ರಿ ಆವಾಸ್ ಯೋಜನೆಯಲ್ಲಿ ಒಂದೂ ಸ್ಹ ಆ ರೀತಿ ಆಗುವುದಕ್ಕೆ ಸಾಧ್ಯವಿಲ್ಲ.

(ಮುಂದು)

**(1243) 22-12-2021 (11.20) ಎಂವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ವಿ.ಸೋಮಣ್ಣ (ಮುಂದು):-**

ನಾನು 2011-12ರಲ್ಲಿ ಇದ್ದಂತಹ ಸಂದರ್ಭದಲ್ಲಿ **'ನನ್ನ ಮನೆ, ನನ್ನ ಸ್ವತ್ತು'** ಎಂದು ಮಾಡಿ. ಅದಕ್ಕೂ ಕೂಡ ಬಡ್ಡಿ ಮನ್ನಾ ಮಾಡಿದ್ದೇವೆ. ಇದೆಲ್ಲಾ ಆದಮೇಲೆ ಹಿಂದೆ 2013ರಲ್ಲಿ ಇದ್ದಂತಹ ಸರ್ಕಾರ ದಿನಾಂಕ 03.09.2014ರಲ್ಲಿ ಯಾವ್ಯಾವುಗಳಿಗೆ ಮರುಪಾವತಿ ಮಾಡದೆ ಬಾಕಿ ಉಳಿದಿದ್ದಂತಹ 1,458 ಕೋಟಿ ರೂಪಾಯಿ ಮತ್ತು ಅದರ ಬಡ್ಡಿ 1,030 ಕೋಟಿ ರೂಪಾಯಿಗಳು. ಅಂದರೆ, ನಾವು ಒಟ್ಟಾರೆಯಾಗಿ 2,488 ಕೋಟಿ ರೂಪಾಯಿಗಳನ್ನು ಸಂಪೂರ್ಣವಾಗಿ ಮನ್ನಾ ಮಾಡಿದ್ದೇವೆ. ಹಿಂದೆ ಇದ್ದಂತಹ ಸರ್ಕಾರವೂ ಸಹ ಮಾಡಿದೆ. ಈ ರೀತಿಯ ಒಂದೇ ಒಂದು ನಿದರ್ಶನವಿದ್ದರೆ, ಮಾನ್ಯ ಸದಸ್ಯರು ನನ್ನ ಗಮನಕ್ಕೆ ತರಬಹುದು. ಇವತ್ತು ಮನೆ ಕಟ್ಟುವುದಕ್ಕೆ ಏನು ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಕೇಳಿದರು. ಇತ್ತೀಚೆಗೆ ಒಬ್ಬ ಫಲಾನುಭವಿ ಮನೆ ಕಟ್ಟುವುದಕ್ಕೆ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಎಂದು ಇದೆ. ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೂವತ್ತು ಸಾವಿರ ರೂಪಾಯಿಗಳನ್ನು ಸೇರಿಸಿ ಒಟ್ಟು ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈಗ ನಾವು BLC (Beneficiary Led Construction) ಗಳಿಗೂ ಕೂಡ ಹಣವನ್ನು ಕೊಡುತ್ತಿದ್ದೇವೆ. ಮೊನ್ನೆ ದಿವಸ ಇದಕ್ಕೂ ಕೂಡ ಅಡಮಾನ ಇಡಬಾರದು ಎಂದು ನಮ್ಮ ಸರ್ಕಾರ ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರು ಈ ರಾಜ್ಯದ ಮುಖ್ಯಮಂತ್ರಿಗಳಾದ ಮೇಲೆ ಅದನ್ನು ಸಹ ತೆಗೆದು ಹಾಕಿದ್ದೇವೆ. ನಾವು ಅವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣವನ್ನು ನೀಡುತ್ತೇವೆ. ನಾವು ಆ ಹಣವನ್ನು ಫಲಾನುಭವಿಗೆ ನೀಡುವುದಕ್ಕೆ ನಾಲ್ಕು ಕಂತುಗಳು ಎಂದು ಇತ್ತು. ಈಗ ಇನ್ನು ಮುಂದೆ ಐದು ಲಕ್ಷಗಳಿಗೆ ಮನೆ ಕಟ್ಟುವಂತಹವರಿಗೆ ಅದನ್ನು ಮೂರು ಕಂತುಗಳಿಗೆ ಎಂದು ಇಳಿಸಿದ್ದೇವೆ. ಈ ಹಿಂದೆ ಕೊಟ್ಟಿರುವಂತಹ ಕಂತುಗಳಲ್ಲೂ ಕೂಡ ಯಾವುದಾದರೂ ಇದ್ದು, ಅವರು ಮನೆ ಕಟ್ಟಿಕೊಳ್ಳುವುದಕ್ಕೆ ಸಾಲ ಮಾಡಿಕೊಳ್ಳುವುದು ಮತ್ತೊಂದು ಆಗಿರುವಂಥದ್ದು ನಮ್ಮಲ್ಲಿ ಆ ರೀತಿಯ ಒತ್ತಡವಿಲ್ಲ. ನಾವು ಈಗ ಹಣ ಕೊಡುವುದನ್ನು ಮಾತ್ರ ಲಿಮಿಟ್

ಮಾಡಿದ್ದೇವೆ. ಹಿಂದೆ ಇದ್ದಂತಹ 2,400 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟ ಹಣದ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ಅಡಮಾನವನ್ನು ಪೂರ್ತಿ ತೆಗೆದು ಹಾಕಿದ್ದೇವೆ. ನಾವು ಏನು ಮುಂದೆ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ ಅದಕ್ಕೆ ಅಡಮಾನ ಎಂಬ ಪ್ರಶ್ನೆಯೇ ಬರುವುದಿಲ್ಲ. ಫಲಾನುಭವಿಗಳಿಗೆ ಏನು ಸರ್ಕಾರದ ಸಹಾಯಧನವನ್ನು ಕೊಡುತ್ತಿದ್ದೆವು. ಅದಕ್ಕೆ ಅಡಮಾನ ಇಟ್ಟುಕೊಳ್ಳುವುದನ್ನು ಸಹ ತೆಗೆದು ಹಾಕಿದ್ದೇವೆ. ಆದುದರಿಂದ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಸಮಂಜಸವಾಗಿದೆ. ನಾನು ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ರೀತಿಯ ಯಾವುದಾದರು ಘಟನೆಗಳು ಇದ್ದರೆ, ಮಾನ್ಯ ಸದಸ್ಯರು ದಯವಿಟ್ಟು ನನ್ನ ಗಮನಕ್ಕೆ ತಂದರೆ, ಆ ಸಮಸ್ಯೆಯನ್ನು ಸಹ ಬಗೆಹರಿಸುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಬಹಶಃ ಇವರಿಗೆ ಯಾವ ಬ್ಯಾಂಕ್‌ನವರು ಸಹ ಸಾಲ ಕೊಡುವುದು ತುಂಬಾ ಕಷ್ಟ. ಫಲಾನುಭವಿಗಳು ಎಲ್ಲೋ ಹೊರಗಡೆಯಿಂದ ಬಡ್ಡಿಗೆ ಸಾಲವನ್ನು ತೆಗೆದುಕೊಂಡು ಬಂದಿರುತ್ತಾರೆ. ಆ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಆಗದೇ ಅವರು ತಮ್ಮ ಮನೆಯನ್ನು ಬಿಟ್ಟು ಹೋಗುತ್ತಾರೆ. ಈಗ ಗಂಡ, ಹೆಂಡತಿ ಮತ್ತು ಮಕ್ಕಳು ಇರುವುದಕ್ಕೆ ಒಂದು ಸಣ್ಣ ಮನೆ ಕಟ್ಟುವುದಕ್ಕೆ ಎಷ್ಟು ವೆಚ್ಚವಾಗುತ್ತದೆ ಎಂದು ಸರ್ಕಾರದ ಯೋಜನೆಯಲ್ಲಿ ಇದೆಯೇ ಮತ್ತು ಅದಕ್ಕೆ ಎಷ್ಟು ವೆಚ್ಚವಾಗಬಹುದು? ಸರ್ಕಾರ ಕೊಡುವಂತಹ ಸಹಾಯಧನದಿಂದ ಬಡವರಿಗೆ ಸಹಾಯ ಆಗುತ್ತದೆಯೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಬಿ.ತಿಮ್ಮಾಪೂರರವರು ಮಂತ್ರಿಗಳಾಗಿದ್ದಂತಹವರು. ಸರ್ಕಾರ ಬಡವರಿಗೆ ನೆರವು ಆಗುವಂಥದ್ದಕ್ಕೆ ಮೊದಲು ಇದ್ದದ್ದು ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ. ಆ ನಂತರ ಅದು ನಲವತ್ತು ಸಾವಿರ ರೂಪಾಯಿ ಆಯಿತು. ನಾನು ಬಂದ ನಂತರ ಎಪ್ಪತ್ತು ಸಾವಿರ ರೂಪಾಯಿಗೆ ಏರಿಕೆಯಾಯಿತು. ಅಂದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಈ ಎರಡೂ ಸೇರಿ, ಈಗ ಅದು ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳಿಗೆ ಏರಿಕೆಯಾಗಿದೆ. ನಾವು ಅದನ್ನು ಸಹಾಯಧನವೆಂದು ಕೊಡುವುದು. ಈ ಮೊದಲು ಐದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಮನೆ ಕಟ್ಟುವಂತಿರಲಿಲ್ಲ. ಅದಕ್ಕೆ ಸಹಾಯಧನವನ್ನು ಕೊಡುತ್ತಿರಲಿಲ್ಲ. ಆದರೆ, ನಾನು ಮಂತ್ರಿಯಾಗಿ ಬಂದಮೇಲೆ ಫಲಾನುಭವಿಗಳು ಹತ್ತು ಲಕ್ಷ ರೂಪಾಯಿಗಳ ಮನೆ ಕಟ್ಟಿಕೊಂಡರೂ ಕೂಡ ಈ ನಿಯಮ ಅನ್ವಯವಾಗುವುದಿಲ್ಲವೆಂದು ಆದೇಶ ಮಾಡಿದ್ದೇವೆ. ಈಗ ಎಲ್ಲೋ ಒಂದು ಕಡೆ ನಿಜ, ಅಂದರೆ ಬಡವರು ಮನೆ ಕಟ್ಟಬೇಕು ಎಂದಾಗ, ಸರ್ಕಾರ ಅವರಿಗೆ ಒಂದು ಸಹಾಯಹಸ್ತ ನೀಡುತ್ತದೆ. ಈಗ ಮೆಟ್ಟಿಲುಗಳನ್ನು ಹಾಕಿ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳಲ್ಲಿ ಮನೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಅದನ್ನು ಅಡಮಾನ ಇಡುವುದಕ್ಕೆ ನೂರು ರೂಪಾಯಿ ಶುಲ್ಕವಿದೆ. ಈಗ ಅದನ್ನು ಸಹ ತೆಗೆದು ಹಾಕಿದ್ದೇವೆ.

ಅಲ್ಲಿ ಆರು ನೂರು, ಎಂಟು ನೂರು ಮತ್ತು ಸಾವಿರ ರೂಪಾಯಿಗಳವರೆಗೆ ಲಂಚ ನಡೆಯುತ್ತಿತ್ತು. ಮತ್ತೆ ಯಾವುದೇ ಕಾರಣಕ್ಕೂ 2,400 ಕೋಟಿ ರೂಪಾಯಿಗಳಂತೆ ಇನ್ನು ಮುಂದೆ ಈ ರೀತಿ ಆಗುವುದು ಬೇಡವೆಂದು. ಫಲಾನುಭವಿಗಳಿಗೆ ಏನಾದರೂ ಸಾಲ ಬೇಕು ಎಂದರೆ, ಅವರು ಮನೆ ಕಟ್ಟುವುದಕ್ಕೆ ಹಣವನ್ನು ಕೊಡೋಣ. ಅವರು ಬಾಕಿ ಹಣವನ್ನು ಹೊಂದಿಸಿಕೊಂಡು ಮನೆ ಕಟ್ಟಿಸಿಕೊಳ್ಳುವುದು ಅವರಿಗೆ ಸಂಬಂಧಿಸಿದ್ದು ಎಂದು ಮಾಡಿದ್ದೇವೆ. ಇದನ್ನು ಇನ್ನು ಜಾಸ್ತಿ ಮಾಡಬೇಕೆಂಬುದು ನನಗೂ ಆಸೆ ಇದೆ. ಈಗ ಹತ್ತು ಲಕ್ಷ ರೂಪಾಯಿ ಕೊಟ್ಟರೆ ನನಗೆ ಇನ್ನು ಖುಷಿಯಾಗುತ್ತದೆ. ಕೊಡುವಂತಹ ಈ ವ್ಯವಸ್ಥೆಯು ಇಡೀ ದೇಶಕ್ಕೆ ಮಾದರಿಯಾಗುತ್ತದೆ. ದಯಮಾಡಿ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವುದೇ ಸರ್ಕಾರ ಸೂರು ಇಲ್ಲದವರಿಗೆ ಸೂರು ಕೊಡುವಂತಹ ವ್ಯವಸ್ಥೆಯಲ್ಲಿ, ನಾವು ಸಹಾಯಧನ ನೀಡಬಹುದೇ ವಿನಾಃ, ಇನ್ನು ಮುಂದೆ ಅಡಮಾನ ಮತ್ತು ಬೇರೆ ಷರತ್ತುಗಳು ಇರುವುದಿಲ್ಲ. ಈಗ ನಾವು ಹಣವನ್ನು ಕೊಡುವುದು ನಾಲ್ಕು ಕಂತು, ಮೂರು ಕಂತು ಎಂದು ಇದೆ. ಈಗ ಅದನ್ನು ಒಂದು ವರ್ಷದಲ್ಲೇ ಮುಗಿಸಬೇಕೆಂದು ಅದಕ್ಕೆ ಕಾನೂನು ಮಾಡಿ, ಸುತ್ತೋಲೆಯನ್ನು ಸಹ ಹೊರಡಿಸಿದ್ದೇವೆ. ಈಗ ನಾಲ್ಕು ಕಂತು ಇರುವುದನ್ನು ಮೂರು ಕಂತುಗಳನ್ನಾಗಿ ಮಾಡಿದ್ದೇವೆ. ಫಲಾನುಭವಿಗಳು ಉಪ ನೋಂದಾಣಾಧಿಕಾರಿಗಳ ಕಚೇರಿಯಲ್ಲಿ ತಮ್ಮ ಮನೆಯನ್ನು ಇಟ್ಟು, ಕೊನೆಗೆ ಹಣ ತೆಗೆದುಕೊಳ್ಳುವುದೆಂದು ಇತ್ತು. ನಾವು ಅವರಿಗೆ ಹಣ ಕೊಡುವುದು ನೆರವಾಗಲಿ ಎಂದು ಇದನ್ನು ಸಹ ತೆಗೆದು ಹಾಕಿದ್ದೇವೆ. ನಾವು ಆ ನೆರವಿನ ಕೆಲಸವನ್ನು ಮಾತ್ರ ಮಾಡುತ್ತೇವೆ. ಬಾಕಿ ಉಳಿದಿದ್ದನ್ನು ಫಲಾನುಭವಿಗಳು ಮಾಡಬೇಕಾಗುತ್ತದೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗ ಬೇಡ ಮತ್ತು ಜಂಗಮ ಜನಾಂಗದವರಿಗೆ ಏನಾದರೂ ವಿಶೇಷವಾದ ಅನುದಾನವನ್ನು ಇಟ್ಟಿದ್ದಾರೆಯೇ?

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಸಿ.ಎಂ.ಇಬ್ರಾಹಿಂ ಸಾಹೇಬರಿಗೆ ಬೇಡ, ಜಂಗಮ ಮತ್ತು ಬಸವಣ್ಣನವರು ಎಂದರೆ ಬಹಳ ಖುಷಿಯಾಗುತ್ತದೆ. ಹಾಗಾಗಿ, ನಿನ್ನೆಯ ದಿವಸ ಕೆಳಮನೆಯಲ್ಲಿ ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ ಈಗಾಗಲೇ 35 ಸಾವಿರಕ್ಕೂ ಮೇಲ್ಪಟ್ಟು ಮನೆಗಳನ್ನು ನೀಡಿದ್ದೇವೆ. ಅದರಲ್ಲಿ, ಅಲೆಮಾರಿ, ಅರೇ ಅಲೆಮಾರಿ, ಸುಡಗಾಡು ಸಿದ್ದ, ಬುಡಕಟ್ಟು ಜನಾಂಗ ಮತ್ತು ಕಾಡುಗೊಲ್ಲ ಇವರುಗಳಿಗೆ ಸುಮಾರು 65 ಸಾವಿರ ಮನೆಗಳನ್ನು ನಿಗದಿಪಡಿಸಿ, 35 ಸಾವಿರದಿಂದ 36 ಸಾವಿರ ಮನೆಗಳನ್ನು ನೀಡಿದ್ದೇವೆ. ನಾನೇ ತಾಲ್ಲೂಕುಗಳಿಗೆ ಭೇಟಿ ಕೊಟ್ಟು, ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳನ್ನು ನೀಡಿದ್ದೇವೆ. ಇದರ ಜೊತೆಗೆ ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿ, ಅವರಿಗೆ ವಿನಂತಿ ಮಾಡಿ ಪತ್ರವನ್ನು ಸಲ್ಲಿಸಿ ಬಂದಿದ್ದೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈಗಾಗಲೇ ಅದಕ್ಕೆ ಸಂಬಂಧಪಟ್ಟಂತೆ ಎರಡು ಸಭೆಗಳಾಗಿವೆ. ಈಗ ನಾವು ಕೊಡುವಂತಹ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ ಜೊತೆಗೆ ಅವರು ನಲವತ್ತು ಸಾವಿರ ರೂಪಾಯಿಗಳನ್ನು ಅವರು ನೀಡಿದರೆ, ಆಗ ಒಟ್ಟು ಒಂದು ಲಕ್ಷದ ಆರವತ್ತು ಸಾವಿರ ರೂಪಾಯಿಗಳಾಗುತ್ತದೆ. ಉಳಿದಿದ್ದನ್ನು ಫಲಾನುಭವಿಗಳು ಭರಿಸಿಕೊಳ್ಳಬಹುದು. ನಾವು ಈಗಾಗಲೇ ಇದರ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ. ನನಗೆ ಅನಿಸಿರುವಂತೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಇಡೀ ರಾಜ್ಯದಲ್ಲಿ ಇರತಕ್ಕಂಥ ಸುಮಾರು 65 ಸಾವಿರಕ್ಕೂ ಮೇಲ್ಪಟ್ಟ ಕುಟುಂಬಗಳನ್ನು ಗುರುತಿಸಿದ್ದೇವೆ. ನಾವು ಅಷ್ಟು ಮನೆಗಳನ್ನು ಕಟ್ಟಬೇಕು ಎಂಬುದು ನನ್ನ ಬಯಕೆಯಾಗಿದೆ.

**ಪ್ರಶ್ನೆ ಸಂಖ್ಯೆ 1055**

**ಸಭಾಪತಿಯವರು:-** ಶ್ರೀ ರಘುನಾಥ ರಾವ್ ಮಲ್ಕಾಪೂರೆಯವರ ಪ್ರಶ್ನೆಯು ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ.

**ಪ್ರಶ್ನೆ ಸಂಖ್ಯೆ 1132**

**ಸಭಾಪತಿಯವರು:-** ಡಾ||ತೇಜಸ್ವಿನಿ ಗೌಡರವರ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ 1068**
**(ಈ ಹಂತದಲ್ಲಿ ಮಾನ್ಯ ಸದಸ್ಯರು ಗೈರು ಹಾಜರಿದ್ದರು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 1108**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಪ್ರಪಂಚದಲ್ಲಿ ಮತ್ತು ದೇಶದಲ್ಲಿ ನೆಲ ಮತ್ತು ಜಲಗಳಿಗೆ ಬಹಳಷ್ಟು ಯುದ್ಧಗಳಾಗಿ ರಾಷ್ಟ್ರಗಳು ಮತ್ತು ರಾಜ್ಯಗಳು ಸ್ಥಾಪನೆಯಾಗಿವೆ ಮತ್ತು ಅವುಗಳನ್ನು ಕಳೆದುಕೊಂಡಿದ್ದಾರೆ. ಈಗ ಸರ್ಕಾರಗಳು ಒಂದು ಒಳ್ಳೆಯ ಉದ್ದೇಶದಿಂದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಜಮೀನು ಮಂಜೂರಾತಿಯ ಮೂಲಕ ಸರ್ಕಾರಿ ಜಮೀನನ್ನು, ಕೆಲವರಿಗೆ ಗುತ್ತಿಗೆಯ ಆಧಾರದ ಮೇಲೆ ಕೊಡುತ್ತಾರೆ. ಮತ್ತೆ ಕೆಲವರಿಗೆ ಮಂಜೂರು ಮಾಡುತ್ತಾರೆ. 2017 ರಿಂದ 2018ರವರೆಗೆ ಯಾವ್ಯಾವ ರೀತಿಯಲ್ಲಿ ಜಮೀನುಗಳನ್ನು ಮಂಜೂರು ಮಾಡಿದ್ದಾರೆಂದು CAG (*Comptroller and Auditor General of India)* ಯವರು ಒಂದು ವರದಿ ನೀಡಿದ್ದಾರೆ. ಅದರಲ್ಲಿ ಕೆಲವರಿಗೆ ಗುತ್ತಿಗೆಯ ಆಧಾರದ ಮೇಲೂ ಸಹ ಜಮೀನುಗಳನ್ನು ನೀಡಿದ್ದಾರೆ. ಮಾನ್ಯ ಮಂತ್ರಿಗಳು ನೀಡಿರುವ ತಮ್ಮ ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. *Government land under encroachment,* ಬೇರೆ ಜಿಲ್ಲೆಗಳಿಗೆ ಒತ್ತಡವಿಲ್ಲ. ಆದರೆ, ಬೆಂಗಳೂರು ನಗರ ಜಿಲ್ಲೆಯಲ್ಲಿ 38,894 ಎಕರೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 36,229 ಎಕರೆಗಳಷ್ಟು ದೊಡ್ಡ ಪ್ರಮಾಣದಲ್ಲಿ ಜಮೀನು ಒತ್ತುವರಿಯಾಗಿರುವಂಥದ್ದು ಯಾವ ರೀತಿ ಆಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಿದರೆ ಬಹಳ ಅನುಕೂಲವಾಗುತ್ತದೆ. ಕಂದಾಯ ಇಲಾಖೆಯವರು ಹೇಳಿರುವುದು ಏನೆಂದರೆ, ಸರ್ಕಾರದ ಗಮನಕ್ಕೆ ಬಂದಿರತಕ್ಕಂಥ ರಾಜ್ಯದಲ್ಲಿ ಒಟ್ಟು 14,27,195 ಎಕರೆ ಸರ್ಕಾರಿ ಜಾಗ ಒತ್ತುವರಿಯಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಈಗ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ 38 ಸಾವಿರದ ಮೇಲೆ ಜಮೀನು ಒತ್ತುವರಿಯಾಗಿದೆ. ಇದನ್ನು ಮಾನ್ಯ ಸಚಿವರು ಇದನ್ನು ಸ್ವಲ್ಪ ಸ್ಪಷ್ಟಪಡಿಸಿದರೆ, ಆ ನಂತರ ನಾನು ನನ್ನ ಎರಡನೇ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಈಗ ಒತ್ತುವರಿ ಎಂದರೆ, ಅದರಲ್ಲಿ ಎಲ್ಲವೂ ಸಹ ಸೇರಿಕೊಳ್ಳುತ್ತದೆ. ಅಂದರೆ, ಅಕ್ರಮ-ಸಕ್ರಮ, 94(ಸಿ) ಮತ್ತು ಸರ್ಕಾರ ಏನೇನು ಸಂಸ್ಥೆಗಳಿಗೆ ಕೊಟ್ಟಿರುವುದು ಎಲ್ಲವೂ ಸಹ ಸೇರಿಕೊಂಡಿರುತ್ತದೆ. ಏಕೆಂದರೆ, ಅದು ಸಹ ಒತ್ತುವರಿ ಎಂದು ಆಗುತ್ತದೆ. ಈಗ ಸಾಗುವಳಿ ಜಮೀನುಗಳಿಗೆ ನಮೂನೆ 50 ಮತ್ತು ನಮೂನೆ 53ರ ಅಡಿಯಲ್ಲಿ ಅರ್ಜಿಯನ್ನು ಹಾಕಿಕೊಂಡಿರುತ್ತಾರೆ. ಅವುಗಳೆಲ್ಲವೂ ಸಹ ಒತ್ತುವರಿ ಎಂದೇ ಆಗುತ್ತದೆ. ಈಗ ಸರ್ಕಾರ ಅವರಿಗೆ ಮಂಜೂರು ಮಾಡಿದ ಮೇಲೆಯೇ ಅವರಿಗೆ ಜಮೀನು ಸಿಗುವುದು. ಆದುದರಿಂದ, ನಿಜವಾಗಿರುವಂಥದ್ದು ಸುಮಾರು 20,282 ಎಕರೆಗಳು. ಉಳಿಕೆ ಜಮೀನು ಅಂದರೆ, ಜಾನುವಾರು ಅಗತ್ಯ ಜಮೀನು ಕಾಯ್ದಿರಿಸಿದ ನಂತರ ಉಳಿಯುವ ಗೋಮಾಳ ವಿಸ್ತೀರ್ಣ 20,282 ಎಕರೆ ಜಮೀನು ಎಂಬುದು ನಮ್ಮ ಸರ್ಕಾರದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಾಖಲೆಯಲ್ಲಿ ಇದೆ. ಅದಕ್ಕೆ ಯಾವ್ಯಾವ ಜಿಲ್ಲೆಯಲ್ಲಿ ಏನೇನು ಎಂದು ಮಾನ್ಯ ಸದಸ್ಯರಿಗೆ ಅದರ ಪಟ್ಟಿಯನ್ನು ಸಹ ಒದಗಿಸಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಆ ಪಟ್ಟಿಯನ್ನು ನೋಡಿಯೇ ಮಾನ್ಯ ಸಚಿವರಿಗೆ ಉಪ ಪ್ರಶ್ನೆಯನ್ನು ಕೇಳಿರುವುದು. ಬೆಂಗಳೂರು ನಗರದಲ್ಲಿ ಕೆಲವು ಜಮೀನುಗಳನ್ನು ಗುತ್ತಿಗೆ ನೀಡಿದ್ದಾರೆ. ಗುತ್ತಿಗೆ ಕೊಟ್ಟು ಅದರ ಅವಧಿ ಮುಗಿದು ಹೋದರೂ ಸಹ ಅದನ್ನು ಹಾಗೆಯೇ ನಡೆಸಿಕೊಂಡು ಹೋಗುತ್ತಿದ್ದಾರೆ. ಈಗ ಅದಕ್ಕೆ ಐದು ನೂರರಿಂದ ಸಾವಿರ ರೂಪಾಯಿಗಳ ಒಳಗೆ ಬಾಡಿಗೆ ಇದೆ. ಅವುಗಳನ್ನು ಹೊರಗಡೆ ಬಾಡಿಗೆಗೆ ನೀಡಿದರೆ ಅವುಗಳಿಗೆ ಸುಮಾರು ಹತ್ತು ಲಕ್ಷ ರೂಪಾಯಿಗಳ ಬಾಡಿಗೆ ಸಿಗುವಂತಹ ಜಾಗಗಳು. ನಾನು ಸಚಿವರಾದ ಮಾನ್ಯ ಅಶೋಕ್‌ರವರಿಗೆ ಈ ಪ್ರಶ್ನೆಗಳನ್ನು ಏಕೆ ಕೇಳುತ್ತಿದ್ದೇನೆಂದರೆ, ಅವರು ಬೆಂಗಳೂರಿನ Diamond Zone ನಲ್ಲಿ ಇರುವಂತಹವರು. ಉತ್ತರ ಹಳ್ಳಿಯಲ್ಲಿ ಐದು ಕ್ಷೇತ್ರವಿತ್ತು. ಅವರು ಆ ಐದು ಕ್ಷೇತ್ರವನ್ನು ನೋಡಿರುವಂತಹವರು. ಅವರಿಗೆ ಅರ್ಥವಾಗಿದೆ ಎಂದು ಕೊಂಡಿದ್ದೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನನಗೆ ಅರ್ಥವಾಗಿದೆ.

(ಮುಂದು)

(1244) 22.12.2021 11.30 LL-AK **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ಅದು 10 ಕ್ಷೇತ್ರವಾಗಿದೆ. ಆ ಡೈಮಂಡ್ ಜೋನ್‌ನಲ್ಲಿರತಕ್ಕಂತಹ ಎಷ್ಟು ಜನ ಬಡವರು ಅದರಲ್ಲಿಯೂ ಎಸ್.ಸಿ./ಎಸ್.ಟಿ. ಸಮುದಾಯಕ್ಕೆ ಸೇರಿದ ಜಮೀನುಗಳಿಗೆ ಬೇರೆಯವರು ಪತ್ರಗಳನ್ನು ಸೃಷ್ಠಿ ಮಾಡಿಕೊಂಡು ಯಾವ ರೀತಿ ಅನ್ಯಾಯ ಮಾಡುತ್ತಿದ್ದಾರೆಂಬುದನ್ನು ಗಮನಿಸಬೇಕು. ಇದರಿಂದಾಗಿ, ಬಡವರಿಗೆ ಯಾವುದೇ ರೀತಿಯ ಅನುಕೂಲವಾಗುತ್ತಿಲ್ಲ. ಅದರ ಜೊತೆಗೆ, prohibited lands ಅಂದರೆ, ಗುಂಡುತೋಪು, ಸ್ಮಶಾನ ಹಾಗೂ ಇನ್ನಿತರ ಜಾಗಗಳನ್ನು ಸಹ ಕೆಲವರು ಅತಿಕ್ರಮಣ ಮಾಡಿಕೊಂಡಿರುತ್ತಾರೆ. ಅಂತಹ ಎಷ್ಟು ಜಮೀನು ಅತಿಕ್ರಮಣವಾಗಿದೆ ಎಂಬ ಬಗ್ಗೆ ಏನಾದರೂ ಸರ್ಕಾರದಲ್ಲಿ ಲೆಕ್ಕ ಇದೆಯೇ?

ಕೆಲವು ಟ್ಯಾಂಕ್(ಕೆರೆಗಳ)ಗಳ ಬಗ್ಗೆ ಈ ಹಿಂದೆ ಇದೇ ಸದನದಲ್ಲಿ ಚರ್ಚೆಯಾಗಿರುತ್ತದೆ. ಅಂದರೆ, ಕೆಲವು ಕೆರೆಗಳು ಮುಚ್ಚಿ ಹೋಗಿರುತ್ತವೆ. ಆ ಕೆರೆಗಳ ಪರಿಸ್ಥಿತಿ ಏನಾಗಿದೆ ಎಂಬ ಬಗ್ಗೆ ಸಹ ಮಾಹಿತಿ ನೀಡಿರುವುದಿಲ್ಲ. ಆ ಕೆರೆಗಳ ಜಮೀನು, ಗುಂಡುತೋಪುಗಳು ಮತ್ತು ಸ್ಮಶಾನಗಳ ಜಮೀನುಗಳಿಗೂ ಸಹ ಸರ್ಕಾರದಿಂದ ಮಂಜೂರಾತಿ ಕೊಟ್ಟಿದ್ದಾರೆ. ಅದರ ಜೊತೆಗೆ, ಸುಮಾರು 07 ಸಂಘ-ಸಂಸ್ಥೆಗಳಿಗೆ ಲೀಸ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಧಾರದ ಮೇರೆಗೆ ಭೂ ಮಂಜೂರಾತಿ ನೀಡಿದ್ದು, ಆ ಲೀಸ್ ಅವಧಿ ಮುಗಿದಿದ್ದರೂ ಸಹ ಅದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಅಲ್ಲದೇ, ಆ ರೀತಿ ಲೀಸ್ ಕೊಟ್ಟಿರುವ ಜಮೀನುಗಳಿಗೆ ಸಂಬಂಧಪಟ್ಟಂತೆ due process follow ಮಾಡಿರುವುದಿಲ್ಲ. ಈ ಬಗ್ಗೆ ನನ್ನ ಬಳಿ ಸಿ.ಐ.ಜಿ. ವರದಿ ಇದ್ದು, ಸದರಿ ವರದಿ ನಾನು ಕೊಟ್ಟಿರುವ ವರದಿಯಾಗಿರುವುದಿಲ್ಲ. I will quote from that report which reads thus, “47 acres 21 guntas granted to eleven beneficiaries even without receipt of application of land grant.”

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಸದರಿ ಲೀಸ್ ಅವಧಿ ಯಾವ ಇಸವಿಯಲ್ಲಿ ಮುಗಿದಿರುತ್ತದೆ ಎಂಬ ಬಗ್ಗೆ ಮಾನ್ಯ ಸದಸ್ಯರು ಹೇಳಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನಾನು ಅವರಿಗೆ ಕೊಡುತ್ತೇನೆ. ಇದರಲ್ಲಿ ಇಸವಿ ಯಾವುದೇ ಇದ್ದರೂ ಸಹ, ಸರ್ಕಾರಿ ಜಮೀನಿಂದ ಬಡವರಿಗೆ ಅನುಕೂಲ ಆದರೆ ಬಹಳ ಸಂತೋಷ. ಆದರೆ, ಅಲ್ಲಿ ಮಂಜೂರಾತಿ ಆಗಿರುವಂಥದ್ದು ಲ್ಯಾಂಡ್ ಮಾಫಿಯಾದವರಿಗೆ ಮತ್ತು ಬಿಲ್ಡರ್‌ಗಳಿಗೆ ಆಗುತ್ತಿದೆ. ಇದರ ಜೊತೆಗೆ, ಕಳ್ಳ ಪತ್ರಗಳನ್ನು ಸೃಷ್ಟಿ ಮಾಡಿಕೊಂಡು ಸದರಿ ಜಮೀನುಗಳನ್ನು ಬೇರೆಯವರಿಗೆ ಮಾರಿಕೊಂಡಿರುವವರ ವಿರುದ್ಧ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಮಾಹಿತಿ ನೀಡಬೇಕು. ಬೆಂಗಳೂರು ನಗರದಲ್ಲಿ ಸಂಘ-ಸಂಸ್ಥೆಗಳಿಗೆ ಕೊಟ್ಟಿರುವಂತಹ ಜಮೀನಿನ ಲೀಸ್ ಅವಧಿ ಮುಗಿದಿರುವಂತಹದ್ದು ಎಷ್ಟು ಇದೆ ಎಂಬ ಬಗ್ಗೆ ಮೊದಲು ಮಾಹಿತಿ ನೀಡಲಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಲೀಸ್ ಅವಧಿ ಮುಕ್ತಾಯವಾಗಿರುವಂತಹ ಜಮೀನುಗಳಿಗೆ ಸಂಬಂಧಪಟ್ಟಂತೆ, ಇತ್ತೀಚೆಗೆ ಒಂದು ಆಕ್ಟ್ ಅನ್ನು ಜಾರಿಗೆ ತರಲಾಗಿದೆ. ಅದರಂತೆ, ಸರ್ಕಾರದಿಂದ ಯಾರಿಗೆ ಲೀಸ್ ಆಧಾರದ ಮೇರೆಗೆ 500 ರೂಪಾಯಿ, 1000 ರೂಪಾಯಿ ಅಥವಾ 2000 ರೂಪಾಯಿಗೆ ಜಮೀನು ನೀಡಿರುತ್ತೇವೆ, ಅವರಿಗೆ ಆ ಜಮೀನನ್ನು ಗೈಡೆನ್ಸ್ ವ್ಯಾಲ್ಯೂ ಪ್ರಕಾರ ಕ್ರಯಕ್ಕೆ ಕೊಡುವಂಥದ್ದಕ್ಕೆ ವ್ಯವಸ್ಥೆ ಮಾಡಲಾಗಿದೆ. ಅದರಂತೆ, ಸಂಬಂಧಪಟ್ಟವರಿಗೆ ಈಗಾಗಲೇ ನೋಟಿಸ್ ಸರ್ವ್ ಮಾಡಲಾಗಿರುತ್ತದೆ. ಏಕೆಂದರೆ, ಕೇವಲ 500 ರೂಪಾಯಿ ಅಥವಾ 1000 ರೂಪಾಯಿ ಲೀಸ್‌ಗೆ ಕೊಟ್ಟರೆ, ಆ ಲೀಸ್ ಹಣದಲ್ಲಿಯೇ ಅವರು ಸುಮಾರು 30 ವರ್ಷಗಳ ಕಾಲ ಜಮೀನನ್ನು ಇಟ್ಟುಕೊಳ್ಳುತ್ತಾರೆ. ಇದರಿಂದಾಗಿ, ಸರ್ಕಾರಕ್ಕೆ ಯಾವುದೇ ಆದಾಯ ಬರುವುದಿಲ್ಲ ಮತ್ತು ಇದರಿಂದಾಗಿ ಸರ್ಕಾರಕ್ಕೆ ನಷ್ಟವಾಗುತ್ತದೆ. ಅದಕ್ಕೋಸ್ಕರ ನಾವು ಸಂಬಂಧಪಟ್ಟವರಿಗೆ ಕಳೆದ 2 ತಿಂಗಳ ಹಿಂದೆ ನೋಟಿಸ್ ಅನ್ನು ಸರ್ವ್ ಮಾಡಿರುತ್ತೇವೆ. ಯಾವ ಸಂಘ-ಸಂಸ್ಥೆಗಳ ಲೀಸ್ ಅವಧಿ ಮುಗಿದಿರುತ್ತದೆ,

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಆ ಜಮೀನುಗಳನ್ನು ಸರ್ಕಾರಕ್ಕೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕ್ರಮ ಮಾಡುತ್ತಿದ್ದೇವೆ. ಆದರೆ, ಅದರಲ್ಲಿ ಕೆಲವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದಿರುತ್ತಾರೆ. ಅವುಗಳನ್ನು ಹೊರತುಪಡಿಸಿ ಉಳಿದ ಜಮೀನುಗಳನ್ನು ಶೇಕಡ 100ರಷ್ಟು ವಾಪಸ್ಸು ತೆಗೆದುಕೊಳ್ಳುತ್ತೇವೆ. ಅದರಲ್ಲಿ ಯಾವುದೇ ಸಂಶಯ ಇರುವುದಿಲ್ಲ. ಮಾನ್ಯ ಸದಸ್ಯರು ಬೆಂಗಳೂರು ನಗರದ ಮಾಹಿತಿ ಕೇಳಿದ್ದು, ಅಲ್ಲಿ ಒಟ್ಟು ಒತ್ತುವರಿ ...

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕೆಲವು ಪ್ರಕರಣಗಳಲ್ಲಿ ಸರ್ಕಾರಿ ವಕೀಲರು ನ್ಯಾಯಾಲಯಕ್ಕೆ ಹಾಜರಾಗುವುದೇ ಇಲ್ಲ. ಅಂತಹ ಪರಿಸ್ಥಿತಿ ಇರುತ್ತದೆ. ಹಾಗಾಗಿ, ಅಂತಹ ಪ್ರಕರಣಗಳಲ್ಲಿ ಜಮೀನನ್ನು ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾವು ಮತ್ತು ನೀವೆಲ್ಲರೂ ಸಹ ಭಾಗಿಯಾಗಿದ್ದೇವೆ. ನಾನು ಕಂದಾಯ ಸಚಿವನಾದ ನಂತರ, ನಮ್ಮ ಮುಖ್ಯಮಂತ್ರಿಗಳ ಜೊತೆ ಈ ಬಗ್ಗೆ ಮಾತನಾಡಿದ್ದೇನೆ. ಇಂತಹ ವಿಚಾರಗಳಲ್ಲಿ ಯಾರು ನಕಲಿ ದಾಖಲೆಗಳನ್ನು ಸೃಷ್ಠಿ ಮಾಡಿರುತ್ತಾರೆ, ಅವರು ಸರ್ಕಾರಿ ದಾಖಲೆಗಳಿಗಿಂತಲೂ ಬಹಳ ಚೆನ್ನಾಗಿ ನಕಲಿ ದಾಖಲೆಗಳನ್ನು ಸೃಷ್ಠಿ ಮಾಡುತ್ತಾರೆ. ಅಂದರೆ, ಆ ದಾಖಲೆಗಳಿಗೆ ಅವರು ನೀಟಾಗಿ ಹಾಕುವಂತಹ ಬೈಂಡಿಂಗ್ ಪೇಪರ್ ಎಲ್ಲವನ್ನೂ ನೋಡಿದರೆ ಅವರಿಗೆ ಇದರಲ್ಲಿ ಬಹಳ expertise ಇದೆ ಎಂದು ಕಾಣಿಸುತ್ತಾರೆ. ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗುವ ಎದುರುದಾರರ ಕಡೆಯ ವಕೀಲರು ಬಹಳ ದೊಡ್ಡವರಾಗಿರುತ್ತಾರೆ. ಅವರ ಹೆಸರುಗಳನ್ನು ಈ ಸದನದಲ್ಲಿ ಹೇಳುವುದು ಬೇಡ. ಆ ವಕೀಲರು ಪ್ರತಿ appearance ಗೆ 3ಲಕ್ಷ, 5ಲಕ್ಷ ಅಥವಾ 10ಲಕ್ಷ ರೂಪಾಯಿ ಹಣವನ್ನು ಪಡೆಯುವಂತಹ ದೊಡ್ಡ ವಕೀಲರಾಗಿರುತ್ತಾರೆ. ಆದರೆ, ಸರ್ಕಾರಿ ವಕೀಲರುಗಳು ಯಾವ ರೀತಿ ನ್ಯಾಯಾಲಯಗಳಿಗೆ ಹಾಜರಾಗುತ್ತಾರೆ ಎಂಬುದು ತಮಗೆಲ್ಲರಿಗೂ ಸಹ ಗೊತ್ತಿರುತ್ತದೆ. ಏಕೆಂದರೆ, ನಾವು ಅವರಿಗೆ ಕೇವಲ 5 ಸಾವಿರ ರೂಪಾಯಿ ಹಣವನ್ನು ನೀಡುತ್ತೇವೆ. **(ಗೊಂದಲ)** ಈ ಬಗ್ಗೆ ನಾನು ಸಹ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿರುತ್ತೇನೆ. ಅಲ್ಲದೇ, ಯಾವ ಪ್ರಕರಣಗಳಲ್ಲಿ ಯಾವ ವಕೀಲರು ನ್ಯಾಯಾಲಯದಲ್ಲಿ ಹಾಜರಾಗಬೇಕೆಂದು ಇಲಾಖೆಯವರು ತೀರ್ಮಾನ ಮಾಡುತ್ತಾರೆ. ಎಲ್ಲಾ ಪ್ರಕರಣಗಳನ್ನು ಸಹ ನಾವು ಎ.ಜಿ.ಯವರಿಗೆ ಕೊಟ್ಟರೆ, ಅವರು ಎಲ್ಲಾ ಪ್ರಕರಣಗಳಲ್ಲಿಯೂ ಸಹ ಸಾಮ್ಯಾನ್ಯವಾಗಿ ಹಾಜರಾಗುತ್ತಾರೆ. ಆದುದರಿಂದ, ಸರ್ಕಾರಿ ಜಮೀನನ್ನು ಉಳಿಸುವುದು ಬಹಳ ಕಷ್ಟವಾಗುತ್ತಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಸುಮಾರು 40 ವರ್ಷಗಳ ಹಿಂದೆ ಕೊಳಚೆ ನಿರ್ಮೂಲನಾ ಮಂಡಳಿಯ ಅಧ್ಯಕ್ಷನಾಗಿದ್ದೆನು. ಆ ಸಂದರ್ಭದಲ್ಲಿ ಬೆಂಗಳೂರಿನ ನಾಲ್ಕು ಕಡೆಗಳಲ್ಲಿ ತಲಾ 50 ಎಕರೆ ಜಮೀನು ಕೊಡಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಕೇವಲ ಒಂದೇ

ಕಡೆ ಲಗ್ಗೆರೆಯಲ್ಲಿ 50 ಎಕರೆ ಜಮೀನು ಕೊಟ್ಟಿರುತ್ತಾರೆ. ಇತ್ತೀಚೆಗೆ ನಡೆದಂತಹ ಶ್ರೀ ಆರ್. ಮುನಿರತ್ನರವರ ಉಪ ಚುನಾವಣಾ ಸಂದರ್ಭದಲ್ಲಿ ನಾನು ಸದರಿ ಸ್ಥಳಕ್ಕೆ ಹೋದಾಗ, ಸುಮಾರು 52 ಎಕರೆ ಇದ್ದಂತಹ ಕೊಳಚೆ ನಿರ್ಮೂಲನಾ ಪ್ರದೇಶ ಈಗ 35 ಎಕರೆಗೆ ಬಂದುಬಿಟ್ಟಿರುತ್ತದೆ. ಅಂದರೆ, ಕೊಳಚೆ ನಿರ್ಮೂಲನಾ ಮಂಡಳಿಯ ಜಾಗವನ್ನು ಬಿಡದೇ ಅತಿಕ್ರಮಣ ಮಾಡಿರುತ್ತಾರೆ. ಬೆಂಗಳೂರು ನಗರದಲ್ಲಿ ಸುಮಾರು 20 ಲಕ್ಷ ಗುಡಿಸಲು ವಾಸಿಗಳ ಜನಸಂಖ್ಯೆ ಇದೆ. ಹಾಗಾಗಿ, ಇಂತಹ ಸರ್ಕಾರಿ ಜಮೀನುಗಳನ್ನು ಕೊಳಚೆ ನಿರ್ಮೂಲನಾ ಮಂಡಳಿಗೆ ಕೊಡಬೇಕು. ಸರ್ಕಾರವು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಅನೇಕ ಕಾರ್ಯಕ್ರಮ ಮಾಡುತ್ತದೆ. ಆದರೆ, ಬಡವರಿಗೆ ಸಹಾಯ ಮಾಡುವಂತಹ ಏನಾದರೂ ಕಾರ್ಯಕ್ರಮಗಳನ್ನು ಮಾಡಬೇಕು. ಬದಲಾಗಿ, ಸರ್ಕಾರವು ಮಾಡುವಂತಹ ಕಾರ್ಯಕ್ರಮಗಳೆಲ್ಲವೂ ಕೇವಲ ಬಂಡವಾಳಶಾಹಿಗಳಿಗೆ ಮಾಡಿದರೆ ಬೆಂಗಳೂರಿನಲ್ಲಿ ಬದುಕುವುದು ಕಷ್ಟವಾಗುತ್ತದೆ.

**ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರು ಹೇಳಿರುವ ವಿಚಾರ ಸರಿಯಿದೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು ಹೇಳುವಂಥದ್ದಕ್ಕೆ ನನ್ನ ಸಹಮತವಿದೆ. ನನ್ನ ಪಕ್ಕದಲ್ಲಿಯೇ ವಸತಿ ಸಚಿವರಾದ ಶ್ರೀ ವಿ. ಸೋಮಣ್ಣನವರು ಸಹ ಇದ್ದಾರೆ. ಹೌಸಿಂಗ್ ಬೋರ್ಡ್‌ಗೆ ಎಷ್ಟು ಜಮೀನು ಬೇಕೆಂದು.....

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸೋಮಣ್ಣನವರ ಕ್ಷೇತ್ರದಲ್ಲಿರುವಂತಹ ಕೊಳಚೆ ಮಂಡಳಿಯನ್ನು ನೋಡಿಯೇ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಪಂತರಪಾಳ್ಯ ಮತ್ತು ಜಗಜೀವನ್‌ರಾಮ್ ನಗರ...

**ಸಭಾಪತಿಯವರು:-** ಈ ವಿಷಯ ಬೆಂಗಳೂರಿನವರೇ ಆದ ತಮಗೆಲ್ಲರಿಗೂ ಚೆನ್ನಾಗಿ ಗೊತ್ತಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಬೆಂಗಳೂರು ಬಿಟ್ಟು ಸುಮಾರು ವರ್ಷ ಆಯಿತು. ಅದಕ್ಕಾಗಿ, ಇವೊತ್ತಿನ ದಿನ ಬೆಂಗಳೂರು ನಗರ ಈ ಸ್ಥಿತಿಗೆ ಬಂದುಬಿಟ್ಟಿದೆ. ಆದುದರಿಂದ, ದಯಮಾಡಿ ಬೆಂಗಳೂರಿನಲ್ಲಿ ಈ ರೀತಿಯ ಜಮೀನು ಇದ್ದರೆ ಅದನ್ನು ಮೊದಲು ಕೊಳಚೆ ನಿರ್ಮೂಲನಾ ಮಂಡಳಿಗೆ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು ಹೇಳಿರುವ ಮಾತಿಗೆ ನನ್ನ ಸಹಮತ ಕೂಡ ಇದೆ. ಅದಕ್ಕೆ ಈಗಾಗಲೇ 530 ಎಕರೆ ಜಮೀನನ್ನು ಕೊಡಲಾಗಿದೆ. ಅಲ್ಲದೇ, ಈ ಬಗ್ಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ಎಂ.ಎಲ್.ಸಿ. ಗಳು ಇನ್ನೂ ಪತ್ರ ಬರೆದಿರುವುದಿಲ್ಲ. ಆದರೆ, ಎಂ.ಎಲ್.ಎ.ಗಳಿಗೆ ಪತ್ರ ಬರೆದಿದ್ದು, ಬೆಂಗಳೂರಿನಲ್ಲಿ ಯಾವ್ಯಾವ ಸರ್ಕಾರಿ ಜಮೀನು ಇದೆ ಅವುಗಳನ್ನು ಶಾಲಾ-ಕಾಲೇಜುಗಳಿಗೆ, ಆಸ್ಪತ್ರೆಗಳಿಗೆ ಮೀಸಲಿಡಬೇಕೆಂದು ಹಾಗೂ ಮುಂದೆ ನಮಗೆ ಈ ರೀತಿಯ ಜಾಗ ಸಿಗುವುದಿಲ್ಲವೆಂದು ಹೇಳಿರುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದೇ ರೀತಿ ಸ್ಮಶಾನ ಮತ್ತು ಗುಂಡುತೋಪುಗಳ ಬಗ್ಗೆಯೂ ಸಹ ಹೇಳಬೇಕು.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಈಗ ಪ್ರತಿಯೊಂದು ಗ್ರಾಮದಲ್ಲಿ ಒಂದು ಸ್ಮಶಾನ ಇರಬೇಕೆಂಬುದು ನನ್ನ ಭಾವನೆ. ಅದಕ್ಕೂ ಸಹ ನಾನು ವಿಶೇಷ ಗಮನ ಕೊಡುತ್ತಿದ್ದೇನೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಸುಡುವ ಸ್ಮಶಾನ ಮತ್ತು ಹೂಳುವ ಸ್ಮಶಾನ ಎರಡೂ ಸಹ ಇರಬೇಕು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ನನ್ನ ಕೊನೆಯ ಉತ್ತರವನ್ನು ಹೇಳಿ ಮುಗಿಸುತ್ತೇನೆ. ಬೆಂಗಳೂರಿನಲ್ಲಿ ಒಟ್ಟು 38,895 ಎಕರೆ ಜಮೀನು ಇದೆ. ಅವುಗಳಲ್ಲಿ ನಮೂನೆ 50, 53 ಮತ್ತು ಕಲಂ 94(ಸಿ) ಮೇರೆಗೆ ನಾವು ಬಡವರಿಗೆ ಸುಮಾರು 12,179 ಎಕರೆ ಜಮೀನು ಮಂಜೂರಾತಿ ನೀಡಿರುತ್ತೇವೆ. ನ್ಯಾಯಾಲಯದಲ್ಲಿ ಸುಮಾರು 2,139 ಎಕರೆ ಜಮೀನಿಗೆ ಸಂಬಂಧಿಸಿದ ಪ್ರಕರಣ ಬಾಕಿ ಇರುತ್ತದೆ. ಸಾರ್ವಜನಿಕ ಉದ್ದೇಶಗಳಿಗಾಗಿ ಸುಮಾರು 7,881 ಎಕರೆ ಜಮೀನು ಮಂಜೂರಾತಿ ಕೊಟ್ಟಿರುತ್ತೇವೆ. ತೆರವುಗೊಳಿಸಬೇಕಾದಂತಹ ವಿಸ್ತೀರ್ಣ ಸುಮಾರು 14,995 ಎಕರೆ ಜಮೀನು ಆಗಿರುತ್ತದೆ. ಈ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುತ್ತೇನೆ. ನಾನು ಕಂದಾಯ ಮಂತ್ರಿಯಾದ ನಂತರ, ಪ್ರತಿ ಶನಿವಾರ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಬೇರೆ ಯಾವುದೇ ಕೆಲಸ ಇರುವುದಿಲ್ಲ. ಬದಲಾಗಿ, ಆ ದಿನ ಅವರು ಒತ್ತುವರಿ ಆಗಿರುವಂತಹ ಜಮೀನನ್ನು ತೆರವುಗೊಳಿಸುವ ಒಂದೇ ಕೆಲಸ ಮಾಡಬೇಕು, ಬೇರೆ ಯಾವುದೇ ಕೆಲಸ ಮಾಡಬಾರದೆಂದು ಹೇಳಿರುತ್ತೇನೆ. ಇನ್ನೂ ಸುಮಾರು 275 ಎಕರೆ ಜಮೀನನ್ನು ತೆರವುಗೊಳಿಸಬೇಕಾಗಿದ್ದು, ಅದನ್ನು ಅದಷ್ಟು ಶೀಘ್ರದಲ್ಲಿ ಅದನ್ನು ತೆರವುಗೊಳಿಸುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನ್ಯಾಯಾಲಯದಲ್ಲಿ ಬಾಕಿ ಇರುವುದು 2,608 ಎಕರೆ ಜಮೀನು. ಆದರೆ, ಇತ್ಯರ್ಥ ಆಗದೇ ಇರುವಂಥದ್ದು 1,856 ಎಕರೆ ಜಮೀನು ಈ ಮಟ್ಟದಲ್ಲಿರುತ್ತದೆ.

**ಸಭಾಪತಿಯವರು:-** ಈ ಪ್ರಶ್ನೆ ಬಗ್ಗೆ ಚರ್ಚೆ ಸಾಕು. ಆ ಉತ್ತರಗಳನ್ನು ತಾವುಗಳೇ ನೋಡಿಕೊಳ್ಳಿ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಯಾವುದೇ ಮುಲಾಜಿಲ್ಲದೇ, ನಕಲಿ ದಾಖಲೆಗಳನ್ನು ಸೃಷ್ಟಿ ಮಾಡುವಂಥದ್ದು ಇರಬಹುದು ಅಥವಾ ಒತ್ತುವರಿ ಮಾಡುವಂಥದ್ದು ಇರಬಹುದು ಅವುಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತದೆ. ಅದಕ್ಕೆ ಈಗಾಗಲೇ ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡಿದ್ದೇವೆ ಮತ್ತು ಸದನ ಸಮಿತಿಯನ್ನು ಸಹ ಅದಕ್ಕಾಗಿ ನೇಮಕ ಮಾಡಿದ್ದು, ಅದರಂತೆ ಕ್ರಮ ತೆಗೆದುಕೊಳ್ಳುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ:1041**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನನ್ನ ಕೇಳಿರುವ ಪ್ರಶ್ನೆಗೆ, "ಖಾಲಿ ಇರುವ ಹುದ್ದೆಗಳ ಬಗ್ಗೆ ಉಲ್ಲೇಖವನ್ನು ಮಾಡಿದ್ದಾರೆ. ಅದೇ ರೀತಿ ಡೆಪ್ಯೂಟೇಷನ್ ಮೇಲೆ ಇಂಧನ ಇಲಾಖೆಯಿಂದ ಕೂಡ ಅದನ್ನು ಭರ್ತಿ ಮಾಡುವುದಕ್ಕೆ ಅವಕಾಶವಿದೆ" ಎಂದು ಉತ್ತರ ನೀಡಿರುತ್ತಾರೆ. ಈ ಖಾಲಿಯಿರುವ ಹುದ್ದೆಗಳಿಗೆ ಡೆಪ್ಯೂಟೇಷನ್ ಮೇಲೆ ಬಂದಂತಹವರ ಕಾರ್ಯವೈಖರಿ ಹೇಗಿರುತ್ತದೆ ಎಂಬುದು ನಮಗೆಲ್ಲರಿಗೂ ಗೊತ್ತಿರುತ್ತದೆ. ನನ್ನ ಮತ್ತೊಂದು ಪ್ರಶ್ನೆಗೆ, "ಆರ್ಥಿಕ ಇಲಾಖೆಯ ಸಹಮತಿಗೆ ಪ್ರಸ್ತಾವನೆ ಸಲ್ಲಿಸಿರುತ್ತೇವೆಂದು" ಹೇಳಿದ್ದಾರೆ. ಅತೀ ಶೀಘ್ರವಾಗಿ ಈ ಖಾಲಿ ಇರುವ ಹುದ್ದೆಯನ್ನು ಭರ್ತಿ ಮಾಡಬೇಕು. ಏಕೆಂದರೆ, ಸದರಿ ಹುದ್ದೆಗಳ ನೇಮಕಾತಿಗೆ ಇಂಧನ ಇಲಾಖೆಗಿಂತಲೂ ಇಲ್ಲಿ ಹೊರೆಯಾಗುವುದಿಲ್ಲ. ಅಂದರೆ, ಲೋಕೋಪಯೋಗಿ ಇಲಾಖೆಯಲ್ಲಿ ಅವರಿಗೆ ಬರುವಂತಹ ಸಂಬಳ ಇಂಧನ ಇಲಾಖೆಗಿಂತಲೂ ಕಡಿಮೆ ಇರುತ್ತದೆ. ಆದುದರಿಂದ, ಕೂಡಲೇ ಆದಷ್ಟು ಶೀಘ್ರವಾಗಿ ಈ ಕೆಲಸ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಜೊತೆಗೆ, ಆರ್ಥಿಕ ಇಲಾಖೆಯ ಅನುಮತಿ ಬಂದ ನಂತರ, ಲೋಕೋಪಯೋಗಿ ಇಲಾಖೆಯಿಂದ ನೇಮಕಾತಿ ಮಾಡಿಕೊಂಡು, ಕೆ.ಪಿ.ಸಿ.ಎಲ್. ಮತ್ತು ಕೆ.ಪಿ.ಟಿ.ಸಿ.ಎಲ್. ನಿಂದ ಡೆಪ್ಯೂಟೇಷನ್ ತೆಗೆದುಕೊಂಡಂತಹ ಹುದ್ದೆಗಳನ್ನು ಮಾತ್ರ ಇಲಾಖೆಗಳಿಗೆ ವಾಪಸ್ಸು ಕಳುಹಿಸಿ, ನಮ್ಮ ಲೋಕೋಪಯೋಗಿ ಇಲಾಖೆಯಿಂದ ನೇಮಕಾತಿ ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ:1132**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾನು ಹಿಂದೂಗಳ ಪವಿತ್ರ ಧಾರ್ಮಿಕ ಯಾತ್ರಾ ಸ್ಥಳಗಳಾದ ವಾರಣಾಸಿಯ ಕಾಶಿ ಯಾತ್ರೆ ಮತ್ತು ಹಿಮಾಲಯ ಗಿರಿಶಿಖರಗಳಲ್ಲಿರುವ ಕೈಲಾಸ ಮಾನಸ ಸರೋವರ ಯಾತ್ರೆ ಮಾಡಲು ಯಾತ್ರಾರ್ಥಿಗಳಿಗೆ ಸರ್ಕಾರದ ಸಹಾಯಧನ ಎಷ್ಟಿದೆ ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು 30 ಸಾವಿರ ಸಹಾಯಧನವನ್ನು ಮಾನಸ ಸರೋವರ, ಕೈಲಾಸ ಯಾತ್ರಾರ್ಥಿಗಳಿಗೆ ಒದಗಿಸುತ್ತಿದ್ದೇವೆಂದು" ಉತ್ತರ ನೀಡಿರುತ್ತಾರೆ. ತಮಗೆ ಗೊತ್ತಿರುವಂತೆ, ಹಿಮಾಲಯದ ಯಾತ್ರೆ ಬಹಳ ಕಠಿಣವಾದ ಹಾದಿಯನ್ನು ಒಳಗೊಂಡಿರುತ್ತದೆ. ಅಲ್ಲಿ ಭೂಕುಸಿತ ಆಗುತ್ತಿರುತ್ತದೆ. ಶೀತ ಪ್ರದೇಶವಾಗಿರುವುದರಿಂದ ಖರ್ಚು ಜಾಸ್ತಿ ಬರುತ್ತದೆ. ಹಾಗಾಗಿ, ದಯಮಾಡಿ ಸರ್ಕಾರ ಆ ಸಹಾಯಧನವನ್ನು 50 ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ.

(ಮುಂದು)

(1245) 22.12.2021 11.40 YL-AK (ಸಭಾಪತಿಯವರ ಉಪಸ್ಥಿತಿ)

**ಡಾ|| ತೇಜಸ್ವಿನಿಗೌಡ (ಮುಂದು):-**

ಎರಡನೆಯದಾಗಿ, ಕಾಶಿಯಾತ್ರೆ ಕುರಿತು ಪ್ರಶ್ನೆಯನ್ನು ಕೇಳಿದ್ದು, ಕಾಶಿಯಾತ್ರೆ ಕೈಗೊಳ್ಳಲು ಯಾತ್ರಾರ್ಥಿಗಳಿಗೆ ಸಹಾಯಧನ ನೀಡುವ ಪ್ರಸ್ತಾವನೆ ಸರ್ಕಾರದಲ್ಲಿ ಇರುವುದಿಲ್ಲ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಇತ್ತೀಚೆಗೆ ಜನ್ನತ್ತಿನ ಎಲ್ಲಾ ಹಿಂದೂಗಳು ಹೆಮ್ಮೆಪಡುವ ನಿಟ್ಟಿನಲ್ಲಿ ಕಾಶಿಯ ಪುನರ್ ಜೀರ್ಣೋದಾರ ಮಾಡುವ ನಿಟ್ಟಿನಲ್ಲಿ ಭಾರತ ಸರ್ಕಾರ ಹಾಗೂ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು **'ದಿವ್ಯ ಕಾಶಿ'** ಮತ್ತು **'ಭವ್ಯ ಕಾಶಿ'** ಎಂದು ಮಾಡಿದ್ದಾರೆ. ಇದೇ ಸಂದರ್ಭದಲ್ಲಿ ಕರ್ನಾಟಕದ ಜನತೆಯ ಪರವಾಗಿ ಉತ್ತರ ಪ್ರದೇಶದ ಸರ್ಕಾರಕ್ಕೆ ಹಾಗೂ ಅಲ್ಲಿನ ಮುಖ್ಯಮಂತ್ರಿಯಾದ ಶ್ರೀ ಆದಿತ್ಯನಾಥ ಯೋಗಿಯವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಕಾಶಿಯಾತ್ರೆಗೆ ವಿಶೇಷವಾದ ಯೋಜನೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀಮತಿ ಶಶಿಕಲಾ ಅ.ಜೊಲ್ಲೆ:-** ಮಾನ್ಯ ಸಭಾಪತಿಯವರೇ, ನನ್ನ ಸಹೋದರಿಯಾದ ಡಾ|| ತೇಜಸ್ವಿನಿಗೌಡರವರು ಈ ಪ್ರಶ್ನೆಯನ್ನು ಕೇಳಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ಈಗಾಗಲೇ ಅವರು ಕೇಳಿರುವ ಹಾಗೆ ಮಾನಸ ಸರೋವರ ಯಾತ್ರಿಗಳಿಗೆ ರೂ.30,000 ಸಹಾಯಧನವನ್ನು ವಿತರಿಸುವ ಯೋಜನೆಯನ್ನು 2006-07ನೇ ಸಾಲಿನಿಂದ ಜಾರಿಗೆ ತರಲಾಗಿರುತ್ತದೆ. ನಿಜವಾಗಿಯು ಇದು ಎಲ್ಲಾ ಹಿಂದೂಗಳ ದೇವಸ್ಥಾನವಾಗಿದ್ದು, ಎಲ್ಲಾ ಹಿಂದೂಗಳು ಅಲ್ಲಿಗೆ ಹೋಗುತ್ತಾರೆ. ಅಲ್ಲಿಗೆ ಹೋಗುವಂಥ ಸಂದರ್ಭದಲ್ಲಿ ಬಹಳ risk ಇರುವುದರಿಂದ ಮೊದಲು ರೂ.30,000 ಸಹಾಯಧನ ನೀಡಲಾಗುತ್ತಿತ್ತು. ಈಗ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದರ ಬಗ್ಗೆ ಮತ್ತೆ ಚಿಂತನೆಯನ್ನು ಮಾಡುತ್ತಿದ್ದೇವೆ. ಕಳೆದ ಎರಡು ವರ್ಷಗಳು ಕೋವಿಡ್-19 ಇದ್ದ ಪ್ರಯುಕ್ತ ಅದರ ಬಗ್ಗೆ ಚಿಂತನೆ ಮಾಡಲು ಸಾಧ್ಯವಾಗಲಿಲ್ಲ. ಹಾಗಾಗಿ ಸಹಾಯಧನವನ್ನು ಜಾಸ್ತಿ ಮಾಡಬಹುದೇ ಎಂಬುದರ ಕುರಿತು ಚರ್ಚೆ ನಡೆಸಿ, ಜಾಸ್ತಿ ಮಾಡುವಂಥ ಪ್ರಯತ್ನವನ್ನು ಮಾಡುತ್ತೇನೆ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅದರ ಜೊತೆಗೆ ಇದಕ್ಕಾಗಿ ಮೀಸಲಿಟ್ಟ ಹಣದ ಬಗ್ಗೆ ಮಾಹಿತಿಯನ್ನು ಕೇಳಿದ್ದೇನು. 2019-20ನೇ ಸಾಲಿನಲ್ಲಿ ಒಟ್ಟು ರೂ.1000.00 ಲಕ್ಷಗಳನ್ನು ಮೀಸಲಿರಿಸಲಾಗಿದೆ ಎಂದು ಉತ್ತರವನ್ನು ನೀಡಿದ್ದಾರೆ. ಅಂದರೆ ರೂ.10.00 ಕೋಟಿ ಆಗುತ್ತದೆ. ದಯಮಾಡಿ ಜನತೆಯು ಧರ್ಮ ಶ್ರದ್ಧೆಯಿಂದ ನೀಡುವಂಥ ಹಣವನ್ನು ಚಾರ್ ಧಾಮ್‌ಗಳಾದ ಕೇದರನಾಥ ಮತ್ತಿತರೆ ದೇವಸ್ಥಾನಗಳಿಗೆ ಕೊನೆಪಕ್ಷ ರೂ.100.00 ಕೋಟಿಗಳಾದರೂ ಮೀಸಲಿಟ್ಟಿಲ್ಲವೆಂದರೆ ಹೇಗೆ? ವಿಶೇಷವಾಗಿ ಕರ್ನಾಟಕದವರಾದ ಆದಿ ಶಂಕರಚಾರ್ಯರು ಒಂದು ಅದ್ಭುತವಾದ ಕಾರ್ಯವನ್ನು ಮಾಡಿದ್ದಾರೆ.

**ಸಭಾಪತಿಯವರು:-** ಆಯಿತು. ಸರ್ಕಾರದಿಂದ ಏನಾಗಬೇಕೆಂದು ಹೇಳಿ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ರೂ.100.00 ಕೋಟಿಗಳಾದರೂ ಮೀಸಲಿಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಶಶಿಕಲಾ ಅ.ಜೊಲ್ಲೆ:-** ಮಾನ್ಯ ಸಭಾಪತಿಯವರೇ, ಬಹಳ ಒಳ್ಳೆಯ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕಾಗಿ ಅಭಿನಂದನೆಯನ್ನು ಸಲ್ಲಿಸಲು ಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ರೂ.100.00 ಕೋಟಿಗಳಾದರೂ ಮೀಸಲಿಡಬೇಕೆಂದು ಕೇಳುತ್ತಿದ್ದು, ತಾವು ಒಳ್ಳೆಯ ಪ್ರಶ್ನೆ ಎಂದು ಹೇಳುವುದು ಬೇಡ.

**ಶ್ರೀ ಶಶಿಕಲಾ ಅ.ಜೊಲ್ಲೆ:-** ಮಾನ್ಯ ಸಭಾಪತಿಯವರೇ, ಆ ರೀತಿ ಏನಿಲ್ಲ. ಏಕೆಂದರೆ, ಹಿಂದೂಗಳು ಯಾತ್ರೆ ಮಾಡುವ ಸ್ಥಳಗಳಾಗಿದ್ದು, ಆ ಸ್ಥಳಗಳನ್ನು ಎಲ್ಲರೂ ಹೋಗಿ ಮುಟ್ಟುವಂಥ ಕೆಲಸವಾಗಬೇಕು. ಹಾಗಾಗಿ ಇದರ ಬಗ್ಗೆ ಚಿಂತನೆಯನ್ನು ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಇದರ ಬಗ್ಗೆ ಮಾತನಾಡಿ ಕ್ರಮ ಕೈಗೊಳ್ಳುತ್ತೇನೆ. ಹಾಗೆಯೇ ಕಾಶಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮೆಲ್ಲರ ನೆಚ್ಚಿನ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿಯಾದ ಶ್ರೀ ಆದಿತ್ಯನಾಥ ಯೋಗಿಯವರ ಕನಸಿನ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗೋಪುರವಾಗಿದ್ದು, ಇವತ್ತು ಕಾಶಿ ದೇವಸ್ಥಾನ ಯಾವ ಪರಿಸ್ಥಿತಿಯಲ್ಲಿದೆ ಎಂಬುದನ್ನು ಸಹ ನೋಡುತ್ತಿದ್ದೇವೆ. ಹಾಗಾಗಿ ಸಾಮಾನ್ಯ ಜನರು ಅಲ್ಲಿಗೆ ಹೋಗುವ ಹಾಗೆ ವಿಶೇಷ ರೈಲಿನ ವ್ಯವಸ್ಥೆ ಕಲ್ಪಿಸಬೇಕೆಂದು ಏನು ಹೇಳಿದ್ದಾರೆ, ಅದರ ಬಗ್ಗೆ ಅಧಿಕಾರಿಗಳೊಂದಿಗೆ ಅಧಿವೇಶನ ಮುಗಿದ ನಂತರ ಚರ್ಚೆ ಮಾಡಿ, ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆ ವ್ಯವಸ್ಥೆಯನ್ನು ಮಾಡುವಂಥ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು:-** ಆಯಿತು.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇದು ನನ್ನ ವಿಚಾರವಾಗಿಲ್ಲ. ದಯವಿಟ್ಟು ಸ್ವಲ್ಪ ಮಾತನಾಡಲು ಸಮಯವನ್ನು ಕಲ್ಪಿಸಿ. ಅದೇ ರೀತಿ ರಾಮಾಯಣದ ಪ್ರವಿತ್ರ ಕ್ಷೇತ್ರಗಳಿಗೆ ಹೋಗಲು ಯಾವ ರೀತಿ ರೈಲು ವ್ಯವಸ್ಥೆಯನ್ನು ಮಾಡಲಾಗಿದೆ. ಅದೇ ರೀತಿ ನಮ್ಮಲ್ಲಿರುವ 12 ಜ್ಯೋರ್ತಿಲಿಂಗಗಳು ಮತ್ತು 52 ಶಕ್ತಿ ಪೀಠಗಳು ಇರುವಂಥ ಸ್ಥಳಗಳಿಗೆ ಹೋಗಲು ವಿಶೇಷ ರೈಲು ವ್ಯವಸ್ಥೆ ಮಾಡಲು ಮಾನ್ಯ ಸಚಿವರು ಪ್ರಯತ್ನ ಮಾಡಬೇಕು. ಈಗಾಗಲೇ ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಧನ್ಯವಾದಗಳನ್ನು ಹೇಳಿದ ಪ್ರಯುಕ್ತ ಅವರು ರೂ.100.00 ಕೋಟಿಗಳನ್ನು ಮೀಸಲಿಡುತ್ತಾರೆ ಎಂಬ ನಂಬಿಕೆ ಇದೆ. ಹಾಗೆಯೇ ಮುಜರಾಯಿ ದೇವಸ್ಥಾನಗಳನ್ನು ಎ, ಬಿ, ಸಿ ಎಂದು 3 ವರ್ಗಗಳಾಗಿ ಮಾಡಲಾಗಿದೆ. 34219 ದೇವಸ್ಥಾನಗಳು 'ಸಿ' ವರ್ಗಗಳಾಗಿವೆ. ದೇವಸ್ಥಾನಗಳನ್ನು ಸಹ ವರ್ಗಗಳಾಗಿ ವಿಭಜನೆ ಮಾಡುವಷ್ಟು ನಾವು ದೊಡ್ಡವರಾಗಿದ್ದೇವೆ.

**ಸಭಾಪತಿಯವರು:-** ಆಯಿತು. ಏನಾಗಬೇಕು ಅದನ್ನು ಹೇಳಿ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಆ ದೇವಸ್ಥಾನದ ಆರ್ಚಕರಿಗೆ ತಸ್ತೀಕ್ ಎಂದು ರೂ.4,000/- ಗಳನ್ನು ತಿಂಗಳಿಗೆ ನೀಡುತ್ತಾರೆ. ಭಿಕ್ಷೆಯನ್ನು ನೋಡುವಂತಹ ಭಕ್ತರು ಕೂಡ ದೇವಸ್ಥಾನಕ್ಕೆ ಕಾಣಿಕೆಯನ್ನು ಹಾಕುತ್ತಾನೆ. 'ಸಿ' ವರ್ಗದಲ್ಲಿರುವ ದೇವಸ್ಥಾನದ ಆರ್ಚಕರು ಇವತ್ತು ಭಿಕ್ಷೆ ಬೇಡ ಎನ್ನುವ ಸ್ಥಿತಿಯಲ್ಲಿದ್ದಾರೆ. 'ಎ' ಮತ್ತು 'ಬಿ' ವರ್ಗಗಳಾಗಿ ಕೇವಲ 344 ದೇವಸ್ಥಾನಗಳಿಗೆ ಕೋಟ್ಯಾಂತರ ರೂಪಾಯಿ ಕಾಣಿಕೆ ಬರುತ್ತದೆ. 'ಸಿ' ವರ್ಗದ ದೇವಸ್ಥಾನಗಳು ಹಾಳಾಗುತ್ತಿವೆ, ಮೂಲಭೂತ ಸೌಲಭ್ಯಗಳು ಇಲ್ಲದೇ ದೇವಸ್ಥಾನಗಳು ಸೋರಿಕೆಯಾಗುತ್ತಿವೆ, ದಯವಿಟ್ಟು ಮಾನ್ಯ ಸಚಿವರುಗಳಾದ ಶ್ರೀ ವಿ.ಸೋಮಣ್ಣ ಮತ್ತು ಶ್ರೀ ಆರ್.ಅಶೋಕ್‌ರವರು ಇದರ ಬಗ್ಗೆ ಚಿಂತನೆ ಮಾಡಬೇಕು. ದೇವಸ್ಥಾನಗಳಿಗೆ ನೀಡುವ ಹಣವನ್ನು ಆ ದೇವಸ್ಥಾನಗಳಿಗೆ ಉಪಯೋಗಿಸಿ. ಹಾಗೆಯೇ ಭೂ ಸುಧಾರಣಾ ಕಾಯ್ದೆಯಿಂದ ಭೂಮಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕಳೆದುಕೊಂಡಿದ್ದಾರೆ. ನಮ್ಮ ರಾಜ ಮಹಾರಾಜರು ಸ್ವಾವಲಂಬಿಯಾಗಿ ಬದುಕಲು ಮಾಡಿದ್ದರು. ಆದರೆ, ಇವರು ಅದೆಲ್ಲವನ್ನೂ ತೆಗೆದುಕೊಂಡು ಬಿಟ್ಟಿದ್ದಾರೆ. ಅದಕ್ಕೆ ಏನು ವ್ಯವಸ್ಥೆ ಇದೆ.

**ಸಭಾಪತಿಯವರು:-** ತಾವು ಮಾತನಾಡಿದ್ದು ಸಾಕು. ಮಾನ್ಯ ಸಚಿವರು ಉತ್ತರ ನೀಡಲಿ.

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಚಳಿ, ಗಾಳಿ, ಮಳೆ, ಎನ್ನದೇ ನದಿಯಲ್ಲಿ ಸ್ನಾನ ಮಾಡಿಕೊಂಡು ಬಂದು ದೇವಸ್ಥಾನವನ್ನು ನೋಡಿಕೊಳ್ಳುತ್ತಾರೆ ಅಂತಹ 'ಸಿ' ವರ್ಗದ ಅರ್ಚಕ ಸಮುದಾಯಕ್ಕೆ ರೂ.15,000/- ಮಾಸಿಕ ಭತ್ಯೆಯನ್ನು ನೀಡಲೇಬೇಕು. ನಮಗೂ ಭಾವನೆಗಳಿವೆ, ಅವರನ್ನು ನಾವು ಆ ರೀತಿ ನಡೆಸಿಕೊಳ್ಳಬಹುದೇ? ಇಲ್ಲದಿದ್ದರೆ ನಾನು ಬಾವಿಗೆ ಬಂದು ಧರಣಿ ನಿರತಳಾಗಬೇಕಾಗುತ್ತದೆ.

**ಶ್ರೀ ಶಶಿಕಲಾ ಅ.ಜೊಲ್ಲೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಾವಿಗೆ ಬಂದು ಧರಣಿ ಆಗುವ ಅವಶ್ಯಕತೆ ಇಲ್ಲ. ನಮ್ಮ ಸರ್ಕಾರ ಹಾಗೂ ನಾನು ಸಚಿವಳಾಗಿ ಬಂದ ಮೇಲೆ ಎ, ಬಿ, ಸಿ ಎಂದು ವರ್ಗೀಕರಿಸಲಾದ ದೇವಸ್ಥಾನಗಳು ಏನಿವೆ, ಅದರಲ್ಲಿ 'ಎ' ಮತ್ತು 'ಬಿ' ವರ್ಗಗಳ ದೇವಸ್ಥಾನಕ್ಕೆ ಯಾವುದೇ ರೀತಿಯ ತೊಂದರೆ ಇಲ್ಲದ ಹಾಗೆ ಮಾಡಿದ್ದೇವೆ. ಆದಾಯಕ್ಕೆ ಅನುಗುಣವಾಗಿ ಎ, ಬಿ, ಸಿ ಎಂದು ವರ್ಗೀಕರಿಸಲಾಗಿದೆ. ಆದರೆ, 34219 'ಸಿ' ವರ್ಗದ ದೇವಸ್ಥಾನಗಳನ್ನು ಯಾವ ರೀತಿ ಅಭಿವೃದ್ಧಿಪಡಿಸಬಹುದು ಎಂಬುದರ ಕುರಿತು ಈಗಾಗಲೇ 3 ಸಭೆಗಳನ್ನು ಮಾಡಿದ್ದೇನೆ. ಅದರ ಜೊತೆಗೆ ನಮ್ಮಲ್ಲಿ ಇರುವಂಥ Common Pool Fund ಅನ್ನು ಸಹ ಉಪಯೋಗಿಸಲಾಗುವುದು, ಆ ಹಣವು ಕಡಿಮೆ ಬಿಳುತ್ತದೆ. ಹಾಗಾಗಿ ಅಭಿಯಾನ ಮಾಡಬೇಕೆಂದು ಈಗಾಗಲೇ ನಿರ್ಧಾರ ಮಾಡಿದ್ದೇವೆ. ಸಮಾಜದಲ್ಲಿ ಅನೇಕ ದಾನಿಗಳಿದ್ದಾರೆ. ಆ ದಾನಿಗಳನ್ನು ಆಹ್ವಾನ ಮಾಡಿ, ಆ ಜಿಲ್ಲೆಯಲ್ಲಿರುವ ಅನೇಕ 'ಸಿ' ವರ್ಗದ ದೇವಸ್ಥಾನಗಳನ್ನು ದಾನಿಗಳಿಗೆ ದತ್ತು ನೀಡುವುದರ ಮೂಲಕ ಅಭಿವೃದ್ಧಿ ಮಾಡುವಂಥ ಕೆಲಸದ ಕುರಿತು ಈಗಾಗಲೇ ಚರ್ಚೆ ಮಾಡಿದ್ದೇವೆ. ಆ ನಿಟ್ಟಿನಲ್ಲಿ ಕೆಲಸವನ್ನು ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅರ್ಚಕರಿಗೆ ಮಾಸಿಕ ರೂ.4000 ಮಾತ್ರ ತಸ್ತೀಕ್ ನೀಡಲಾಗುತ್ತಿದ್ದು, ವರ್ಷಕ್ಕೆ ರೂ.48000 ಮಾತ್ರ ಆಗುತ್ತದೆ ಎಂದು ಹೇಳಿದರು. ಅದಕ್ಕೆ ಸಂಬಂಧಿಸಿದಂತೆ ಸಹ ಏನು ಜಮೀನು ಕಳೆದುಕೊಂಡವರು ಇದ್ದಾರೆ, ಸಿ' ವರ್ಗದ ಅರ್ಚಕರುಗಳಿದ್ದಾರೆ. ಇವರುಗಳಿಗೆ ನೀಡುವ ತಸ್ತೀಕ್ ಹಣ ಸಾಕಾಗುವುದಿಲ್ಲ, ಆ ಹಣವನ್ನು ಜಾಸ್ತಿ ಮಾಡಬೇಕೆಂಬುದರ ಕುರಿತು ಈಗಾಗಲೇ ಪ್ರಸ್ತಾವನೆಯನ್ನು ತಯಾರು ಮಾಡಿದ್ದು, ಆರ್ಥಿಕ ಇಲಾಖೆಗೆ ಕಳುಹಿಸಿ ಅನುಮೋದನೆ ಪಡೆದು, ತಸ್ತೀಕ್ ಅನ್ನು ಹೆಚ್ಚು ಮಾಡುವುದರ ಕುರಿತು ಕ್ರಮವಹಿಸಲಾಗಿದೆ. ಪುರಾತತ್ವ ಇಲಾಖೆಗೆ ಸಂಬಂಧಿಸಿದಂತೆ ಒಂದು ಅಂಶವನ್ನು ತಿಳಿಸಿದ್ದರು. ಇದರಲ್ಲಿ ಕೇಂದ್ರ ಪುರಾತತ್ವ ಮತ್ತು ರಾಜ್ಯ ಪುರಾತತ್ವ ಎಂದು ಎರಡು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಭಾಗಗಳಾಗಿ ವಿಂಗಡಿಸಲಾಗಿದೆ. ಕೇಂದ್ರ ಸಚಿವರನ್ನು ಭೇಟಿಯಾಗುವ ಕುರಿತು ನಾನು ಈಗಾಗಲೇ ಯೋಚನೆ ಮಾಡಿದ್ದೇನೆ. ಹಾಗೆಯೇ ರಾಜ್ಯ ಪುರಾತತ್ವಕ್ಕೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಇಲಾಖೆಗೆ ಒಳಪಡುವುದರಿಂದ ಪ್ರವಾಸೋದ್ಯಮ ಸಚಿವರನ್ನು ಕರೆಸಿ ಸಭೆ ಮಾಡಿ, ಅವರ ಮೂಲಕ ಇದಕ್ಕೆ ಕೈ ಜೋಡಿಸುವಂಥ ಕೆಲಸ ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 1111**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ರಾಜ್ಯದಾದ್ಯಂತ ಸ್ವಾತಂತ್ರ್ಯ ಪೂರ್ವದಿಂದ ಒಂದೇ ಸ್ಥಳದಲ್ಲಿ ವಾಸವಾಗಿರುವ ರೈತರ ಸ್ವಾಧೀನದಲ್ಲಿರುವ ಜಮೀನುಗಳು ಇನ್ನೂ ಸರ್ಕಾರಿ ಹೆಸರಿನಲ್ಲಿಯೇ ಉಳಿದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು 'ಸ್ವಾತಂತ್ರ್ಯ ಪೂರ್ವದಿಂದ ಒಂದೇ ಸ್ಥಳದಲ್ಲಿ ವಾಸವಾಗಿರುವ ರೈತರ ಸ್ವಾಧೀನದಲ್ಲಿರುವ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮಾಡುತ್ತಿರುವ ಸಾಗುವಳಿಯನ್ನು ಸಕ್ರಮಗೊಳಿಸುವ ಸಲುವಾಗಿ ದಿನಾಂಕ: 20.03.1991 ರಿಂದ ಜಾರಿಗೆ ಬರುವಂತೆ ಕಲಂ-94ಎ ರಡಿಯಲ್ಲಿ ನಮೂನೆ-50ರ ಅರ್ಜಿ ಸಲ್ಲಿಸಲು ದಿನಾಂಕ: 19.09.1991 ರವರೆಗೆ ಅವಕಾಶ ಕಲ್ಪಿಸಲಾಗಿತ್ತು' ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ತದನಂತರ ಸಮಯ ಸಾಕಾಗಲಿಲ್ಲವೆಂದು ನಮೂನೆ-50 ರಲ್ಲಿ ಅರ್ಜಿ ಸಲ್ಲಿಸದೇ ಇರುವರಿಗಾಗಿ ಮತ್ತೊಂದು ಅವಕಾಶ ಕಲ್ಪಿಸುವ ಸಲುವಾಗಿ ದಿನಾಂಕ: 01.11.1998 ರಿಂದ ಜಾರಿಗೆ ಬರುವಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ-94 ಬಿ ಅನ್ನು ಸೇರ್ಪಡೆ ಮಾಡಿ ನಮೂನೆ-53 ರಲ್ಲಿ ದಿನಾಂಕ: 30.04.1999 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ. ಈ ರೀತಿಯಾಗಿ ಸರ್ಕಾರ ದಿನಾಂಕವನ್ನು ನಿಗದಿಪಡಿಸುತ್ತಾ ಹೋಗುತ್ತದೆ. ಕೊನೆಗೆ ಎಲ್ಲಾ ತಿದ್ದುಪಡಿ ಮಾಡುವ ಮುಖಾಂತರವಾಗಿ ಯಾರು ಯಾರು ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದರು ಅಂಥವರಿಗೆ ಅರ್ಜಿ ಸಲ್ಲಿಸಲು ಇದು ಕೊನೆಯ ದಿನ ಎಂದು ಹೇಳಿ, ದಿನಾಂಕ: 01.01.2005 cut-off date ಮಾಡುತ್ತಾರೆ. ಮಾನ್ಯ ಸಚಿವರಲ್ಲಿ ನನ್ನ ಕೊನೆಯ ಪ್ರಶ್ನೆಯೇನೆಂದರೆ, ನಮೂನೆ 50 ರಡಿ ಅರ್ಜಿ ಸಲ್ಲಿಸಿರುವವರು ಏನಿದ್ದಾರೆ, ಮೊದಲು 1991 ಎಂದು ಇತ್ತು, ನಂತರ 1998-1999 ರಂದು, ತದನಂತರ 2005 ರಂದು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಯಿತು. ಆದರೆ, ಅದೇ ದಿನಾಂಕದಲ್ಲಿ ಒಂದೇ ಸರ್ವೇ ನಂಬರ್‌ನಲ್ಲಿ ಅರ್ಜಿ ಸಲ್ಲಿಸಿದ್ದವರಲ್ಲಿ ಕೆಲವರಿಗೆ ಗ್ರ್ಯಾಂಟ್ ಆಗಿದ್ದು, ಇದುವರೆವಿಗೂ ಕೆಲವರಿಗೆ ಗ್ರ್ಯಾಂಟ್ ಆಗಿರುವುದಿಲ್ಲ. ಆದರೂ ಅವರುಗಳು ಉಳುಮೆ ಮಾಡಿಕೊಂಡೇ ಬರುತ್ತಿದ್ದಾರೆ. ಕಾನೂನಿನ ಪ್ರಕಾರ ಯಾವ ರೀತಿ ಅರ್ಜಿ ಸಲ್ಲಿಸಬೇಕು, ಅರ್ಜಿ ಸಲ್ಲಿಸಲು ಏನೇನು ದಾಖಲೆಗಳು ಬೇಕು ಎಂಬುದೆಲ್ಲದರ ಕುರಿತು ಸುಮಾರು ಮಾಹಿತಿಯನ್ನು ಸಹ ಉತ್ತರದಲ್ಲಿ ತಿಳಿಸಿದ್ದಾರೆ. ಅದಕ್ಕಾಗಿ ಒಂದು ಉದಾಹರಣೆಯನ್ನು ಹೇಳಲು ಬಯಸುತ್ತೇನೆ. ಅದೇನೆಂದರೆ, ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿ, ಮರಳುಕುಂಟೆ ಎಂಬ ಗ್ರಾಮದ ಸರ್ವೇ ನಂಬರ್ 50 ರಲ್ಲಿ ಸುಮಾರು 250 ಎಕರೆ ಸರ್ಕಾರಿ ಜಾಗ ಇದೆ. 1962ನೇ ಸಾಲಿನಲ್ಲಿ ಸುಮಾರು ಜನರಿಗೆ ಆ ಜಮೀನು ಗ್ರ್ಯಾಂಟ್ ಆಗಿದೆ. ಆದರೆ, ಅದೇ ಸರ್ವೇ ನಂಬರ್‌ನಲ್ಲಿ ಅಂದಿನ ದಿವಸವೇ ಅರ್ಜಿ ಸಲ್ಲಿಸಿದ್ದಂತಹ ಪಕ್ಕದ ಜಮೀನಿನವರಿಗೆ ಇವತ್ತಿನವರೆಗೂ ಗ್ರ್ಯಾಂಟ್ ಆಗಿರುವುದಿಲ್ಲ. ಇವತ್ತಿಗೂ ಆ ಜನರು ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ. ಹಾಗಾಗಿ ಆ ಜಮೀನು ಅವರಿಗೆ ಗ್ರ್ಯಾಂಟ್ ಆಗಲು ಮತ್ತು ಕೆಲವರಿಗೆ ಗ್ರ್ಯಾಂಟ್ ಆಗದೇ ಇರುವುದಕ್ಕೂ ಇರುವ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರಣವೇನು? ಇದರಿಂದಾಗಿ ಕೆಲವು ಜನರು ನಾಳೆ ದಿವಸ ನಿಮ್ಮನ್ನು ಅಲ್ಲಿಂದ ಒಕ್ಕಲೆಬ್ಬಿಸುತ್ತೇವೆ ಎಂದು ಹೇಳುತ್ತಾರೆ. ತಹಸೀಲ್ದಾರ್‌ರವರು ಸಹ ಆಗಾಗ ಅಲ್ಲಿಗೆ ಹೋಗಿ ಭಯಪಡಿಸುವಂಥ ಕೆಲಸವಾಗುತ್ತಿದೆ. ಇಲ್ಲದಿದರೆ ಅವರನ್ನು ಖಾಲಿ ಮಾಡಿಸುತ್ತೇವೆ ಎಂದು ಹೇಳುತ್ತಾರೆ. ಒಂದೇ ಸರ್ವೇ ನಂಬರ್‌ನಲ್ಲಿದ್ದು ಕೆಲವರಿಗೆ ಗ್ರ್ಯಾಂಟ್ ಆಗಿದೆ, ಅದಕ್ಕೆ ಹೊಂದುಕೊಂಡಿರುವ ಜಮೀನಿನಲ್ಲಿ ಗ್ರ್ಯಾಂಟ್ ಆಗಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ನೀಡಲಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವೆಂದರೆ, ಮಾನ್ಯ ಸಚಿವರು 'ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ 18 ಕಿಲೋ ಮೀಟರ್, ಪಂಚಾಯತ್ ವ್ಯಾಪ್ತಿಯಲ್ಲಿ 3 ಕಿಲೋ ಮೀಟರ್, ಸಿ.ಎಂ.ಸಿ. ವ್ಯಾಪ್ತಿಯಲ್ಲಿ 5 ಕಿಲೋ ಮೀಟರ್ ಒಳಗೆ ಬರುವ ಜಮೀನಿಗೆ ಗ್ರ್ಯಾಂಟ್ ನೀಡುವುದಿಲ್ಲ' ಎಂದು ಕಾರಣ ನೀಡಿದ್ದಾರೆ. 1962ನೇ ಸಾಲಿನಲ್ಲಿ ಜಮೀನು ಗ್ರ್ಯಾಂಟ್ ಆದ ಸಂದರ್ಭದಲ್ಲಿ ಇಂತಹ ಕಾನೂನು ಯಾವುದು ಇರಲಿಲ್ಲವೆ?

(ಮುಂದು)

**(1246) 22-12-2021 11.50 ಎಸ್‌ಕೆ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ. ನಾರಾಯಣಸ್ವಾಮಿ (ಮುಂದು):-**
ಅವೊತ್ತಿನ ದಿನ ಅವರಿಗೆ ಗ್ರ್ಯಾಂಟ್ ಆಗಿದೆ. ಇವತ್ತಿನ ದಿನ ಅದೇ ಜಾಗಕ್ಕೆ ಕಾನೂನು ಅನ್ವಯಿಸುವುದಾದರೆ, ಬಿ.ಬಿ.ಎಂ.ಪಿ ವ್ಯಾಪ್ತಿಯ 18 ಕಿ.ಮೀಟರ್ ವ್ಯಾಪ್ತಿಯೊಳಗೆ ಈ ಜಾಗ ಬರುವಂತಹದ್ದು. ಇವತ್ತು ಅವರಿಗೆ ಗ್ರ್ಯಾಂಟ್ ಆಗಲಿಲ್ಲವೆಂದರೆ, ಅವರ ಪರಿಸ್ಥಿತಿ ಏನಾಗಬೇಕು?

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಈಗ ಸ್ವಾತಂತ್ರ್ಯ ಪೂರ್ವ ಇರಬಹುದು ಮತ್ತು ಸ್ವಾತಂತ್ರ್ಯ ಬಂದಾದ ಮೇಲೂ ಕೂಡ ನಮೂನೆ-50, ನಮೂನೆ-53, ನಮೂನೆ-57 ರ ಇವುಗಳಿಗೆ ಅರ್ಜಿಗಳನ್ನು ಹಾಕುವಂತಹದ್ದಕ್ಕೆ 2019 ರವರೆಗೂ ವಿಸ್ತರಣೆ ಮಾಡಿಕೊಂಡು ಅನುಮತಿಯನ್ನು ಕೊಟ್ಟಿದ್ದೇವೆ. ಸ್ವತಂತ್ರ ಪೂರ್ವದಿಂದಲೂ ಅವರು ಜಾಲ ಹೋಬಳಿಯಲ್ಲಿದ್ದರು ಎಂದು ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಹೇಳಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಅವರಿಗೆ ಗ್ರ್ಯಾಂಟ್ ಆಗಿದ್ದರೆ, ಕಾರ್ಪೋರೇಷನ್‌ನಿಂದ ಆ ಕಿಲೋ ಮೀಟರ್ ಏನಿದೆಯೋ, ಅವೊತ್ತಿನ ದಿನ ಕಾನೂನು ಏನಿರುತ್ತದೆಯೋ, ಅದು ಅವರಿಗೆ ಅಪ್ಲೈ ಆಗುತ್ತದೆ. ಯಾವತ್ತಿನ ದಿನ ಅರ್ಜಿ ಹಾಕಿರುತ್ತಾನೆ. ಅರ್ಜಿ ಹಾಕಿದ ದಿನಾಂಕದಿಂದ ಕಾರ್ಪೋರೇಷನ್‌ನ distance ಏನಿದೆಯೋ ಅದನ್ನು ತೆಗೆದುಕೊಳ್ಳುತ್ತೇವೆ. ಹತ್ತು-ಹನ್ನೆರಡು ವರ್ಷಗಳಿಂದ ಹದಿನೆಂಟು ಕಿಲೋ ಮೀಟರ್ ಇವೆಲ್ಲಾ ಆಗಿರುವಂತಹದ್ದು. ಅದರ ಹಿಂದೆ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಕಾರ್ಪೋರೇಷನ್ ಏರಿಯಾ ಕಡಿಮೆ ಇತ್ತು ಮತ್ತು ಹೆಬ್ಬಾಳದಿಂದಲೇ ಮುಗಿದು ಹೋಗುತ್ತಿತ್ತು. ಈಗ ಅದು ವಿಸ್ತರಿಸಲಾಗಿದೆ. ಅರ್ಜಿ ಹಾಕಿದ ದಿನಾಂಕ ಏನಿತ್ತೋ, ಅವೊತ್ತಿನ ಕಾನೂನುಗಳು ಅಪ್ಲೈ ಆಗುತ್ತದೆ. ಮಾನ್ಯ ಸದಸ್ಯರು individual ಆಗಿ ನನ್ನ ಗಮನಕ್ಕೆ ತಂದರೆ, ಅದರ ನೈಜತೆಯನ್ನು ತಿಳಿದುಕೊಂಡು, ಅವರಿಗೆ ಸೂಕ್ತ ಪರಿಹಾರ ಸಿಗುವಂತಹದ್ದಕ್ಕೆ ಜಮೀನು ಮಂಜೂರು ಮಾಡುವಂತಹದ್ದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, 1976 ರಲ್ಲಿ ಈ ಕಾನೂನು ಬಂದಿದ್ದು. ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ರ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ-18 ಕಿಲೋ ಮೀಟರ್ ಎಂದು ಹೇಳಿರುವಂತಹದ್ದು. ನಾನು ಹೇಳುತ್ತಿರುವುದೇನೆಂದರೆ, 1962 ರಲ್ಲಿ ಗ್ರ್ಯಾಂಟ್ ಆಗಿದೆ. ಅವೊತ್ತಿನ ದಿನ ಈ ಕಾನೂನು ಇರಲಿಲ್ಲ. ಅವೊತ್ತಿನ ದಿನ ಗ್ರ್ಯಾಂಟ್ ಮಾಡಿ, ಇವೊತ್ತಿನ ಗ್ರ್ಯಾಂಟ್ ಮಾಡಬೇಕಾದರೆ, ಕಾರ್ಪೋರೇಷನ್ ಲಿಮಿಟ್ 18 ಕಿಲೋ ಮೀಟರ್ ಬರುತ್ತದೆ ಎಂದರೆ, ಅವರ ಪರಿಸ್ಥಿತಿ ಏನಾಗುತ್ತದೆ?

**ಶ್ರೀ ಆರ್.ಅಶೋಕ್:-** ಗ್ರ್ಯಾಂಟ್ ಆದ ಮೇಲೆ ಗ್ರ್ಯಾಂಟ್ ಪ್ರಶ್ನೆಯೇ ಬರುವುದಿಲ್ಲ. ಈಗಾಗಲೇ ಗ್ರ್ಯಾಂಟ್ ಆಗಿ ಹೋಗಿದ್ದರೆ, ಕಂದಾಯ ಇಲಾಖೆಯವರು ಫಾಲೋ ಮಾಡಬೇಕಷ್ಟೆ.

**ಶ್ರೀ ಎಂ.ನಾರಾಯಣ ಸ್ವಾಮಿ:-** ಮಾನ್ಯ ಸಚಿವರೇ, ಕೆಲವರಿಗೆ ಗ್ರ್ಯಾಂಟ್ ಆಗಿದೆ. ಕೆಲವರಿಗೆ ಗ್ರ್ಯಾಂಟ್ ಆಗಿಲ್ಲ ಎಂಬುದರ ಬಗ್ಗೆ ನಾನು ಹೇಳುತ್ತಿದ್ದೇನೆ. ಮಾನ್ಯ ಸಚಿವರೇ ತಾವು ಅರ್ಥ ಮಾಡಿಕೊಳ್ಳಬೇಕು. ಸರ್ವೆ ನಂಬರ್ 50 ರಲ್ಲಿ 250 ಎಕರೆ ಇದೆ. ಅದರಲ್ಲಿ 125 ಎಕರೆ ಗ್ರ್ಯಾಂಟ್ ಆಗಿದೆ. ಇನ್ನುಳಿದ ಎಕರೆ ಗ್ರ್ಯಾಂಟ್ ಆಗಿಲ್ಲ. ಅದಕ್ಕಾಗಿ ಅವರು ಅರ್ಜಿ ಹಾಕಿಕೊಂಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರ ತಾವು ಅದರ ಕಡೆ ಗಮನ ಕೊಡಿ.

**ಶ್ರೀ ಎಂ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೊನೆಯ ಪ್ರಶ್ನೆ ಇದೆ. ಕೃಷಿ ಜಮೀನನ್ನು ದಾಖಲೆಗಳಲ್ಲಿ ಸ್ವಯಂ ಪ್ರೇರಿತವಾಗಿ ಕೃಷಿಯೇತರ ಜಮೀನು ಎಂದು ತಿದ್ದುವ ಕಾರ್ಯ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಯಾವ rules and regulations ಇದೆಯೋ, ಅದನ್ನು ಮಾತ್ರ ಹಾಕಿದ್ದೀರಾ. ಯಾರ ಜಮೀನಿಗೆ ಗ್ರ್ಯಾಂಟ್ ಆಗಿರುತ್ತೆ, ಜಮೀನಿನ ಮಾಲೀಕ ಯಾರು ಇರುತ್ತಾನೆ, ಅವನು enjoy ಮಾಡಬೇಕೆಂದು ಅರ್ಜಿ ಹಾಕಿದರೆ, ಕಾನೂನು ಪ್ರಕಾರ ಅದು conversion ಆಗುತ್ತದೆ. ನಾನು ಅದರ ಬಗ್ಗೆ ಪ್ರಶ್ನೆ ಕೇಳಿರುವಂತಹದ್ದಲ್ಲ. ನನ್ನ ಪ್ರಶ್ನೆ ಏನೆಂದರೆ, ಕೃಷಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಜಮೀನನ್ನು ದಾಖಲೆಗಳಲ್ಲಿ ಸ್ವಯಂ ಪ್ರೇರಿತವಾಗಿ ಕೃಷಿಯೇತರ ಜಮೀನು ಎಂದು ಪಹಣಿಗಳಲ್ಲಿ ನಮೂದು ಆಗುತ್ತಿದೆ. ಕೆಲವು ಕಂದಾಯ ಅಧಿಕಾರಿಗಳು ಸೇರಿಕೊಂಡು ಕೃಷಿ ಜಮೀನನ್ನು, ಕೃಷಿಯೇತರ ಜಮೀನು ಎಂದು ತಿದ್ದುತ್ತಿದ್ದಾರೆ.

**ಸಭಾಪತಿಯವರು:-** ಅದನ್ನು ಸರಿಪಡಿಸಿ ಎಂದು ಹೇಳಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಆ ತರಹದ್ದು ಯಾವುದಾದರೂ ಇದ್ದಲ್ಲಿ, ಆ ಬಗ್ಗೆ ಮಾನ್ಯ ಸದಸ್ಯರು ಸೂಕ್ತ ದಾಖಲೆ ಕೊಟ್ಟರೆ, ಇದರಲ್ಲಿ ಯಾವ ಅಧಿಕಾರಿಗಳಾಗಿರಲಿ, ಮುಲಾಜು ಇಲ್ಲದೇ ನಾನು ಕ್ರಮ ತೆಗೆದುಕೊಂಡು ಲಾಜು ಇಲ್ಲದೇ, ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 1117**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯ್‌ಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ವಸತಿ ಯೋಜನೆಗಳಡಿಯಲ್ಲಿ ಮನೆಗಳು ಮಂಜೂರು ಆಗಿದ್ದು, ಜನರು ಇದ್ದ ಹಳೆಯ ಮನೆಗಳನ್ನು ಕೆಡವಿ, ಹೊಸ ಮನೆ ನಿರ್ಮಾಣಕ್ಕೆ ಅಡಿಪಾಯ ಹಾಕುವುದಕ್ಕೆ ಕಾಯುತ್ತಿದ್ದಾರೆ. ಆದರೆ ಹಣ ಬಿಡುಗಡೆಯಾಗಿಲ್ಲ. ಹಣ ಯಾವಾಗ ಬಿಡುಗಡೆ ಮಾಡುತ್ತೀರಾ ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸಂಪೂರ್ಣವಾದಂತಹ ಮಾಹಿತಿಯನ್ನು ಕೊಟ್ಟಿದ್ದೇನೆ. ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂದರೆ 2018-19ನೇ ಸಾಲಿನಿಂದ ಇಲ್ಲಿಯವರೆಗೆ 18875 ಮನೆಗಳು ಮಂಜೂರು ಮಾಡಿದ್ದು, ಈ ಪೈಕಿ 16057 ಫಲಾನುಭವಿಗಳನ್ನು ಆಯ್ಕೆಗೊಳಿಸಿ ಕಾಮಗಾರಿ ಆದೇಶ ಪತ್ರ ನೀಡಲಾಗಿದೆ. ಒಟ್ಟಾರೆಯಾಗಿ ಇಲ್ಲಿಯವರೆಗೂ  ನಲವತ್ತೆಂಟು ಕೋಟಿ ಹದಿನಾಲ್ಕು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. 16057 ಫಲಾನುಭವಿಗಳನ್ನು ಆಯ್ಕೆಗೊಳಿಸಿ, ಕಾಮಗಾರಿ ಆದೇಶ ಪತ್ರ ನೀಡಿದ ಮೇಲೆ, ಸುಮಾರು 80 ಮನೆಗಳು ಪೂರ್ಣಗೊಂಡಿದೆ. 1354 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ. ಸುಮಾರು 14619 ಮನೆಗಳು ಪ್ರಾರಂಭವಾಗಬೇಕಾಗಿತ್ತು. ನಾಲ್ಕು ಮನೆಗಳು ಮಾತ್ರ ಸರಿಯಾದ ಮಾಹಿತಿ ಇಲ್ಲದೇ ರದ್ದಾಗಿದೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ವಿನಂತಿ ಮಾಡುವುದೇನೆಂದರೆ,  ಅದಕ್ಕಿಂತ ಮೊದಲು ಜಿಪಿಎಸ್ ಮಾಡಬೇಕಾದರೆ, ಎರಡು ಇಂದಿರಾ ಮತ್ತು ವಿಷಲ್ ಎಂಬುದು ಇತ್ತು. ಇವತ್ತು ಅದೆಲ್ಲವನ್ನು ಒಂದೇ ಮಾಡಿ ಇಂದಿರಾ ಅವಾಜ್ ಮತ್ತು  ಜಿಪಿಎಸ್ ಅನ್ನು ಒಂದೇ  ಮಾಡಿ, Indira whistle off ಎಂದು ಮಾಡಿ, ಏಕಕಾಲದಲ್ಲಿ ಪ್ರತಿಯೊಂದು ಜಿಲ್ಲೆ ಮತ್ತು ತಾಲ್ಲೂಕುಗಳಿಗೂ ಒಂದು ಕೋಡ್ ಕೊಟ್ಟು, ಪ್ರತಿಯೊಂದು ವ್ಯವಸ್ಥಿತವಾಗಿ ಮಾಡಿದ್ದೇವೆ. ಅದನ್ನು ಎಲ್ಲಿ ಬೇಕಾದರೂ ನೋಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಇದರಲ್ಲಿ ಎಷ್ಟರ ಮಟ್ಟಿಗೆ ಅನಾನುಕೂಲತೆಗಳಿವೆ. ಅರ್ಹತೆಯುಳ್ಳವಂತಹರಿಗೆ ಎಷ್ಟರ ಮಟ್ಟಿಗೆ ಅನಾನುಕೂಲತೆ ಉಂಟಾಗಿತ್ತು. ಇವುಗಳೆಲ್ಲವನ್ನು ಸರಿಪಡಿಸಿ, ಮುಖ್ಯವಾಹಿನಿಗೆ ತರುವಂತಹ ಕೆಲಸವನ್ನು ಮಾಡಿದ್ದೇವೆ. ನಾನು ಮಾನ್ಯ ಸದಸ್ಯರಿಗೆ ವಿನಂತಿ ಮಾಡುವುದಷ್ಟೇ. ಮೂರು-ನಾಲ್ಕು ದಿನಗಳಿಂದ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಮನೆಗಳನ್ನು ಎಷ್ಟರ ಮಟ್ಟಿಗೆ ಕಟ್ಟಿದ್ದಾರೆ ಎಂಬ ಬಗ್ಗೆ  ಪಿ.ಡಿ.ಓ., ಮತ್ತು ಇ.ಓ. ಅಧಿಕಾರಿಗಳು whistle ಗೆ feed ಮಾಡಿದ ಕೆಲವೇ ನಿಮಿಷಗಳಲ್ಲಿ ನಮ್ಮ ಇಲಾಖೆಯಿಂದ ಆರ್‌ಟಿಜಿಎಸ್ ಮೂಲಕ ಹಣವನ್ನು ಅವರಿಗೆ ಹಾಕುವಂತಹ ಒಂದು ವಿನೂತನ ಯೋಜನೆ ಜಾರಿಗೆ ಬಂದ ಮೇಲೆ ಸುಮಾರು 1800 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟ ಹಣ ಬಿಡುಗಡೆಯಾಗಿದೆ. ಇದು ಏಕಾಯಿತು ಎಂಬುದರ ಬಗ್ಗೆ ತಮಗೂ ಮಾಹಿತಿ ಗೊತ್ತಿದೆ. ತಾವು ಪ್ರತಿಯೊಂದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅರ್ಥ ಮಾಡಿಕೊಂಡಿದ್ದೀರಿ. ಪಾರದರ್ಶಕತೆ ಕಾಪಾಡುವುದರಿಂದ ಅರ್ಹರಿಗೆ ಅನಾನುಕೂಲವಾಗಬಾರದು ಎಂಬ ದೃಷ್ಟಿಯಿಂದ ಇವತ್ತು ವಿನೂತನ ಯೋಜನೆ ಜಾರಿಯಾಗಿದೆ. ಸುಮಾರು 14,000 ಮನೆಗಳು ವಿವಿಧ ಹಂತದಲ್ಲಿದೆ. ಇದನ್ನು ಮತ್ತೊಮ್ಮೆ ಅಧಿಕಾರಿಗಳು ಬಂದು ನೋಡಲಿ. ಇವತ್ತು ಕೂಡ ಮಾನ್ಯ ಪಶುಸಂಗೋಪನಾ ಸಚಿವರ ಜೊತೆ ಮಾತನಾಡಿದ್ದೇನೆ. ಅದರ ಬಗ್ಗೆ ಸಭೆ ಮಾಡುವುದಕ್ಕೂ ಕೂಡ ನಾನು ವಿನಂತಿ ಮಾಡಿದ್ದೇನೆ. ಇದನ್ನು ಮಾಡಿ ಬೀದರ್ ಜಿಲ್ಲೆಯಲ್ಲಿ ಇರುವಂತಹ ಮನೆಗಳೇನಿವೆ? ಅವುಗಳಿಗೂ ಕೂಡ ಕೆಲಸ ಪ್ರಾರಂಭ ಮಾಡುವುದಕ್ಕೆ ಕ್ರಮ ವಹಿಸುತ್ತೇನೆ.

**ಶ್ರೀ ವಿಜಯ್ ಸಿಂಗ್:-** ಮಾನ್ಯ ಸಚಿವರೇ, ಬೇಗ ಹಣ ಬಿಡುಗಡೆ ಮಾಡಿದರೆ ಒಳ್ಳೆಯದಾಗುತ್ತದೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಸರ್ಕಾರದಿಂದ ಹಣ ಬಿಡುಗಡೆ ಮಾಡುವುದಕ್ಕೆ ನಮಗೇನು ತೊಂದರೆ ಇಲ್ಲ. ಯಾವುದೇ ಕಾರಣಕ್ಕೆ ಅನರ್ಹರಿಗೆ ತಲುಪಬಾರದು ಎನ್ನುವ ಬಗ್ಗೆ ಬೀಗಿ ಕ್ರಮವಾಗಿತ್ತು. ಈಗ ಎಲ್ಲವೂ ಕೂಡ ಹಂತಕ್ಕೆ ಬಂದಿದೆ. ಪ್ರತಿಯೊಂದು ಕಡೆಗಳಲ್ಲಿ ಹಣ ಬಿಡುಗಡೆಯಾಗಿದೆ. ಬ್ಲಾಕ್ ಆಗಿರುವಂತಹ ಮನೆಗಳನ್ನು ಹೊರತುಪಡಿಸಿದರೆ, ಬೇರೆ ಯಾವುದೇ ಮನೆಗಳಿಗೆ ಈ ಹಿಂದೆ ಇದ್ದಂತಹ ಸರ್ಕಾರ ಕೊಟ್ಟಿರುವುದಕ್ಕೆ, ನಾವು ಎಲ್ಲಿಯೂ ನಿಲ್ಲಿಸಿಲ್ಲ. ಸನ್ಮಾನ್ಯ ಬಸವರಾಜ ಬೊಮ್ಮಾಯಿಯವರು 6632 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ರಾಜ್ಯ ಸರ್ಕಾರದಿಂದ ಐದು ಲಕ್ಷಗಳಷ್ಟು ಮನೆಗಳನ್ನು ಕೊಡುವಂತಹದ್ದಕ್ಕೆ ತೀರ್ಮಾನ ಮಾಡಿದ್ದೇವೆ. ಅದರಲ್ಲಿ ಒಂದು ಲಕ್ಷ ಮನೆಗಳು ನಗರ ಪ್ರದೇಶಗಳಿಗೆ, ನಾಲ್ಕು ಲಕ್ಷ ಮನೆಗಳು ಗ್ರಾಮೀಣಾ ಪ್ರದೇಶಗಳಿಗೆ ಮಾಡಿದ್ದೇವೆ. ಪ್ರತಿಯೊಂದು ಪಂಚಾಯಿತಿಗಳಿಗೆ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಆಯಾಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಸುಮಾರು 6600 ಪಂಚಾಯಿತಿಗಳಿಂದ ಮಾರ್ಚ್ 25 ನೇ ತಾರೀಖಿನೊಳಗೆ ಕಳುಹಿಸಿದರೆ, ಅದಕ್ಕೂ ಕೂಡ ಮೂರು ಕಂತಿನಲ್ಲಿ ಹಣ ಬಿಡುಗಡೆ ಮಾಡುವಂತಹ ಯೋಜನೆಯನ್ನು ಮಾಡಿದ್ದೇವೆ. ನಾನು ಸಭಾಪತಿಯವರ ಮೂಲಕ ಎಲ್ಲಾ ಮಾನ್ಯ ಸದಸ್ಯರ ಗಮನ ತರುವುದಕ್ಕೆ ಇಚ್ಛೆ ಪಡುತ್ತೇನೆ.

**ಶ್ರೀ ವಿಜಯ್ ಸಿಂಗ್:-** ಮಾನ್ಯ ಸಚಿವರೇ, ಆಗಸ್ಟ್ ತಿಂಗಳಲ್ಲಿ ತುಂಬಾ ಮಳೆಯಾಗಿತ್ತು. ಆಗ ಬಹಳಷ್ಟು ಮನೆಗಳು ಬಿದ್ದು ಹೋಗಿವೆ. ಅದರ ಬಗ್ಗೆಯೂ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ವಿ.ಸೋಮಣ್ಣ:-** ಈಗಾಗಲೇ, ಅದರ ಬಗ್ಗೆ ಮಾನ್ಯ ಕಂದಾಯ ಸಚಿವರು ಸವಿಸ್ತಾರವಾಗಿ ತಿಳಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಅದರಲ್ಲಿ ಮಧ್ಯೆ ಪ್ರವೇಶ ಮಾಡಿ, ಪ್ರತಿಯೊಂದು ಯಾವ ತಾಲ್ಲೂಕಿನಲ್ಲಿ ಕೂಡ ಎ.ಬಿ.ಸಿ. ಕೆಟಗರಿ ಮನೆಗಳೇನಿತ್ತು, ಯಾವ ರೀತಿ ಮಾಡಬೇಕೆಂಬ ಬಗ್ಗೆ ಸೂಚನೆಯೂ

ಕೂಡ ಹೋಗಿದೆ. ಆಯಾಯ ಜಿಲ್ಲೆಯ ಜಿಲ್ಲಾ ಮಟ್ಟ ಅಧಿಕಾರಿಗಳು ಜೊತೆ ಕುಳಿತುಕೊಂಡು ಚರ್ಚೆ ಮಾಡಿ, ಅವರು ಕಳುಹಿಸಿಕೊಟ್ಟ ತಕ್ಷಣ ಹಣ ಬಿಡುಗಡೆ ಮಾಡುವುದಷ್ಟೆ ಕೆಲಸ. ಕಂದಾಯ ಇಲಾಖೆಯವರು ಬಾಕಿ ಮಾಹಿತಿಯನ್ನು ಒದಗಿಸುವಂತಹದ್ದು. ಆ ಇಲಾಖೆಯವರು ಒದಗಿಸಿದ ತಕ್ಷಣವೇ, ಹಣ ಬಿಡುಗಡೆ ಮಾಡುವಂತಹ ಕೆಲಸವನ್ನು ನಾನು ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ 22 ನೇ ಡಿಸೆಂಬರ್ 2021, ಸಮೂಹ-3 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 123 ಪ್ರಶ್ನೆಗಳ ಪೈಕಿ 60 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರಗಳ ಪ್ರತಿಯನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು:-** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**2. ಪ್ರಕಟಣೆ**

**ಸಭಾಪತಿಯವರು:-** ಸದನದಲ್ಲಿ ಇಂದು ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳೆಂದರೆ;

1. ಡಾ. ಸಿ.ಎನ್.ಅಶ್ವಥ ನಾರಾಯಣ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು
2. ಶ್ರೀ ಆನಂದ್ ಸಿಂಗ್, ಪರಿಸರ ಜೀವಿಶಾಸ್ತ್ರ, ಹಾಗೂ ಪ್ರವಾಸೋದ್ಯಮ ಸಚಿವರು
3. ಡಾ.ಕೆ. ಸುಧಾಕರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು
4. ಶ್ರೀ ಉಮೇಶ ವಿ. ಕತ್ತಿ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಅರಣ್ಯ ಸಚಿವರು.
5. ಶ್ರೀ ಬಿ.ಸಿ. ನಾಗೇಶ್ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು
6. ಶ್ರೀ ಪಿ. ಸುನೀಲ್ ಕುಮಾರ್, ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಮಾನ್ಯ ವಿ. ಸೋಮಣ್ಣನವರೇ, ಕೆಲವು ಮಂತ್ರಿಗಳನ್ನು ನಮ್ಮ ಸದನಕ್ಕೆ ಭೇಟಿ ಮಾಡಿಸಿ. ಅವರು ಸದನಕ್ಕೆ ಭೇಟಿಯಾಗಿಲ್ಲ. ಈ ಅಧಿವೇಶನ ನಡೆದ್ದಾಗಿನಿಂದ ಸಚಿವರನ್ನು ನಾನು ನೋಡಿಲ್ಲ.

**3. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ವಿಷಯ:- ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕಾಪ್ರಾಡಿ ಗ್ರಾಮ ವರಾಹಿ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ಸಮೀಪ ನದಿದಂಡೆ ಸಂರಕ್ಷಣಾ ಕಾಮಗಾರಿಗೆ ಅನುದಾನ ಒದಗಿಸುವ ಬಗ್ಗೆ.**

-------

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕಾಪ್ರಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಂದಾಪುರ-ಶಿವಮೊಗ್ಗ ರಾಜ್ಯ ಹೆದ್ದಾರಿಯ ಹಾದು ಹೋಗುವ ಕಂಡ್ಲೂರು ಸೇತುವೆಯ ಮೇಲ್ಭಾಗದ ಕಾಪ್ರಾಡಿ ಗ್ರಾಮದಲ್ಲಿ ವಾರಾಹಿ ನದಿಯ ಬಲದಂಡೆಯ ತಗ್ಗಾಗಿದ್ದು, ಪ್ರತಿ ವರ್ಷ ಮಳೆಗಾಲದಲ್ಲಿ ನದಿಯ ನೀರು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉಕ್ಕಿ ಹರಿದು ನದಿ ದಂಡೆ ಕೊಚ್ಚಿ ಹೋಗಿ ಪಕ್ಕದ ಜನ ವಸತಿ ಪ್ರದೇಶಗಳಿಗೆ ನೀರು ನುಗ್ಗಿ ಜನ ವಸತಿ ಪ್ರದೇಶಗಳಿಗೆ ನೀರು ನುಗ್ಗಿ ಜನ ವಸತಿ ಪ್ರದೇಶ, ಕೃಷಿ ಭೂಮಿ ಹಾಗೂ ತೋಟಗಳಿಗೆ ಹಾನಿಯಾಗುವುದು ಸಾಮಾನ್ಯವಾಗಿದೆ. ಸುಮಾರು 400 ರಿಂದ 500 ಜನಸಂಖ್ಯೆ ಹೊಂದಿರುವ ಈ ಪ್ರದೇಶದಲ್ಲಿ 40 ಎಕರೆ ಪ್ರದೇಶದಲ್ಲಿ ಕೃಷಿ ಚಟುವಟಿಕೆ ನಡೆಸುತ್ತಿದ್ದು, ಮಳೆಗಾಲದಲ್ಲಿ ನದಿ ನೀರು ನುಗ್ಗುವಿಕೆಯಿಂದಾಗಿ ಗ್ರಾಮಸ್ಥರು ತೀವ್ರ ತೊಂದರೆ ಹಾಗೂ ನಷ್ಟ ಅನುಭವಿಸುತ್ತಿದ್ದಾರೆ. ಈ ಭಾಗದಲ್ಲಿ ನದಿ ದಂಡೆಯ 1.50 ಕಿ.ಮೀ ಉದ್ದಕ್ಕೆ, ಸುಮಾರು 400 ಲಕ್ಷ ಅಂದಾಜು ವೆಚ್ಚ ತಗಲುವ ರಿವಿಟ್ ಮೆಂಟ್ ರಚಿಸಿ ನದಿ ದಂಡೆ ಸಂರಕ್ಷಣಾ ಕಾಮಗಾರಿಯನ್ನು ಕೈಗೊಂಡಲ್ಲಿ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಲಿದೆ. ಸದರಿ ಕಾಮಗಾರಿಗೆ ತಗಲುವ 400 ಲಕ್ಷ ಅನುದಾನವನ್ನು ಮಂಜೂರು ಮಾಡಿ ಕಾಮಗಾರಿಗೆ ಅನುಮೋದನೆ ನೀಡಲು ಕಾರ್ಯನಿರ್ವಾಹಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಮಂಗಳೂರು ಇವರು ಈಗಾಗಲೇ ಇಲಾಖೆಯ ಮೇಲಾಧಿಕಾರಿಗಳನ್ನು ಕೋರಿರುತ್ತಾರೆ. ಆದ್ದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಅತಿ ಅವಶ್ಯವಾಗಿರುವ ಈ ಕಾಮಾಗರಿಯನ್ನು ಕೈಗೊಳ್ಳಲು ರೂ. 400 ಲಕ್ಷ ಅನುದಾನವನ್ನು ಮಂಜೂರು ಮಾಡುವುದರೊಂದಿಗೆ ಕಾಮಗಾರಿಗೆ ಶೀಘ್ರ ಅನುಮೋದನೆ ನೀಡಲು ಈ ಸದನದ ಮೂಲಕ ಸರ್ಕಾರವನ್ನು ಅಗ್ರಹಿಸುತ್ತೇನೆ.

**ಶ್ರೀ ವಿ. ಸೋಮಣ್ಣ(ವಸತಿ ಮತ್ತು ಮೂಲಸೌಕರ್ಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರತಾಪಚಂದ್ರ ಶೆಟ್ಟಿಯವರು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಜಲಸಂಪನ್ಮೂಲ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(1247)22.12.2021/12.00/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಈಗ ಮಾನ್ಯ ಮೋಹನ್‌ಕುಮಾರ್ ಕೊಂಡಜ್ಜಿಯವರು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮೋಹನ್‌ಕುಮಾರ್ ಕೊಂಡಜ್ಜಿಯವರ ಶೂನ್ಯವೇಳೆ ಪ್ರಸ್ತಾಪವನ್ನು ಅವರ ಪರವಾಗಿ ನಾನು ಪ್ರಸ್ತಾಪಿಸುತ್ತೇನೆ.

**ಸಭಾಪತಿಯವರು:-** ಶೂನ್ಯವೇಳೆಯನ್ನು ಇನ್ನೊಬ್ಬರ ಪರವಾಗಿ ಹೇಳುವುದಕ್ಕೆ ಬರುವುದಿಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರ ಪರವಾಗಿ ನಾನು ಮಾತನಾಡುತ್ತೇನೆ. ಅವರು ಪತ್ರ ಕೊಟ್ಟಿದ್ದಾರೆ ಅದು ತಮ್ಮ ಹತ್ತಿರ ಇದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು**:- ಮಾನ್ಯ ಮೋಹನ್‌ಕುಮಾರ್ ಕೊಂಡಜ್ಜಿಯವರು ಪತ್ರವನ್ನು ಕೊಟ್ಟಿದ್ದಾರೆ. ಆದರೆ ಶೂನ್ಯವೇಳೆಯಲ್ಲಿ ಇದು ಪ್ರಯೋಜನವಾಗುವುದಿಲ್ಲ. ಇನ್ನೊಬ್ಬರು ಮಾತನಾಡುವ ಹಾಗಿಲ್ಲ. ಪ್ರಶ್ನೋತ್ತರದಲ್ಲಿ ಮಾತ್ರ ಮಾತನಾಡಬಹುದು.

**ಆ) ವಿಷಯ:- ವೈದ್ಯಕೀಯ ಶಿಕ್ಷಣ ಇಲಾಖೆಯ ಖಾಯಂ ಶುಶ್ರೂಷಕಾಧಿಕಾರಿಗಳಿಗೆ ಕೋವಿಡ್-19 ಪ್ರೋತ್ಸಾಹ ಧನ, ರಿಸ್ಕ್ ಅಲೋಯನ್ ಮಂಜೂರು ಮಾಡುವ ಬಗ್ಗೆ.**

- - - - -

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕೋವಿಡ್-19 ಎಂಬ ಸಾಂಕ್ರಾಮಿಕ ಮಹಾಮಾರಿಯ ವಿರುದ್ಧ ಹೋರಾಡುತ್ತಿರುವ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ಶುಶ್ರೂಷಕಾಧಿಕಾರಿಗಳಿಗೆ ಆದೇಶ ಸಂಖ್ಯೆ: ಆಕುಕ200 ಎಚ್ ಎಸ್ ಎಂ ದಿ/24-9-2020ರಂದು ವಿಶೇಷ ಪ್ರೋತ್ಸಾಹ ಧನವನ್ನು ಮಂಜೂರು ಮಾಡಿರುತ್ತದೆ. ಹಾಗೂ ಆದೇಶ ಸಂಖ್ಯೆ: ಎಂಇಡಿ 104ಆರ್‌ಐ/2020 ಬೆಂಗಳೂರು ದಿ/27-8-2020ರಂತೆ ಗುತ್ತಿಗೆ ಹಾಗೂ ಹೊರ ಗುತ್ತಿಗೆ ಶುಶ್ರೂಷಾಧಿಕಾರಿಗಳಿಗೆ ವಿಶೇಷ ಪ್ರೋತ್ಸಾಹ ಧನವನ್ನು ಮಂಜೂರು ಮಾಡಿರುತ್ತಿರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ಮಲತಾಯಿ ಧೋರಣೆ ಮಾಡುತ್ತಿರುವುದು ಬೇಸರದ ಸಂಗತಿ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಎಲ್ಲ ವೈದ್ಯಕೀಯ ಆಸ್ಪತ್ರೆಗಳು ತೃತೀಯ ಆರೈಕೆ ಆಸ್ಪತ್ರೆಗಳಾಗಿದ್ದು, (Tertiary care Hospital) ಅತಿ ಹೆಚ್ಚು ಗಂಭೀರ ಪರಿಸ್ಥಿತಿಯ (ICU & Ventilators) ರೋಗಿಗಳಿದ್ದು ಮುಖ್ಯವಾಗಿ ಕೋವಿಡ್-19 ರೋಗಿಗಳ ಅತೀ ಹೆಚ್ಚು ಆರೈಕೆ ಮಾಡುತ್ತಿರುವವರಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಖಾಯಂ ಶುಶ್ರೂಷಾಧಿಕಾರಿಗಳು ಕೂಡ ಮುಂಚೂಣಿಯಲ್ಲಿರುತ್ತಾರೆ. ಆದಾಗ್ಯೂ ಕೂಡ ವೈದ್ಯಕೀಯ ಶಿಕ್ಷಣ ಇಲಾಖೆಯ ಖಾಯಂ ಶುಶ್ರೂಷಾಧಿಕಾರಿಗಳಿಗೆ ಕೋವಿಡ್-19ರ ಪ್ರೋತ್ಸಾಹ ಧನವಾಗಲಿ ಅಥವಾ ರಿಸ್ಕ್ ಅಲ್ಲೋವನ್ಸ್ ಆಗಲಿ ಮಂಜೂರು ಮಾಡಿರುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರಕ್ಕೆ ಹಾಗೂ ಜಿಲ್ಲಾಧಿಕಾರಿಯವರಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮನವಿಯನ್ನು ಸಲ್ಲಿಸಿದ್ದರೂ ಯಾವುದೇ ರೀತಿಯ ಸಕಾರಾತ್ಮಕ ಸ್ಪಂದನೆ ನೀಡಿರುವುದಿಲ್ಲ. ಎರಡನೇ ಅಲೆಯ ವಿಶೇಷ ಭತ್ಯೆ/ಪ್ರೋತ್ಸಾಹ ಧನವನ್ನು ಆದಷ್ಟು ಬೇಗನೆ ಮಂಜೂರು ಮಾಡಲು ಆದೇಶಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಆದುದರಿಂದ ಇದೊಂದು ಮಹತ್ವವುಳ್ಳ ವಿಚಾರವಾಗಿರುವುದರಿಂದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ತಮ್ಮಲ್ಲಿ ಈ ಮೂಲಕ ಕೋರುತ್ತೇನೆ.

**ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರಕಾಶ್ ಕೆ.ರಾಥೋಡ್‌ರವರು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

**ಇ) ವಿಷಯ:- ರಾಜ್ಯದ ಎಲ್ಲಾ ಗ್ರಂಥಾಲಯ ಮೇಲ್ವಿಚಾರಕರ ಸಮಸ್ಯೆಗಳ ಬಗ್ಗೆ.**

- - - - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸರ್ಕಾರಿ ಗ್ರಂಥಾಲಯಗಳು ನಡೆಯುತ್ತಿರುವುದು ಸರಿಯಷ್ಟೆ, ಈ ಎಲ್ಲಾ ಗ್ರಂಥಾಲಯಗಳ ಮೇಲ್ವಿಚಾರಕರು ಮೊನ್ನೆ ಬೆಳಗಾವಿ ಸುವರ್ಣ ಸೌಧದ ಸಮೀಪ ಪ್ರತಿಭಟನೆಯನ್ನು ನಡೆಸಿದ್ದಾರೆ. ಕಾರ್ಯಾವಧಿಯ ಸಮಯವನ್ನು ದಿನದಲ್ಲಿ 6 ಗಂಟೆಯಿಂದ 8 ಗಂಟೆಗಳ ಅವಧಿಯವರೆಗೆ (ಬೆಳಗ್ಗೆ ಮತ್ತು ಸಂಜೆ ಸೇರಿ) ವಿಸ್ತರಿಸಬೇಕು, ಆ ಮೂಲಕ ಓದುಗರಿಗೆ ಸಹಕರಿಸಬೇಕು. ಜೊತೆಗೆ ಕಳೆದ ಹತ್ತಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಮೇಲ್ವಿಚಾರಕರಿಗೆ ಸೇವಾ ಭದ್ರತೆ ಒದಗಿಸಬೇಕು, ಅನುಕಂಪದ ನೇಮಕಾತಿ ಮುಂದುವರೆಸಬೇಕು ಮತ್ತು ದಿನಪತ್ರಿಕೆ ಬಿಲ್ 1500/- ರೂಗಳಿಗೆ ಹೆಚ್ಚಿಸುವುದು, ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ವೇತನ ವಿತರಿಸಬೇಕು ಇತ್ಯಾದಿ ವಿಚಾರಗಳು ಇವರ ಬೇಡಿಕೆಗಳಾಗಿರುತ್ತವೆ.

ಶಿಕ್ಷಣ ಇಲಾಖಾ ಸಚಿವರು ಇವರ ಸಮಸ್ಯೆಗಳ ಬಗ್ಗೆ ಗಮನಹರಿಸಿ ಕೂಡಲೇ ಪರಿಹರಿಸಿಕೊಡಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ವಿ. ಸೋಮಣ್ಣ(ವಸತಿ ಮತ್ತು ಮೂಲಸೌಕರ್ಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡರು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಜೊತೆ ಮಾತನಾಡಿ ಉತ್ತರವನ್ನು ಒದಗಿಸಲಾಗುವುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದೂ ಸೇರಿ ನನ್ನ ಐದು ಶೂನ್ಯವೇಳೆ ಪ್ರಸ್ತಾಪವಾಗಿದೆ. ಒಂದಕ್ಕೂ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಉತ್ತರಗಳನ್ನು ಕೊಡಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಅತಿಥಿ ಉಪನ್ಯಾಸಕರು ತರಗತಿ ಬಿಟ್ಟು ಬಂದು ಇಲ್ಲಿ ಕುಳಿತಿದ್ದಾರೆ. ತರಗತಿಗಳು ನಡೆಯುತ್ತಿಲ್ಲ.

**ಸಭಾಪತಿಯವರು**:- ಮಾನ್ಯ ಸೋಮಣ್ಣನವರೇ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಗೆ ನಾಳೆಯೊಳಗೆ ಉತ್ತರವನ್ನು ಕೊಡುವಂತೆ ತಿಳಿಸಿ.

**ಶ್ರೀ ವಿ. ಸೋಮಣ್ಣ(ವಸತಿ ಮತ್ತು ಮೂಲಸೌಕರ್ಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ತಕ್ಷಣವೇ ಮಾತನಾಡಿ ನಾಳೆಯೊಳಗೆ ಉತ್ತರಗಳನ್ನು ಕೊಡಿಸುವ ಪ್ರಯತ್ನ ಮಾಡುತ್ತೇನೆ.

**ಈ) ವಿಷಯ:- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗೋಶಾಲೆ ತೆರೆಯುವ ಬಗ್ಗೆ.**

\- - - - -

**ಶ್ರೀ ಕೆ.ಹರೀಶ್ ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಗೋಸಂರಕ್ಷಣಾ ಕಾಯಿದೆಯನ್ನು ಜಾರಿಗೊಳಿಸಿದ ತರುವಾಯ ರಾಜ್ಯ ಸರಕಾರ ಕಳೆದ ಆಯವ್ಯಯದಲ್ಲಿ ಜಿಲ್ಲೆಗೊಂದು ಗೋಶಾಲೆ ನಿರ್ಮಾಣ ಮಾಡುವುದಾಗಿ ಘೋಷಿಸಿ, ಆ ಮೂಲಕ ಗೋ ಮಾರಾಟ, ಹತ್ಯೆಗೆ ಸಂಬಂಧಿಸಿ ಹೊಸ ನಿಯಮಾವಳಿಗಳನ್ನು ರೂಪಿಸಿತು. ರೈತರೂ ಸಹ ಗೋಶಾಲೆಗಳು ಪ್ರಾರಂಭವಾದರೆ ಗೋವುಗಳ ಮಾರಾಟಕ್ಕೆ ಎದುರಾದ ಸಮಸ್ಯೆಗಳಿಗೆ ಪರಿಹಾರ ಸಿಗಬಹುದೆನ್ನುವ ಆಶಾಭಾವನೆಯನ್ನು ಹೊಂದಿದ್ದರು. ಆದರೆ ಇದುವರೆಗೆ ಯಾವ ಜಿಲ್ಲೆಯಲ್ಲೂ ಗೋಶಾಲೆಯನ್ನು ಪ್ರಾರಂಭಿಸದಿರುವುದರಿಂದ ಗೋಶಾಲೆ ಪ್ರಾರಂಭ ಎನ್ನುವುದು ಕೇವಲ ಆಯವ್ಯಯ ಘೋಷಣೆಗೆ ಮಾತ್ರ ಸೀಮಿತವಾಗಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಕಾಯಿದೆಯನ್ನು ಮಂಡಿಸುವ ಸಂದರ್ಭದಲ್ಲಿ ಗೋ ಸಂರಕ್ಷಣೆ ಕುರಿತು ಗಂಟೆಗಟ್ಟಲೆ ಚರ್ಚೆಗಳು, ವೀರಾವೇಶದ ಮಾತುಗಳನ್ನಾಡಿದ ಸರ್ಕಾರ, ವಿರೋಧಪಕ್ಷದ ವಿರೋಧದ ನಡುವೆಯೂ ಕಾಯಿದೆಗೆ ಅನುಮೋದನೆ ಪಡೆದುಕೊಂಡು ನುಡಿದಂತೆ ನಡೆಯದಿರುವುದು ವಿಪರ್ಯಾಸವೇ ಸರಿ.

ರಾಜ್ಯದ ಹಲವೆಡೆ ರೈತರು ಹೈನುಗಾರಿಕೆಗೆ ಒಯ್ಯುವ ದನಕರುಗಳನ್ನು ತಡೆಯುವ ಕೆಲಸ ನಡೆಯುತ್ತಿದ್ದು, ಇವುಗಳನ್ನು ಎಲ್ಲಿ ಕಳುಹಿಸುವುದು ಎನ್ನುವುದು ಸಹ ಪ್ರಶ್ನೆಯಾಗಿ ದಾರಿಯಲ್ಲೆ ಬಿಡುವ ಪರಿಸ್ಥಿತಿ ಬಂದಿದೆ. ರಾಜ್ಯದಲ್ಲಿರುವ 200ಕ್ಕೂ ಹೆಚ್ಚು ಖಾಸಗಿ ಗೋಶಾಲೆಗಳ ಪೈಕಿ 123 ಗೋಶಾಲೆಗಳ ಪ್ರತಿ ಗೋನಿರ್ವಹಣೆಗೆ ದಿನವೊಂದಕ್ಕೆ ಸರ್ಕಾರ ರೂ. 17.50 ನೀಡುತ್ತಿದ್ದು, ಈ ಸಣ್ಣ ಮೊತ್ತದಿಂದ ಗೋ ರಕ್ಷಣೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲು ಸಾಧ್ಯವೇ? ಒಂದು ಗೋ ನಿರ್ವಹಣೆಗೆ ದಿನಕ್ಕೆ ಕನಿಷ್ಟ ರೂ. 60ರ ಅವಶ್ಯಕತೆ ಇರುವುದು ಸರ್ಕಾರಕ್ಕೆ ತಿಳಿದಿರುವುದಿಲ್ಲವೇ;

ಮಾಹಿತಿ ಪ್ರಕಾರ ಗೋಶಾಲೆಗೆ ಅಗತ್ಯವಿರುವ ಜಮೀನುಗಳನ್ನು ಗುರುತಿಸುವ ಪ್ರಕ್ರಿಯೆ ಕೆಲವು ಜಿಲ್ಲೆಗಳಲ್ಲಿದ್ದು, ಕೆಲವು ಕಡೆ ಜಮೀನುಗಳನ್ನು ಹಸ್ತಾಂತರಿಸಿರುವ ಪ್ರಕ್ರಿಯೆಗಳು ಚಾಲ್ತಿಯಲ್ಲಿವೆ. ಈ ವಿಳಂಬ ಪ್ರಕ್ರಿಯೆಯ ಪರಿಣಾಮ ಸರ್ಕಾರ ಖಾಸಗೀ ಗೋಶಾಲೆಗಳನ್ನು ಅವಲಂಬಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಸರ್ಕಾರ ಕೂಡಲೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗೋಶಾಲೆ ತೆರೆಯಲು ಅಗತ್ಯವಿರುವ ಜಮೀನುಗಳನ್ನು ಪಡೆದು ಅವಶ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ರೈತರಿಗೆ ಸಮಸ್ಯೆಯಾಗದಂತೆ ಗೋವುಗಳ ಸಂರಕ್ಷಣೆಗೆ ಮುಂದಾಗಬೇಕೆನ್ನುವ ವಿಷಯದ ಬಗ್ಗೆ ಮಾನ್ಯ ಪಶುಸಂಗೋಪನಾ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಪ್ರಭು ಚವ್ಹಾಣ್ (ಪಶುಸಂಗೋಪನೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

**ಸಭಾಪತಿಯವರು:-** ಆಯಿತು, ಆದಷ್ಟು ಬೇಗ ಉತ್ತರವನ್ನು ತರಿಸಿಕೊಡಿ.

**ಉ) ವಿಷಯ:- ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಳೆದ ಎಂಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನಿವೃತ್ತ ಡಾ. ಓ.ಎಸ್. ಸಿದ್ದಪ್ಪರವರನ್ನು ಬದಲಾಯಿಸುವ ಬಗ್ಗೆ.**

\- - - - -

**ಶ್ರೀ ಆರ್.ಪ್ರಸನ್ನಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸರ್ಕಾರಿ ಅಧೀನದ ಯಾವುದೇ ಸಂಘ-ಸಂಸ್ಥೆಗಳನ್ನು ನಿರಂತರವಾಗಿ ಹಾಗೂ ನಿಯಮಾನುಸಾರವಾಗಿ ಮುನ್ನಡೆಸಲು ತನ್ನದೇ ಆದ ಬೈಲಾಗಳನ್ನು ರೂಪಿಸಿಕೊಂಡು, ಬೈಲಾಗಳ ಪ್ರಕಾರವೇ ಸಂಸ್ಥೆಯ ಕಾನೂನುಗಳನ್ನು ರೂಪಿಸಿ ಮುನ್ನಡೆಸಬೇಕಾಗುತ್ತದೆ. ಆದರೆ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೈಲಾ ಮತ್ತು ಉಚ್ಚ ನ್ಯಾಯಾಲಯದ ತೀರ್ಪಿನಂತೆ ನಿವೃತ್ತಿಯಾದ ವ್ಯಕ್ತಿಯನ್ನು ನಿರ್ದೇಶಕರನ್ನಾಗಿ ನೇಮಿಸಬಾರದೆಂದು ಕಾನೂನು/ಆದೇಶ ಇದ್ದರೂ ಸಹ ಪ್ರಭಾರಿ ನಿರ್ದೇಶಕರನ್ನಾಗಿ ಡಾ. ಓ.ಎಸ್. ಸಿದ್ದಪ್ಪರವರನ್ನು ನೇಮಿಸಿರುವುದು ಸಾರ್ವಜನಿಕವಾಗಿ ಮಹತ್ವದ ವಿಷಯವಾಗಿರುವುದರಿಂದ ಈ ವಿಷಯವನ್ನು ಶೂನ್ಯವೇಳೆಯ ಅಡಿಯಲ್ಲಿ ಸದನದಲ್ಲಿ ಪ್ರಸ್ತಾಪಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಒಂದು ಸರ್ಕಾರಿ ಸ್ವಾಯತ್ತ ಸಂಸ್ಥೆಯಾಗಿದ್ದು ಅದರ ಬೈಲಾ ಪ್ರಕಾರ ನಿವೃತ್ತಿ ಆದವರು ನಿರ್ದೇಶಕರಾಗುವಂತಿಲ್ಲ. ಈಗ ಪ್ರಭಾರಿ ನಿರ್ದೇಶಕರಾಗಿರುವ ಡಾ. ಓ.ಎಸ್. ಸಿದ್ದಪ್ಪನವರಿಗೆ 68 ವರ್ಷ ತುಂಬಿದ್ದು, 8 ವರ್ಷದ ಹಿಂದೆಯೇ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ. ಸಿಮ್ಸ್ ವೃಂದ ನೇಮಕಾತಿ ನಿಯಮದ ಪ್ರಕಾರ ಸಿಮ್ಸ್‌ನ ಐವರು ಪ್ರಾಧ್ಯಾಪಕರಲ್ಲಿ ಒಬ್ಬರು ನಿರ್ದೇಶಕರಾಗಬೇಕು. ಡಾ. ಸಿದ್ದಪ್ಪನವರು ಸಿಮ್ಸ್ ಸಿಬ್ಬಂದಿಯೇ ಅಲ್ಲ. ಸರ್ಕಾರದ ಆರ್ಥಿಕ ಇಲಾಖೆಯ ನಿಯಮಾವಳಿಯ ಪ್ರಕಾರ ನಿವೃತ್ತಿ ಹೊಂದಿದವರು ಸಂಸ್ಥೆಯ ಹಣಕಾಸಿನ ವ್ಯವಹಾರ ಮಾಡುವಂತಿಲ್ಲ. ಡಾ. ಸಿದ್ದಪ್ಪನವರು ಈಗಾಗಲೇ 120 ಕೋಟಿಗೂ ಹೆಚ್ಚು ಸಂಸ್ಥೆಯ ಹಣಕಾಸಿನ ವ್ಯವಹಾರ ಮಾಡಿದ್ದಾರೆ. ಇದು ಸಂಪೂರ್ಣ ನಿಯಮಬಾಹಿರವಾಗಿದ್ದು ಇದರ ಸಮಗ್ರ ತನಿಖೆ ಆಗಬೇಕು. ಡಾ. ಸಿದ್ದಪ್ಪನವರು ಬೆಂಗಳೂರು ವೈದ್ಯಕೀಯ ಕಾಲೇಜಿನ ನಿರ್ದೇಶಕರಾಗಿದ್ದು, 2013ರಲ್ಲಿ ಇವರಿಗೆ 60 ವರ್ಷ ತುಂಬಿದ್ದರಿಂದ ನಿವೃತ್ತಿಗೊಳಿಸಿ ಸೇವೆಯಿಂದ ಬಿಡುಗಡೆ ಮಾಡಲಾಯಿತು. ಇದರ ವಿರುದ್ಧ ಇವರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. (WA No. 6346 and 6395/2013) ಉಚ್ಚ ನ್ಯಾಯಾಲಯವು ಸಿದ್ದಪ್ಪನವರು ತಾತ್ಕಾಲಿಕವಾಗಿ ಅಥವಾ ಖಾಯಂ ಆಗಲಿ ವೈದ್ಯಕೀಯ ಕಾಲೇಜಿನ ನಿರ್ದೇಶಕರ ಹುದ್ದೆಯನ್ನು ಹೊಂದಬಾರದು ಎಂದು ತೀರ್ಪು ನೀಡಿತ್ತು. ಈ ತೀರ್ಪನ್ನು ಗಣನೆಗೆ ತೆಗೆದುಕೊಳ್ಳದೇ ಪ್ರಭಾರಿ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ಆದುದರಿಂದ ಇವರನ್ನು ನಿರ್ದೇಶಕರನ್ನಾಗಿ ಮುಂದುವರೆಸುವುದು ನ್ಯಾಯಾಲಯದ ಆದೇಶದ ಉಲ್ಲಂಘನೆ ಆಗುತ್ತದೆ. 8 ವರ್ಷಗಳ ಹಿಂದೆಯೇ ನಿವೃತ್ತಿ ಹೊಂದಿದ ಡಾ: ಓ.ಎಸ್. ಸಿದ್ದಪ್ಪನವರು ಈ ಕೂಡಲೇ ಪ್ರಭಾರಿ ನಿರ್ದೇಶಕರ ಸ್ಥಾನದಿಂದ ಇವರನ್ನು ವಜಾಗೊಳಿಸಿ ಇವರ ಅವಧಿಯಲ್ಲಿ 120 ಕೋಟಿಗೂ ಅಧಿಕ ಹಣಕಾಸಿನ ವ್ಯವಹಾರಗಳ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರಸನ್ನಕುಮಾರ್‌ರವರು ಕೇಳಿದ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(1248) 22-12-2021 KH/VK 12-10 **(ಸಭಾಪತಿಯವರ ಉಪಸ್ಥಿತಿ)**

**ಊ) ವಿಷಯ:- ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿ ವಿವಿಧ ತಾಂತ್ರಿಕ ಹುದ್ದೆಗಳನ್ನು ಭರ್ತಿ ಮಾಡಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ಬಗ್ಗೆ.**

\- - - - - - -

**ಡಾ: ಕೆ.ಗೋವಿಂದರಾಜ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇಂಧನ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

Karnataka Power Corporation Limited (KPCL) ದಿನಾಂಕ:11-07-2019 ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ:ಎ1ಪಿ1ಸಿ(ಸಿ1) ರೀತ್ಯಾ ವಿವಿಧ ತಾಂತ್ರಿಕ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಜನವರಿ-2018ರಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗಿತ್ತು. ಆದರೆ, ಸದರಿ ಸ್ಪರ್ಧಾತ್ಮಕ ಪರೀಕ್ಷಾ ಪತ್ರಿಕೆಯು ಸೋರಿಕೆಯಾದ ಕಾರಣ ನೀಡಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಮರು ಪರೀಕ್ಷೆಗೆ ಆದೇಶಿಸಿದ್ದು, ಈ ಆದೇಶವಾಗಿ ಎರಡು ವರ್ಷಗಳಾದರೂ ಸಹ ಇನ್ನೂ ಸ್ಪರ್ಧಾತ್ಮಕ ಮರು ಪರೀಕ್ಷೆ ನಡೆಸಲಾಗಿಲ್ಲ. ಸುಮಾರು 50 ಸಾವಿರಕ್ಕಿಂತಲೂ ಹೆಚ್ಚು ಮಂದಿ ನಿರುದ್ಯೋಗಿ ಆಕಾಂಕ್ಷಿಗಳು ಉದ್ಯೋಗದ ಆಸೆಗಾಗಿ ಮರು ಪರೀಕ್ಷೆ ಎಂದು ಆಗುವುದೋ ಎಂಬ ನಿರೀಕ್ಷೆಯಲ್ಲಿದ್ದಾರೆ. ಹೀಗೆ ಆದಲ್ಲಿ ಉದ್ಯೋಗ ಆಕಾಂಕ್ಷಿಗಳು ವಯೋಮಿತಿ ಮೀರುತ್ತದೆ. ಅಲ್ಲದೇ ಈ ಪರೀಕ್ಷೆಗಾಗಿ ತಯಾರಿ ನಡೆಸಿರುವ ಇವರುಗಳು ತೀರಾ ನಿರಾಶೆ ಭಾವನೆಯಲ್ಲಿ ಇದ್ದಾರೆ. ಸರ್ಕಾರವು ಇಂತಹ ವಿಷಯಗಳಲ್ಲಿ ಅತ್ಯಂತ ಮುತುವರ್ಜಿವಹಿಸಿ ನಿರುದ್ಯೋಗಿಗಳ, ಯುವ ಜನತೆಯ ಆಶೋತ್ತರಗಳಿಗೆ, ಭಾವನೆಗಳಿಗೆ ಸ್ಪಂದಿಸಿ ಉದ್ಯೋಗಾಂಕ್ಷಿಗಳಿಗೆ ನ್ಯಾಯ ಒದಗಿಸಬೇಕೆಂದು ಕೋರುತ್ತೇನೆ. ಈ ನಿಧಾನ ಪ್ರಕ್ರಿಯೆ ಕಾರಣವಾಗಿ ಈಗಾಗಲೇ ನಿವೃತ್ತಿ ಹೊಂದಿರುವವರನ್ನು ಗುತ್ತಿಗೆ ಆಧಾರದ ಮೇಲೆ ಮತ್ತು outsource ಮೂಲಕ ನೇಮಕಾತಿ, ಅವರನ್ನೇ ಮುಂದುವರೆಸುತ್ತಿರುವಂತಹ ಪರಿಸ್ಥಿತಿ ಇದೆ. ಇದು ತಪ್ಪಬೇಕಾಗಿದೆ.

ವಿವಿಧ ವೃಂದದ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಕ್ರೀಡೆಯಲ್ಲಿ ಪ್ರಶಸ್ತಿ ಪಡೆದ ಹಾಗೂ ಸ್ಪರ್ಧಿಸಿದ ರಾಜ್ಯದ ಪ್ರತಿಭಾವಂತಹ ಕ್ರೀಡಾಪಟುಗಳಿಗೆ ಶೇಕಡಾ 2 ರಷ್ಟು ಕ್ರೀಡಾ ಕೋಟಾದಲ್ಲಿ ನೇಮಕಾತಿ ಮಾಡಲು ಕೋರುತ್ತೇನೆ. ಹೀಗಾಗಿ ಈ ಸಾರ್ವಜನಿಕ ಮಹತ್ವದ ತುರ್ತು ವಿಷಯವನ್ನು ಇಂದು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ವಿ. ಸುನಿಲ್ ಕುಮಾರ್ (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, KPCL ನ 622 ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಅವತ್ತಿನ ದಿವಸ ಚಾಲನೆಯನ್ನು ಕೊಡಲಾಗಿತ್ತು. ಬೇರೆ ಬೇರೆ ಕಾರಣಗಳ ಹಿನ್ನೆಲೆಯಲ್ಲಿ ಆ ಪರೀಕ್ಷೆಯನ್ನು ರದ್ದು ಮಾಡಿ, ನಂತರ ಮರು ನೇಮಕಾತಿ ಮಾಡಬೇಕೆಂದು ಹೇಳಿದಾಗ 2019ನೇ ಸಾಲಿನಲ್ಲಿ ಕೋವಿಡ್-19ರ ಸಮಸ್ಯೆಗಳು ಬಂದಾಗ ಆರ್ಥಿಕ ಇಲಾಖೆ ಯಾವುದೇ ಹೊಸ ನೇಮಕಾತಿಗಳನ್ನು ಮಾಡಬಾರದೆನ್ನುವಂತಹ ಆದೇಶಗಳ ಹಿನ್ನೆಲೆಯಲ್ಲಿ ನಾವು ನೇಮಕಾತಿ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಆದರೆ, ಈಗ ನಾನು ಸಚಿವನಾದ ನಂತರ ಇದರ ಕುರಿತಂತೆ ಪ್ರಕ್ರಿಯೆಗಳನ್ನು ಪ್ರಾರಂಭ ಮಾಡಿ, ನಮ್ಮ ಕೆಪಿಸಿಎಲ್‌ನಲ್ಲಿ ಎಷ್ಟು ಹುದ್ದೆಗಳನ್ನು ತುಂಬುವುದಕ್ಕೆ ಸಾಧ್ಯ ಇದೆ. ಈ ಎಲ್ಲವೂ ಕೂಡ ಯಂತ್ರೋಪಕರಣಗಳಾಗಿದ್ದರಿಂದ, ಮಾನವ ಸಂಪನ್ಮೂಲಗಳು ಎಷ್ಟು ಬೇಕು. ಅದಕ್ಕೆ ಎಷ್ಟು ಹುದ್ದೆಗಳನ್ನು ತುಂಬಬೇಕೆಂಬ ಹಿನ್ನೆಲೆಯಲ್ಲಿ ಒಂದು ಉಪ ಸಮಿತಿಯನ್ನು ರಚನೆ ಮಾಡಿದೆ. ಆ ಸಮಿತಿಯ ವರದಿಯನ್ನು ಕೊಟ್ಟು, ಎಷ್ಟು ಹುದ್ದೆಗಳನ್ನು ತುಂಬಬೇಕೆಂದು ಹೇಳಿದ್ದಾರೋ, ಆ ಹುದ್ದೆಗಳನ್ನು ತುಂಬುವುದಕ್ಕೆ ಬೇಕಾದಂತಹ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಇದಕ್ಕೆ ಉಪ ಸಮಿತಿಯ ವರದಿಯನ್ನು ಕಾಯುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಕ್ರೀಡಾಪಟುಗಳಿಗೆ ಮೀಸಲಾತಿ ಕೊಡಬೇಕೆಂಬ ಮಾತನ್ನು ಹೇಳಿದ್ದಾರೆ. ಅದು ಸರಿಯಾಗಿ ಇದೆ. ನಮ್ಮ ರಾಜ್ಯದ ಕ್ರೀಡಾಪಟುಗಳಿಗೆ ಈ ರೀತಿಯಾದಂತಹ ಅವಕಾಶಗಳು ಸಿಗಬೇಕು. ನಮ್ಮ ಇಲಾಖೆಯಲ್ಲಿ ಇದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಖಂಡಿತವಾಗಿಯೂ ನಾನು ಮಾಡಿಕೊಡುತ್ತೇನೆ.

**ಖ) ವಿಷಯ:- ಬೆಂಗಳೂರು ನಗರದಲ್ಲಿ ರಾಜ ಕಾಲುವೆ ಮೋರಿ ಪಕ್ಕದಲ್ಲಿರುವ ಮನೆಗಳ ನಿರ್ಮಾಣ ಕುರಿತು.**

\- - - - -

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಗೃಹ ಮಂಡಳಿ, ಸಿಐಟಿಬಿ ನಂತರ ಬಿಡಿಎ ಅನುಮೋದನೆಗೊಂಡಂತಹ ಬಡಾವಣೆಗಳು, ಸಹಕಾರ ಸಂಸ್ಥೆಗಳಿಂದ ಅಭಿವೃದ್ಧಿಪಡಿಸಿದ ಬಡಾವಣೆಗಳು ಜೊತೆಗೆ ರೆವಿನ್ಯೂ ನಿವೇಶನಗಳು ಹೀಗೆ ಹಲವಾರು ಲಕ್ಷ ಸಂಖ್ಯೆಗಳಲ್ಲಿ ನಿವೇಶನಗಳನ್ನು ಪಡೆದುಕೊಂಡು ಮನೆಗಳನ್ನು ನಿರ್ಮಿಸಿ ಅದಕ್ಕೆ ನಕ್ಷೆಯನ್ನು ಪಡೆದುಕೊಂಡು ಕಂದಾಯವನ್ನು ಪಾವತಿಸುತ್ತಾ ತಮ್ಮ ಆಸ್ತಿಗಳಿಗೆ ಖಾತೆಯನ್ನು ಮಾಡಿಕೊಂಡಿದ್ದಾರೆ. ಇವುಗಳಲ್ಲಿ ಸರಿಸುಮಾರು ಒಂದೂವರೆ ಲಕ್ಷಕ್ಕೂ ಹೆಚ್ಚು ಆಸ್ತಿಗಳು ಮೋರಿಗಳ ಪಕ್ಕದಲ್ಲಿ ಇರುತ್ತವೆ. ಇವರುಗಳಿಗೆ 2016ರ ತನಕ ಎರಡನೇ ಹಂತದ ಮೋರಿ, ಮೂರನೇ ಹಂತದ ಮೋರಿ (ರಾಜ ಕಾಲುವೆ) ಇವುಗಳ ಪಕ್ಕದಲ್ಲಿರುವವರಿಗೆ ಕ್ರಮವಾಗಿ 50 ಮೀಟರ್, 25 ಮೀಟರ್ ಮತ್ತು 15 ಮೀಟರ್ ಬಿಟ್ಟು ಮನೆಗಳನ್ನು ನಿರ್ಮಾಣ ಮಾಡಬೇಕೆಂಬ ಕಾನೂನು ರೂಪಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಇವರ ಆಸ್ತಿಗಳಿಗೆ ನಕ್ಷೆ ಮಂಜೂರಾತಿ ಮಾಡಿಕೊಡುವುದಿಲ್ಲ. ಬ್ಯಾಂಕ್‌ಗಳಲ್ಲಿ ಸಾಲವನ್ನು

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಕೊಡುವುದಿಲ್ಲ. ಆದರೆ, ಬಿ.ಬಿ.ಎಂ.ಪಿ ತೆರಿಗೆಯನ್ನು ಮಾತ್ರ ಪಡೆಯುತ್ತಿರುವ ವಿಚಾರ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಈ ಕಾರಣದಿಂದ ಇವರ ನಿವೇಶನ ಮೌಲ್ಯ ಸಂಪೂರ್ಣವಾಗಿ ಕುಸಿದಿದ್ದು, ಕೊಳ್ಳುವವರೇ ಇಲ್ಲವಾಗಿದ್ದಾರೆ. 2016ರಲ್ಲಿ ಹಸಿರು ಪೀಠದ ಆದೇಶ ಬರುತ್ತದೆ ಎಂದು ಯಾರೂ ಕನಸು ಕಂಡಿರಲಿಲ್ಲ. ಆ ಕಾರಣ ಇದಕ್ಕೆ ಕೇವಲ ನಿವೇಶನದಾರರನ್ನು ಹೊಣೆ ಮಾಡುವುದು ಸರಿಯಲ್ಲ. ಕೂಡಲೇ ರಾಜ್ಯ ಸರ್ಕಾರ ಹಸಿರು ಪೀಠಕ್ಕೆ ಅರ್ಜಿಯನ್ನು ಸಲ್ಲಿಸಿ, ಈ ನಿವೇಶನದಾರರ ಸಮಸ್ಯೆಗಳನ್ನು ಪರಿಹರಿಸಬೇಕು. ನಿವೇಶನದಾರರಿಂದ ಅಫಿಡವಿಟ್ ಗಳನ್ನು ಪಡೆದುಕೊಂಡು ನಕ್ಷೆ ಮಂಜೂರಾತಿ ಮಾಡಿ, ಮನೆ ಕಟ್ಟಿಕೊಳ್ಳಲು ಅನುಮತಿ ನೀಡಬೇಕು. ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಬಿ.ಬಿ.ಎಂ.ಪಿ.ಗೆ ಅಧಿಕಾರವಿರುವಂತೆ ಪತ್ರಗಳನ್ನು ಪಡೆದುಕೊಂಡು ಅತಂತ್ರ ಸ್ಥಿತಿಯಲ್ಲಿರುವ ಇವರ ಗಂಭೀರ ಪರಿಸ್ಥಿತಿ ಬಗ್ಗೆ ಪರಿಹಾರೋಪಾಯಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಎ) ವಿಷಯ:- ದೇಶದಾದ್ಯಂತ ಕೆಳದಿ ಅರಸರ ಧಾರ್ಮಿಕ ಕೊಡುಗೆಯನ್ನು ದಾಖಲಿಸಲು ಹಾಗೂ ಆ ಸ್ಥಳಗಳನ್ನು ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ.**

\- - - - - - -

**ಡಾ|| ತೇಜಸ್ವಿನಿಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕನ್ನಡ ನಾಡಿನಲ್ಲಿ 1499 ರಲ್ಲಿ ಸ್ಥಾಪನೆಯಾದ "ಕೆಳದಿ ಸಾಮ್ರಾಜ್ಯವು 19 ಅರಸ-ಅರಸಿಯರ (ರಾಜ-ರಾಣಿ) ಮೂಲಕ 263 ವರ್ಷಗಳ ಕಾಲ ಆಳ್ವಿಕೆ ಮಾಡಿ 1763 ರಲ್ಲಿ ಅವನತಿ ಹೊಂದಿರುತ್ತಾರೆ. ಈ ಅವಧಿಯಲ್ಲಿ ಕೆಳದಿ, ಇಕ್ಕೇರಿ, ಬಿದನೂರು ಹಾಗೂ ಭುವನಗಿರಿ ಅಥವಾ ಕವಲೆದುರ್ಗ ಎಂಬ 4 ರಾಜಧಾನಿಗಳ ಮೂಲಕ ರಾಜ್ಯಭಾರ ನಡೆಸಿದ್ದರು. ಕೆಳದಿ ರಾಜ್ಯ ಸ್ಥಾಪನ ಅರಸು ಚೌಡಪ್ಪಗೌಡ ನಾಯಕರಿಂದ 13ನೇ ರಾಣಿ ಚೆನ್ನಮ್ಮಾಜಿಯ ಸೇರಿ ಕೊನೆಯ ರಾಣಿ ವೀರಮ್ಮಾಜಿಯವರೆಗೂ ಆಡಳಿತದಲ್ಲಿ ಎಲ್ಲರೂ ಧರ್ಮನಿಷ್ಠರೂ, ಜನಪರ ಸೇವಾನಿಷ್ಠೆಯನ್ನು ಮೆರೆದಿದ್ದಾರೆ. ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆ ಹೀಗೆ ಅದ್ವಿತೀಯವಾದ ದಾನ ದತ್ತಿ ಪ್ರೋತ್ಸಾಹ ನೀಡಿ ಗತವೈಭವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮರೆದಿದ್ದಾರೆ. 3ನೇಯ ಅರಸು ದೊಡ್ಡಸಂಕಣನಾಯಕ ರಾಜ್ಯಭಾರ ತ್ಯಜಿಸಿ ಭರತ ಖಂಡದಾದ್ಯಂತ ಕೈಗೊಂಡ ತೀರ್ಥಯಾತ್ರೆ ಚರಿತ್ರಾರ್ಹವಾಗಿದೆ. “ಕೆಳದಿ” ನೃಪವಿಜಯ ಹಾಗೂ “ಶಿವತತ್ವ ರತ್ನಾಕರ” ಕೃತಿಗಳು ಅಮೂಲ್ಯ ದಾಖಲೆ ಒದಗಿಸಿವೆ. ಈತನು ಶಿವಗಂಗೆ, ಕಂಚಿ, ಚಿದಂಬರ, ಕುಂಭಕೋಣ, ರಾಮೇಶ್ವರ ಸಂದರ್ಶಿಸಿ ಉತ್ತರದ ಕಡೆಗೆ ಯಾತ್ರೆ ಕೈಗೊಳ್ಳುವಾಗ ವಿಜಯಪುರ, ಹೈದರಾಬಾದ್ (ಭಾಗ್ಯನಗರ) ಮೂಲಕ ದೆಹಲಿಗೆ ಹೋಗಿ 1566-1605 ರಲ್ಲಿ ಅಕ್ಬರ್ ಆಡಳಿತ ಕಂಡವರು. ಅಕ್ಬರ್ ಆಸ್ಥಾನದ ಅಂಕುಶ ಖಾನವನ್ನು ಖಡ್ಗ ಯುದ್ಧದ ಕೌಶಲ್ಯದಿಂದ ಸೋಲಿಸಿ ಅಕ್ಬರ್‌ನ ಮೆಚ್ಚುಗೆಗೆ ಪಾತ್ರರಾಗಿ ಅವರ ವಶದಲ್ಲಿದ್ದ ಕಾಶಿ ವಿಶ್ವನಾಥ ದೇವರ ಪೂಜೆಗೆ ಮತ್ತು ಉತ್ತರದಲ್ಲಿ ಜಂಗಮ ಮಠಗಳ ಸ್ಥಾಪನೆಗೆ ಅನುಮತಿ ಪಡೆದುಕೊಳ್ಳುತ್ತಾರೆ. ಹೀಗೆ ದೊಡ್ಡ ಸಂಕಣ್ಣನಾಯಕ ಕಾಶಿಯಲ್ಲಿ ಭಗ್ನ ವಿಶ್ವನಾಥ ದೇವರ ಪೂಜೆ ಸಲ್ಲಿಸಿ ಅಲ್ಲಿದ್ದ ಮೂಲ ವಿಶ್ವನಾಥನ ಲಿಂಗ ಮತ್ತು ಅದರ ಮೇಲೂ ಭಾಗದ ಗೋಲಕವನ್ನು ಉಸ್ತುವಾರಿ ಮುಸ್ಲಿಂ ಅಧಿಕಾರಿಯಿಂದ ಪಡೆದುಕೊಂಡದನ್ನು ಲಿಂಗಣ್ಣ ಕವಿ ಬರೆದ “ಕೆಳದಿ ನೃಪ ವಿಜಯ” ದಾಖಲಿಸಿದೆ. ತೀರ್ಥಯಾತ್ರೆ ವೇಳೆ “ಹಂಪಿ” ಮೊಗಲರ ದಾಳಿಯಿಂದ ಹೊತ್ತಿ ಉರಿಯುತ್ತಿದ್ದನ್ನು ಈತ ಕಂಡುದುದಾಗಿ ದಾಖಲಾಗಿದೆ. ದೊಡ್ಡ ಸಂಕಣ್ಣನಾಯಕರ ಭಕ್ತಿ ನಿಷ್ಠೆಯಿಂದ ಪ್ರಭಾವಿತನಾದ ಅಕ್ಬರ್ ಬಳಿ ಅಧಿಕಾರಿಯಾಗಿದ್ದ ಹಿಂದೂ ತೋದರ ಮಲ್ಲನು 15 ವರ್ಷಗಳ ನಂತರ ಕ್ರಿ.ಶ.1585 ರಲ್ಲಿ ಇತ್ತೀಚೆಗೆ ಪ್ರಧಾನಿ ಮೋದಿಜಿ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ ಯೋಗಿಯವರಿಂದ ಜೀರ್ಣೋದ್ಧಾರವಾಗುವ ಮುನ್ನ ಇದ್ದ ಹಳೆಯ ಕಾಶಿ ವಿಶ್ವನಾಥ ದೇವಾಲಯವನ್ನು ಪುನರ್ ನಿರ್ಮಾಣ ಮಾಡಿದ್ದನು. ಹಾಗೆಯೇ ಕಾಶಿ ದೊರೆಯನ್ನು ಮೆಚ್ಚಿಸಿ ಆಗಿನ ಹರಿ ಕೇಶವಾನಂದ ಕಾನನ ಎಂಬಲ್ಲಿ ಮಠವೊಂದನ್ನು ಕಟ್ಟಿಸಿದನೆಂಬ ಐತಿಹ್ಯವಿದೆ. ಮುಸ್ಲಿಂ ದೊರೆ ವಶಕ್ಕೆ ಹೋಗಿದ್ದ ಈ ಮಠವನ್ನು ಕಾಶಿ ಯಾತ್ರೆ ವೇಳೆ ಮುಸಲ್ಮಾನರಿಂದ ಬಿಡಿಸಿಕೊಂಡು ಅಲ್ಲಿ ಜಂಗಮವಾಡಿ ಎಂದು ಹೆದರಿಸಿ ಅಲ್ಲಿ ಪಂಚ ಮಠ ಕಟ್ಟಿ ಶಿವ ಜಂಗಮರಿಗೆ ಅರ್ಪಿಸಿದ್ದರು. ಅಲ್ಲದೆ ಇದೇ ವೇಳೆ ಕಾಶಿಯಲ್ಲಿದ್ದ ಕಪಿಲಾಧಾರಾ ಮಾನಸ ಸರೋವರ, ಗಂಧರ್ವಸಾಗರ, ಭೀಮ ಚಂಡಿಕೆ, ವೃಷಭಧ್ವಜೇಶ್ವರ ದೇವಾಲಯಗಳ ಜೀರ್ಣೋದ್ಧಾರವನ್ನು ಮಗ ವೆಂಕಟಪ್ಪನಾಯಕನ ಹೆಸರಿನಲ್ಲಿ ಜೀರ್ಣೋದ್ಧಾರ ಮಾಡಿಸಿದನು. ಈ ಬಗ್ಗೆ ಈಗಲೂ ಕಪಿಲ ತೀರ್ಥದ ಮೆಟ್ಟಿಲು ಮೇಲಿರುವ ಶಾಸನಗಳು ಇತಿಹಾಸ ತಿಳಿಸುತ್ತವೆ. ದೆಹಲಿಯ ಕೆಂಪುಕೋಟೆ ಮುಂದೆ ಜಂಗಮ ಮಠ ಸ್ಥಾಪನೆಯಾಗಿದ್ದರ ಬಗ್ಗೆ ಡಾ|| ಚಿದಾನಂದ ಮೂರ್ತಿಯವರ ಸಂಶೋಧನೆ ದೃಢಪಡಿಸಿದೆ. ಇಷ್ಟೆ ಅಲ್ಲದೆ ಹಿಮಾಲಯದ ಪ್ರಯಾಗಕ್ಕೆ ಹೋಗಿ ಅಲ್ಲೊಂದು ಮಠ ನಿರ್ಮಿಸಿದ್ದಾನೆ. ಆ ನಂತರ ನೇಪಾಳಕ್ಕೆ ತೆರಳಿ ಕಠ್ಮಂಡು ಬಳಿಯ ಭಕ್ತಪುರ ಎಂಬಲ್ಲಿ ಮಠ ಸ್ಥಾಪಿಸಲಾಗಿದೆ. ಮರದಿಂದ ನಿರ್ಮಿತವಾದ ಸುಂದರ ಮಠ ಇದಾಗಿದೆ. ಈ ಮಠದ ಆವರಣದಲ್ಲಿನ ದೇವಾಲಯದಲ್ಲಿ ಕಾಶಿಯಿಂದ ತಂದ ಮೂಲ ವಿಶ್ವನಾಥ ದೇವರ ಶಿವಲಿಂಗವನ್ನು ಸ್ಥಾಪಿಸಿದ್ದಾನೆ. ಈ ಭಾಗದ ಜನ ಹೆಮ್ಮೆಯಿಂದ ಕಾಶಿಯ ಮೂಲ ವಿಶ್ವನಾಥನ ಲಿಂಗ ತಮ್ಮಲ್ಲಿ ಇದೆ ಎಂದು ದಕ್ಷಿಣದ ಜಂಗಮನೊಬ್ಬ ತಂದು ಸ್ಥಾಪಿಸಿದನೆಂದು ಇದಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉತ್ತರ ಕಾಶಿ ಎಂದು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದಾರೆ. ನಂತರ ಸಂಕಣ್ಣ ನಾಯಕರು ನೇಪಾಳದಿಂದ ಕೇದಾರ, ಹರಿದ್ವಾರ, ಕಾಶ್ಮೀರ, ಕುರುಕ್ಷೇತ್ರ, ಹಂಪಿಗಳ ಮೂಲಕ ಕೆಳದಿಗೆ ವಾಪಸ್ಸು ಬರುತ್ತಾನೆ.

ದೊಡ್ಡ ಸಂಕಣ್ಣ ನಾಯಕರು ಕೇದಾರದಲ್ಲಿಯೂ ಜಂಗಮ ಮಠ ಸ್ಥಾಪಿಸಿದ್ದಾರೆ. ಧಾರ್ಮಿಕ ಕ್ಷೇತ್ರಕ್ಕೆ ಕೆಳದಿ ಅರಸರು ನೀಡಿರುವ ಮಹಾನ್ ಕೊಡುಗೆಯನ್ನು ದಾಖಲಿಸುವ ಇತಿಹಾಸ ಸಾಹಿತ್ಯ ಬರಬೇಕಲ್ಲದೆ, ಈ ಎಲ್ಲ ತಾಣಗಳನ್ನು ಪ್ರವಾಸೋದ್ಯಮ ಮತ್ತು ಭಕ್ತಿ ತಾಣಗಳಾಗಿ ಅಭಿವೃದ್ಧಿಪಡಿಸುವ ಮೂಲಕ ಕೆಳದಿ ಅರಸರಿಗೆ ಕೃತಜ್ಞತೆ ತೋರಬೇಕಾಗಿದೆ. ಈ ಬಗ್ಗೆ ಸರ್ಕಾರ ತುರ್ತಾಗಿ ಗಮನಹರಿಸಬೇಕೆಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ, ಸರ್ಕಾರವನ್ನು ಅಗ್ರಹಪಡಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಗೌಡರವರು ಕೇಳಿದ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಪ್ರವಾಸೋದ್ಯಮ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಏ) ವಿಷಯ:- ಕುಣಬಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ.**

\- - - - - -

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯ ದಟ್ಟ ಕಾಡುಗಳಲ್ಲಿ ವಾಸಿಸುವ ಕುಣಬಿ ಜನಾಂಗ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದವಾಗಿರುತ್ತಾರೆ. ತನ್ನದೇ ಆದ ಸಂಸ್ಕೃತಿ ಹೊಂದಿದವರಾಗಿದ್ದು, ಬುಡಕಟ್ಟು ಸಂಸ್ಕೃತಿಯ ಎಲ್ಲಾ ಗುಣ ಲಕ್ಷಣಗಳನ್ನು ಹೊಂದಿರುತ್ತಾರೆ. ಕಳೆದ ಹಲವಾರು ವರ್ಷಗಳಿಂದ ಕುಣಬಿ ಸಮಾಜ ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಒತ್ತಾಯಿಸುತ್ತಾ ಬಂದರೂ ಯಾವುದೇ ಪ್ರಯೋಜನವಾಗಿಲ್ಲ. ಕುಣಬಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು. ನಶಿಸುತ್ತಿರುವ ಬುಡಕಟ್ಟು ಸಂಸ್ಕೃತಿ ಆಹಾರ ವಿಚಾರ ಕಾಡಿನ ಕೀರು ಉತ್ಪನ್ನ ಕುಂಬ್ರಿ ಜಮೀನು ಅಕ್ರಮ ಸಕ್ರಮ ಮುಂತಾದವುಗಳಿಗೆ ಪರಿಹಾರ ಕಂಡುಕೊಳ್ಳಲು ಕುಣಬಿ ಜನರು ಮೇಲಿಂದ ಮೇಲೆ ಪ್ರತಿಭಟನೆ ಮಾಡುತ್ತಿರುತ್ತಾರೆ. ಆದ್ದರಿಂದ, ಈ ಜನಾಂಗದವರನ್ನು ಆದಷ್ಟು ಹೆಚ್ಚಿನ ಪ್ರಾಶಸ್ತ್ಯ ಮೇರೆಗೆ ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸಾರ್ವಜನಿಕರ ಹಿತದೃಷ್ಟಿಯಿಂದ ಈ ವಿಷಯ ಶೂನ್ಯವೇಳೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣರವರು ಕೇಳಿದ ಶೂನ್ಯವೇಳೆಯ ಪ್ರಶ್ನೆಗೆ ಉತ್ತರವನ್ನು ನಂತರ ಒದಗಿಸಲಾಗುವುದು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(1249) ಎಸ್‌ಪಿಆರ್/ವಿಕೆ 12:20 22/12/2021 (ಸಭಾಪತಿಯವರ ಉಪಸ್ಥಿತಿ)

**ಐ) ವಿಷಯ:- ಕೋಲಾರ ಜಿಲ್ಲೆ ಬಂಗಾರಪೇಟೆ ಕಾಮಸಂದ್ರ ಬಳಿ ಯರಗೋಳ್ ಅಣೆಕಟ್ಟು ಇನ್ನೂ ಉದ್ಘಾಟನೆಯಾಗದಿರುವ ಬಗ್ಗೆ**

\- - - - - -

**ಶ್ರೀ ಗೋವಿಂದರಾಜು(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆ, ಬಂಗಾರಪೇಟೆಯ ಕಾಮಸಂದ್ರ ಬಳಿ ಸುಮಾರು 240 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪೂರ್ಣಗೊಂಡಿರುವ ಯರಗೋಳ್ ಅಣೆಕಟ್ಟು ಇದುವರೆಗೂ ಉದ್ಘಾಟನೆಗೆ ಸಮಯವನ್ನು ನಿಗದಿಗೊಳಿಸಿಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹಲವಾರು ಕಾರಣಗಳನ್ನು ತಿಳಿಸುತ್ತಿದ್ದಾರೆ. ಗುತ್ತಿಗೆದಾರರ ತಾಂತ್ರಿಕ ನೆಪವೊಡ್ಡಿ ಅಣೆಕಟ್ಟನ್ನು ಸ್ಥಳೀಯ ಆಡಳಿತಕ್ಕೆ ಹಸ್ತಾಂತರ ಮಾಡುತ್ತಿಲ್ಲ. ಗುತ್ತಿಗೆದಾರರಿಗೆ ಸರ್ಕಾರ ಪೂರ್ಣ ಹಣ ಸಂದಾಯ ಮಾಡದಿರುವುದೇ ಇದಕ್ಕೆ ಕಾರಣ ಎನ್ನಲಾಗಿದೆ. ಇದರಿಂದಾಗಿ ಪೂರ್ಣಗೊಂಡಿರುವ ಅಣೆಕಟ್ಟುನಲ್ಲಿನ ನೀರು ಉಪಯೋಗವಿಲ್ಲದಂತಾಗಿದೆ.

ಸತತ ಬರಗಾಲಕ್ಕೆ ತುತ್ತಾಗಿದ್ದ ಕೋಲಾರ ಜಿಲ್ಲೆಯ ಜನತೆಗೆ ಕುಡಿಯುವ ನೀರನ್ನು ಒದಗಿಸುವ ನಿಟ್ಟಿನಲ್ಲಿ 2007 ರಲ್ಲಿ ಮುಖ್ಯಮಂತ್ರಿಯಾಗಿದ್ದ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಯವರು ಅಣೆಕಟ್ಟು ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. ಜಿಲ್ಲೆಯ ಗಡಿ ಭಾಗದಲ್ಲಿರುವ ಯರಗೋಳ್ ಬಳಿ ಬೆಟ್ಟಗುಡ್ಡಗಳಲ್ಲಿನ ನೀರು ಹೊರ ರಾಜ್ಯಕ್ಕೆ ಹರಿದು ಹೋಗುತ್ತಿದ್ದನ್ನು ತಡೆದು, ಅಲ್ಲಿ ಅಣೆಕಟ್ಟು ನಿರ್ಮಿಸಿ ಅಲ್ಲಿ ಸಂಗ್ರಹಿಸಿದ ನೀರನ್ನು ಕೋಲಾರ, ಬಂಗಾರಪೇಟೆ ಮತ್ತು ಮಾಲೂರು ನಗರ ಪ್ರದೇಶಗಳು ಸೇರಿದಂತೆ ಸುತ್ತಮುತ್ತಲಿನ 45 ಗ್ರಾಮಗಳಿಗೆ ಒದಗಿಸುವುದೇ ಈ ಯೋಜನೆಯ ಉದ್ದೇಶವಾಗಿದೆ. ಅಣೆಕಟ್ಟು ಸಂಪೂರ್ಣ ತುಂಬಲು ಇನ್ನೂ 14 ಅಡಿ ಬಾಕಿ ಇದ್ದು, ಈ 14 ಅಡಿ ತುಂಬುವಷ್ಟು ಕಾಮಸಂದ್ರದ ಭೀಮಗಾನಹಳ್ಳಿ ಬಳಿ ನೀರಿನ ಲಭ್ಯತೆಯಿದ್ದು, ಅದನ್ನು ಸಮರ್ಪಕವಾಗಿ ಬಳಸಿಕೊಳ್ಳದೇ ಇರುವುದರಿಂದ ಸುಮಾರು 0.15 ಟಿ.ಎಂ.ಸಿ. ನೀರು ವ್ಯರ್ಥವಾಗಿ ತಮಿಳುನಾಡಿಗೆ ಹರಿದುಹೋಗುತ್ತಿದೆ.

ಆದ್ದರಿಂದ ಭೀಮಗಾನಹಳ್ಳಿ ಬಳಿ ತಮಿಳುನಾಡಿಗೆ ವ್ಯರ್ಥವಾಗಿ ಹರಿದು ಹೋಗುತ್ತಿರುವ ನೀರನ್ನು ಯರಗೋಳ್ ಜಲಾಶಯಕ್ಕೆ ಹರಿಯುವಂತೆ ಮಾಡುವುದರ ಜೊತೆಗೆ ಗುತ್ತಿಗೆದಾರರಿಗೆ ಪೂರ್ಣ ಹಣ ಪಾವತಿ ಮಾಡಿ, ಬಾಕಿಯಿರುವ ಮೋಟಾರುಗಳನ್ನು ಅಳವಡಿಸಿ, ಕುಡಿಯುವ ನೀರನ್ನು ಕೋಲಾರ ಜಿಲ್ಲೆಯ ಜನತೆಗೆ ಕೊಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಜಲಸಂಪನ್ಮೂಲ ಸಚಿವರಿಂದ ಉತ್ತರವನ್ನು ತರಿಸಿ ಕೊಡಲಾಗುವುದು.

**ವಿಷಯ; (ಒ) ಒಳ ಮೀಸಲಾತಿಯನ್ನು ಜಾರಿಗೊಳಿಸಲು ಶ್ರೀ ಎ.ಜೆ.ಸದಾಶಿವ ಆಯೋಗ ವರದಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ.**

\- - - - - - -

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕಳೆದ ಮೂರು ವರ್ಷಗಳಿಂದಲೂ ಒಳ ಮೀಸಲಾತಿಯನ್ನು ಜಾರಿಗೊಳಿಸುವಂತೆ ಒತ್ತಾಯ ಕೇಳಿಬರುತ್ತಿರುವುದು ಹೊಸದೇನಲ್ಲ. ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮಾದಿಗರ ಬಹುದಿನಗಳ ಬೇಡಿಕೆಯಾದ ಎ.ಜೆ.ಸದಾಶಿವ ಆಯೋಗದ ವರದಿಯನ್ನು ಅನುಮೋದಿಸಿ ಕೇಂದ್ರಕ್ಕೆ ಶಿಫಾರಸ್ಸು ಮಾಡುವುದಾಗಿ ಹೇಳಿದ್ದವರೇ ಇಂದು ಅಧಿಕಾರಕ್ಕೆ ಬಂದ ನಂತರದಲ್ಲಿ ನಿರ್ಲಕ್ಷ್ಯ ವಹಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಉಚ್ಛ ನ್ಯಾಯಾಲಯವು ಒಳ ಮೀಸಲಾತಿ ನೀಡುವ ಹಕ್ಕನ್ನು ರಾಜ್ಯ ಸರ್ಕಾರಕ್ಕೆ ನೀಡಿದ್ದರೂ ಆಯೋಗದ ವರದಿಯನ್ನು ನೆನೆಗುದಿಗೆ ತಳ್ಳಿರುತ್ತಾರೆ. ಶೋಷಣೆಗೆ ಒಳಗಾಗುತ್ತಿರುವ ಈ ಸಮುದಾಯಕ್ಕೆ ಶಕ್ತಿ ಬರಬೇಕಾದರೆ, ಒಳ ಮೀಸಲಾತಿ ಆಗಬೇಕೆನ್ನುವುದು ಎಲ್ಲರ ಒಕ್ಕೊರಲ ಅಭಿಪ್ರಾಯವಾಗಿರುತ್ತದೆ. ದಯವಿಟ್ಟು ಮಾಡಿ, ಕೂಡಲೇ ರಾಜ್ಯ ಸರ್ಕಾರ ಸದಾಶಿವ ಆಯೋಗದ ವರದಿಯನ್ನು ಅನುಮೋದಿಸಿ ಕೇಂದ್ರಕ್ಕೆ ಶಿಫಾರಸ್ಸು ಮಾಡುವ ಮೂಲಕ ತನ್ನ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕೆನ್ನುವ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಈಗಾಗಲೇ ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನಾ ಹಂತದಲ್ಲಿದೆ. ಸದಸ್ಯರಿಗೆ ಸಮಗ್ರವಾದ ಲಿಖಿತ ಉತ್ತರವನ್ನು ನಾನು ನಂತರ ಒದಗಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಒ) ವಿಷಯ:- ಕುಡಿಯುವ ನೀರಿನಲ್ಲಿ ಯುರೇನಿಯಂ ಸಾಂದ್ರತೆ ಹೆಚ್ಚಾಗಿರುವ ಬಗ್ಗೆ.**

\- - - - - - -

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ - ಐ.ಐ.ಎಸ್‌ಸಿ. ಸಂಸ್ಥೆಯು ಇತರೆ ಸಂಸ್ಥೆಗಳೊಂದಿಗೆ ಇತ್ತೀಚೆಗೆ ನಡೆಸಿದ ಸಂಶೋಧನೆ ಅಧ್ಯಯನದಲ್ಲಿ ರಾಜ್ಯದ 73 ಗ್ರಾಮಗಳಲ್ಲಿ ಅಂತರ್ಜಲದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಮಾನವ ಹಾನಿಕರವಾದ ಯುರೇನಿಯಂ ಸಾಂದ್ರತೆ ಶೇಕಡಾ 78 ಕ್ಕಿಂತ ಹೆಚ್ಚಾಗಿರುವುದು ಕಂಡು ಬಂದಿದೆ. ವಿಶ್ವ ಆರೋಗ್ಯ ಸಂಸ್ಥೆಯು ಕುಡಿಯುವ ನೀರಿನಲ್ಲಿ ಪ್ರತಿ ಲೀಟರ್‌ಗೆ 30 ಮೈಕ್ರೋ ಗ್ರಾಂ ಇರಬೇಕೆಂದು ಮತ್ತು ಭಾರತೀಯ ಅಣು ಶಕ್ತಿ ನಿಯಂತ್ರಣ ಮಂಡಳಿ ಪ್ರತಿ ಲೀಟರ್ ಕುಡಿಯುವ ನೀರಿನಲ್ಲಿ 60 ಮೈಕ್ರೋ ಗ್ರಾಂ ಯುರೇನಿಯಂ ಸಾಂದ್ರತೆ ಇರಬೇಕೆಂದು ನಿಗದಿಪಡಿಸಿವೆ. ಮುಂದುವರೆದು, ಈ ಸಂಶೋಧನಾ ಅಧ್ಯಯನದಲ್ಲಿ ರಾಜ್ಯದ 57 ಗ್ರಾಮಗಳ ವಿವಿಧ ಸ್ಥಳಗಳಲ್ಲಿ ಪ್ರತಿ ಲೀಟರ್ ಕುಡಿಯುವ ನೀರಿನಲ್ಲಿ 30 ಮೈಕ್ರೋ ಗ್ರಾಂ ಮತ್ತು 48 ಗ್ರಾಮಗಳ ವಿವಿಧ ಸ್ಥಳಗಳಲ್ಲಿ ಪ್ರತಿ ಲೀಟರ್ ಕುಡಿಯುವ ನೀರಿನಲ್ಲಿ ಯುರೇನಿಯಂ ಸಾಂದ್ರತೆ 60 ಮೈಕ್ರೋ ಗ್ರಾಂಕ್ಕಿಂತ ಹೆಚ್ಚು ಇರುತ್ತದೆ. ಈ ಸಂಶೋಧನೆ ಅಧ್ಯಯನದಲ್ಲಿ ತುಮಕೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಯುರೇನಿಯಂ ಸಾಂದ್ರತೆ ಪ್ರತಿ ಲೀಟರ್‌ನಲ್ಲಿ 1,000 ಮೈಕ್ರೋ ಗ್ರಾಂ ಇರುವುದು ವ್ಯಕ್ತವಾಗಿದೆ. ಇಂತಹ ಅತಿ ಸಾಂದ್ರತೆಯುಳ್ಳ ಯುರೇನಿಯಂ ಇರುವ ನೀರಿನ ಸೇವನೆಯಿಂದ ತೀವ್ರತರವಾದ ತಲೆನೋವು, ಜ್ವರ, ವಾಂತಿ ಮುಂತಾದವುಗಳು ಪ್ರಾರಂಭದಲ್ಲಿ ಕಂಡುಬಂದು, ತದನಂತರ, ಮಾಹಮಾರಿ ರೋಗವಾದ ಕ್ಯಾನ್ಸರ್ ರೋಗವು, ಶ್ವಾಸಕೋಶ, ಮೂಳೆ ಮತ್ತು ಪಿತ್ತ ಜನಕಾಂಗದಲ್ಲಿ ಕಾಣಿಸಿಕೊಳ್ಳುತ್ತದೆ. ಇಂತಹ ವಿಷಮ ಪರಿಸ್ಥಿತಿಯನ್ನು ಎದುರಿಸುತ್ತಿರುವ ಗ್ರಾಮಗಳಲ್ಲಿ ಮತ್ತು ಜಿಲ್ಲೆಗಳಲ್ಲಿನ ಸಮಸ್ಯೆಯನ್ನು ಬಗೆಹರಿಸಲು, ಶುದ್ಧ ಕುಡಿಯುವ ನೀರು ಪೂರೈಸಲು ಮತ್ತು ಜನರ ಆರೋಗ್ಯ ತಪಾಸಣೆ ನಡೆಸಿ, ಅವರಿಗೆ ಅಗತ್ಯವಿರುವ ಚಿಕಿತ್ಸೆಯನ್ನು ಮುಫತ್ತಾಗಿ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಸರ್ಕಾರ ಸದನಕ್ಕೆ ವಿವರಿಸಬೇಕೆಂದು ಒತಾಯಿಸುತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಿಂದ ಉತ್ತರವನ್ನು ತರಿಸಿ ಕೊಡಲಾಗುವುದು.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ**

**ವಿಷಯ:- ಬಿ.ಬಿ.ಎಂ.ಪಿ.ಯ ರಾಜಕಾಲುವೆ, ರಸ್ತೆ, ಮೂಲಭೂತ ಸೌಕರ್ಯ, ಯೋಜನೆ, ಘನತ್ಯಾಜ್ಯ ನಿರ್ವಹಣೆ ವಿಭಾಗಗಳಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ.**

\- - - - - - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 20/12/2021 ರಂದು ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಶೂನ್ಯ ವೇಳೆಯ ಪ್ರಸ್ತಾವನೆಯೊಂದನ್ನು ಸಲ್ಲಿಸಿದ್ದೆನು.

**ಸಭಾಪತಿಯವರು:-** ಪ್ರಾಯಶಃ ನೀವು ತಡವಾಗಿ ಸಲ್ಲಿಸಿದ್ದೀರಿ. ಇವತ್ತಿನ ದಿವಸ ನಾನು 14 ಪ್ರಸ್ತಾವನೆಗಳನ್ನು ತಗೆದುಕೊಂಡಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಬೇಗನೇ ಸಲ್ಲಿಸಿದ್ದೇನೆ.

**ಸಭಾಪತಿಯವರು:-** ಆಯಿತು; ನಿಮ್ಮ ಪ್ರಸ್ತಾವನೆಯನ್ನು ನಾಳೆಯ ದಿನ ತೆಗೆದುಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿನ ಬಹಳ ಮಹತ್ವದ ವಿಚಾರದ ಬಗ್ಗೆ ಶ್ರೀ ವಿಜಯ ಸಿಂಗ್ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ, ಕಂದಾಯ ಮಂತ್ರಿಗಳಿಂದ ಉತ್ತರವನ್ನು ಬಯಸಿದ್ದರು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾವನೆಯನ್ನು ನಿಮ್ಮ ಕಛೇರಿಗೆ ಸಲ್ಲಿಸಿದ್ದೇನೆ. ದಯವಿಟ್ಟು ಅವಕಾಶವನ್ನು ನೀಡಿ.

**ಸಭಾಪತಿಯವರು:-** ನಿಮ್ಮ ಪ್ರಸ್ತಾವನೆಯನ್ನು ನಾಳೆಯ ದಿನ ತೆಗೆದುಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ನಾಳೆಯ ದಿನ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುವುದು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಸರಿಯಾದ ಸಮಯಕ್ಕೆ ಪ್ರಸ್ತಾವನೆಯನ್ನು ನೀಡಿದ್ದೇನೆ; ಹೀಗಾಗಿ ದಯಮಾಡಿ, ಅವಕಾಶವನ್ನು ನೀಡಿ.

**ಸಭಾಪತಿಯವರು:-** ಇವತ್ತಿನ ದಿವಸ ಈಗಾಗಲೇ 14 ಪ್ರಸ್ತಾವನೆಗಳನ್ನು ತೆಗೆದುಕೊಳ್ಳಲಾಗಿದೆ. ಹೀಗಾಗಿ ನಾಳೆಯ ದಿನ ನಿಮಗೆ ಅವಕಾಶವನ್ನು ನೀಡಲಾಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಅದು ಬಹಳ ಮಹತ್ವದ ವಿಚಾರವಾಗಿರುವುದರಿಂದ ನಾಳೆಯ ದಿನ ಅವಕಾಶವನ್ನು ನೀಡಿ.

**ಸಭಾಪತಿಯವರು:-** ನಾಳೆಯ ದಿನ ನಿಮಗೆ ಅವಕಾಶವನ್ನು ನೀಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 5. ಪ್ರಕಟಣೆಗಳು

**ಸಭಾಪತಿಯವರು:-** ಎರಡು ಪ್ರಕಟಣೆಗಳಿವೆ.

ಅ) ಇಂದು ಮಧ್ಯಾಹ್ನ 3:00 ಗಂಟೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂಬಾಗಿಲಿನ ಮೆಟ್ಟಿಲುಗಳ ಮುಂದೆ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳ ಗ್ರೂಪ್ ಫೋಟೋ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಸದರಿ ಕಾರ್ಯಕ್ರಮದಲ್ಲಿ ಎಲ್ಲಾ ಮಾನ್ಯ ಶಾಸಕರುಗಳು ಪಾಲ್ಗೊಳ್ಳಬೇಕೆಂದು ಕೋರಲಾಗಿದೆ.

ಈ ದಿನ ಮಧ್ಯಾಹ್ನ 3:00 ಗಂಟೆಗೆ ವಿರೋಧ ಪಕ್ಷದ ನಾಯಕರು, ಸಭಾನಾಯಕರು ಎಲ್ಲಾ ಸದಸ್ಯರುಗಳಿಗೆ ಕಾರ್ಯಕ್ರಮಕ್ಕೆ ಬರಲು ತಿಳಿಸಿ. ಈ ಕಾರ್ಯಕ್ರಮವು ಪ್ರತಿಬಾರಿಯೂ ಸಹ ಇರುತ್ತದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಯಾವ ಮೆಟ್ಟಿಲುಗಳ ಬಳಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ? ಏಕೆಂದರೆ ಸುವರ್ಣ ವಿಧಾನಸೌಧ 4 ಕಡೆ ಮೆಟ್ಟಿಲುಗಳಿವೆ.

**ಸಭಾಪತಿಯವರು:-** ನಾನು ಈಗಾಗಲೇ ಉತ್ತರ ಬಾಗಿಲು ಎಂಬುದಾಗಿ ತಿಳಿಸಿದ್ದೇನೆ.

ಆ) ಕಾಮನ್‌ವೆಲ್ತ್ ಸಂಸದೀಯ ಸಂಘ, ಕರ್ನಾಟಕ ಶಾಖೆಯ ವಾರ್ಷಿಕ ಸಾಮಾನ್ಯ ಸಭೆಯನ್ನು ಈ ದಿನ ಅಂದರೆ, ದಿನಾಂಕ 22/12/2021 ರಂದು ಸಂಜೆ 5:30 ಗಂಟೆಗೆ ಸುವರ್ಣ ವಿಧಾನಸೌಧದ ಮೊದಲನೇ ಮಹಡಿಯಲ್ಲಿರುವ ಸೆಂಟ್ರಲ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದು, ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳು ಸದರಿ ಸಭೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಲಾಗಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**6. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕವಿಪ:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1. ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ವಿಧೇಯಕ, 2021
2. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2021
3. ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021
4. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2021
5. ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021
6. ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕ, 2021
7. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕ, 2021
8. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ ವಿಧೇಯಕ, 2021

**ಸಭಾಪತಿಯವರು:-** ಮಂಡಿಸಲಾಯಿತು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## 7. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಅ) ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ವಿಧೇಯಕ, 2021

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021 ನೇ ಸಾಲಿನ ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, 2021-22 ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಈ ಬಗ್ಗೆ ಘೋಷಣೆಯನ್ನು ಮಾಡಲಾಗಿತ್ತು. ಕೈಗಾರಿಕೆಗಳ ಘಟಕಗಳ ಸ್ಥಾಪನೆಗೆ ಮತ್ತು ಅವುಗಳ ಉತ್ತೇಜನಕ್ಕಾಗಿ ಮತ್ತು ಅದರಿಂದ ಉದ್ಯೋಗಾವಕಾಶಗಳು ಮತ್ತು ರಾಜ್ಯದ ಆರ್ಥಿಕ ಪರಿಸ್ಥಿತಿಗಳನ್ನು ಉತ್ತಮಗೊಳಿಸಲು ಈ ವಿಧೇಯಕವನ್ನು ಮಂಡಿಸಲಾಗಿದೆ. ವಾಣಿಜ್ಯ ಪದದ ಜೊತೆಗೆ ಕೈಗಾರಿಕೆ ಎಂಬ ಪದವನ್ನೂ ಸಹ ಪ್ರಸ್ತುತ ವಿಧೇಯಕದಲ್ಲಿ ಸೇರಿಸಲಾಗುತ್ತಿದೆ. ವಾಣಿಜ್ಯ ಕಟ್ಟಡ ಮತ್ತು ವಾಸದ ಕಟ್ಟಡ ಇವುಗಳ ತೆರಿಗೆಯ ದರಗಳು ಹಾಲಿ ಹಾಗೆಯೇ ಇರುತ್ತದೆ. ಪ್ರಸ್ತುತ ವಿಧೇಯಕವು ಕೇವಲ ಕೈಗಾರಿಕೆಗಳಿಗೆ ಮಾತ್ರವೇ ಜಾರಿಗೆ ತಂದಿರುವ ಮಸೂದೆಯಾಗಿದೆ. ಪ್ರಸ್ತುತ ವಿಧೇಯಕದಲ್ಲಿ ನಾವು ಯಾವುದೇ ರೀತಿಯ ತೆರಿಗೆಯನ್ನು ಹೆಚ್ಚಿಸಿಲ್ಲ.

(ಮುಂದು)

(1250) 12.30 22-12-2021 CS.BNS

**ಶ್ರೀ ಬಿ.ಎ.ಬಸವರಾಜು(ಮುಂದು):-**

ಹಾಗಾಗಿ, ವಾಣಿಜ್ಯ ಕಟ್ಟಡಗಳ ಶೇಕಡ ದರ 70ಕ್ಕೆ ಮೀರದಂತೆ ಹಾಗೂ ವಾಸ್ತವ್ಯ ಕಟ್ಟಡಕ್ಕೆ ದರ ಕಡಿಮೆ ಇಲ್ಲದಂತೆ ಈ ತೆರಿಗೆಯನ್ನು ವಿಧಿಸಲಾಗಿದೆ. ನಮ್ಮ ಕೈಗಾರಿಕೆಗಳನ್ನು ಉತ್ತೇಜಿಸುವ ಸಲುವಾಗಿ ಈ ತಿದ್ದುಪಡಿಯನ್ನು ತರಲಾಗಿದೆ. ಹಿಂದೆ "ವಾಣಿಜ್ಯ" ಎಂದು ಇದ್ದ ಕಡೆಯಲ್ಲಿ "ಕೈಗಾರಿಕಾ" ಎನ್ನುವ ಪದವನ್ನು ಸೇರಿಸಲಾಗುತ್ತಿದೆ. ಇದಕ್ಕಾಗಿ ಯಾವುದೇ ತೆರಿಗೆಯನ್ನು ಹೆಚ್ಚಿಗೆ ಮಾಡುತ್ತಿಲ್ಲ. ಹಿಂದೆ ಕೈಗಾರಿಕಾ ಸಚಿವರಾಗಿದ್ದ ಮಾನ್ಯ ಜಗದೀಶ್ ಶೆಟ್ಟರ್‌ರವರ ಅಧ್ಯಕ್ಷತೆಯಲ್ಲಿ 2-3 ಸಭೆಗಳನ್ನು ನಡೆಸಿ, ಈ ಒಂದು ನಿರ್ಣಯಕ್ಕೆ ಬರಲಾಗಿದೆ. ನಂತರ ಅದನ್ನು ಕ್ಯಾಬಿನೆಟ್‌ನಲ್ಲಿ ಒಪ್ಪಿಗೆ ಪಡೆದು ಕೆಳಮನೆಯಲ್ಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಂಡಿಸಿ, ಈಗ ಈ ಸದನದ ಒಪ್ಪಿಗೆಗಾಗಿ ತರಲಾಗಿದೆ. ಹಾಗಾಗಿ ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ಸದನವನ್ನು ಕೋರಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೇ, ಇದುವರೆವಿಗೂ ವಾಣಿಜ್ಯ ಎಂದು ತೆರಿಗೆ ಸಂಗ್ರಹ ಮಾಡುತ್ತಿದ್ದುದ್ದನ್ನು ಮುಂದಿನ ದಿವಸಗಳಲ್ಲಿ ಕೈಗಾರಿಕೆ ಎಂದು ಮಾಡಲಾಗುವುದು. ಕೈಗಾರಿಕೆಗಳಿಗೆ ಬೇರೆ ಒಂದು ಸ್ಲ್ಯಾಬ್ ಅನ್ನು ಸರ್ಕಾರ ನಿಗದಿ ಮಾಡುತ್ತದೆ ಎಂದೆನಿಸುತ್ತಿದೆ. ನಗರಸಭೆ, ಪುರಸಭೆಗಳ ಆರ್ಥಿಕ ವ್ಯವಸ್ಥೆಯನ್ನು ಸದೃಢಪಡಿಸಲು ಹೆಚ್ಚಿನ ತೆರಿಗೆಯನ್ನು ಸಂಗ್ರಹ ಮಾಡುವ ಸಲುವಾಗಿ ಈ ಕಾಯಿದೆಯನ್ನು ತರಲಾಗುತ್ತಿದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಬಿ.ಎ.ಬಸವರಾಜು**:- ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಇದನ್ನು ಎ, ಬಿ, ಸಿ ಜೋನ್‌ಗಳಾಗಿ ವಿಂಗಡನೆ ಮಾಡಿದ್ದೇವೆ. ಅದು ವಾಣಿಜ್ಯ ಸ್ಥಳವಾಗಿದ್ದರೆ 15000 ರೂಪಾಯಿಗಳು ಇದ್ದದ್ದು ಕೈಗಾರಿಕೆ ಎಂದಾದ ಮೇಲೆ 10500 ರೂಪಾಯಿಗಳಾಗಿದೆ. ಎ,ಬಿ, ಸಿ ಜೋನ್‌ಗಳಿಗೆ ಅನುಗುಣವಾಗಿ ತೆರಿಗೆಯನ್ನು ನಿಗದಿ ಮಾಡಲಾಗುವುದು. ಇದರಲ್ಲಿ ಯಾವುದೇ ರೀತಿಯ ಗೊಂದಲ ಇಲ್ಲದ ಕಾರಣ ಸದನ ಇದಕ್ಕೆ ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,
"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ಎರಡನೆ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

**<u>ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು</u>**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>**
**<u>ಖಂಡ 2ರಿಂದ 3ರವರೆಗೆ</u>**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,
"ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,
"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):-** "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು(ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,
"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು(ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಅನುಮೋದನೆ ನೀಡಲಾಯಿತು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## ಆ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2021

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೇ, ಇದೊಂದು ಸಣ್ಣ ತಿದ್ದುಪಡಿ. ಜಮೀನುಗಳನ್ನು ಸರ್ವೆ ಮಾಡಬೇಕಾದಾಗ, ಅದು 11 ಇ ಸ್ಕೆಚ್, ಪೋಡಿ, ಹದ್ದುಬಸ್ತು, ಭೂ ಪರಿವರ್ತನೆಯ ನಕ್ಷೆಗಳಿಗಾಗಿ ಸುಮಾರು 6,41,000 ಕ್ಕೂ ಮೇಲ್ಪಟ್ಟು ಅರ್ಜಿಗಳು ಬಾಕಿ ಉಳಿದುಕೊಂಡಿವೆ. ಕೆಲವು ತಾಲ್ಲೂಕುಗಳಲ್ಲಿ ಪರವಾನಗಿ ಭೂ ಮಾಪಕರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ನಮ್ಮ ಸರ್ಕಾರಿ ಭೂ ಮಾಪಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಎಲ್ಲೆಲ್ಲಿ ನಮ್ಮ ರೆಗ್ಯುಲರ್ ಸರ್ವೇಯರ್ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ, ಅವರು ಪರವಾನಗಿ ಭೂ ಮಾಪಕರ ಕೆಲಸವನ್ನು ಮಾಡಬಹುದು ಎನ್ನುವುದಕ್ಕಾಗಿ ಒಂದು ತಿದ್ದುಪಡಿಯನ್ನು ತರಲಾಗಿದೆ. ಪೆಂಡಿಂಗ್ ಇರುವ ಅರ್ಜಿಗಳನ್ನು ಕಡಿಮೆ ಮಾಡುವ ಸಲುವಾಗಿ ಇದನ್ನು ಮಾಡಲಾಗಿದೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯ್ಯಕವನ್ನು ಪರ್ಯಾಲೋಚಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>**

**<u>ಖಂಡ 2 ರಿಂದ 4 ರವರೆಗೆ</u>**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 4 ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಖಂಡ 2 ರಿಂದ 4 ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,
"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, "ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,
"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಅನುಮೋದನೆ ನೀಡಲಾಯಿತು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## ಇ) ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ 2021

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಲಕ್ಷಾಂತರ ಎಕರೆ ಇನಾಮು ಜಮೀನುಗಳನ್ನು ಬಡವರು ಉಳುಮೆ ಮಾಡುತ್ತಿದ್ದಾರೆ. ಇನಾಮು ಜಮೀನುಗಳ ಅಧಿಭೋಗದಾರರಾಗಲು ಅರ್ಜಿ ಸಲ್ಲಿಸಲು ಒಂದು ಸಮಯವನ್ನು ನಿಗದಿ ಮಾಡಲಾಗಿತ್ತು. ಆದರೆ ಕಾರಣಾಂತರಗಳಿಂದ ಸರಿಯಾದ ತಿಳುವಳಿಕೆ ಇಲ್ಲದೆ ಬಡ ರೈತರು ಸಮಯಕ್ಕೆ ಸರಿಯಾಗಿ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ. ಇದರಲ್ಲಿ ಬಹಳಷ್ಟು ಅರ್ಜಿಗಳು ಬಂದಿದ್ದರಿಂದ, ಇದನ್ನು ಹೇಗೆ ವಿಲೇವಾರಿ ಮಾಡಬೇಕೆನ್ನುವ ಬಗ್ಗೆ ಪರಿಶೀಲಿಸಲು 4-11-2019ರಲ್ಲಿ ಐಎಎಸ್ ಅಧಿಕಾರಿಯಾಗಿರುವ ಶ್ರೀ ವಸ್ತ್ರದ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಗಿತ್ತು. ಅವರು ಈ ಬಗ್ಗೆ ಕೆಲವು ಶಿಫಾರಸ್ಸುಗಳನ್ನು ನೀಡಿದ್ದಾರೆ. ಅವು ಏನೆಂದರೆ ಇನಾಮು ಜಮೀನುಗಳಿಗೆ ಅರ್ಜಿ ಸಲ್ಲಿಸಲು ಕಾಲಾವಧಿಯನ್ನು ವಿಸ್ತರಿಸದೇ ಹೋದಲ್ಲಿ ಏನೆಲ್ಲಾ ಪರಿಣಾಮಗಳಾಗುತ್ತದೆ ಎಂದು ಹೇಳಿದ್ದಾರೆ. ಇನಾಮು ಜಮೀನುಗಳಿಗೆ ಕಾರಣಾಂತರಗಳಿಂದ ಅರ್ಜಿ ಸಲ್ಲಿಸಲು ವಿಫಲರಾದಂತಹ ರೈತರು ಭೂಮಿಯ ಒಡೆತನದ ಹಕ್ಕಿನಿಂದ ವಂಚಿತರಾಗುತ್ತಾರೆ. ತಮ್ಮ ಭೂಮಿಯನ್ನು ಅಭಿವೃದ್ಧಿಗೊಳಿಸಲು ಅಗತ್ಯವಿರುವ ಸವಲತ್ತುಗಳನ್ನು ಪಡೆಯಲು ಅನಾನುಕೂಲವಾಗುತ್ತದೆ. ಸಾಲಗಳನ್ನು ಪಡೆಯುವ ಸೌಲಭ್ಯಗಳಿಂದ ವಂಚಿತರಾಗುತ್ತಾರೆ.

ಕೆ.ಐ.ಎ.ಡಿ.ಬಿ. ಅಥವಾ ರೈಲ್ವೇ ಹೀಗೆ ಆ ಜಮೀನು ಸರ್ಕಾರದ ಯಾವುದೇ ಯೋಜನೆಗಳಿಗೆ ಭೂಸ್ವಾಧೀನಕ್ಕೆ ಒಳಪಟ್ಟಲ್ಲಿ ಯಾವುದೇ ಪರಿಹಾರ ಅವರಿಗೆ ಸಿಗುವುದಿಲ್ಲ. ಅದಕ್ಕಾಗಿ ಭೂ ಸ್ವಾಧೀನಕ್ಕೆ ಒಳಪಟ್ಟ ಜಮೀನುಗಳನ್ನು ಬಿಟ್ಟು ಕೊಡದೆ ರೈತರು ಹೋರಾಟವನ್ನು ಸಹ ಮಾಡುತ್ತಿದ್ದಾರೆ. ಏಕೆಂದರೆ ಜಮೀನು ರೈತರ ಸ್ವಾಧೀನದಲ್ಲಿರುತ್ತದೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(1251)/12-40/22-12-2021/ಎಲ್ಎಂ/ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಅಶೋಕ್**(ಮುಂದು):-

ಕಾನೂನು ಹಾಗೆ ಇರುತ್ತದೆ. ಆದರೆ ಅವರಿಗೆ ಅರ್ಜಿ ಹಾಕಲು ಒಂದು ವರ್ಷ ಕಾಲಾವಕಾಶವನ್ನು ಕೊಡಲಾಗಿದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿ ಇರುತ್ತದೆ. ಅವರು ಆ ಅರ್ಜಿಯನ್ನು ಪರಿಶೀಲನೆ ಮಾಡಿ, ಯಾವ ರೈತ ಉಳುಮೆ ಮಾಡುತ್ತಿರುತ್ತಾನೆ ಅವರಿಗೆ ಆ ಜಮೀನನ್ನು ಕೊಡವಂತಹ ಕೆಲಸ ಮಾಡಲಾಗುತ್ತದೆ. ರೈತನಿಗೆ ಸಹಾಯವಾಗಲಿ ಎನ್ನುವ ದೃಷ್ಟಿಯಿಂದ ಈ ಬಿಲ್‌ನ್ನು ತರಲಾಗಿದೆ. ಟೈಮ್ ಮಾತ್ರ extend ಮಾಡಲಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಶನ ಹೊಂದಿದವರು)**:- ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು, ಈ ಕಾನೂನು minor inams ಗೆ ಮಾತ್ರ ಅನ್ವಯವಾಗುತ್ತದೆ major inams ಹಾಗೂ ಜೋಡಿದಾರ್ ಇನಾಂಗೆ ಅನ್ವಯವಾಗುವುದಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು clarify ಮಾಡಬೇಕು. ಎರಡನೆಯದು, ಯಾರು ಇದನ್ನು occupancy rights ಅನ್ನು regrant ಮಾಡುತ್ತಾರೆ. ಈ regrant ನ್ನು Special Deputy Commissioner, Deputy Commissioner or Assistant Commissioner, ಯಾರು ಮಾಡುತ್ತಾರೆ ಎನ್ನುವುದನ್ನು clarify ಮಾಡಬೇಕು. ಹಿಂದೆ ಅರ್ಜಿ ಸಲ್ಲಿಸಲು ಕೊನೆ ದಿನಾಂಕ ಇದ್ದದು ದಿನಾಂಕ: 31-3-1991 ಇರಬಹುದು ಎಂದು ನನ್ನ ಅನಿಸಿಕೆ. ಈಗ ಅದನ್ನು ನಂತರದಲ್ಲಿ extend ಮಾಡುತ್ತೀದ್ದಿರಿ. ಒಂದು ವರ್ಷ ಕಾಲಾವಕಾಶವನ್ನು ಕೊಡಲಾಗುವುದೆಂದು ಹೇಳಿದ್ದಾರೆ. 1991ರಲ್ಲಿ ಆಖೈರ್ ಆಗಿ ಕೊಟ್ಟಿರುವುದು. ಈಗ ೩೦ ವರ್ಷವಾದ ಮೇಲೆ ಕೊಡಲಾಗುತ್ತಿದೆ. ಅದನ್ನು clarify ಮಾಡಿ. ಈಗ ತಂದಿರುವ ಕಾಯಿದೆ ಮತ್ತು ಸಂಡೂರು ಕಾಯಿದೆ ಎರಡು ಒಂದೇನಾ ಅಥವಾ ಬೇರೆ-ಬೇರೆಯೇ ಎನ್ನುವುದನ್ನು ಹೇಳಬೇಕು. The Karnataka Certain Inams Abolition Act ಬೇರೆ The Karnataka (Sandur Area) Inams Abolition Act ಬೇರೆ ಅವೆರಡನ್ನು ಸೇರಿಸಿ ಒಂದೇ ಕಾಯಿದೆ ಮಾಡಿದ್ದೀರಾ ಎನ್ನುವುದನ್ನು clarify ಮಾಡಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭೆಯಿಂದ ಚುನಾಯಿತರಾದವರು)**:- ಮಾನ್ಯ ಸಭಾಪತಿಗಳೆ, ಇದು ಬಹಳ ಒಳ್ಳೆಯ ವಿಧೇಯಕ. I welcome it. ಕೆಲವರಿಗೆ confusion ಇದೆ. ಈ ಕಾಯಿದೆ agricultural ಭೂಮಿಗೆ ಮಾತ್ರವಲ್ಲ, ಈಗ ಕೆಲವು agricultural land commercial ಆಗಿ Corporation ಗೂ ಸೇರಿಬಿಟ್ಟಿವೆ. ಅಲ್ಲಿಯು ಇಂತಹ ಪ್ರಸ್ತಾವನೆಗಳು ಬಂದಿವೆ. Time extend ಮಾಡುವ ಅರ್ಜಿಯನ್ನು ಹೈಕೋರ್ಟ್ ಅಂಗೀಕಾರ ಮಾಡಿದೆ. I welcome it. ಇನ್ನೊಂದು, major inams, minor inams ಎನ್ನುವುದು ಬೇಡ. ಇವತ್ತು ಯಾರು ಹತ್ತು ವರ್ಷದಿಂದ ಜಮೀನು ಉಳುತ್ತಿದ್ದಾರೆ ಎಲ್ಲಾ ಕಾನೂನುಗಳನ್ನು ಬದಿಗಿಟ್ಟು ಆ ರೈತನಿಗೆ ಆ ಜಮೀನನ್ನು ಕೊಡುವಂತಹ ಕೆಲಸವನ್ನು ಮಾಡಿ ನಿಮಗೆ ಪುಣ್ಯ ಬರುತ್ತದೆ ಎಂದು ಮನಸಾರೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳುತ್ತೇವೆ. ಮಾನ್ಯ ಅಶೋಕರವರು ಎಷ್ಟು ದಪ್ಪ ಇದ್ದಾರೆ ಅವರ ಹೃದಯವು ಅಷ್ಟೆ ದೊಡ್ಡದು. ಇದು practical ಆಗಿದೆ. ಇದನ್ನು ಅಂಗೀಕರಿಸುತ್ತೇನೆ.

**ಶ್ರೀ ಪಿ.ಆರ್.ರಮೇಶ್((ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, ಇಂದು ತಂದಿರುವ ಈ ವಿಧೇಯಕ ಉಳುವ ರೈತನಿಗೆ ಮಾತ್ರನಾ ಅಥವಾ commercial, buildings ಕಟ್ಟಿಸಿಕೊಂಡವರಿಗೂ ಅನ್ವಯವಾಗುತ್ತದೆಯೇ ಎನ್ನುವುದು ಬಹಳ ಮುಖ್ಯ. ಸಾಕಷ್ಟು ಜಾಗಗಳು ಹಿಂದೆ Inams Abolition Act ನಲ್ಲಿ ಆಗಿರುವ ಸಾಕಷ್ಟು ಪ್ರಕರಣಗಳು ಕೋರ್ಟ್‌ನಲ್ಲಿ ಇತ್ಯರ್ಥವಾಗದೆ ಹಾಗೆ ಇವೆ. ದೇವಸ್ಥಾನದ ಜಮೀನು, ಸರ್ಕಾರಿ ಜಮೀನು ಇದ್ದರೆ ಅಂತಹ ಜಮೀನಿಗೆ ಈ ಕಾನೂನಿನಿಂದ ಅಡಚಣೆಯಾಗುತ್ತದೆ. ಅದಕ್ಕಾಗಿ ಇದಕ್ಕೆ ಒಂದು cut off date ಕೊಡಿ. ಇದರ ಜೊತೆಗೆ specific ಆಗಿ ಯಾರಿಗೆ ಕೊಡಬೇಕು, ಯಾವ ಭೂಮಿಗೆ ಕೊಡಬೇಕು ಎಂದು ಹೇಳುವುದು ತುಂಬಾ ಮಹತ್ವದಾಗುತ್ತದೆ. ದೊಡ್ಡ ಕಟ್ಟಡ ಕಟ್ಟಿ ಲಕ್ಷಾಂತರ ರೂಪಾಯಿಗಳ ಬಾಡಿಗೆಯನ್ನು ತೆಗೆದುಕೊಳ್ಳುವಂತವರಿಗೆ ಇದರಿಂದ ಅನುಕೂಲವಾದರೆ ಬಹಳ ಕಷ್ಟವಾಗುತ್ತದೆ. ಸರ್ಕಾರದ ಆಸ್ತಿಯು ಕ್ರಮೇಣ ಬೇರೆಯವರ ಆಸ್ತಿಯಾಗುವಂತೆ ನಾವೇ route ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಈ ಕಾಯಿದೆಯನ್ನು ಉಳುಮೆದಾರರಿಗೆ ಮಾತ್ರ ತಂದರೆ ಇದು ಸ್ವಾಗತಾರ್ಹ. ಇಲ್ಲದಿದ್ದರೆ flood gate ತರಹ open ಆಗುತ್ತದೆ.

**ಶ್ರೀ ಸಿ.ಎಂ.ಇಬ್ರಾಹಿಂ**:- ಮಾನ್ಯ ಸಭಾಪತಿಗಳೆ, ಸಿಟಿಯಲ್ಲಿ ಬಂದರೆ ಉಳುಮೆ ಮಾಡಲು ಆಗುವುದಿಲ್ಲ. ಒಂದು, ಎರಡು ಅಥವಾ ಮೂರು ಎಕರೆ ಸಣ್ಣ ಹಿಡುವಳಿದಾರನು ಇರುತ್ತಾನೆ. ಒಂದು ಕಾನೂನು ತಂದಿದ್ದೀರಿ, ಕೆಲವರು ಮಾತ್ರ ಅನುಭವಿಸಬೇಕು, ಕೆಲವರಿಗೆ ಇಲ್ಲ ಎಂದರೆ ತಾರತಮ್ಯ ಮಾಡಿದ ಹಾಗೆ ಆಗುತ್ತದೆ. ತಾವು ತಂದಿರುವ ಕಾನೂನನ್ನು ಸ್ವಾಗತ ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಗಳೆ, ಈ ಬಿಲ್‌ನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ನಮ್ಮ ಗ್ರಾಮೀಣ ಭಾಗದಲ್ಲಿ ಕೆಲವು ದೇವಸ್ಥಾನಗಳ ಪೂಜಾರಿಗಳಿಗೆ ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ಜಮೀನನ್ನ ಇನಾಂ ಎಂದು ಕೊಟ್ಟಿದ್ದರು. ದೇವರ ಸೇವೆ ಮಾಡಿಕೊಂಡು ಇರಲಿ ಎಂದು ಪೂಜಾರಿಗೆ ೫ ಎಕರೆ, ೧೦ ಅಥವಾ ೨೦ ಎಕರೆ ಜಮೀನನ್ನು ಇನಾಂ ಆಗಿ ಮಂಜೂರು ಮಾಡಿರುತ್ತಾರೆ. The Karnataka Village Offices Abolition Act..... Villages ನಲ್ಲಿ superior officers and inferior officers ಎಂದು ಇದ್ದರು. ಇದರಲ್ಲಿ ಗೌಡ್ರು, ಕುಲಕರ್ಣಿಯವರು, ದೇಶಪಾಂಡೆ ಇವರು superior officers ಅದೇ ರೀತಿ ತಳವಾರ, ತೋಟಿ, ನೀರತೋಟಿ ಎನ್ನುವವರು inferior officers. ಬ್ರಿಟಿಷರು ಊರಿಗೆ ಬಂದಾಗ ಚಹಾ ಕೊಡಲು ಇತರೆ ಅವರ ಸೇವೆಯನ್ನು ಮಾಡಿಕೊಂಡು ಇರಲು ಇವರನ್ನು ಇಟ್ಟುಕೊಂಡಿದ್ದರು. ಇವರೆಲ್ಲರಿಗೂ ಇಂತಿಷ್ಟು ಜಮೀನನ್ನು ಇನಾಂ ಎಂದು land

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

grant ಮಾಡಿದರು. ಸ್ವಾತಂತ್ರ್ಯ ಬಂದ ನಂತರ ಇದೆಲ್ಲವು abolish ಆಗಿ ಯಾರು-ಯಾರು ಉಳುಮೆ ಮಾಡುತ್ತಿದ್ದರು ಅವರಿಗೆ regrant ಮಾಡಿದರು. ಈ regrant ಆಗದೆ ಸ್ವಲ್ಪ ಜಮೀನು ಉಳಿದಿದೆ. ಹಿಂದಿನ ಕೆಲವು ರೈತರು ಇದು ನಮ್ಮ ಅಜ್ಜ-ಮುತ್ತಜ್ಜನ ಕಾಲದಿಂದ ಬಂದಿರುವುದು ಉಳುಮೆ ಮಾಡಿಕೊಂಡು ಹೋಗಬೇಕು ಎಂದು ಉಳುಮೆ ಮಾಡಿಕೊಂಡು ಹೋಗುತ್ತಿರುತ್ತಾರೆ. ಆದರೆ ಆ ಜಮೀನು ಆ ರೈತನ ಹೆಸರಿಗೆ ಆಗಬೇಕು, ಆ ರೈತ ಮಾಲೀಕನಾಗಬೇಕು. ಅವರಿಗೆ ಅರ್ಜಿ ಹಾಕಲು ಅವಕಾಶ ಕೊಟ್ಟರು, ಸರಿಯಾದ ಸಮಯದಲ್ಲಿ ಅರ್ಜಿಯನ್ನು ಹಾಕಿರುವುದಿಲ್ಲ. ನಿರಕ್ಷರಕುಕ್ಷಿಗಳು, ಕಾನೂನಿನ ಜ್ಞಾನವಿಲ್ಲದವರು, ಜಮೀನ ಬಗ್ಗೆ ಏನು ಪರಿಜ್ಞಾನವಿಲ್ಲದವರು ಹಾಗೆ ಉಳಿದುಕೊಂಡು ಬಿಟ್ಟಿದ್ದಾರೆ. ಅವತ್ತು ಆ ಜಮೀನು ಅವರ ಹೆಸರಿಗೆ ಆಗದಿದ್ದರೆ ಮುಂದೆ acquisition ಆದರೆ ಅದಕ್ಕೆ ಪರಿಹಾರ ಸಿಗುವುದಿಲ್ಲ. ಅವನು ಮಾಲೀಕನು ಆಗುವುದಿಲ್ಲ. ಈ ರೀತಿ ಅನೇಕ ತೊಂದರೆಗಳು ಬರುತ್ತವೆ. ಮತ್ತು ತಲೆತಲಾಂತರದಿಂದ ಬಂದಿರುವ ಜಮೀನನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಬರುತ್ತದೆ. Regrant ಮಾಡುವಾಗ ಕಾನೂನಿನ ಜ್ಞಾನವಿಲ್ಲದವರು, ನಿರಕ್ಷರಕುಕ್ಷಿಗಳು ಯಾರು ಉಳಿದಿದ್ದಾರೆ ಅಂತವರಿಗೆ ಈಗ ಅನುಕೂಲ ಮಾಡಿಕೊಟ್ಟಿದ್ದೀರಿ. ಈ ದೃಷ್ಟಿಯಿಂದ ಇದು ಸ್ವಾಗತಾರ್ಹವಾದ ವಿಧೇಯಕವಾಗಿದೆ.

**ಶ್ರೀ ಅಲ್ಲಂ ವೀರಭದ್ರಪ್ಪ**:- ಮಾನ್ಯ ಸಭಾಪತಿಗಳೆ, ಈ ಕಾಯಿದೆಯನ್ನು ತಂದಿರುವುದಕ್ಕೆ ಇಡೀ ರಾಜ್ಯದ ರೈತರ ಪರವಾಗಿ, ವಿಶೇಷವಾಗಿ ಬಳ್ಳಾರಿಯ ರೈತರ ಪರವಾಗಿ ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ**:- ಮಾನ್ಯ ಸಭಾಪತಿಗಳೆ, ಒಂದೇ clarification. ಇದು The Karnataka Village Offices Abolition Act ಗೆ ಅನ್ವಯವಾಗುತ್ತದೆಯೇ ಇಲ್ಲವೇ? ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರುವ ವಿಷಯದಲ್ಲಿ ಗ್ರಾಮಾಧಿಕಾರಿಗಳ ಇನಾಂ ರದ್ದತಿ ಕಾಯಿದೆಗೆ ಒಳಪಡುತ್ತದೆಯೇ ಇಲ್ಲವೇ ಎನ್ನುವುದನ್ನು clarify ಮಾಡಬೇಕು. ಇದು ಕೇವಲ ಎರಡು ಕಾಯಿದೆಗಳಿಗೆ ಸಂಬಂಧಪಟ್ಟಿದೆ ಎನ್ನುವುದು ನನ್ನ ಭಾವನೆ. The Karnataka Certain Inams Abolition Act ಗೆ ಸಂಬಂಧಪಟ್ಟ ಹಾಗೆ ಆಗುತ್ತದೆ ಮತ್ತು The Karnataka (Sandur Area) Inams Abolition Act ಗೆ ಅನ್ವಯವಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯ್ಕಕರು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ, ಅದು The Karnataka Village Offices Abolition Act ಗೆ ಅನ್ವಯವಾಗುವುದಿಲ್ಲ ಎನ್ನುವುದು ನನ್ನ ಭಾವನೆ. ಅದನ್ನು clarify ಮಾಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಗಳೆ, in general ಮಾತನಾಡಿದ್ದೇನೆ. ಯಾರಿಗೆ ಕಾನೂನಿನ ಪರಿಜ್ಞಾನವಿರುವುದಿಲ್ಲ, ಅಶಿಕ್ಷಿತರಾಗಿರುತ್ತಾರೆ, ನಿರಕ್ಷರಕುಕ್ಷಿಗಳು ಇರುತ್ತಾರೆ, ಅದು ಒಂದು ಅಥವಾ ಎರಡು category ಇರಲಿ. ಯಾವ category ಎನ್ನುವುದನ್ನು ಇದರಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

mention ಮಾಡಿದ್ದಾರೆ. The Karnataka Certain Inams Abolition Act ನ ಅಡಿಯಲ್ಲಿ ಬರುವಂತಹ ಜಮೀನುಗಳಿಗೆ ಇದು ಅನ್ವಯವಾಗುತ್ತದೆ ಎನ್ನುವುದು ನನ್ನ ಭಾವನೆಯಿಂದ ನಾನು ಮಾತನಾಡಿದ್ದೇನೆ. The Karnataka Village Offices Abolition Act ಅದು inam-6B. ಅದನ್ನು ನಾನು ಉದಾಹರಣೆಗಾಗಿ quote ಮಾಡಿದ್ದೇನೆ. I have not gone through the bill in detail. I have spoken in general with good intention.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನಸಭೆಯಿಂದ ಚುನಾಯಿತರಾದವರು)**:- ಮಾನ್ಯ ಸಭಾಪತಿಗಳೆ, ಈಗ ತಂದಿರುವ ವಿಧೇಯಕವನ್ನು ಸ್ವಾಗತ ಮಾಡುತ್ತೇವೆ. ಆದರೆ ಇದರಲ್ಲಿ ಕೆಲವು ಸಂಶಯಗಳು ಇವೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿದ ಹಾಗೆ ಬ್ರಿಟಿಷರು ದೇವಾಲಯಗಳಲ್ಲಿ ಪೂಜೆ ಸಲ್ಲಿಸಿಕೊಂಡಿದ್ದ ಪೂಜಾರಿಗಳಿಗೆ ಇನಾಂತಿಯನ್ನು ಕೊಟ್ಟಿದ್ದರು. ಆದರೆ ಹಿಂದೆ ಪೂಜೆ ಸಲ್ಲಿಸಿಕೊಂಡಿದ್ದ ಪೂಜಾರಿಗಳಲ್ಲಿ ಅವರು ಅವರ ಕುಟುಂಬದವರು ಬಹಳಷ್ಟು ಜನ ಆ ಸ್ಥಳದಲ್ಲಿ ಈಗ ಇಲ್ಲ. ಆ ಜಮೀನನ್ನು ಇನ್ನೊಬ್ಬರು tenant ಮುಖಾಂತರ ಹಿಡುವಳಿ ಮಾಡಿಕೊಂಡಿದ್ದಾರೆ. ಹಿಂದಿನವರು ಅವರ ವಂಶಸ್ಥರು ನೋಡಲು ಯಾರು ಸಿಗುವುದಿಲ್ಲ. ಅಂತಹ ಜಮೀನುಗಳ ಬಗ್ಗೆ ಏನು ಮಾಡುತ್ತಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

(ಮುಂದು)

(1252)22-12-2021(12-50)bsd-gr (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಇನಾಂ ರದ್ದತಿ ಆದಾಗ ಆ ಭೂಮಿ ಸರ್ಕಾರಕ್ಕೆ ಹೋಗುತ್ತದೆ. ಯಾವುದೇ ಭೂಮಿಯನ್ನು ಯಾರಿಗಾದರೂ ಕೊಟ್ಟು ನಂತರ ವಾಪಸ್ಸು ಪಡೆದಾಗ ಆ ಭೂಮಿ ಸರ್ಕಾರದ ಭೂಮಿಯಾಗುತ್ತದೆ. ಸರ್ಕಾರದ ಭೂಮಿಯಾದ ನಂತರ ಆ ಭೂಮಿ ಪಡೆಯಲು ಯಾವುದೇ ಅರ್ಜಿಗಳನ್ನು ಕೊಟ್ಟ ಸಂದರ್ಭದಲ್ಲಿ ಆ ಭೂಮಿಯನ್ನು ಯಾರಾದರೂ ಒತ್ತುವರಿ ಮಾಡಿಕೊಂಡು ಅಥವಾ ಸಾಗುವಳಿ ಮಾಡಿಕೊಂಡಿದ್ದಂತಹವರಿಗೆ ಪುನಃ ಅರ್ಜಿಯನ್ನು ಹಾಕಲು ಅವಕಾಶ ಕೊಟ್ಟರೆ ಅಂತಹವರಿಗೆ ಭೂಮಿ ಹೋಗುತ್ತದೆ. ಇದು ಪುನಃ ರಿವರ್ಸ್ ಆಗಿ ವಾಸ್ತವವಾಗಿ ಸಾಗುವಳಿ ಮಾಡಿಕೊಂಡಿರುವವರಿಗೆ ಸಿಗುತ್ತದೆ. ಮಾನ್ಯ ಲಕ್ಷ್ಮಣ ಸವದಿಯವರು ಯಾರದ್ದೋ ಭೂಮಿ ಯಾರಿಗೋ ಹೋಗಿದೆ ಎಂಬ ವಿಚಾರವನ್ನು ಹೇಳಿದರು. ಅದು ಏನೇ ಇದ್ದರೂ, ಅಂತಹವರಿಗೆ ಸರ್ಕಾರದಿಂದ ಸಮಯಾವಕಾಶವನ್ನು ಕೊಡಲಾಗಿದೆಯೇ? ಸಮಯಾವಕಾಶವನ್ನು ಕೊಡಬೇಕು. ನಮ್ಮ ಉಡುಪಿ ಜಿಲ್ಲೆಯ ಮಠ-ಮಂದಿರಗಳಿಗೆ ಡಿಕ್ಲೇರೇಷನ್‌ಗೆ ಅವಕಾಶ ಇರಲಿಲ್ಲ. ಏಕೆಂದರೆ ಯಾವುದೋ ಒಂದು ಉದ್ದೇಶಕ್ಕೆ ಕೊಟ್ಟಿರುವ ಭೂಮಿಯನ್ನು ಡಿಕ್ಲರೇಷನ್‌ಗೆ ಹಾಕಲು ಅವಕಾಶ ಇಲ್ಲ. ಆದರೂ ಡಿಕ್ಲರೇಷನ್‌ಗೆ ಹಾಕಿ ಎಷ್ಟೋ ಜನ ಪ್ರಯೋಜನ ಪಡೆದಿದ್ದಾರೆ. ಅದು ತಪ್ಪು ಸರಿ ಎನ್ನುವ ವಾದ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅಲ್ಲ. ಕಾನೂನು ಪ್ರಕಾರವಾಗಿ ಹೋದರೆ ತಪ್ಪಾಗುತ್ತದೆ. ಆದರೆ ಕಾನೂನನ್ನು ಬಿಟ್ಟು ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದಾರೋ, ಆ ಉದ್ದೇಶದ ಪ್ರಕಾರ ಹೋಗಲಿ ಎನ್ನುವ ವಾದ ಇದ್ದರೆ ಅದು ಸರಿಯಾಗುತ್ತದೆ. ಈ ಸರ್ಕಾರಿ ಭೂಮಿಯನ್ನು ಯಾರಿಗೆ, ಹೇಗೆ ಮತ್ತು ಯಾವ ಮಾರ್ಗಸೂಚಿ ಪ್ರಕಾರ ಕೊಡಲು ಇಚ್ಛೆ ಪಡುತ್ತಾರೆ ಎಂಬ ವಿಷಯವನ್ನು ತಿಳಿಸಬೇಕು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಗೊಂದ್ಲಲ ಇದ್ದು, ಮಂಡ್ಯ ನಗರದಲ್ಲಿ ಲಕ್ಷ್ಮೀ ಜನಾರ್ಧನ ದೇವಸ್ಥಾನಕ್ಕೆ ಸೇರಿದ ಜಮೀನು ಯಾರು ಯಾರೋ ಸ್ವಾಧೀನದಲ್ಲಿಟುಕೊಂಡು ಹೊಟೇಲ್ ಅಂಗಡಿಗಳನ್ನು ಮಾಡಿಕೊಂಡಿದ್ದರು. ಈಗ ಸರ್ಕಾರ ಆ ಜಮೀನನ್ನು ವಾಪಸ್ಸು ತೆಗೆದುಕೊಂಡಿದೆ. ಅವರೆಲ್ಲರೂ ದೇವಸ್ಥಾನದ ಜಮೀನಿನಲ್ಲಿ ಬಹಳ ವರ್ಷಗಳಿಂದ ಇದ್ದುದ್ದರಿಂದ ಆ ಜಮೀನನ್ನು ಕೊಡಿ ಎಂದು ಕ್ಲೈಮ್ ಮಾಡಿದ್ದರು. ಈಗ ಸರ್ಕಾರದ ಸ್ವಾಧೀನದಲ್ಲಿ ಆ ಜಮೀನು ಇದ್ದು, ಈ ಕಾಯ್ದೆಯ ಪರಿಸ್ಥಿತಿಯಿಂದ ಏನಾಗುತ್ತದೆ? ಅವರು ಮತ್ತೆ ಅರ್ಜಿ ಹಾಕಿಕೊಂಡರೆ ಅವರಿಗೆ ಜಮೀನು ಕೊಡುತ್ತಾರೋ ಅಥವಾ ಸರ್ಕಾರದಲ್ಲಿಯೇ ಉಳಿಸಿಕೊಳ್ಳುತ್ತಾರೋ ಎಂಬುದನ್ನು ತಿಳಿಸಬೇಕು.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ಕಾಯ್ದೆಯನ್ನು ಬದಲಾವಣೆ ಮಾಡುತ್ತಿಲ್ಲ, ಕಾಯ್ದೆ ಇರುವಂತೆಯೇ ಇರುತ್ತದೆ. ಮಾನ್ಯ ಸದಸ್ಯರು ಕಾಯ್ದೆಯ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಇದರಲ್ಲಿ ಸಮಯದ ವಿಸ್ತರಣೆಯನ್ನು ಮಾತ್ರ ಮಾಡಲಾಗಿದೆ. ಇದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಮಾನ್ಯ ತಿಪ್ಪೇಸ್ವಾಮಿಯವರು ಸಕ್ಷಮ ಪ್ರಾಧಿಕಾರಗಳ ಬಗ್ಗೆ ಕೇಳಿದ್ದು, the Mysore (Personal and Miscellaneous) Inams Abolition Act, 1954, ಗೆ ಜಿಲ್ಲಾಧಿಕಾರಿ ಇರುತ್ತಾರೆ. ಮೈಸೂರು ಇನಾಂ ರದ್ದತಿ ಅಧಿನಿಯಮ, ೧೯೫೪ ಕ್ಕೆ ಜಿಲ್ಲಾಧಿಕಾರಿ ಇರುತ್ತಾರೆ. ಕರ್ನಾಟಕ ಗ್ರಾಮಾಧಿಕಾರ ರದ್ದತಿ ಅಧಿನಿಯಮ, ೧೯೬೧ಕ್ಕೆ ತಹಶೀಲ್ದಾರ್ ಇರುತ್ತಾರೆ. ಕರ್ನಾಟಕ ಇನಾಂ ರದ್ದತಿ ನಿಯಮ ೧೯೭೭ಕ್ಕೆ ಭೂ ನ್ಯಾಯ ಮಂಡಳಿ ಇರುತ್ತದೆ. ಕರ್ನಾಟಕ ಸಂಡೂರು ಪ್ರದೇಶ ಇನಾಂ ರದ್ದತಿ ನಿಯಮಕ್ಕೆ ಭೂ ನ್ಯಾಯ ಮಂಡಳಿ ಇರುತ್ತದೆ. ದಿನಾಂಕ ೧-೩-೧೯೭೪ಕ್ಕಿಂತ ಹಿಂದೆ ಮೂರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು, ನಿರಂತರವಾಗಿ ಇದುವರೆಗೂ ಅವರು ಅಥವಾ ವಂಶಜರು ಸ್ವಾಧೀನದಲ್ಲಿದ್ದರೆ ಮಾತ್ರ ಮಂಜೂರು ಮಾಡುತ್ತೇವೆ. ಇಲ್ಲದಿದ್ದರೆ ಮಾಡುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಉಳುವವನೆ ಭೂಮಿಯ ಒಡೆಯ ಕಾನೂನು ಅಂದರೆ ಕರ್ನಾಟಕ ಭೂ ಸುಧಾರಣಾ ಕಾನೂನು ೧-೩-೧೯೭೪ಕ್ಕೆ ಜಾರಿಗೆ ಬಂತು. ಅದಕ್ಕಿಂತ ಪೂರ್ವದಲ್ಲಿ ೩ ವರ್ಷಗಳಿಂದ ಉಳುಮೆ ಮಾಡುತ್ತಿದ್ದರೆ, ಆತ Form No.7 ಅನ್ನು Tribunal ಗೆ ಹಾಕಿದರೆ

ಅವನಿಗೆ occupancy right grant ಬರುತ್ತದೆ. ಮಾನ್ಯ ಲಕ್ಷ್ಮಣ ಸವದಿಯವರು ಇಂತಹ ಭೂಮಿಯ ಬಗ್ಗೆ ಕೇಳಿದರು. 'Tiller of the soil is the owner' ಎನ್ನುವಂತೆ ಅಂತಹವರಿಗೆ Form No.7 ಅನ್ನು Tribunal ಗೆ ಕೊಟ್ಟಾಗ occupancy right ಗ್ರಾಂಟ್ ಮಾಡಿ ಕೊಡುವಂತಹ procedure ಇದೆ. ಮಾನ್ಯ ಸವದಿ ರವರು ಕೇಳಿದಂತೆ ಅಂತಹ ಯಾವುದಾದರೂ ದೇವಸ್ಥಾನದ ಭೂಮಿಯನ್ನು ೧-೩-೧೯೭೪ಕ್ಕಿಂತ ಪೂರ್ವದಲ್ಲಿ ಯಾರಾದರೂ tenant ಉಳುಮೆ ಮಾಡುತ್ತಿದ್ದರೆ, ಅಂತಹವರು 'occupancy right' ನಲ್ಲಿ tenant ಆಗುತ್ತಾನೋ, ಇಲ್ಲವೋ ಎಂದು ಕೇಳಿದ್ದಾರೆ. ಬಹುತೇಕ ನನ್ನ ದೃಷ್ಟಿಯಲ್ಲಿ ಭೂಒಡೆಯ ಆಗುತ್ತಾನೆ ಎಂದು ನನ್ನ ಭಾವನೆ.

**ಶ್ರೀ ಆರ್. ಅಶೋಕ್:-** ಅದು ಮೂಲ ಕಾಯ್ದೆಯಲ್ಲಿರುವಂತೆ ಆಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, he will be the owner. Occupancy right grant ಆಗಿ ಆತ ಮಾಲೀಕನಾಗುತ್ತಾನೆ. ಆತ two hundred times assessment ಅನ್ನು ಕಟ್ಟಬೇಕು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, Karnataka Land Reforms Act ಗೆ ಮಾತ್ರ ದಿನಾಂಕ ೧-೩-೧೯೭೩ ಅನ್ವಯವಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಇನಾಂ ಅಬಾಲಿಷ್ ಕಾಯ್ದೆ ೧-೬-೧೯೭೦ಕ್ಕೆ ಸಂಬಂಧಪಟ್ಟಿದೆ. ೧೯೭೦ರ ನಂತರ ಯಾರು ಸ್ವಾಧೀನದಲ್ಲಿದ್ದು, ಭೂಮಿಯನ್ನು ಉಳುಮೆ ಮಾಡುವವರಿಗೆ ಮಾತ್ರ ಬರುತ್ತದೆ, ಆ ನಂತರ ಹಕ್ಕುದಾರಿಕೆ ಸ್ಥಾಪನೆ ಮಾಡಿರುವವರಿಗೆ, ವಂಶವೃಕ್ಷದ ಪ್ರಕಾರವಾಗಿ ಸ್ವಾಧೀನದಲ್ಲಿರುವವರಿಗೆ ಭೂಮಿ ದಕ್ಕುತ್ತದೆ, ಬಾಕಿಯವರಿಗೆ ದಕ್ಕುವುದಿಲ್ಲ. ಅದು the Karnataka Village Offices Abolition Act ಇರಬಹುದು, the Mysore (Personal and Miscellaneous) Inams Abolition Act, 1954, ಇರಬಹುದು, ಇದು ನನ್ನ ಅನಿಸಿಕೆಯಾಗಿದ್ದು, ದಯಮಾಡಿ ಕ್ಲಾರಿಫೈ ಮಾಡಬೇಕು.

**ಶ್ರೀ ಅರವಿಂದಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರಾದ ಇಬ್ರಾಹಿಂರವರು ಕೇಳಿದಂತೆ ಹಳ್ಳಿಗಳಿಗೆ ಇದನ್ನು ಅನ್ವಯ ಮಾಡಿ, ಸಿಟಿಯಲ್ಲಿ ಬರುವ ಕಾರ್ಪೊರೇಷನ್ ಅಥವಾ ಮುನಿಸಿಪಾಲಿಟಿ ಜಮೀನುಗಳಿಗೆ ಸಮಯ ಕೊಡಬಹುದು. ಇದರ ಬಗ್ಗೆ ಬೆಳಕು ಚೆಲ್ಲಬೇಕು.

**ಸಭಾಪತಿಯವರು:-** ಮಾನ್ಯ ಸಚಿವರು ಮೂಲ ಕಾಯ್ದೆಯನ್ನು ಮುಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ಅವರು ಕೇವಲ ಸಮಯ ವಿಸ್ತರಣೆ ಬಗ್ಗೆ ಮಾತ್ರ ಕೇಳಿದ್ದಾರೆ. ಉಳಿದಂತೆ ಯಾವುದೇ ಬದಲಾವಣೆ ಇಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಅಶೋಕ್:-** ಎಲ್ಲರೂ ಅಲ್ಲಿಯೇ ಹೋಗುತ್ತಿದ್ದಾರೆ, ನಾವು ಮೂಲ ಕಾಯ್ದೆಯನ್ನು ಮುಟ್ಟಿಲ್ಲ, ಅದು ಹೇಗಿದೆಯೋ ಹಾಗೆ ಇದೆ, ಅದರಲ್ಲಿ ಇರುವಂತೆಯೇ ಎಲ್ಲವೂ ಇದೆ. ಉಳಿದಂತಹದ್ದನ್ನು ಪ್ರಾಧಿಕಾರ ತೀರ್ಮಾನ ಮಾಡುತ್ತದೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕದ ಚರ್ಚೆ ನಡೆಯುತ್ತಿದೆ. ೧೯೭೪ ರಲ್ಲಿ ಅರ್ಜಿ ಹಾಕಿ ಅಧಿಕಾರಿಗಳ ನಿರ್ಲಕ್ಷ್ಯತನದಿಂದ Regrant Certificate ಅನ್ನು ಕೊಡುವುದು ನಿಧಾನವಾಗಿದೆ. ಅವರು ಕಿಮ್ಮತ್ತು ಕಟ್ಟಿರುವ ದಿನಾಂಕದಿಂದ ೧೫ ವರ್ಷ ಆಗಬೇಕೆಂಬ ನಿಯಮ ಇದೆ. ಕೆಲವರು Regrant Certificate ಅನ್ನು ಕೊಟ್ಟ ಮೇಲೆ ೧೫ ವರ್ಷ ಪರಭಾರೆ ಮಾಡಬಾರದೆಂದು ನಿಯಮ ಮಾಡಿದ್ದಾರೆ. ಅವರು ಕಿಮ್ಮತ್ತು ಕಟ್ಟಿದ ದಿನಾಂಕದಿಂದ ೧೫ ವರ್ಷ ಪರಿಗಣನೆ ಮಾಡಬೇಕು, Regrant Certificate ಕೊಟ್ಟ ನಂತರ ೧೫ ವರ್ಷ ಪರಿಗಣನೆ ಮಾಡಬಾರದೆಂದು ನನ್ನ ಕೋರಿಕೆಯಾಗಿದೆ.

**ಶ್ರೀ ಆರ್.ಅಶೋಕ್:-** ನಿಯಮಗಳಲ್ಲಿ ನಾವು ಕೊಟ್ಟ ಮೇಲೆ ಇದೆಯೇ ಹೊರತು ದುಡ್ಡು ಕಟ್ಟಿದಾಗ ಲೆಕ್ಕ ಬರುವುದಿಲ್ಲ. ಫೈನಲ್ ಸರ್ಟಿಫಿಕೇಟ್ ಕೊಡುವುದರ ಲೆಕ್ಕ ಬರುತ್ತದೆ. ಸರ್ಕಾರದ ಎಲ್ಲಾ ನಿಯಮಗಳು ಹಾಗೆ ಇದೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ "2021ರ ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ ೨**

**ಸಭಾಪತಿಯವರು:** " ಖಂಡ ೨ ಮತ್ತು ೩ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ ೨ ಮತ್ತು ೩ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಖಂಡ ೧ ಇತ್ಯಾದಿ**

**ಸಭಾಪತಿಯವರುಃ** ಪ್ರಸ್ತಾವ ಏನೆಂದರೆ,

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು)

(1253)/22.12.2021/ 1.00/hv.gr (ಸಭಾಪತಿಯವರ ಉಪಸ್ಥಿತಿ)

**(ಈ) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2021**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಅರಬೈಲು ಹೆಬ್ಬಾರ್ ಶಿವರಾಂ (ಕಾರ್ಮಿಕ ಸಚಿವರು)(ಕೃಷಿ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಅರೆಬೈಲು ಹೆಬ್ಬಾರ್ ಶಿವರಾಂ (ಕಾರ್ಮಿಕ ಸಚಿವರು)(ಕೃಷಿ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿಯನ್ನು ತಂದಿರುವಂತಹ ಮೂಲ ಉದ್ದೇಶವೇನೆಂದರೆ, 'ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ' ಎನ್ನುವುದಕ್ಕೆ ಬದಲಾಗಿ **'ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ'** ಎಂದು ಹೊಸದಾಗಿ ನಾಮಕರಣವನ್ನು ಮಾಡುತ್ತಿದ್ದೇವೆ. ಇದೊಂದು ಬಹಳ ಸರಳ ಬದಲಾವಣೆಯಾಗಿದೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವಂತಹ ಈ ತಿದ್ದುಪಡಿಗೆ ನನ್ನ ಸಹಮತವಿದೆ. ಒಂದು ವಿಶ್ವವಿದ್ಯಾಲಯಕ್ಕೆ ಸಾಧನೆಗೈದಿರುವ ಮಹಾಪುರುಷರ ಹೆಸರನ್ನಿಡುವ ಸಂದರ್ಭದಲ್ಲಿ ಸರ್ಕಾರ ಕೆಲವು ನಿಯಮಗಳನ್ನು ಪಾಲಿಸಬೇಕೆನ್ನುವ ಅಭಿಪ್ರಾಯ ನನ್ನದಾಗಿದೆ. ಯಾವುದೇ ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡುವಂತಹ ಸಂದರ್ಭದಲ್ಲಿ ಆ ಕ್ಷೇತ್ರದಲ್ಲಿ ಕೆಲಸ ಮಾಡಿರುವಂತಹ ತಜ್ಞರ ಸಮಿತಿಯನ್ನು ರಚನೆ ಮಾಡಿ, ಆ ಸಮಿತಿಯಿಂದ ಯಾವುದಾದರು ಮೂರು ಹೆಸರುಗಳನ್ನು ಪಡೆದುಕೊಂಡು ಅಂತಿಮ ಹೆಸರನ್ನು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡುವಂತಾಗಬೇಕು. ಅಂತಹ ಒಂದು ಪದ್ಧತಿಯನ್ನು ಸರ್ಕಾರ ರೂಢಿಸಿಕೊಳ್ಳಬೇಕೆನ್ನುವುದು ನನ್ನ ಸಲಹೆಯಾಗಿದೆ. ಸಮಿತಿಯನ್ನು ರಚನೆ ಮಾಡದೇ ತಜ್ಞರ ಸಲಹೆಯನ್ನು ಪಡೆದುಕೊಳ್ಳದೇ, ಸಚಿವ ಸಂಪುಟದ ಮುಂದೆ ಪ್ರಸ್ತಾಪ ಮಾಡದೇ ಮಂತ್ರಿಗಳು ತಾವೇ ಕೂಡಿಸಿ ಸೇರಿಸಿ ಹೆಸರನ್ನು ಹೇಳುವುದು ಸರಿಯಾದ ಕ್ರಮವಲ್ಲ.

ಸನ್ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿಯನ್ನು ತರಲು ಇರುವಂತಹ ಉದ್ದೇಶಗಳು ಮತ್ತು ಕಾರಣಗಳಲ್ಲಿ ಸರ್ಕಾರ, 'ಕೆಳದಿ ಶಿವಪ್ಪ ನಾಯಕರಿಗೆ ಆ ಭೂಮಿಯ ಬಗ್ಗೆ ಮತ್ತು ಕೃಷಿಯ ಬಗ್ಗೆ ಇದಂತಹ ಕಳಕಳಿಯ ಹಿನ್ನೆಲೆಯಲ್ಲಿ, ಈ ತಿದ್ದುಪಡಿಯನ್ನು ತರಲಾಗಿದೆ' ಎಂದು ಹೇಳಿದೆ. ಶಿವಪ್ಪ ನಾಯಕರಿಗೆ ಕೃಷಿಯ ಬಗ್ಗೆ ಇದಂತಹ ಕಳಕಳಿಯ ಬಗ್ಗೆ ನಾನು ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಇಂತಹ ಮಹಾ ಪುರುಷರ ಹೆಸರನ್ನು ವಿಶ್ವವಿದ್ಯಾಲಯಗಳಿಗೆ ಇಡಬೇಕು. ಆಗ ಅಲ್ಲಿ ಅಧ್ಯಯನ ಮಾಡುವಂತಹ ಮಕ್ಕಳು ಇವರ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸುತ್ತಾರೆ. ಆದರೆ, ಯಾವುದೇ ಸಮಿತಿಯಲ್ಲಿ ಅಥವಾ ಕ್ಯಾಬಿನೆಟ್‌ನಲ್ಲಿ ಎಲ್ಲಿಯೂ ಚರ್ಚಿಸದೇ ಈ ತಿದ್ದುಪಡಿಯನ್ನು ತರಲಾಗಿದೆ. ಇನ್ನು ಮುಂದೆ ಆ ರೀತಿ ಆಗುವುದು ಬೇಡವೆಂದು ನಾನು ಸರ್ಕಾರದಲ್ಲಿ ಮನವಿ ಮಾಡುತ್ತಾ, ಈ ವಿಧೇಯಕಕ್ಕೆ ನನ್ನ ಒಪ್ಪಿಗೆಯನ್ನು ಸೂಚಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಕೆಳದಿ ನಾಯಕರಲ್ಲಿ ಶ್ರೇಷ್ಠ ನಾಯಕರು ಕೆಳದಿಯ ಶಿವಪ್ಪ ನಾಯಕರು. ಅವರಿಗೆ ಸಂಬಂಧಿಸಿದ ಭೂಮಿಯಲ್ಲಿ

ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಕೆಳದಿ ಶಿವಪ್ಪ ನಾಯಕರ ಹೆಸರು ಅಜರಾಮರವಾಗಿ ಉಳಿಯಬೇಕಾಗಿದೆ. ಏಕೆಂದರೆ, ಅವರು ವಿಶೇಷವಾಗಿ ಅವರ ಅಸರೊತ್ತಿಕೆ ಸಮಯದಲ್ಲಿ ಕೃಷಿಗೆ ಆದ್ಯತೆಯನ್ನು ನೀಡಿ, ಒಣ ಭೂಮಿ ಬೇಸಾಯ ಮತ್ತು ಮಣ್ಣಿನ ಗುಣಮಟ್ಟಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದರು. ಬಹಳಷ್ಟು ರಾಜ ಮಹಾರಾಜರಿಗೆ ಕೃಷಿಯ ಬಗ್ಗೆ ಆಸಕ್ತಿ ಇರುವುದಿಲ್ಲ. ಮತ್ತೊಂದು ಸಂಸ್ಥಾನದ ಮೇಲೆ ದಂಡೆತ್ತಿ ಹೋಗಿ, ಅದನ್ನು ಸ್ವಾಧೀನಪಡಿಸಿಕೊಂಡು ತಮ್ಮ ಸಂಸ್ಥಾನವನ್ನು ವಿಸ್ತರಣೆ ಮಾಡಬೇಕೆನ್ನುವ ಕಡೆಯೇ ಗಮನಹರಿಸಿರುತ್ತಾರೆ. ಆದರೆ, ಕೃಷಿಯ ಬಗ್ಗೆ ಆಸಕ್ತಿ ವಹಿಸಿರುವಂತಹ ಕೆಳದಿ ಶಿವಪ್ಪ ನಾಯಕನ ಹೆಸರನ್ನು ಈ ವಿಶ್ವವಿದ್ಯಾಲಯಕ್ಕೆ ಇಡುವುದರಲ್ಲಿ ತಪ್ಪಿಲ್ಲ. ಆ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ಸ್ವಾಗತಿಸುತ್ತಿದ್ದೇನೆ. ಇದರ ಜೊತೆಗೆ ಮಾನ್ಯ ಮರಿತಿಬ್ಬೇಗೌಡರು ನೀಡಿರುವಂತಹ ಸಲಹೆಗಳನ್ನು ಸರ್ಕಾರ ಪಾಲನೆ ಮಾಡುವುದು ಸೂಕ್ತವಾಗಿದೆ. ಯಾರೋ ಬಂದು ಮಂತ್ರಿಗಳಿಗೆ ಅರ್ಜಿ ಕೊಟ್ಟು, ಈ ರೀತಿ ಹೆಸರನ್ನು ಇಡಬೇಕೆಂದು ಹೇಳಿದ ಕೂಡಲೇ ಹೆಸರು ಬದಲಾವಣೆ ಮಾಡುವಂತಹ ಕೆಲಸವಾಗಬಾರದು. ಅದರ ಬಗ್ಗೆ ಅಧ್ಯಯನಗಳು ನಡೆಯಬೇಕು. ಈಗ ತಂದಿರುವ ತಿದ್ದುಪಡಿಯ ವಿಚಾರದಲ್ಲಿ ನ್ಯಾಯ ಸಮ್ಮತವಾಗಿ ತೀರ್ಮಾನವನ್ನು ತೆಗೆದುಕೊಂಡಿದ್ದಾರೆಂದು ಭಾವಿಸಿ, ಮುಂಬರುವ ದಿನಗಳಲ್ಲಿ ಮಾನ್ಯ ಮರಿತಿಬ್ಬೇಗೌಡರು ನೀಡಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಅರೆಬೈಲು ಹೆಬ್ಬಾರ್ ಶಿವರಾಂ (ಕಾರ್ಮಿಕ ಸಚಿವರು)(ಕೃಷಿ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರುಗಳು ಕೊಟ್ಟಂಥ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಯಾವುದೇ ವಿಶ್ವವಿದ್ಯಾಲಯಗಳಿಗೆ ನಾಮಕರಣ ಮಾಡುವಂತಹ ಸಂದರ್ಭದಲ್ಲಿ ಅವರುಗಳ ಸಲಹೆ ಸೂಚನೆಗಳನ್ನು ಪರಿಶೀಲಿಸಲಾಗುವುದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಪ್ರಸ್ತುತ ಈ ಮಸೂದೆಗೆ ಸದನ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**" ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 6**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ:
ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೇ;
**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಅರೆಬೈಲು ಹೆಬ್ಬಾರ್ ಶಿವರಾಂ (ಕಾರ್ಮಿಕ ಸಚಿವರು, ಕೃಷಿ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**" ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮಸೂದೆಗೆ ಒಪ್ಪಿಗೆ ನೀಡಲಾಯಿತು**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕ, 2021

## ಪರ್ಯಾಲೋಚನಾ ಪ್ರಸ್ತಾವ

**ಡಾ|| ಕೆ.ಸುಧಾಕರ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

## ಪ್ರಸ್ತಾವವನ್ನು ಮಂಡಿಸಲಾಯಿತು

**ಡಾ|| ಕೆ.ಸುಧಾಕರ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ ಪರ್ಯಾಯ ಮತ್ತು ಸಂಪ್ರದಾಯಿಕ ಚಿಕಿತ್ಸಾ ಪದ್ಧತಿ ಮತ್ತು ಔಷಧಿ ತಯಾರಿಕೆ ಹಾಗೂ ಬಳಕೆ ಇದನ್ನು ಹೆಚ್ಚು ಮಾಡಬೇಕೆನ್ನುವ ಉದ್ದೇಶದಿಂದ ನಮ್ಮ ಆದರಣೀಯ ಪ್ರಧಾನ ಮಂತ್ರಿಗಳಾಗಿರುವ ಮಾನ್ಯ ನರೇಂದ್ರ ಮೋದಿಜೀಯವರು ಇಡೀ ದೇಶದಲ್ಲಿ 2014ರಲ್ಲಿ ಆಯುಷ್ ಇಲಾಖೆಯನ್ನು ಸ್ಥಾಪನೆ ಮಾಡಿದರು. ಅಂದಿನಿಂದ ಇಲ್ಲಿಯವರೆಗೆ ಭಾರತದಲ್ಲಿ ಆಯುಷ್ ಕಾಲೇಜುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿವೆ. ಆಯುಷ್‌ನ ಶಿಕ್ಷಣ ಪದ್ಧತಿ ಮತ್ತು ಅದರ ಅಭ್ಯಾಸ ಕವಲು ದಾರಿಯಲ್ಲಿದೆ. 2017ರ ರಾಷ್ಟ್ರೀಯ ಆರೋಗ್ಯ ನೀತಿಯ ಪ್ರಕಾರ ಆಧುನಿಕ ವಿಜ್ಞಾನ ಮತ್ತು ಭಾರತೀಯ ಪರಂಪರೆಯನ್ನು ಏಕೀಕರಿಸುವಂತಹ ಉದ್ದೇಶದಿಂದ ಈ ವಿಧೇಯಕವನ್ನು ತರಲಾಗಿದೆ. ದಕ್ಷಿಣ ಭಾರತದಲ್ಲಿ ಇದು ಮೊಟ್ಟಮೊದಲನೆಯ ಆಯುಷ್ ವಿಶ್ವವಿದ್ಯಾಲಯವಾಗುತ್ತದೆ. ಉತ್ತರ ಭಾರತದಲ್ಲಿ ಈಗಾಗಲೇ ಪಂಜಾಬ್, ಹರಿಯಾಣ, ಉತ್ತರಕಾಂಡ, ರಾಜಸ್ಥಾನ ಹಾಗೂ ಗುಜರಾತ್ ರಾಜ್ಯಗಳಲ್ಲಿ ಪ್ರತ್ಯೇಕವಾದ ಆಯುರ್ವೇದ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ. ಆದರೆ, ಕರ್ನಾಟಕದಲ್ಲಿ ಆಯುಷ್ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಲಾಗುತ್ತಿದೆ. ಆಯುಷ್ ಎಂದರೆ, ಆಯುರ್ವೇದ, ಯೋಗ, ನ್ಯಾಚುರೋಪತಿ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ ವೈದ್ಯ ಪದ್ಧತಿಗಳನ್ನು ಒಂದೇ ಸೂರಿನಡಿಯಲ್ಲಿ ಅಧ್ಯಯನ ಮಾಡುವುದಕ್ಕೆ ಅನುಕೂಲವಾಗುವಂತೆ ಶಿವಮೊಗ್ಗದಲ್ಲಿ ಸ್ಥಾಪನೆ ಮಾಡಲು ಚಿಂತನೆ ಮಾಡಿದ್ದೇವೆ. ಪಶ್ಚಿಮ ಘಟ್ಟಗಳಲ್ಲಿ ಇರುವಂತಹ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾಕೃತಿಕವಾಗಿ ಔಷಧೀಯ ಸಸ್ಯಗಳ ಕಣಜವಾಗಿದೆ. ಇಲ್ಲಿ ಸಂಶೋಧನೆಗಳಿಗೆ ವಿಶೇಷವಾದ ಒತ್ತನ್ನು ನೀಡಲಾಗುತ್ತದೆ. ಸಂಶೋಧನೆಯಲ್ಲಿ ಲೇಖನಗಳನ್ನು ಮತ್ತು ಪ್ರಬಂಧಗಳನ್ನು ದಾಖಲೀಕರಿಸುವ ಮತ್ತು ಡಿಜಿಟಲೀಕರಣ ಮಾಡುವ ಪ್ರಕ್ರಿಯೆಯ ಮೂಲಕ ಇಡೀ ವಿಶ್ವಕ್ಕೆ ಆಯುಷ್‌ನ ಮಹತ್ವನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾರುವಂತಹ ಕೆಲಸವನ್ನು ಈ ವಿಶ್ವವಿದ್ಯಾಲಯದ ಮೂಲಕ ಮಾಡಲಾಗುತ್ತದೆ. ಇದರ ಜೊತೆಗೆ ಆಯುಷ್ ಪದ್ಧತಿಯನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಕೂಡ ಗಣನೀಯವಾಗಿ ಏರುತ್ತದೆ. ಈಗ ಸ್ವಲ್ಪ ಮಟ್ಟಿಗೆ ಅಸಮತೋಲನವಿದೆ. ಅಲೋಪತಿ ಪದ್ಧತಿಯಲ್ಲಿ ಈಗ ಸುಮಾರು ಒಂದೂವರೆ ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಆಯುಷ್‌ನ ಎಲ್ಲ ಪ್ರಾಕಾರಗಳನ್ನು ಸೇರಿದರೆ ಕೇವಲ 40 ರಿಂದ 42 ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಸಂಖ್ಯೆಯನ್ನು ಹೆಚ್ಚು ಮಾಡಬೇಕಾಗಿದೆ. ಈ ಕಾರಣದ ಹಿನ್ನೆಲೆಯಲ್ಲಿ ಆಯುಷ್ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವಂತಹ ಐತಿಹಾಸಿಕ ನಿರ್ಣಯವನ್ನು ನಮ್ಮ ರಾಜ್ಯ ಸರ್ಕಾರ ತೆಗೆದುಕೊಂಡಿದೆ. ಈ ವಿಧೇಯಕಕ್ಕೆ ಎಲ್ಲ ಗೌರವಾನ್ವಿತ ಸದಸ್ಯರುಗಳಲ್ಲಿ ಇದಕ್ಕೆ ಅಂಗೀಕಾರವನ್ನು ನೀಡಬೇಕೆನ್ನುವ ಮನವಿಯನ್ನು ಮಾಡುತ್ತಿದ್ದೇನೆ.

(ಮುಂದು)

(1254) 22.12.2021 1.10 ಪಿಕೆ:ಎಂಡಿ

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, ಆಯುರ್ವೇದ ಆಸ್ಪತ್ರೆಗಳಲ್ಲೇನಾದರೂ treatment ತೆಗೆದುಕೊಂಡು reimbursement ಗೆಂದು claim ಮಾಡಿದರೆ ಅದನ್ನು ಎಲ್ಐಸಿ ಯವರು ಒಪ್ಪಿಕೊಳ್ಳುವುದಿಲ್ಲ. ಅಂದರೆ ಸರ್ಕಾರದ ಸಂಸ್ಥೆಗಳೇ ಇವುಗಳನ್ನು ಅಂಗೀಕರಿಸುವುದಿಲ್ಲ. ನನಗೆ ಬಿಪಿ, ಸುಡುಗಾಡು ಒಂದೂ ಇಲ್ಲ. ಇದಕ್ಕೆ ಕಾರಣ ನಾವು ಸಣ್ಣ ಹುಡುಗರಿದ್ದಾಗಿನಿಂದಲೇ ಸ್ಥಳೀಯ ಔಷಧಿಗಳನ್ನು ಬಳಕೆ ಮಾಡಿಕೊಂಡು ಬಂದಿರುತ್ತೇವೆ. ಧರ್ಮಸ್ಥಳದ ಆಸ್ಪತ್ರೆಗೆ ಹೋಗಿ ಔಷಧಿ ತೆಗೆದುಕೊಂಡು ಬಂದು reimbursement ಗೆ ಹಾಕಿದರೆ ಕೊಂಕಣ ಸುತ್ತಿ ಮೈಲಾರಕ್ಕೆ ಬಂದರೂ ಅದು ಪಾಸ್ ಆಗುತ್ತಿಲ್ಲ. ಇಂಥದ್ದಕ್ಕೆ ಏಕೆ ವಿಧೇಯಕ ಬೇಕು? ಮೊದಲು ನೀವು ಒಂದು ಪಾಲಿಸಿ ಮಾಡಿ. ಪ್ರಧಾನ ಮಂತ್ರಿಗಳು ಹೇಳಿ 2 ವರ್ಷಗಳಾಗಿವೆ. 70-80-90 ವರ್ಷದ ನಾಟಿ ವೈದರು ನಾಡಿ ಹಿಡಿದು ರೋಗಗಳನ್ನು ಹೇಳುತ್ತಾರೆ. ಆದರೆ ಅವರ ಹತ್ತಿರ certificate ಇಲ್ಲ. Health Department ನವರು ಅವರ ಹತ್ತಿರ ಹೋಗಿ ನೀವು ಮಾಡುತ್ತಿರುವುದು ತಪ್ಪು ಎಂದು ಹೇಳುತ್ತಾರೆ. ನಮ್ಮ ಸಾಗರಲ್ಲಿರುವ ಒಬ್ಬ ವೈದ್ಯರು ಕೊಂದೇ ಹಾಕಿದರು. ಆ ವೈದ್ಯರನ್ನು ಅರಣ್ಯ ಇಲಾಖೆಯವರು ಅರಣ್ಯದೊಳಕ್ಕೆ ಹೋಗಲು ಬಿಡಲೇ ಇಲ್ಲ. ಅವರು ಕಾಡಿಗೆ ಹೋಗಿ ಶುಗರ್ ಮತ್ತು ಕ್ಯಾನ್ಸರ್‌ನಂತಹ ರೋಗಿಗಳಿಗೆ ಉಚಿತವಾಗಿ ಔಷಧಿ ಕೊಡುತ್ತಿದ್ದರು. ಅರಣ್ಯ ಇಲಾಖೆಯವರು ಕೊಟ್ಟ ತೊಂದರೆಯಿಂದ ಅವರು ಸತ್ತರು. ಇಂತಹ ವಿಧೇಯಕಗಳನ್ನು ತಂದಾಗ ಇವರಂತಹ ವೈದ್ಯರನ್ನು ಗುರುತಿಸಿ certificate ಕೊಡುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ? ಮಾನ್ಯ ಸಭಾಪತಿಗಳೆ, ಆಯುರ್ವೇದ ಪದ್ಧತಿಗೆ ಕೇರಳ ಮೂಲವಾಗಿದೆ. ಅಲ್ಲಿರುವ ಕೆಲವರನ್ನು ಈ ಕಮಿಟಿಗಳಿಗೆ ಹಾಕಿ, ಅವರ ಸಲಹೆಗಳನ್ನು ಪಡೆಯಿರಿ. ಅಲೋಪತಿ ಬಿಲ್‌ಗೆ ಹೇಗೆ reimbursement ಕೊಡುತ್ತೀರೋ ಅದೇರೀತಿ ಆಯುರ್ವೇದದ ಔಷಧಿಗಳ ಬಿಲ್‌ಗೂ reimbursement

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡಬೇಕೆಂದು ಎಲ್‌ಐಸಿ ಯವರಿಗೆ ಸ್ಪಷ್ಟವಾಗಿ ಹೇಳಬೇಕು. ಇನ್‌ಶ್ಯೂರೆನ್ಸ್‌ನವರು ಒಪ್ಪದೇ ಇದ್ದರೆ ಅಂಥವರನ್ನು ಇಲ್ಲಿ ಮಾನ್ಯ ಮಾಡುವುದಿಲ್ಲ ಎಂದು ಸಂದೇಶ ಕೊಡದ ಹೊರತು ಆಯುರ್ವೇದಕ್ಕೆ ವೈದ್ಯರು ಬರುವುದಿಲ್ಲ. ಸರ್ಕಾರವೇ ಅವರನ್ನು recognize ಮಾಡಲಿಲ್ಲ ಎಂದರೆ ಹೇಗೇ? ನಾನು ಎರಡು ಬಿಲ್‌ಗಳನ್ನು ಕೊಟ್ಟು ಒಂದು ವರ್ಷವಾದರೂ ಇದುವರೆಗೂ ಅದು ಪಾಸ್ ಆಗಲಿಲ್ಲ. ಅವರು ಆಯುಷ್‌ಗೆ ಕಳುಹಿಸಿದರು, ಇನ್ನೊಂದು ಕಡೆ ಕಳುಹಿಸಿ ಅದು ಹಾಗೆಯೇ ಇದೆ. ಈ ವ್ಯವಸ್ಥೆಯನ್ನು ಸರಿಪಡಿಸಿ ನಂತರ ನೀವು ವಿಧೇಯಕವನ್ನು ತನ್ನಿ.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):**-ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. "ತಾ ಕಳ್ಳ, ಪರರ ನಂಬ" ಎಂದು ಹೇಳುವ ಹಾಗೆ ಈ ಡಾಕ್ಟರ್‌ಗಳ ಗತಿಯಾಗಿದೆ. ಮಾನ್ಯ ಸಚಿವರೂ ಕೂಡ ಒಬ್ಬ ವೈದ್ಯರು. ಇವರು ಒಬ್ಬ ವೈದ್ಯರಾಗಿ ಆಯುಷ್ ಡಾಕ್ಟರ್‌ಗಳನ್ನು ನಂಬುವುದಿಲ್ಲ. ನಾನು ಖಾಸಗಿ ಸದಸ್ಯರ ವಿಧೇಯಕವನ್ನು ತಂದಿದ್ದೇನೆ. ಅದರ ಬಗ್ಗೆ ಇನ್ನೂ ಚರ್ಚೆಯಾಗಿಲ್ಲ ಮತ್ತು ಉತ್ತರ ಕೂಡ ಬಂದಿಲ್ಲ. ಕರ್ನಾಟಕದಲ್ಲಿ 55-60 ಆಯುರ್ವೇದದ ಕಾಲೇಜುಗಳಿವೆ. ಇದರಿಂದ ಪ್ರತಿ ವರ್ಷ 6 ಸಾವಿರ ಜನ ಮಕ್ಕಳು ಹೊರಗೆ ಬರುತ್ತಾರೆ. ನೀವು ಅವರಿಗೆ ಮಾನ್ಯತೆ ಕೊಡುವುದಿಲ್ಲ. ಹಾಗಾದರೆ ನೀವು ವಿಶ್ವವಿದ್ಯಾಲಯವನ್ನೇಕೆ ಮಾಡುತ್ತಿದ್ದೀರಿ? ನಿಮ್ಮ ಉದ್ದೇಶವೇನು? ಕೇವಲ ಕಟ್ಟಡ ಕಟ್ಟುವುದು ಅಷ್ಟೆಯೇ? ಮೊದಲು ಅವರಿಗೆ recognition ಕೊಡಿ. 2009ರಲ್ಲಿತ್ತು, 2018ರಲ್ಲಿತ್ತು. 2020ರಲ್ಲಿ ನೀವು ತಿದ್ದುಪಡಿ ತಂದಿರಿ. ಆಯುರ್ವೇದಕ್ಕೆ ಸಂಬಂಧಪಟ್ಟಂತೆ ಒಂದೇ ಕಟ್ಟಡದಲ್ಲಿ ಎರಡು practice ಮಾಡುವ ಹಾಗಿಲ್ಲ ಎಂದು ಹೇಳಿದಿರಿ. ಮಾನ್ಯ ಸಭಾಪತಿಗಳೆ, ನನ್ನ ಇಬ್ಬರು ಸಹೋದರರ ಪೈಕಿ ಒಬ್ಬ ಎಂಬಿಬಿಎಸ್ ಮತ್ತು ಇನ್ನೊಬ್ಬ ಆಯುರ್ವೇದ ವೈದ್ಯರಾಗಿದ್ದಾರೆ. ನಮಗಿರುವುದು ಒಂದೇ ಆಫೀಸ್. 10-12 ಗಂಟೆಯ ತನಕ ಎಂಬಿಬಿಎಸ್‌ನವರು ಮತ್ತು 3-5 ಗಂಟೆ ತನಕ ಆಯುರ್ವೇದ practice ಮಾಡಬೇಕು ಎಂದರೆ ಇಲಾಖೆಯವರು ಅವರಿಗೆ ಪರ್ಮಿಷನ್ ಕೊಡುತ್ತಿಲ್ಲ. ಇಂತಹ ಮಲತಾಯಿ ಧೋರಣೆಯನ್ನಿಟ್ಟುಕೊಂಡು ಏತಕ್ಕಾಗಿ ಹೊಸ ವಿಶ್ವವಿದ್ಯಾಲಯ ಮಾಡುತ್ತೀರಿ? ನನ್ನದೊಂದು ಖಾಸಗಿ ವಿಧೇಯಕ ಇದೆ; ಅದನ್ನೂ ಕೂಡ ಇದರಲ್ಲಿ ಸೇರಿಸಿ. ನಾನು ಎರಡು ವರ್ಷದಿಂದ ಖಾಸಗಿ ವಿಧೇಯಕಕ್ಕೆ ಕಾಯುತ್ತಿದ್ದೇನೆ. ಕರ್ನಾಟಕದಲ್ಲಿ 55-60 ಆಯುರ್ವೇದ ಕಾಲೇಜುಗಳಿವೆ; ಆರು ಸಾವಿರ ಜನ ಮಕ್ಕಳು ಹೊರಗೆ ಬರುತ್ತಾರೆ. ನೀವು ಅವರಿಗೆ ಮಾನ್ಯತೆಯನ್ನೇ ಕೊಡುವುದಿಲ್ಲ. ಯಾರಾದರೂ ಸತ್ತರೇ ಅವರು certificate ಕೊಡುವ ಹಾಗಿಲ್ಲ. ಅವರು ಕೊಡುವ certificate ಗೆ ಬೆಲೆ ಇಲ್ಲ. ಏಕೆ ಇಂತಹ ಕೆಲಸ ಮಾಡುತ್ತೀರಿ? ಮೊದಲು ಇವರಿಗೆ ಮಾನ್ಯತೆ ಕೊಡುತ್ತೇವೆ ಎಂದು ಹೇಳಿ ನಂತರ ವಿಧೇಯಕವನ್ನು ತನ್ನಿ. ನಾವು ನಿಮ್ಮ ಜೊತೆಗೆ ಇದ್ದೇವೆ. ಆದರೆ, ನೀವು ನಿಮಗೆ ಬೇಕಾದ್ದನ್ನು ಮಾತ್ರ ಮಾಡಿಕೊಂಡು ಇವರಿಗೆ recognition ಕೊಡಲಿಲ್ಲ ಎಂದರೆ ಹೇಗೇ? ನಾನು ಮೊನ್ನೆ ಸುಮಾರು ಒಂದೂವರೆ-ಎರಡು ಗಂಟೆಯ ತನಕ ಮಾತನಾಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕೆ ಸರ್ಕಾರ ಸ್ಪಂದನೆ ಮಾಡಲಿಲ್ಲ. ನಾನು ಹೇಳುತ್ತಿರುವ ಪಾಯಿಂಟನ್ನು ಸ್ವಲ್ಪ ಕೇಳಿ. KPMA (Karnataka Private Medical Establishments Act) Act ನ Chapter 2 Schedule B Rule 7 ನಲ್ಲಿ multi-speciality treatment ಗೆ ನೀವು ಅಲೋ ಮಾಡುವುದಿಲ್ಲ. ಮೊದಲು ಅವರಿಗೆ ಅನುಮತಿ ಕೊಡಿ, ಅವರಿಗೂ ಒಂದು ಮಾನ್ಯತೆ ಕೊಡಿ. 5 ವರ್ಷ BAMS (Bachelor of Ayurveda, Medicine and Surgery) or BMHS (Bachelor of Homeopathic Medicine and Surgery) ಅನ್ನು ಓದುತ್ತಾರೆ. ಸರ್ಕಾರದ್ದೇ ಮೂರು ಕಾಲೇಜುಗಳು ಇವೆ. ನೀವು ಕಾಲೇಜುಗಳನ್ನು ನಡೆಸಿ, ಅವರಿಗೆ certificate ಕೊಟ್ಟು ಅವರು ಹೊರಗಡೆ ಬಂದು, ಆತ ಕೊಡುವ death certificate ಗೆ value ಕೊಡುವುದಿಲ್ಲ ಎನ್ನುವುದಾದರೆ ಏತಕ್ಕೆ ವಿಶ್ವವಿದ್ಯಾಲಯ ಬೇಕು? ನೀವು ಇದಕ್ಕೆ clarification ಕೊಟ್ಟರೆ ನಾನು ಮತ್ತೆ ಕೇಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಆಯುಷ್ ವಿಶ್ವವಿದ್ಯಾಲಯ ವಿಧೇಯಕಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಅದರ ಗುರಿ ಮತ್ತು ಉದ್ದೇಶಗಳ ಬಗ್ಗೆ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ 1996ನೇ ಸಾಲಿನಲ್ಲಿ ರಾಜೀವ್ ಗಾಂಧೀ ವೈದ್ಯಕೀಯ ವಿಶ್ವವಿದ್ಯಾಲಯ ಪ್ರಾರಂಭವಾದಾಗ, ಇದೇ ಕಾರಣಗಳು ಮತ್ತು ಇದೇ ಉದ್ದೇಶಗಳಿತ್ತು. ವೈದ್ಯಕೀಯಕ್ಕೆ ಸಂಬಂಧಪಟ್ಟ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಒಂದೇ ಸೂರಿನ ಅಡಿಯಲ್ಲಿ ತರಬೇಕು, ಒಂದು ವಿಶ್ವವಿದ್ಯಾಲಯದ ಅಡಿಯಲ್ಲಿ ತರಬೇಕು. ಎಲ್ಲಾ ವಿಶ್ವವಿದ್ಯಾಲಯಗಳು, ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು, ಮೆಡಿಕಲ್ ಸೈನ್ಸನ್ನು ಅಧ್ಯಯನ ಮಾಡುತ್ತಿದ್ದಾರೆ, ಅದಕ್ಕೆ ಅವಕಾಶ ಆಗುವುದು ಬೇಡ ಎಂದು ರಾಜೀವ್ ಗಾಂಧೀ ಹೆಲ್ತ್ ಯುನಿವರ್ಸಿಟಿಯನ್ನು ತಂದರು. ಇವತ್ತಿಗೆ 25 ವರ್ಷಗಳಾಯಿತು. ಸರ್ಕಾರದ ಒಂದು ಬಿಡಿಗಾಸಿನಿಂದ ಕೂಡ ಆ ವಿಶ್ವವಿದ್ಯಾಲಯ ನಡೆಯುತ್ತಿಲ್ಲ. ವಿದ್ಯಾರ್ಥಿಗಳ ಶುಲ್ಕದಿಂದ ರಾಜೀವ್‌ಗಾಂಧೀ ವಿಶ್ವವಿದ್ಯಾಲಯ ನಡೆಯುತ್ತಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಇದು ಖ್ಯಾತಿ ಪಡೆದಿದೆ. ಆದರೆ, 25 ವರ್ಷಗಳಾದರೂ ಕೂಡ ಘನ ಸರ್ಕಾರ ಅದಕ್ಕೆ ಒಂದು ಸ್ವಂತ ಕಟ್ಟಡ, ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಆಗಿಲ್ಲ. ಒಂದು ಕ್ಯಾಂಪಸ್ ನಿರ್ಮಾಣ ಮಾಡುವುದಕ್ಕೆ ಆಗಲಿಲ್ಲ. ಅದು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಅದರ ಜೊತೆಗೆ ಸುಮಾರು 300 ಮಂದಿ ಕೆಲಸ ಮಾಡುವ ಕಡೆ ಕೇವಲ 75 ಮಂದಿ ಖಾಯಂ ಫ್ಯಾಕಲ್ಟಿಗಳು ಆ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಸುಮಾರು 800-900 ಕಾಲೇಜುಗಳ ಆಡಳಿತ ವ್ಯವಸ್ಥೆ ಈ ವಿಶ್ವವಿದ್ಯಾಲಯದ ಅಡಿಯಲ್ಲಿವೆ. ಇವತ್ತು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮಾತನಾಡುತ್ತಾ ಹೇಳಿದ ಹಾಗೆ, ಅದೇ ಉದ್ದೇಶದಿಂದ ಸ್ಥಾಪನೆಯಾದಂತಹ ವಿಶ್ವವಿದ್ಯಾಲಯ ಇವತ್ತು ಮೂಲಭೂತ ಸೌಲಭ್ಯದಿಂದ ವಂಚಿತವಾಗಿದೆ. ಆದರೂ ಕೂಡ ಅಲ್ಲಿರುವಂತಹ ವೈದ್ಯರ, ಸಂಶೋಧಕರ ಪರಿಶ್ರಮದಿಂದ ಅಂತಾರಾಷ್ಟ್ರೀಯ ಖ್ಯಾತಿಯನ್ನು ಈ ವಿಶ್ವವಿದ್ಯಾಲಯ ಪಡೆದುಕೊಂಡಿದೆ. ಸರ್ಕಾರ ಅಂತಹ ವಿಶ್ವವಿದ್ಯಾಲಯದ ಅಡಿಯಲ್ಲಿ ಇದುವರೆಗೂ ಕೂಡ ಒಂದು ತರಬೇತಿ ಸಂಸ್ಥೆಯನ್ನಾಗಲಿ, ಸಂಶೋಧನೆ ಸಂಸ್ಥೆಯನ್ನಾಗಲಿ ಪ್ರಾರಂಭ ಮಾಡುವುದಕ್ಕೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅನುದಾನ ಕೊಡಲಿಲ್ಲ. ವಿದ್ಯಾರ್ಥಿಗಳಿಗೆ ತರಬೇತಿ ಕೊಡುವುದಕ್ಕಾಗಿ ಒಂದು ಸಂಸ್ಥೆಯನ್ನು ಕಟ್ಟಲಿಕ್ಕೆ ಅನುದಾನ ಕೊಡಲಿಲ್ಲ. ಇವತ್ತು ಕೇವಲ 60-70 ಆಯುಷ್ ಕಾಲೇಜುಗಳಿವೆ. ನಮ್ಮ ಮೈಸೂರಿನಲ್ಲಿ ಬಹಳ ದೀರ್ಘ ಕಾಲದಿಂದ ಇರುವ ಆಯುಷ್ ಕಾಲೇಜು ಇದೆ. ಮಹಾರಾಜರು ಸ್ಥಾಪನೆ ಮಾಡಿದಂತಹ ಕಾಲೇಜು ಇದಾಗಿದೆ. ಮಾನ್ಯ ಸಭಾಪತಿಗಳೆ, ನಮ್ಮಲ್ಲಿ 400 ಕ್ಕೂ ಹೆಚ್ಚು ನರ್ಸಿಂಗ್ ಕಾಲೇಜುಗಳಿವೆ. ಅದಕ್ಕೇಕೆ ಒಂದು ವಿಶ್ವವಿದ್ಯಾಲಯವನ್ನು ಮಾಡಲಿಲ್ಲ? ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಪರಿಸ್ಥಿತಿಯೇ ಈ ರೀತಿ ಇದೆ. ಕಳೆದ ಎರಡು ವರ್ಷಗಳಿಂದ ಈ ಸರ್ಕಾರ 4 ವೈದ್ಯಕೀಯ ಕಾಲೇಜುಗಳನ್ನು, ಯಾದಗಿರಿ, ಹಾವೇರಿ, ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರು ಪ್ರಾರಂಭ ಮಾಡಬೇಕೆಂದು ಪ್ರಯತ್ನ ಮಾಡುತ್ತಿದೆ. ಸರ್ಕಾರದ ಕಳಕಳಿಗೆ ನಾನು ಅಭಿನಂದಿಸುತ್ತೇನೆ.

(ಮುಂದು)

(1255) 22-12-2021 1.20 DS-MD

**ಶ್ರೀ ಮರಿತಿಬ್ಬೇಗೌಡ (ಮುಂದು):-**

ನಮ್ಮ ವೈದ್ಯಕೀಯ ಶಿಕ್ಷಣ ಸಚಿವರು ಕನಕಪುರಕ್ಕೆ ಸಿಕ್ಕಿದ ವೈದ್ಯಕೀಯ ಕಾಲೇಜ್‌ನ್ನು ಚಿಕ್ಕಬಳ್ಳಾಪುರ ಜಿಲ್ಲೆಗೆ ತೆಗೆದುಕೊಂಡು ಹೋದರು. ಅದಕ್ಕೆ ಮೂಲಭೂತ ಸೌಕರ್ಯಗಳಿಲ್ಲವೆಂದು NMC (National Medical Commission) ಎರಡು ವರ್ಷಗಳಿಂದ ಅನುಮತಿಯನ್ನು ಕೊಟ್ಟಿಲ್ಲ. ಈ 4 ವೈದ್ಯಕೀಯ ಕಾಲೇಜುಗಳು ಪ್ರಾರಂಭವಾಗಿದ್ದರೆ ವಿದ್ಯಾರ್ಥಿಗಳ ಸಂಖ್ಯೆಯೂ ಸಹ ಹೆಚ್ಚುತ್ತಿತ್ತು. ಆಗ ಈ ರಾಜ್ಯದ ವಿದ್ಯಾರ್ಥಿಗಳಿಗೆ ಎಷ್ಟು ಸೀಟು ದೊರೆಯುತ್ತಿತ್ತು ಎಂಬುದನ್ನು ಗಮನಿಸಬೇಕು. ಈ ಬಗ್ಗೆ ಸರ್ಕಾರಕ್ಕೆ ಬಹಳಷ್ಟು ಆಸಕ್ತಿ ಇದೆ. ಅಲ್ಲಿಗೆ ಮೂಲಭೂತ ಸೌಲಭ್ಯವನ್ನು ಕೊಟ್ಟು ಈ 4 ಕಾಲೇಜುಗಳನ್ನು ಪ್ರಾರಂಭ ಮಾಡಿ. ಚಿಕ್ಕಬಳ್ಳಾಪುರಕ್ಕೆ ಮಾನ್ಯ ಸಚಿವರು ಬಹಳ ಆಸಕ್ತಿಯಿಂದ ವೈದ್ಯಕೀಯ ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ತೆಗೆದುಕೊಂಡು ಹೋದರು. ಇದಕ್ಕಾಗಿ ಬಹಳ ಹರಸಾಹಸ ಮಾಡುತ್ತಿದ್ದಾರೆ. ಆದರೆ ಈ ವರ್ಷವೂ ಸಹ NMC ಅನುಮತಿ ಸಿಕ್ಕಿಲ್ಲ. ಹಿಂದುಳಿದ ಜಿಲ್ಲೆಗಳಾದ ಯಾದಗಿರಿ ಮತ್ತು ಹಾವೇರಿ ಜಿಲ್ಲೆಗಳಿಗೆ ಇವರು ವೈದ್ಯಕೀಯ ಕಾಲೇಜ್‌ನ್ನು ತರುವುದಕ್ಕಾಗಲಿಲ್ಲ. ಸರ್ಕಾರದಲ್ಲಿ ಇಂತಹ ಒಂದು ಪರಿಸ್ಥಿತಿ ಇರುವಾಗ ಆಯುಷ್ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಿ ಅಲ್ಲೊಬ್ಬ ವೈಸ್ ಚಾನ್ಸಲರ್‌ನ್ನು ಕೂರಿಸಿ, ಅವರಿಗೆ ಸುಮಾರು 20 ಲಕ್ಷ ರೂ.ಗಳನ್ನು ಕೊಟ್ಟು, ಒಂದು ಹಳೆಯ ಕಟ್ಟಡದಲ್ಲಿ ಒಂದು ಬೋರ್ಡ್ ನೇತು ಹಾಕಿ ಅಲ್ಲಿ ಕುಲಸಚಿವರು, ಉಪ ಕುಲಸಚಿವರು ಮುಂತಾದ ಎಲ್ಲಾ ಹುದ್ದೆಗಳನ್ನು ಸೃಷ್ಟಿ ಮಾಡಿ, ಇವತ್ತು ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಆಯುಷ್ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರವನ್ನು ಪಡೆಯುತ್ತಾರೆಂದರೆ ಅದಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಮಾನ್ಯತೆ ಇದೆ. ಆಯುಷ್ ವಿಶ್ವವಿದ್ಯಾನಿಲಯವನ್ನು ಪ್ರತ್ಯೇಕ ಮಾಡಿದ ನಂತರ ಕರ್ನಾಟಕ ರಾಜ್ಯದಲ್ಲಿ ಇದು ಯಾವ ವಿಶ್ವವಿದ್ಯಾನಿಲಯವೆಂದು ದುರ್ಬೀನು ಹಾಕಿಕೊಂಡು ಹುಡುಕಬೇಕು. ಆ ರೀತಿಯ ಒಂದು ಪರಿಸ್ಥಿತಿ ಬರುತ್ತದೆ. ಇವತ್ತು ಖ್ಯಾತಿ ಪಡೆದಿರತಕ್ಕಂಥ ರಾಜೀವ್‌ಗಾಂಧಿ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ವಿಶ್ವವಿದ್ಯಾನಿಲಯದ ಅಡಿಯಲ್ಲಿ ಆಯುಷ್ ಇರುವುದರಿಂದ ವಿದ್ಯಾರ್ಥಿಗಳೆಲ್ಲರಿಗೂ ಅನುಕೂಲವಾಗುತ್ತದೆ. Medical, Nursing, Pharmacy, Physiotherapy, Allied Health Science, Dental ಈ 6 ಬರುತ್ತದೆ. ನಾಳೆಯ ದಿವಸ ಇನ್ನೊಂದು ಸರ್ಕಾರ, ಇನ್ನೊಬ್ಬ ಮಂತ್ರಿಗಳು ಬಂದು 400 Nursing Colleges ಇವೆ, Nursing University ಮಾಡುತ್ತೇವೆಂದು ಹೇಳುತ್ತಾರೆ. ಅದೇ ರೀತಿ ಇನ್ನೊಬ್ಬರು ಬಂದು ಪ್ರಧಾನ ಮಂತ್ರಿಗಳು ಬಡವರಿಗೆ ಔಷಧಿ ಸಿಗಬೇಕೆಂದು ಹೇಳಿದ್ದಾರೆ. ಹಾಗಾಗಿ ಅದಕ್ಕಾಗಿ Pharmacy University ಮಾಡುತ್ತೇವೆಂದು ಹೇಳುತ್ತಾರೆ. ಇದರಲ್ಲಿ ಬಹಳಷ್ಟು ಸಂಶೋಧನೆಗಳು ನಡೆಯಬೇಕೆನ್ನುತ್ತಾರೆ. ಇನ್ನೊಬ್ಬರು ಬಂದು 40 ವರ್ಷಗಳು ಕಳೆದ ನಂತರ physiotherapy ಬಹಳ ಕಡ್ಡಾಯ ಆ ವಿಷಯಕ್ಕೆ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆನ್ನುತ್ತಾರೆ. ಈಗ ಹಲ್ಲಿನ ಸಮಸ್ಯೆ ಹೆಚ್ಚಾಗಿರುವುದರಿಂದ dental ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆನ್ನುತ್ತಾರೆ. ಆಯುಷ್‌ನಲ್ಲಿಯೇ Ayurveda University ಮಾಡಿ ಎಂದು ನಾಳೆಯ ದಿವಸ ಹೇಳುತ್ತಾರೆ. ಅದೇ ರೀತಿ Homeopathy, Unani, and Naturopathy Universities ಸ್ಥಾಪನೆ ಮಾಡಿ ಎನ್ನುತ್ತಾರೆ. ಯೋಗ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯೋಗ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಈಗಾಗಲೇ ನಾವು ಕೇಳುತ್ತಿದ್ದೇವೆ. ಈ ರೀತಿ ಆಗುವುದಾದರೆ ವೈದ್ಯಕೀಯ ಶಿಕ್ಷಣ ವ್ಯವಸ್ಥೆಯಲ್ಲಿ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ identity ಎಲ್ಲಾದರೂ ಉಳಿಯುತ್ತದೆಯೇ? ಯಾರು, ಯಾವ ವಿದ್ಯಾರ್ಥಿಗಳು ಆಯುಷ್ ಪ್ರತ್ಯೇಕ ವಿಶ್ವವಿದ್ಯಾನಿಲಯ ಬೇಕೆಂದು ಕೇಳಿದ್ದರು? ಇದರಿಂದ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದಲ್ಲಿ ನಮಗೆ ಸರಿಯಾಗಿ recognition ಇಲ್ಲ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮಗೆ ಏನೋ ತೊಂದರೆಯಾಗುತ್ತಿದೆ, ವಿಶ್ವವಿದ್ಯಾನಿಲಯದಲ್ಲಿ ತೊಂದರೆ ಆಗುತ್ತಿದೆ ನಮಗೆ ಪ್ರತ್ಯೇಕ ವಿಶ್ವವಿದ್ಯಾನಿಲಯ ಬೇಕೆಂದು ಯಾರು ಕೇಳಿದ್ದರು? ಈ Medical University 800 ರಿಂದ 900 ಕಾಲೇಜುಗಳನ್ನು ನಿರ್ವಹಣೆ ಮಾಡುತ್ತಿದೆ. ಇವತ್ತು ಇದು ಬಹಳಷ್ಟು ಖ್ಯಾತಿಯನ್ನು ಪಡೆದಿದೆ, ಇದು quality education ನ್ನು ಕೊಡುತ್ತಿದೆ. ಸರ್ಕಾರದ ಯಾವುದೇ ಅನುದಾನವಿಲ್ಲದೇ ವಿದ್ಯಾರ್ಥಿಗಳ ಶುಲ್ಕದಿಂದ ನಡೆಯುತ್ತಿದೆ. ಆದರೆ ಇವತ್ತು ಆಯುಷ್ ವಿಶ್ವವಿದ್ಯಾನಿಲಯಕ್ಕೆ ಸರ್ಕಾರವೇ ಅನುದಾನವನ್ನು ಕೊಡಬೇಕು. ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ನಾವೇ ಸರ್ಕಾರದಲ್ಲಿ ತಪ್ಪುಗಳನ್ನು ಮಾಡುವುದು. Music University, ಜಾನಪದ ವಿಶ್ವವಿದ್ಯಾನಿಲಯ ಎಂದು ಒಂದೊಂದು ವಿಷಯಕ್ಕೆ ಒಂದೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದರು. ನಂತರ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಮಾಡಿದರು. ಅದು ಕಿರಾಣಿ ಅಂಗಡಿಯಲ್ಲಿ ನಡೆಯುತ್ತಿದೆ. Music University ಪ್ರಾರಂಭವಾಗಿ 10 ವರ್ಷಗಳಾದರೂ ಅಲ್ಲಿ 50 ವಿದ್ಯಾರ್ಥಿಗಳಿಲ್ಲ. ಆ ವಿಶ್ವವಿದ್ಯಾನಿಲಯಕ್ಕೆ, ಸಂಸ್ಕೃತ ವಿಶ್ವವಿದ್ಯಾನಿಲಯಕ್ಕೆ ಮತ್ತು ಜಾನಪದ ಸಂಸ್ಕೃತ ವಿಶ್ವವಿದ್ಯಾನಿಲಯಕ್ಕೆ establishment expenditure ಎಷ್ಟು ಮತ್ತು ಎಷ್ಟು ಮಕ್ಕಳು ಕಲಿಯುತ್ತಿದ್ದಾರೆಂದು ಸರ್ಕಾರ ಹೇಳಬೇಕು. ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುತ್ತೇವೆಂದು ಈ ರೀತಿ ಮಾಡುವುದರಿಂದ

ಸರ್ಕಾರದ ಬೊಕ್ಕಸಕ್ಕೆ ತುಂಬಾ ತೊಂದರೆಯಾಗುತ್ತದೆ. ಇದರ ಜೊತೆಗೆ ಯಾವುದೇ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದರೂ ಅಲ್ಲಿನ ವೈಸ್ ಛಾನ್ಸಲರ್‌ಗಳಿಗೆ, ಕುಲಸಚಿವರಿಗೆ ಸಂಪೂರ್ಣವಾದ ಅಧಿಕಾರವಿದೆ. ಸರ್ಕಾರಲ್ಲಿ ಅಲ್ಲಿ ಶಾಸಕರನ್ನು ಅವರು ಸೇರಿಸುವುದೇ ಇಲ್ಲ. ಆಡಳಿತದ ಮುಖ್ಯ ಭಾಗವಾಗಿರುವ ಕಡೆ ಶಾಸಕರನ್ನು ಹಾಕಬೇಕೆಂದು Senate, Syndicate, Executive Committee ಅಥವಾ ವ್ಯವಸ್ಥಾಪನಾ ಮಂಡಲಿ ಇರಲಿ, ಅಲ್ಲಿ ಮೂರು ಮಂದಿ ಶಾಸಕರು, ಇಬ್ಬರು ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಹಾಕಿ ಎಂದು ಹತ್ತಾರು ವರ್ಷಗಳಿಂದ ಕೂಗು ಇದೆ. ಇದನ್ನು ಪರಿಶೀಲಿಸುತ್ತೇವೆ ಎಂದು ಮಾತ್ರ ಹೇಳುತ್ತಾರೆ ಏಕೆ? ಅಲ್ಲಿ ಶಾಸಕರು ಇದ್ದರೆ ಈ ವಿಶ್ವವಿದ್ಯಾಲಯ ಹೇಗೆ ನಡೆಯುತ್ತಿದೆ, ವೈಸ್ ಛಾನ್ಸಲರ್ ಹೇಗೆ ಕೆಲಸ ಮಾಡುತ್ತಿದ್ದಾರೆ, ಇದನ್ನೆಲ್ಲಾ ಗಮನಿಸುವುದು ಬೇಡವೇ? ಇವತ್ತೆಲ್ಲಾ ಸಿಂಡಿಕೇಟ್‌ನಲ್ಲಿ ಎಂಥವರು ಹಾಕುತ್ತಿದ್ದಾರೆಂದರೆ, ಮೈಸೂರು ವಿಶ್ವವಿದ್ಯಾಲಯದಲ್ಲಿ ಸಿಂಡಿಕೇಟ್ ಸದಸ್ಯರಿದ್ದಾರೆ, ಆ ಸಿಂಡಿಕೇಟ್ ಸದಸ್ಯರು ಹೇಳಿದ ಹಾಗೆ ಕೇಳಬೇಕು. ಆ ಸಿಂಡಿಕೇಟ್ ಸದಸ್ಯರಿಗೆ ಇನ್ನು ಮೀಸೆಯೇ ಬಂದಿಲ್ಲ. ಕೆಲವರಿಗೆ ವಿಶ್ವವಿದ್ಯಾಲಯ ಎಂದರೆ ಏನು ಎಂಬುದು ಗೊತ್ತಿಲ್ಲ. ಅಂಥವರನ್ನೆಲ್ಲಾ ಸೆನೆಟ್ ಸದಸ್ಯರನ್ನಾಗಿ ಮಾಡಿದ್ದಾರೆ. ವೈಸ್ ಛಾನ್ಸಲರ್‌ಗಳು ಆಡಳಿತವೇ ಮಾಡುವುದಕ್ಕಾಗುತ್ತಿಲ್ಲ. ಅಂತಹ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. ಅವರಿಗೆ ಶಿಕ್ಷಣದ ಬಗ್ಗೆ ಏನು ತಿಳುವಳಿಕೆ ಇಲ್ಲದಿರುವಂಥವರನ್ನು ಮಾಡುತ್ತಾರೆ. ಅಲ್ಲಿ ಇಬ್ಬರು ಶಾಸಕರನ್ನು ಹಾಕಿ. ಅದನ್ನು ಇವರು ಮಾಡುವುದಿಲ್ಲ. ನನಗಿಂತ ವೈದ್ಯಕೀಯ ಶಿಕ್ಷಣದ ಬಗ್ಗೆ ಮಾನ್ಯ ಸಚಿವರು ಚೆನ್ನಾಗಿ ತಿಳಿದುಕೊಂಡಿದ್ದಾರೆ.

**ಸಭಾಪತಿಯವರು:-** ನೀವು ಡಾಕ್ಟರ್ ಅಲ್ಲವಲ್ಲಾ!

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಹಳ್ಳಿಯವನು. ನಾನು ಹಿಸ್ಟರಿ ಓದಿದ್ದೇನೆ. ನಮ್ಮ ತಂದೆ-ತಾಯಿಗಳಿಗೆ ಇಂತಹದ್ದು ಓದಬೇಕು ಎಂದು ಹೇಳುವುದಕ್ಕೆ ಗೊತ್ತಿರಲಿಲ್ಲ. ಅಂಥದ್ದರಲ್ಲಿ ನಾನು ಹಿಸ್ಟರಿಯಲ್ಲಿ ಎಂ.ಎ. ಮಾಡಿಕೊಂಡು ಬಂದಿದ್ದೇನಲ್ಲಾ ಇದೇ ನನ್ನ ಸೌಭಾಗ್ಯ. ಡಾಕ್ಟರ್ ಎಲ್ಲಿ ಆಗುವುದಕ್ಕೆ ಆಗುತ್ತದೆ?

ಮಾನ್ಯ ಸಭಾಪತಿಯವರೇ, ನಾನು ವಿನಂತಿ ಮಾಡುವುದೇನೆಂದರೆ, ಈ ವಿಧೇಯಕವನ್ನು ವಾಪಸ್ ಪಡೆದುಕೊಳ್ಳುವುದು ಸೂಕ್ತ. ಈ ವಿಧೇಯಕವನ್ನು ಬಹಳ ತರಾತುರಿಯಿಂದ ತಂದಿದ್ದಾರೆ. ನಮ್ಮಲ್ಲೇ ದೊಡ್ಡ ಅಂತರರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾನಿಲಯಕ್ಕೆ ನಾವು ಇನ್ನು ಮೂಲಭೂತ ಸೌಕರ್ಯವನ್ನು ಒದಗಿಸುವುದಕ್ಕಾಗುತ್ತಿಲ್ಲ. ಒಂದು ಕ್ಯಾಂಪಸ್ ಮಾಡುವುದಕ್ಕಾಗಿಲ್ಲ. ಆ ಮೆಡಿಕಲ್ ವಿಶ್ವವಿದ್ಯಾಲಯದ ಅಡಿಯಲ್ಲಿ ಘಟಕ ಕಾಲೇಜುಗಳನ್ನು ಎರಡನ್ನು ಕೂಡ ಇಷ್ಟು ವರ್ಷವಾದರೂ ಒಂದು ಘಟಕ ಮೆಡಿಕಲ್ ಕಾಲೇಜನ್ನು ಸರ್ಕಾರ ಮಾಡುವುದಕ್ಕಾಗಿಲ್ಲ. ಒಂದು ತರಬೇತಿ ಸಂಸ್ಥೆಯನ್ನು ತೆಗೆಯುವುದಕ್ಕಾಗಿಲ್ಲ. ಸಂಶೋಧನಾ ಕೇಂದ್ರವನ್ನು ಸರ್ಕಾರ ತೆಗೆಯುವುದಕ್ಕಾಗಿಲ್ಲ. ಈ ಹೊಸ ಕಾಲೇಜುಗಳಿಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುಮತಿಯನ್ನು ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಇದೊಂದು ವಿಶ್ವವಿದ್ಯಾಲಯ ಎಂದು ಮಾಡಿ, ಆಯುಷ್ ವಿದ್ಯಾರ್ಥಿಗಳಿಗೆ ಈ ವಿಶ್ವವಿದ್ಯಾಲಯದ ಅಡಿಯಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಮಾನ್ಯತೆ ಸಿಗುತ್ತಿದೆ. ಅದನ್ನು ಕೂಡ ಕಿತ್ತು ಹಾಕಿ ಈ ವಿದ್ಯಾರ್ಥಿಗಳೆಲ್ಲಾ ಪಜೀತಿಪಟ್ಟು ಈ ವಿಶ್ವವಿದ್ಯಾನಿಲಯ ಅಂಬೆಗಾಲು ಇಟ್ಟು ಬೆಳೆಯಬೇಕಾದರೆ ಇನ್ನೂ 25 ವರ್ಷ ಆಗಬೇಕಾಗುತ್ತದೆ. ಆ ವಿಶ್ವವಿದ್ಯಾನಿಲಯದ ಕೆಳಗಡೆ ಈ ವಿಶ್ವವಿದ್ಯಾನಿಲಯ ಬೆಳೆಯುವುದಕ್ಕೆ ಸಾಧ್ಯವೇ ಇಲ್ಲ. ಇನ್ನೂ ಕೂಡ ವಿದ್ಯಾರ್ಥಿಗಳಿಗೆ ತೊಂದರೆಯಾಗಿಬಿಡುತ್ತದೆ. ಈ ವಿಶ್ವವಿದ್ಯಾನಿಲಯ ಮಾಡುವುದನ್ನು ಕೈಬಿಡಬೇಕು. ನಾನು ಈ ವಿಧೇಯಕವನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಈ ನಾಡಿನಲ್ಲಿ ವೈದ್ಯಕೀಯ ಶಿಕ್ಷಣ ಪದ್ಧತಿಯಲ್ಲಿ ಬಹಳ ಸಾಧನೆಯನ್ನು ಇವತ್ತು ನಮ್ಮ ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯ ಮಾಡುತ್ತಿದೆ. ಅದರ ಅಡಿಯಲ್ಲೇ ಇದು ಇರಬೇಕು. ಒಂದು ವೇಳೆ ಮುಂದಿನ ದಿನಗಳಲ್ಲಿ ಮಾಡುವುದಾದರೆ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಕುಲಪತಿಗಳ ಜೊತೆಯಲ್ಲಿ ದೊಡ್ಡ ಸಮಾಲೋಚನೆ ಮಾಡಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಮಾಡಿ. ಆದರೆ ಇವತ್ತು ಅಗತ್ಯವಿಲ್ಲ. ಆದ್ದರಿಂದ ಈ ವಿಧೇಯಕವನ್ನು ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ವಿಧೇಯಕಕ್ಕೆ ನನ್ನ ಒಪ್ಪಿಗೆಯಂತೂ ಖಂಡಿತವಾಗಿಯೂ ಇಲ್ಲ. ಇಂತಹ ವಿಶ್ವವಿದ್ಯಾನಿಲಯಗಳು ನಾಯಿ ಕೊಡೆಯಂತೆ ಆಗುತ್ತದೆ. ಇದರಿಂದ ಆಯುಷ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವುದಿಲ್ಲ. ಆಯುಷ್ ವಿದ್ಯಾರ್ಥಿಗಳನ್ನು ನಾವು ಕತ್ತಲೆಯಲ್ಲಿ ಇಟ್ಟ ಹಾಗೆ ಆಗುತ್ತದೆ. ಒಬ್ಬ ಕುಲಪತಿ ಹುದ್ದೆಯನ್ನು ಸೃಜಿಸುವುದಕ್ಕೋಸ್ಕರ ಸರ್ಕಾರಕ್ಕೆ ಬರ್ಡನ್ ಮಾಡುವುದಕ್ಕೋಸ್ಕರ ಈ ವಿಶ್ವವಿದ್ಯಾನಿಲಯ ಮಾಡಿದ ಹಾಗೆ ಆಗುತ್ತದೆ. ತಮ್ಮ ಮೂಲಕ ಈ ವಿಧೇಯಕವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ವಿಧೇಯಕಕ್ಕೆ ನನ್ನ ಒಪ್ಪಿಗೆ ಇಲ್ಲ.

(ಮುಂದು)

1256/22-12-2021/1-30/bkp-ak (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯ ಆಯುಷ್ ವಿಶ್ವ ವಿದ್ಯಾಲಯ ವಿಧೇಯಕ, 2021 ಅನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ಈ ಆಯುರ್ವೇದ ವೈದ್ಯ ಪದ್ಧತಿಯನ್ನು ನಮ್ಮ ಭಾರತ ವಿಶ್ವಕ್ಕೆ ನೀಡಿದೆ. ಆ ಹಿನ್ನೆಲೆಯಲ್ಲಿ ಮಾನ್ಯ ಸಚಿವರು ತಂದಿರತಕ್ಕಂತಹ ಬಿಲ್ ಅನ್ನು ಸ್ವಾಗತ ಮಾಡುತ್ತೇನೆ. ಏಕೆಂದರೆ, ವಿಶ್ವ ಇಂದು ಆಯುರ್ವೇದ ಪದ್ಧತಿಯ ಬಗ್ಗೆ ಭಾರತದ ಕಡೆ ನೋಡುತ್ತಿದೆ. ನಾವು ವಿಶ್ವಕ್ಕೆ ಆಯುರ್ವೇದ ಪದ್ಧತಿಯನ್ನು ಕೊಟ್ಟಿರತಕ್ಕಂತಹ ಈ ಸಂದರ್ಭದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೊಸ ಅವಿಷ್ಕಾರಗಳಿಗೆ ನಾಂದಿ ಹಾಡಬೇಕಾಗಿದೆ. ಯುನಾನಿ ಇದೆ, ಅಲೋಪತಿ ಇದೆ, ಅಲೋಪತಿಯನ್ನು ಇವತ್ತು ಬಿಟ್ಟು ಆಯುರ್ವೇದ ಪದ್ಧತಿಯ ಬಗ್ಗೆ ಭಾರತದ ಕಡೆ ವಿಶ್ವ ನೋಡತಕ್ಕಂತಹ ಸಂದರ್ಭದಲ್ಲಿ ನಾವು ಅವಿಷ್ಕಾರಗಳಿಗೆ ನಾಂದಿ ಹಾಡಬೇಕಾಗಿದೆ. ಈ ಕೋವಿಡ್ ಸಂಧರ್ಭದಲ್ಲಿ ಆರ್ಯವೇದದ ಪದ್ಧತಿಯಿಂದ ಎಷ್ಟೋ ಜನರು ಗುಣಮುಖರಾಗಿದ್ದನ್ನು ನಾವು ನೋಡಿದ್ದೇವೆ. ಹೊಸ ಹೊಸ ಅವಿಷ್ಕಾರಗಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದರು. ಇವತ್ತು ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಕೆಳಗೆ ಎಷ್ಟು ಸಂಸ್ಥೆಗಳು ಬರುತ್ತವೆ? ಅವರೇ ಹೇಳಿರುವ ಹಾಗೆ ನರ್ಸಿಂಗ್ ಕಾಲೇಜು ಇದೆ, Physiotherapy ಇದೆ, ಆರ್ಯುವೇದ ಇದೆ, ಮೆಡಿಕಲ್ ಕಾಲೇಜು ಇದೆ, ಎಷ್ಟು ಸಂಸ್ಥೆಗಳನ್ನು ಒಂದು ವಿಶ್ವವಿದ್ಯಾನಿಲಯ ಮಾನಿಟರ್ ಮಾಡುವುದಕ್ಕೆ ಸಾಧ್ಯವಾಗುತ್ತದೆ?

ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಕೆಳಗೆ ಒಟ್ಟು ಎಷ್ಟು ಸಂಸ್ಥೆಗಳು ಇವೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು. How many medical colleges, nursing colleges and dental colleges are there? Whether one university and one Vice Chancellor can monitor these number of institutions? ಇಷ್ಟು ಸಂಸ್ಥೆಗಳನ್ನು ಇಟ್ಟುಕೊಂಡು ಒಂದು ವಿಶ್ವವಿದ್ಯಾನಿಲಯದ ಒಬ್ಬ ಕುಲಪತಿ ಮತ್ತು ಒಬ್ಬ ಆಡಳಿತಾಧಿಕಾರಿ ವಿದ್ಯಾರ್ಥಿಗಳ ಮತ್ತು ಇಡೀ ನಾಡಿನ ಹಿತರಕ್ಷಣೆಯನ್ನು ಮಾಡಲು ಸಾಧ್ಯವೇ? Whether they are able to inspect those institutions in a year? ಒಂದು ವರ್ಷದಲ್ಲಿ ಹೋಗಿ ಎಲ್ಲಾ ಕಾಲೇಜುಗಳನ್ನು ಮಾನಿಟರ್ ಮಾಡಲು ಸಾಧ್ಯವಾಗುವುದೇ? ಪರೀಕ್ಷೆ ಹೇಗೆ ನಡೆಯುತ್ತಿದೆ, research and development ಹೇಗೆ ನಡೆಯುತ್ತಿದೆ, ಯಾವ ರೀತಿ ಹೊಸ ಅವಿಷ್ಕಾರಗಳಿಗೆ ನಾಂದಿಯನ್ನು ಹಾಡಿದ್ದಾರೆ? ನಾನು ಒಂದೇ ಒಂದು ವಿಚಾರವನ್ನು ಮಾನ್ಯ ಸಚಿವರನ್ನು ಕೇಳಬಯಸುವುದೇನೆಂದರೆ ಕೋವಿಡ್ ಸಂದರ್ಭದಲ್ಲಿ ದೆಹಲಿಯಲ್ಲಿರುವ All India Institute of Medical Sciences ಭಾರತ ದೇಶಕ್ಕೆ ಕೋವಿಡ್ ಬಂದ ನಂತರ ಏನೋ ಆಗಿಬಿಡುತ್ತದೆ, ಇಷ್ಟು ಜನಸಂಖ್ಯೆಯನ್ನು ಯಾರು ಸಹ ರಿಸರ್ಚ್ ಮಾಡಿ ಹೊಸ ಅವಿಷ್ಕಾರ ಮಾಡಲು ಸಾಧ್ಯವಾಗದ್ದನ್ನು ಭಾರತದಲ್ಲಿರುವ ವೈದ್ಯರು ವಿಶ್ವ ಮೆಚ್ಚುವಂತೆ research and development ಮಾಡಿ ಕೋವಿಡ್ ಲಸಿಕೆಯನ್ನು ತಯಾರು ಮಾಡತಕ್ಕ ಕೆಲಸವನ್ನು ಭಾರತದ ವೈದ್ಯರು ಮಾಡಿದ್ದಾರೆ. ಆ ವಿಶ್ವವಿದ್ಯಾನಿಲಯಗಳಿಗೆ ಇರುವ ಸ್ವಾಯತ್ತತೆ ಇದಕ್ಕೆ ಕಾರಣವಾಯಿತು. ಆರ್ಯವೇದ ಚಿಕಿತ್ಸೆಯನ್ನು ಬಳಸತಕ್ಕ ಜವಾಬ್ದಾರಿ ನಮ್ಮ ಮುಂದಿದೆ. ಇಡೀ ವಿಶ್ವದಲ್ಲಿರುವ ಬೇರೆ ಬೇರೆ ರಾಷ್ಟ್ರಗಳ ಜನರು ಚಿಕಿತ್ಸೆಗಾಗಿ ಭಾರತಕ್ಕೆ ಬರುತ್ತಿದ್ದಾರೆ. ಇದರಿಂದ side effects ಕಡಿಮೆ ಇದೆ. ಅಲೋಪತಿಯಿಂದ ವಿಮುಖರಾಗಿ ಆರ್ಯುವೇದ ಚಿಕಿತ್ಸೆಯ ಕಡೆ ಜನರು ಮುಖ ಮಾಡುತ್ತಿದ್ದಾರೆ. ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದಲ್ಲಿ ಒಟ್ಟು ಇರುವ ಸಂಸ್ಥೆಗಳನ್ನು ನಾವು ಲೆಕ್ಕ ಹಾಕಿದರೆ, ಇಲ್ಲಿವರೆಗೆ ಅವುಗಳಿಗೆ ಸ್ವಂತ ಕಟ್ಟಡ ಇಲ್ಲ, ಇಂತಹ ವಿಶ್ವವಿದ್ಯಾನಿಲಯಗಳನ್ನು ಬೇರ್ಪಡಿಸಿ ಅವುಗಳಿಗೆ ಸ್ವಾಯತ್ತತೆಯನ್ನು ನೀಡಿದರೆ ಇನ್ನು ಹೆಚ್ಚಿನ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೋವಿಡ್ ಸಂದರ್ಭದಲ್ಲಿಯೂ ಸಹ ಪ್ರತ್ಯೇಕವಾಗಿ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಹಾಗೆ ಭಾರತದಲ್ಲಿ ಬೇರೆ ಯಾವ ಸಂಸ್ಥೆಗಳು ಕೆಲಸ ಮಾಡಿದ್ದಾವೆ ಎನ್ನುವುದನ್ನು ಮಾನ್ಯ ಸಚಿವರ ತಿಳಿಸಬೇಕು. ಏಕೆಂದರೆ ನಮ್ಮ ಭಾರತ ಬೆಳೆಯುತ್ತಿರುವ ರಾಷ್ಟ್ರ ಆಗಿರುವ ಸಂದರ್ಭದಲ್ಲಿ ಆಯುರ್ವೇದವನ್ನು ವಿಶ್ವಕ್ಕೆ ನೀಡಿರುವ ನಾವು ಈ ವಿಶ್ವವಿದ್ಯಾನಿಲಯವನ್ನು ಒಂದು ಮಾದರಿ ವಿಶ್ವವಿದ್ಯಾನಿಲಯವನ್ನಾಗಿ ಮಾಡಿ. ಇಡೀ ವಿಶ್ವಕ್ಕೆ ಒಂದು ಕೊಡುಗೆಯನ್ನು ಕೊಡಲಿಕ್ಕೆ ಸಾಧ್ಯವಿದೆ. ನನ್ನ ತಿಳುವಳಿಕೆಯ ಪ್ರಕಾರ ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರತಕ್ಕ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಕಾಲೇಜುಗಳು ರಾಜೀವ ಗಾಂಧಿ ವಿಶ್ವವಿದ್ಯಾನಿಲಯದಿಂದ ಬೇರ್ಪಟ್ಟು ಆಯುಷ್ ಕೆಳಗೆ ಬಂದು ಹೊಸ ಅವಿಷ್ಕಾರಗಳಿಗೆ ನಾವು ನಾಂದಿ ಹಾಡಬೇಕಾಗಿದೆ. ಮಾನ್ಯ ಸಚಿವರು ತಂದಿರುವ ಈ ಬಿಲ್ಲನ್ನು ಸ್ವಾಗತ ಮಾಡುತ್ತಾ, I would like to ask one small clarification. Whether the ayurvedic graduates, ಈ ಸರ್ಕಾರಿ ನೇಮಕಾತಿಗಳಲ್ಲಿ ಇವರಿಗೂ ಸಹ ಪ್ರಾಧಾನತ್ಯೆಯನ್ನು ಕೊಡುತ್ತೀರಾ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಮತ್ತು practice ಸಂದರ್ಭದಲ್ಲಿ ಎಂ.ಬಿ.ಬಿ.ಎಸ್ ಡಾಕ್ಟರ್ ಏನು ಪ್ರಾಕ್ಟೀಸ್ ಮಾಡುತ್ತಾರೆ, ಆಯುರ್ವೇದದ ಪದ್ಧತಿಯನ್ನು ಮುಂದುವರೆಸಬೇಕೆನ್ನುವುದು ನನ್ನ ಒತ್ತಾಯ. Because if the graduates from ayurveda also start practicing in allopathy, that is going to be a big alarm for us. ಇದರ ಬಗ್ಗೆ clarify ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಹಾಗೆಯೇ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಬಗ್ಗೆ ಕೂಡ ಸರ್ಕಾರ ಕ್ಲಾರಿಫಿಕೇಷನ್ ನೀಡಬೇಕು. ಇವತ್ತು ಇಡೀ ಭಾರತ ದೇಶದ ಮತ್ತು ವಿಶ್ವದ ಅತಿ ದೊಡ್ಡ ಆರೋಗ್ಯ ವಿಶ್ವವಿದ್ಯಾನಿಲಯ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕ ರಾಜ್ಯದಲ್ಲಿದೆ. ಇಡೀ ದೇಶಕ್ಕೆ ಮತ್ತು ವಿಶ್ವಕ್ಕೆ ಅತಿ ಹೆಚ್ಚು ವಿಶ್ವವಿದ್ಯಾನಿಲಯಗಳನ್ನು ನಮ್ಮ ಕರ್ನಾಟಕ ನೀಡಿದೆ. ಕೋವಿಡ್ ಸಂದರ್ಭದಲ್ಲಿ ಕರ್ನಾಟಕದಲ್ಲಿರುವ ಖಾಸಗಿ ಮತ್ತು ಸರ್ಕಾರಿ ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿರುವ ಬೆಡ್‌ಗಳು, ವೆಂಟಿಲೇಟರ್‌ಗಳು ಮತ್ತು ಚಿಕಿತ್ಸಾ ವ್ಯವಸ್ಥೆ ಕರ್ನಾಟಕವನ್ನು ಕೋವಿಡ್‌ನಿಂದ ರಕ್ಷಣೆ ಮಾಡಿದೆ ಎಂದು ಈ ಸಂದರ್ಭದಲ್ಲಿ ಬಹಳ ಅಭಿಮಾನದಿಂದ ಹೇಳಬಯಸುತ್ತೇನೆ. ಬೇರೆ ರಾಜ್ಯಗಳನ್ನು ನಾವು ಗಮನಿಸಿದಾಗ ನಮ್ಮ ರಾಜ್ಯದಲ್ಲಿರುವ ಆರೋಗ್ಯದ ವ್ಯವಸ್ಥೆ ಭಾರತಕ್ಕೆ ಮಾದರಿಯಾಗುವಂತಹ ರೀತಿಯಲ್ಲಿದೆ. ಆದರೆ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯ ಎಲ್ಲೋ ಒಂದು ಕಡೆ ಸರ್ಕಾರಗಳ ನಿರ್ಲಕ್ಷ್ಯಕ್ಕೆ ಒಳಪಟ್ಟಿದೆ, ನಾನು ಇಂತಹ ಸರ್ಕಾರ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಸ್ವಾಯತ್ತತೆ ಇರತಕ್ಕ ಒಂದು independent medical college ಆಗಬೇಕಾಗಿತ್ತು. All India Institute of Medical Sciences ಹಾಗೆ, 2000 ಬೆಡ್‌ಗಳ ಆಸ್ಪತ್ರೆ ಆಗಬೇಕಾಗಿತ್ತು. ಅಲ್ಲಿ research and development ಆಗಬೇಕಾಗಿತ್ತು. ಅದು ಯಾವುದು ಸಹ ಆಗಿಲ್ಲ. ಈ ತಮ್ಮ ಅವಧಿಯಲ್ಲಾದರೂ ವಿಶ್ವಕ್ಕೆ ಮಾದರಿಯಾಗುವಂತಹ ಪ್ರತ್ಯೇಕ ಆಯುರ್ವೇದ ವಿಶ್ವವಿದ್ಯಾನಿಲಯ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಆಗಬೇಕು. ಅದನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೇ, ನಾನು ಈಗಾಗಲೇ ಪ್ರಸ್ತಾಪ ಮಾಡಬೇಕೆಂದಿದ್ದ ವಿಚಾರವನ್ನು ಮಾನ್ಯ ಸದಸ್ಯರುಗಳಾದ ಶ್ರೀ ಮಹಾಂತೇಶ್ ಕವಟಗಿಮಠ ಮಲ್ಲಿಕಾರ್ಜುನರವರು ಮತ್ತು ಶ್ರೀ ಮರಿತಿಬ್ಬೇಗೌಡರು ಮಾತನಾಡಿದ್ದಾರೆ. ನನಗೆ ವೈದ್ಯಕೀಯ ಸಚಿವರ ಬಳಿ ಒಂದು ವಿಚಾರಕ್ಕೆ ಸ್ಪಷ್ಟತೆ ಬೇಕಾಗಿದೆ. ಅಲೋಪತಿಯನ್ನು ಮಾಡಿದವರು, ಆರ್ಯುವೇದವನ್ನು ಪ್ರಾಕ್ಟೀಸ್ ಮಾಡಬಹುದೇ? ಆರ್ಯುವೇದವನ್ನು ಮಾಡಿದವರು ಅಲೋಪತಿಯನ್ನು ಪ್ರಾಕ್ಟೀಸ್ ಮಾಡಬಹುದೇ? ಹಳ್ಳಿಗಳಲ್ಲಿ ಆಯರ್ವೇದದ ಡಾಕ್ಟರ್‌ಗಳು ಅಲೋಪತಿಯ ಇಂಜೆಕ್ಷನ್‌ಗಳನ್ನು ಕೊಟ್ಟುಕೊಂಡು ಸಾಕಷ್ಟು ರೋಗಿಗಳಿಗೆ ತೊಂದರೆಯನ್ನು ನೀಡಿರುವುದು ಇದೆ. ಈ ರೀತಿ ಮಾಡದ ಹಾಗೆ ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ಆಯುಷ್ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವುದಕ್ಕೆ ನಮಗೆ ಸಂಪೂರ್ಣವಾದ ಒಪ್ಪಿಗೆ ಇದೆ. ಆದರೆ ಅಲೋಪತಿ ಮತ್ತು ಆರ್ಯುವೇದವನ್ನು ಸೆಪರೇಟ್ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ನೀಡುತ್ತೇನೆ.

ಈಗ ಸ್ವಲ್ಪ ಹೊತ್ತಿಗೆ ಮೊದಲು ಕೃಷಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ಕಾಯಿದೆಗೆ ತಂದಂತಹ ಒಂದು ತಿದ್ದುಪಡಿಯನ್ನು ನಾವು ಪಾಸ್ ಮಾಡಿದೆವು. ಅದರಲ್ಲಿ ಈ ರೀತಿ ಇದೆ:-

“**12. The Board of Management and its Constitution.-**...

(2) (vi) Three members of the Karnataka State Legislative Assembly nominated by the Speaker and one member of the Karnataka State Legislative Council nominated by the Chairman to each of the Universities of Bangalore, Dharwad, Raichur and to the University of Agriculture and Horticulture at Shimoga on rotation basis.”

ಈ ಕಾಯಿದೆಯನ್ನು ತರಲಾಗಿದೆ. ಹೀಗೆಯೇ ಈ ವಿಶ್ವವಿದ್ಯಾನಿಲಯಕ್ಕೆ ಏಕೆ ಶಾಸಕರನ್ನು ನೇಮಿಸುವುದಿಲ್ಲ? ಮತ್ತೊಂದು ಬಿಲ್ಲನ್ನು ಸಹ ಡಾ||ಅಶ್ವಥನಾರಾಯಣರವರು ಮಂಡಿಸಿದ್ದಾರೆ, ಅದರಲ್ಲಿಯೂ ಶಾಸಕರು ಇಲ್ಲ. ಒಂದು ವೇಳೆ ನಮ್ಮನ್ನು ನೇಮಕ ಮಾಡಿದಲ್ಲಿ ಆಡಳಿತದಲ್ಲಾದರೂ ನಾವು ನಮ್ಮ ಸಲಹೆಸೂಚನೆಗಳನ್ನು ಅವರಿಗೆ ನೀಡಬಹುದು. ಇದನ್ನು ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಇಡೀ ಭಾರತ ದೇಶದಲ್ಲಿ ಅತಿ ದೊಡ್ಡ ಆರ್ಯುವೇದದ ಆಸ್ಪತ್ರೆ ಆಗಬೇಕೆಂದು ಬಹಳ ಆಸೆಯಿಂದ ಈ ವಿಧೇಯಕವನ್ನು ಜಾರಿಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತರುತ್ತಿದ್ದಾರೆ. ಈ ವಿಚಾರದಲ್ಲಿ ನನಗೊಂದು ಸಂಶಯವಿದೆ. ಈಗ ಅಲೋಪತಿಯ ವಿಚಾರವನ್ನು ಮಾತನಾಡುವಾಗ we will refer to the whole world. America, London, England ಗಳಲ್ಲಿ ಏನೇನು ಹೊಸ ಹೊಸ ರೀತಿಯ ಔಷದಗಳನ್ನು ತಯಾರು ಮಾಡುತ್ತಿದ್ದಾರೆ, ನೂತನವಾದ ವಿಧಾನದತ್ತ ತಮ್ಮ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ. ಆರ್ಯುವೇದದಲ್ಲಿ it will be limited to only India; the only one India. ಅದಕ್ಕೆ ತಾವು ಯಾವ ರೀತಿಯ syllabus ಮಾಡುತ್ತೀರಿ? ಯಾರನ್ನು consult ಮಾಡುತ್ತೀರಿ, ಯಾವ ರೀತಿ ಆರ್ಯುವೇದ ಮಾಡುತ್ತೀರಿ ಎನ್ನುವುದು ಒಂದು ಪ್ರಶ್ನೆ.

ಮಾನ್ಯ ಇಬ್ರಾಹಿಂ ರವರು ಒಂದು ಉದಾಹರಣೆಯನ್ನು ನೀಡಿದರು. A good doctor may not be well read but he is a recognized doctor among the patients. ಅವರು ಒಳ್ಳೆಯ ಔಷಧವನ್ನು ಕೊಡುತ್ತಾರೆ. ಅಂತಹ ಔಷಧಗಳನ್ನು how are you going to recognize it? How are you going to do research on it? ನನ್ನದೇ ಉದಾಹರಣೆ ನೀಡಬೇಕೆಂದರೆ ನನಗೆ ಜಾಂಡೀಸ್ ಆಗಿತ್ತು, ವಾಂತಿ ಭೇದಿ ಆಗಿತ್ತು, ಆಸ್ಪತ್ರೆಗೆ ಹೋದರೂ ಸಹ ಅಲ್ಲಿ ಬೆಡ್ ಇರಲಿಲ್ಲ. ಅಂತಹ ಸಮಯದಲ್ಲಿ ನನಗೆ ಇಲ್ಲಿ ಯಾರೋ ಆರ್ಯುವೇದದ ಡಾಕ್ಟರ್ ಇದ್ದಾರೆ, ಅವರು ಚಿಕಿತ್ಸೆ ನೀಡುತ್ತಾರೆ ಎಂದು ಹೇಳಿದರು. ಆತನನ್ನು ಕರೆಯಿಸಿದಾಗ, ಆತ ಬಂದು ನನ್ನನ್ನು ನೋಡಿ, ಆತನ ಜೊತೆಯಲ್ಲಿ 5 ಚೀಟಿ ತಂದಿದ್ದನು. ಅದನ್ನು ನನಗೆ ಕೊಟ್ಟರು, ಅದನ್ನು ತೆಗೆದುಕೊಂಡ 15-20 ನಿಮಿಷಗಳಲ್ಲಿ I was almost normal. ಆತ ಓದಿಲ್ಲ, educated ಅಲ್ಲ, graduate ಅಲ್ಲ, ಪರಂಪರೆಯಿಂದ ಕಲಿತಂತಹ ವಿದ್ಯೆ. How are you going to answer this now? ಇಂತಹ ವಿದ್ಯೆಗಳು ನಮ್ಮ ದೇಶದಲ್ಲಿ ಬಹಷ್ಟು ಇದ್ದಾವೆ.

(ಮುಂದು)

**(1257) 22.12.2021 01.40 ಎಸ್‌ವಿ-ಎಕೆ** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅಲ್ಲಂ ವೀರಭದ್ರಪ್ಪ (ಮುಂದು):-**
ಇಂತಹ ವಿದ್ಯೆಗಳು ನಮ್ಮ ರಾಜ್ಯದಲ್ಲಿ ಬಹಳಷ್ಟು ಇವೆ, ಕೇರಳದಲ್ಲಿಯೂ ಇವೆ. How are you going to recognize and research it? Please, the government has to answer these questions.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕ, 2021 ಅನ್ನು ಮಾನ್ಯ ಸಚಿವರು ಈ ಸದನದಲ್ಲಿ ಮಂಡಿಸಿದ್ದಾರೆ. ಕೆಳಮನೆಯಿಂದ ಅಂಗೀಕಾರಗೊಂಡು ಇಲ್ಲಿಗೆ ಬಂದಿದೆ. ತಮಗೆ ತಿಳಿದಿರುವಂತೆ ಡಾ:ಬೆನಗಲ್ ಅವರು ನಿಮ್ಮನ್ನು ಕೂಡ ಹಲವು ಬಾರಿ ಭೇಟಿಯಾಗಿದ್ದಾರೆ, ನನ್ನನ್ನೂ ಕೂಡ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಭೇಟಿಯಾಗಿದ್ದಾರೆ. He was honorary doctor for the President of India. ಅವರ ವಿಚಾರ ಧಾರೆಯನ್ನು ನೋಡಿದರೆ ಅಷ್ಟು ಅನುಭವ ಹೊಂದಿದ್ದವರಿಗೆ ಸಹ ಅಲೋಪತಿಯ ಬಗ್ಗೆ ಸರಿಯಾದ ಅಭಿಪ್ರಾಯ ಇರಲಿಲ್ಲ. ಇಂತಹ ಸಂದರ್ಭದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಅಡಿಯಲ್ಲಿ ಸ್ವಾಯತ್ತವಾಗಿ ಆಯುಷ್ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವಂತಹ ವಿಚಾರದ ಬಗ್ಗೆ ಋಣಾತ್ಮಕವಾಗಿ ಮಾತನಾಡಲು ನನಗೇಕೋ ಮನಸ್ಸಾಗುತ್ತಿಲ್ಲ. ಹಿಂದೆ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳು ಜೊತೆಯಾಗಿದ್ದವು. ಈಗ ನಮ್ಮ ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವು ಸ್ವತಂತ್ರವಾಗಿದೆ.

ಮೊದಲು ಒಬ್ಬ ಎಂ.ಬಿ.ಬಿ.ಎಸ್. ವೈದ್ಯ ಎಂದರೆ ಯಾವುದೇ ರೋಗವಿದ್ದರೂ ಅವರೇ ನೋಡುತ್ತಿದ್ದರು. ಈಗ ಕಣ್ಣಿಗೆ Ophthalmologist, ENT Specialist ಬೇರೆ, ಹೃದ್ರೋಗ ತಜ್ಞರೇ ಬೇರೆ, Orthopedic Surgeons ಬೇರೆ ಈ ರೀತಿ ಒಂದೊಂದು ಅಂಗಕ್ಕೆ ಒಬ್ಬೊಬ್ಬರು ವೈದ್ಯರಿದ್ದಾರೆ. 21ನೇ ಶತಮಾನದ ಹೊಸ್ತಿಲಿನಲ್ಲಿ ಬಹಳಷ್ಟು experts ಇರುತ್ತಾರೆ. ಶರೀರದ ಒಂದೊಂದು ಭಾಗದ ಕುರಿತು ವಿಶೇಷವಾಗಿ ಅಧ್ಯಯನ ಮಾಡಿದಂತಹವರು ಇರುತ್ತಾರೆ. Neurologist, Neurosurgeon, Neuro Physician, ಹೀಗೆ ಹೆಚ್ಚು ಪರಿಣಾಮಕಾರಿಯಾಗಿ ರೋಗಿಗಳ ರೋಗಗಳನ್ನು ತಪಾಸಣೆ ಮಾಡಿ ಅದಕ್ಕೆ ಚಿಕಿತ್ಸೆ ಕೊಡುವಂತಹ ಸಾಮರ್ಥ್ಯವಿರುವ ವೈದ್ಯರಿದ್ದಾರೆ. It is an ancient science. ಇದು ಭಾರತದ ಒಂದು ಪುರಾತನ ವಿದ್ಯೆ. ಇದನ್ನು hijack ಮಾಡಿ ಜರ್ಮನಿ ಮುಂತಾದ ಕಡೆಗಳಲ್ಲಿ ಆಯುರ್ವೇದ, ಹೋಮಿಯೋಪತಿ, ಯುನಾನಿ ಮತ್ತು ಯೋಗ ಇವುಗಳಲ್ಲಿ ನಮಗಿಂತಲೂ ಹೆಚ್ಚು ಮುಂದುವರೆದಿದ್ದಾರೆ. ಇದೆಲ್ಲವನ್ನೂ ಕ್ರೋಢೀಕರಣ ಮಾಡಿ Indian ancient science ಗೆ ಪುಷ್ಟಿ ಕೊಡುವ ವಿಚಾರದಿಂದ ಆಯುಷ್ ವಿಶ್ವವಿದ್ಯಾಲಯ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ.

ಹಿಂದೆ ತಮ್ಮ ಸ್ಥಾನದಲ್ಲಿ ಮಾನ್ಯ ಶಂಕರಮೂರ್ತಿಯವರು ಇದ್ದರು. ನನಗೆ ಬೆನ್ನು ನೋವಾಗಿದ್ದು, ನಿಲ್ಲಲಿಕ್ಕೆ, ಕೂಡಲಿಕ್ಕೆ ಆಗದ ಪರಿಸ್ಥಿತಿ ಇತ್ತು. ಅವರು ನನಗೆ ಒಂದು ಸಲಹೆ ನೀಡಿದರು. ಶಿವಮೊಗ್ಗದಲ್ಲಿ ಒಬ್ಬರ ಹೆಸರನ್ನು ಸೂಚಿಸಿದರು. ಅವರ ಹೆಸರು ನಾನು ಮರೆತಿದ್ದೇನೆ. ಹಿಂದೆ ಉಪ ಸಭಾಪತಿಯವರಾಗಿದ್ದಂತಹ ಶ್ರೀಮತಿ ವಿಮಲಾ ಗೌಡರಿಗೆ ಈ ರೀತಿಯಾಗಿದ್ದು, ಅವರು ಚಿಕಿತ್ಸೆಯನ್ನು ತೆಗೆದುಕೊಂಡು ವಾಸಿಯಾಗಿದ್ದರ ಬಗ್ಗೆ ನನಗೆ ಹೇಳಿದರು. ನಾನು ಹಲವು ಆಸ್ಪತ್ರೆಗಳಲ್ಲಿ ವೈದ್ಯರ ಬಳಿ ಎಲ್ಲಾ ರೀತಿಯಲ್ಲೂ ಚೆಕ್ ಮಾಡಿಸಿ ತೋರಿಸಿದಾಗ ನನಗೆ ಶಸ್ತ್ರಚಿಕಿತ್ಸೆಗೆ ಒಳಗಾಗಲು ಸೂಚಿಸಿದ್ದರು. Spinal cord operation ಬಹಳ ಡೇಂಜರ್ ಎಂದು ತಿಳಿದು ಮಾನ್ಯ ಶಂಕರಮೂರ್ತಿಯವರು ಹೇಳಿದ ಕಡೆಯಲ್ಲಿ ಚಿಕಿತ್ಸೆ ಪಡೆಯಲು ನಾನು ಹೋದೆನು. ನನಗೆ ನಡೆಯಲು ಆಗುತ್ತಿರಲಿಲ್ಲ. ಅಲ್ಲಿ ಚಿಕಿತ್ಸೆ ಪಡೆದ ಕೇವಲ ನಾಲ್ಕೈದು ಗಂಟೆಗಳಲ್ಲಿ ನನಗೆ recovery ಆಯಿತು. ಅದು ಹೋಮಿಯೋಪತಿ ಚಿಕಿತ್ಸಾ ಪದ್ಧತಿಯಾಗಿದ್ದು, ಮೂರು ದಿನಗಳಷ್ಟೇ ಟ್ರೀಟ್‌ಮೆಂಟ್ ಇತ್ತು. Sugar-coated tablets ಅನ್ನು ಎರಡು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಗಂಟೆಗಳಿಗೊಮ್ಮೆ ತೆಗೆದುಕೊಳ್ಳುವುದು. ಅಲ್ಲಿಯೇ ಇದ್ದು ಎರಡು ಮೂರು ಬಾರಿ ತೆಗೆದುಕೊಂಡೆನು. ಪೂರ್ಣವಾಗಿ ಆರಾಮಾಯಿತು. ಅದು ಹೇಗೆಂದು ನನಗೆ ಇಂದಿಗೂ ಅರ್ಥವಾಗುತ್ತಿಲ್ಲ. ಈ ರೀತಿಯ ಚಿಕಿತ್ಸಾ ವಿಧಾನಗಳಿವೆ.

ನಾನು ಬಹಳ ಸಣ್ಣವನಿದ್ದಾಗ ಹುನಗುಂದ ತಾಲ್ಲೂಕಿನ ತಿಮ್ಮಾಪುರದಲ್ಲಿ ಪ್ರಾಥಮಿಕ ಶಾಲೆ ಓದುತ್ತಿದ್ದೆನು. ಅಲ್ಲಿ ಒಬ್ಬರು ವಿರೂಪಾಕ್ಷ ಗೌಡರು ಎಂಬುವವರು ಬರುತ್ತಿದ್ದರು. ಇಡೀ ಊರಿಗೆ ಅವರೇ ವೈದ್ಯರು. ಅವರು ನಾಡಿ ಹಿಡಿದು ವಾತ, ಪಿತ್ತ, ಕಫ ಇದರ ಆಧಾರದಲ್ಲಿ ಯಾವುದೋ ಕಷಾಯ ಈ ರೀತಿಯಾದುದನ್ನು ಹೇಳುತ್ತಿದ್ದರು. ಆಗ ಈ ಅಲೋಪತಿ ಎಲ್ಲಿತ್ತು.

ಇನ್ನೂ ಈ ಅಲೋಪತಿಯಲ್ಲಿ side effects ಆಗುತ್ತವೆ. ಆಯುರ್ವೇದ, ಹೋಮಿಯೋಪತಿಯಲ್ಲಿ side effects ಇರುವುದಿಲ್ಲ. ಆದರೆ ಸಮಯ ತೆಗೆದುಕೊಳ್ಳುತ್ತದೆ. ಈ ಮುಂದಿಗೆ ವ್ಯವಧಾನವಿಲ್ಲ. ಮದ್ದು ಕುಡಿದ ಕೂಡಲೇ ಎದ್ದು ಕೂಡಬೇಕು. ಅದು ಯಾವುದೇ ಪರಿಣಾಮ ಆಗುವುದಿರಲಿ. ಇಂತಹ ಒಂದು ವ್ಯವಸ್ಥೆಯಲ್ಲಿ ನಾನು ಈ ವಿಧೇಯಕವನ್ನು ಸ್ವಾಗತ ಮಾಡುವುದರ ಜೊತೆಗೆ ತಾವು ಕವಲು ದಾರಿಯಲ್ಲಿದ್ದೇವೆ ಎಂದು ಹೇಳಿದ ಮಾತಿಗೆ ಒಂದು ಮಾತನ್ನು ಹೇಳಬಯಸುತ್ತೇನೆ.

ಮಾನ್ಯ ಸಚಿವರೇ, ನೀವು modern medicine ದವರು. ಈ ವಿಜ್ಞಾನಗಳ ಬಗ್ಗೆ ತಮ್ಮ ಸ್ಪಷ್ಟವಾದ ಅಭಿಪ್ರಾಯವೇನು? ಏಕೆಂದರೆ ಇದನ್ನು disregard ಮಾಡುವುದಕ್ಕಾಗುವುದಿಲ್ಲ. ಈ ಆಧುನಿಕ ದಿನಮಾನಗಳಲ್ಲಿ ಅಲೋಪತಿ ಮುಖಾಂತರ ವೈದ್ಯಕೀಯ ಕ್ಷೇತ್ರ ಸಾಕಷ್ಟು ಮುಂದುವರೆದಿದೆ. ಆದರೆ ಪ್ರಾಚೀನ ವಿಜ್ಞಾನವನ್ನು ನಾವು ಮರೆಯುವಂತಿಲ್ಲ. ಆಯುರ್ವೇದ, ಹೋಮಿಯೋಪತಿ, ಯುನಾನಿ ಮತ್ತು ಯೋಗ ಇವುಗಳಿಂದ್ದ ಸಾಕಷ್ಟು ಗುಣವಾಗುವಂತಹ ವ್ಯವಸ್ಥೆ ಇದೆಯಲ್ಲವೆ? ಇದರ ಸಲುವಾಗಿ ನೀವು ಒಂದು ವಿಶ್ವವಿದ್ಯಾಲಯವನ್ನು ಮಾಡಿ ಅಲ್ಲಿಂದ ಹೊರಬರುವ ಪದವೀಧರರಿಗೂ scope ಕೊಡಬೇಕು. ಆಯುರ್ವೇದ ಓದಿ ಅಲೋಪತಿ practice ಮಾಡುವವರ ವಿರುದ್ಧ ಕೇಸ್ ಹಾಕಿ ಅವರನ್ನು ಜೈಲಿಗೆ ಹಾಕುವಂತಹ ವ್ಯವಸ್ಥೆ ಬಹಳ ಕಡೆ ಕೇಳಿದ್ದೇವೆ. ಜನರಿಗೂ ಕೂಡ ಈ ಆಯುರ್ವೇದದ ಕಡೆ ಒಲವು ಬರಬೇಕು. ಇದು ಒಳ್ಳೆಯ ವಿಚಾರ.

ಮಾನ್ಯ ಸಭಾಪತಿಯವರೇ, ನಾವು ಚಿಕ್ಕವರಿದ್ದಾಗ ಬೀಳಗಿಯಲ್ಲಿ ಸಿದ್ದಪ್ಪ ಮುತ್ಯಾ ಎನ್ನುವವರಿದ್ದರು. ಇಂದು ಅವರು ಜಾನಪದ ಪಶು ವೈದ್ಯರು. ಅವರು BVSc, MVSc ಮತ್ತು Veterinary Science ನಲ್ಲಿ doctorate ಆಗಿದ್ದವರಿಗೆ challenge ಮಾಡುತ್ತಿದ್ದರು. ದನಗಳ ಆಸ್ಪತ್ರೆಗೆ ಯಾರೂ ಹೋಗದೆ ಎಲ್ಲರೂ ಇವರ ಬಳಿಯೇ ಬರುತ್ತಿದ್ದರು. ಅವರು ವಾರದಲ್ಲಿ ಒಂದು ಬಾರಿ ನೋಡುತ್ತಿದ್ದರು. ಅವರು

ಕೊಡುವ ಔಷಧಿಯಲ್ಲಿ ಒಂದು ಸತ್ವ ಇರುತ್ತಿತ್ತು. ಅದಕ್ಕೆ ಈ ವಿಜ್ಞಾನವನ್ನು ಬೆಳವಣಿಗೆ ಮಾಡಬೇಕು. ಇದರ ಮೂಲಕ ಯಾವುದೇ side effects ಇಲ್ಲದೆ, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರದಂತೆ ಆಯುರ್ವೇದ, ಹೋಮಿಯೋಪತಿ, ಯುನಾನಿ, ಯೋಗ ಇವುಗಳ ವಿಶ್ವವಿದ್ಯಾಲಯ ಮಾಡುವುದನ್ನು ನಾನು ಸ್ವಾಗತಿಸುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಆಯುಷ್ ವಿಶ್ವವಿದ್ಯಾಲಯ ವಿಧೇಯಕ 2021 ಅನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕೆಳಗೆ 953 ಸಂಸ್ಥೆಗಳಿವೆ. ವೈದ್ಯಕೀಯ – 41, ದಂತ ವೈದ್ಯಕೀಯ – 38, ಆಯುಷ್ - 105, ಫಾರ್ಮಸಿ – 102, ನರ್ಸಿಂಗ್ - 473, ಫಿಸಿಯೋಥೆರಪಿ – 83, Allied Health Sciences – 111. ಅಂದರೆ ಒಂದು ಸಾವಿರದವರೆವಿಗೂ institutions ಇವೆ. ನಮ್ಮ ದೇಶದಲ್ಲಿ ಇತ್ತೀಚೆಗೆ ಚರ್ಚೆ ನಡೆಯುತ್ತಿರುವುದೇನೆಂದರೆ ಇಷ್ಟು ದೊಡ್ಡ ವಿಶ್ವವಿದ್ಯಾಲಯವನ್ನು ನಿರ್ವಹಣೆ ಮಾಡಲು ಒಬ್ಬ Registrar ಸಾಕಾಗುವುದಿಲ್ಲ, ಒಬ್ಬ Vice Chancellor ಸಾಕಾಗುವುದಿಲ್ಲ. ಬಹಳಷ್ಟು ಕೋರ್ಸ್‌ಗಳು Rajiv Gandhi Medical University ಕೆಳಗೆ ಬಂದಿವೆ.

**ಸಭಾಪತಿಯವರು:-** ಸ್ವಲ್ಪ ಸಂಕ್ಷಿಪ್ತವಾಗಿ ಮಾತನಾಡಿ ಬೇಗ ಬೇಗ. ಹೇಳಿದ್ದೇ ಹೇಳಬೇಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅದರಲ್ಲಿ ಅಲೋಪತಿ, ಆಯುರ್ವೇದ ಈ ರೀತಿ ಬೇರೆ ಬೇರೆ ಎಲ್ಲಾ ಕೋರ್ಸ್‌ಗಳು ಬಂದಿದೆ. ಈ ಸಂದರ್ಭದಲ್ಲಿ ವಿಶೇಷವಾಗಿ ಕರ್ನಾಟಕವು ಶೈಕ್ಷಣಿಕವಾಗಿ ಸ್ವಲ್ಪ ಮುಂದುವರೆದಿರುವ ರಾಜ್ಯ. ಇಡೀ ದೇಶಕ್ಕೆ ಹೋಲಿಕೆ ಮಾಡಿದರೆ ಆಯುರ್ವೇದಿಕ್ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು ನಮ್ಮ ರಾಜ್ಯದಲ್ಲಿ ಜಾಸ್ತಿ ಇದೆ. ಈ ವಿಷಯದಲ್ಲಿ ಹೆಚ್ಚು ಸಂಶೋಧನೆ ಆಗಬೇಕಿದೆ. ಮಾನ್ಯ ಇಬ್ರಾಹಿಂ ಅವರು ಹೇಳಿದಂತೆ ಆಯುರ್ವೇದ ಎಂದರೆ ಕೇರಳ. ಆದರೆ ಕೇರಳದ ವಿದ್ಯಾರ್ಥಿಗಳು ಆಯುರ್ವೇದ ಕಲಿಯಲು, ಫಾರ್ಮಸಿ ಕಲಿಯಲು ಕರ್ನಾಟಕಕ್ಕೆ ಬರುತ್ತಿದ್ದಾರೆ. ಗುಜರಾತ್‌ನವರೂ ಕೂಡ ಬರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಆಯುಷ್ ವಿಶ್ವವಿದ್ಯಾಲಯವನ್ನು ಸ್ಥಾಪಿಸುತ್ತಿರುವುದು ಹೆಚ್ಚು ಸಂಶೋಧನೆಗಾಗಿ, ಹೆಚ್ಚು ಅಧ್ಯಯನಕ್ಕಾಗಿ ಸಾಕಷ್ಟು ಉಪಯೋಗವಾಗುತ್ತದೆ. ಆಯುಷ್‌ನಲ್ಲಿ 113, ಆಯುರ್ವೇದಿಕ್ 78, ಹೋಮಿಯೋಪತಿ 18 institutions ಇವೆ. Nearly 200 institutions ಇದರಡಿಯಲ್ಲಿ ಬರುತ್ತವೆ. ಇದು ಚಿಕ್ಕ ವಿಶ್ವವಿದ್ಯಾಲಯವಾಗುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅದರ ಒಳಗೆ ಪ್ರಕೃತಿಯ ಮಡಿಲಿನಲ್ಲಿ ತುಂಗಭದ್ರೆಯ ದಡದಲ್ಲಿ ಸಾಕಷ್ಟು ಗಿಡಮೂಲಿಕೆಗಳನ್ನು ಅಧ್ಯಯನ ಮಾಡಬೇಕಾಗಿದೆ. ಸಂಶೋಧನೆ ಮಾಡಬೇಕಾಗಿದೆ.

(ಮುಂದು)

**(1258) 22-12-2021 (1.50) ಕೆಜಿ – ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ರವಿಕುಮಾರ್ (ಮುಂದು):-**

ನಮ್ಮ ದೇಶದ ಮಾನವನ ಎಲ್ಲಾ ರೋಗಗಗಳಿಗೆ ನಿಜಕ್ಕೂ research ಮಾಡಿದರೆ, ಪರಿಹಾರ ಆರ್ಯುವೇದ ಔಷಧಿ ಎಂದು ಸಾಕಷ್ಟು research ಗಳು ಹೇಳುತ್ತಿವೆ. ನಾವು ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರವೆಂದು ಹೇಳುತ್ತೇವೆ. ಆರ್ಯುವೇದದಲ್ಲಿ ಅಧ್ಯಯನ ಮಾಡುವುದಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯ ಏಕೆ ಆಗಬಾರದು? ವಿಶ್ವವಿದ್ಯಾಲಯವನ್ನು ವಿರೋಧ ಮಾಡುವುದು ಸರಿಯಲ್ಲವೆಂದು ನನಗೆ ಅನಿಸುತ್ತದೆ. ಅವರು Administration ಯಾವ ರೀತಿ ಇರಬೇಕೆಂದು ಹೇಳಲಿ. Course ಈ ರೀತಿ ಇರಬೇಕೆಂದು ಹೇಳಲಿ. System ಯಾವ ರೀತಿ ಇರಬೇಕೆಂದು ಹೇಳಲಿ. ಆದರೆ, ವಿಶ್ವವಿದ್ಯಾಲಯವನ್ನು ವಿರೋಧ ಮಾಡುವುದು ಸರಿಯಲ್ಲ. ಮಾನ್ಯ ಸಚಿವರಿಗೆ ಇದರ ಬಗ್ಗೆ ಏನು ಮಾಡಬೇಕೆಂದು ಒಂದು ಸಭೆಯನ್ನು ಕರೆಯಿರಿ ಎಂದು ಹೇಳಲಿ. ಆಯುಷ್ ವಿಶ್ವವಿದ್ಯಾನಿಲಯ ಈ model-ಇರಲಿ, ಈ system ನಲ್ಲಿ ಇರಲಿ ಎಂದು ಹೇಳಲಿ. ಇಡೀ ಪ್ರಪಂಚದಲ್ಲಿಯೇ ಆಯುಷ್ ವಿಶ್ವವಿದ್ಯಾನಿಲಯ ಗಮನ ಸೆಳೆಯುವ ರೀತಿ ಆಗಲಿ. ಅದಕ್ಕೆ ಅವರು ಸಲಹೆಗಳನ್ನು ಕೊಡಲಿ. ಸರ್ಕಾರ ಆಯುಷ್ ವಿಶ್ವವಿದ್ಯಾನಿಲಯ ಮಾಡಬೇಕು ಎನ್ನುವಂತಹ ನಿರ್ಧಾರವನ್ನು ಮಾಡಿದ್ದಾರೆ, ಇದನ್ನು ನಾನು ಸ್ವಾಗತಿಸುತ್ತೇನೆ. ಅದೇರೀತಿ ಎಲ್ಲ ಮಿತ್ರರು ಸಹ ಇದನ್ನು ಸ್ವಾಗತಿಸಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

**ಸಭಾಪತಿಯವರು:-** ಈ ವಿಧೇಯಕದ ಮೇಲೆ ಇನ್ನೂ 5 ಜನ ಸದಸ್ಯರು ಮಾತನಾಡುವವರು ಇದ್ದಾರೆ. ಅದಕ್ಕೆ ನಾನು ಸಚಿವರು ಹೇಳಿದ ನಂತರ, ಈ 5 ಜನರಿಗೆ clarification ಕೇಳುವುದಕ್ಕೆ ಸಮಯವನ್ನು ಕೊಡುತ್ತೇನೆ. ಈಗಲೇ ಬಹಳ ವೇಳೆಯಾಗಿದೆ. ಮಾನ್ಯ ಸದಸ್ಯರಾದ ನಾಯಕ್‌ರವರು, ಡಾ|| ತೇಜಸ್ವಿನಿಗೌಡರವರು, ಶ್ರೀ ಅಪ್ಪಾಜೀಗೌಡರವರು, ಶ್ರೀ ಸಂದೇಶ್‌ನಾಗರಾಜ್‌ರವರು ಹಾಗೂ ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಸೇರಿದಂತೆ 5 ಮಂದಿ ಮಾತನಾಡುವವರು ಇದ್ದಾರೆ. ಇವರಿಗೆ clarification ಕೇಳುವುದಕ್ಕೆ ಸಮಯ ಕೊಡುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, clarification ಕೇಳುವುದು ಏನಿಲ್ಲ. ನಾವೆಲ್ಲರೂ ಇದಕ್ಕೆ ಪೂರಕವಾಗಿಯೇ ಮಾತನಾಡುತ್ತೇವೆ.

**ಸಭಾಪತಿಯವರು:-** ಮಾತನಾಡಿ ಎಂದರೆ, ಎಲ್ಲರೂ ಭಾಷಣ ಮಾಡುವಂತೆ ಮಾತನಾಡಿದರೆ ಏನು ಮಾಡುವುದು? ಆಯಿತು, ಮಾತನಾಡಿ. ಇದಕ್ಕೆ ನನ್ನ ತಕರಾರು ಇಲ್ಲ.

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಿಲ್ಲ. ನನಗೆ ಇದಕ್ಕೆ ಒಪ್ಪಿಗೆ ಇದೆ.

**ಸಭಾಪತಿಯವರು:-** ಆಯಿತು. ಬಿಡಿ. ನಾಯಕರೇ, ತಾವೀಗ ಮಾತನಾಡಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನಾನು ಏನು ಮಾತನಾಡಬೇಕೆಂದು ಅಪೇಕ್ಷೆಪಟ್ಟಿದೆನೋ ಅದನ್ನು ಪ್ರತಿಪಕ್ಷದ ನಾಯಕರು ಮಾತನಾಡಿದ್ದಾರೆ. ಹಾಗಾಗಿ, ಒಂದು ವಿಷಯವನ್ನು ಮಾತ್ರ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಪಿಯುಸಿಯಲ್ಲಿ ವಿಜ್ಞಾನ ವಿಷಯವನ್ನು ತೆಗೆದುಕೊಂಡು ಅಧ್ಯಯನ ಮಾಡಿ ವೈದ್ಯನಾಗಬೇಕೆಂದು ಆಸೆ ಪಟ್ಟಿದೆ. ಆ ಸಂದರ್ಭದಲ್ಲಿ ನಮ್ಮ ತಂದೆಯವರು emergency ಯಲ್ಲಿದ್ದರು. ನನಗೆ ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಗುವುದಿತ್ತು. ಆದರೆ, ಅನಿವಾರ್ಯ ಸಂಗತಿಗಳು ಏರ್ಪಟ್ಟಿದ್ದರಿಂದ ಸೀಟು ಸಿಗಲಿಲ್ಲ. ಇದಾದ ನಂತರ ನಾನು ಬಿ.ಎ., ಮಾಡಿ ಎಲ್.ಎಲ್.ಬಿ., ಮಾಡಿದೆ. ಆದರೆ, ನನಗೆ ಆ ಸಮಯದಲ್ಲಿ MBBS ಗೆ ಸೀಟು ಸಿಗದಿದ್ದರೂ ಸಹ, ಉಡುಪಿಯಲ್ಲಿ ವ್ಯಾಸಾಚಾರ್ಯರು ನಡೆಸುತ್ತಿದ್ದಂತಹ ಆಯುರ್ವೇದ ಕಾಲೇಜಿನಲ್ಲಿ ಸೀಟು ಸಿಕ್ಕಿತ್ತು. ಆದರೆ, ನನ್ನ ಜೊತೆಗೆ ವ್ಯಾಸಂಗ ಮಾಡಿ MBBS ಪದವಿಗೆ ಹೋದಂತಹ ನನ್ನ ಗೆಳೆಯರು ನನ್ನನ್ನು ವೈದ್ಯ ಆಗುವುದನ್ನು ಬಿಟ್ಟು ಪಂಡಿತ ಆಗುವುದಕ್ಕೆ ಹೊರಟ್ಟಿದ್ದೀರಾ ಎಂದು ತಮಾಷೆ ಮಾಡಿದರು. ಆಯುರ್ವೇದದ ಬಗ್ಗೆ ಆ ರೀತಿ ಹೇಳಿದರು.

**ಸಭಾಪತಿಯವರು:-** ನಾಯಕ್‌ರವರೇ, ಈಗ ಆಯುಷ್ ಬಗ್ಗೆ ಹೇಳಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ**:- ಮಾನ್ಯ ಸಭಾಪತಿಯವರೇ, ಆಯುಷ್ ವಿಶ್ವವಿದ್ಯಾನಿಲಯವನ್ನು ಏಕೆ ಮಾಡಬೇಕೆಂದು ಅಪೇಕ್ಷೆ ಪಡುತ್ತೇನೆಂದರೆ, ಆಯುರ್ವೇದಿಕ್ ಎಂದು ಹೇಳಿದರೆ, ಅದು ಒಂದು ತರಹ inferior ಬಾವನೆ ಇದೆ. ನಾನು ಧರ್ಮಸ್ಥಳದಿಂದ ಬಂದಿರುವಂತಹವನು. ಪ್ರಕೃತಿ ಚಿಕಿತ್ಸೆ ಪ್ರಾರಂಭವಾದ ದಿವಸದಿಂದ ಇವತ್ತಿನವರೆಗೆ ಅದು ಯಾವ ರೀತಿಯಲ್ಲಿ ಬೆಳೆದಿದೆ ಎನ್ನುವುದನ್ನು ನೋಡಿದಾಗ, ಈ ಆಯುಷ್ ಅಡಿಯಲ್ಲಿ ಬರುವಂತಹ 5 ಸಂಗತಿಗಳು ನಮ್ಮವು. ಇದರ ಬಗ್ಗೆ ಒಂದು ವಿಶೇಷವಾದಂತಹ ವಿಶ್ವವಿದ್ಯಾಲಯ ಆಗಬೇಕು ಮತ್ತು ಅದರ ಬಗ್ಗೆ ಹೆಚ್ಚಿನ ಗಮನಕೊಡಬೇಕು. Sam Pitroda ರವರು ಹೇಳುವ ಪ್ರಕಾರ, ಒಂದು ವಿಶ್ವವಿದ್ಯಾಲಯದ ಕೆಳಗೆ ಕನಿಷ್ಠ 100 ಕಾಲೇಜುಗಳು ಇರಬಹುದು ಎಂದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳಿದ್ದಾರೆ. ಅಂತಹದ್ದರಲ್ಲಿ ನಮ್ಮದಾಂತಹ ಹೆಚ್ಚು ವಿಸ್ತಾರವಾದಂತಹ ಜ್ಞಾನ ಸಂಪತ್ತು ಏನಿದೆ, ಅದರ ಬಗ್ಗೆ ಗಮನ ಕೊಡುವಂತಹ ಒಂದು ವಿಶೇಷವಾದಂತಹ ವಿಶ್ವವಿದ್ಯಾಲಯ ಆಗಬೇಕು ಎನ್ನುವಂತಹ ಆಶಯವನ್ನು ವ್ಯಕ್ತಪಡಿಸುತ್ತಾ, ಈ ವಿಧೇಯಕಕ್ಕೆ ನಾನು ಬೆಂಬಲವನ್ನು ವ್ಯಕ್ತ ಪಡಿಸುತ್ತೇನೆ.

**ಡಾ||ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ಸರ್ಕಾರ ತಂದಿರುವಂತಹ ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕ, 2021 ಅನ್ನು ನಾನು ಸ್ವಾಗತಿಸುತ್ತೇನೆ. ಇವತ್ತಿನ ದಿವಸ Dermatology ಗೆ Medical Field ನಲ್ಲಿ ಬಹಳ ಬೇಡಿಕೆ ಇದೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

ಚರ್ಮರೋಗಗಳ ಸಮಸ್ಯೆ ಮತ್ತು ಶೀತ ಪ್ರದೇಶದಲ್ಲಿ ಕಾಡುವಂತಹ ಅನೇಕ ರೀತಿಯ ಸಮಸ್ಯೆಗಳಿಂದ ಇದೆ. ಅದೇರೀತಿ ಸೌಂದರ್ಯವರ್ಧಕಗಳು. ಸೌಂದರ್ಯವರ್ಧಕಗಳಿಗಾಗಿ ವೈದ್ಯರ ಬಳಿ ಎಷ್ಟು ಅಂದರೆ, ಬಹುಶಃ ಅಚ್ಚರಿ ಮೂಡಿಸುವಂತಹ ಅಂಕಿ ಅಂಶಗಳನ್ನು ಮತ್ತು ಸೌಂದರ್ಯವರ್ಧಕಗಳ ಮಾರಾಟದ ವಹಿವಾಟನ್ನು ನೋಡಬಹುದಾಗಿದೆ. ಇಂತಹ ಸಂದರ್ಭದಲ್ಲಿ ಪ್ರಸ್ತುತ ಇರುವಂತಹ ಚಿಕಿತ್ಸೆಗಳಿಂದ side-effects ಆಗುತ್ತಿದೆ. ಏಕೆಂದರೆ, ಮದ್ದುಗಳನ್ನು ಹೆಚ್ಚಿಗೆ ತೆಗೆದುಕೊಳ್ಳುವುದರಿಂದ side-effects ಆಗುತ್ತದೆ. ಆದ್ದರಿಂದ side-effects ಇಲ್ಲದಿರುವಂತಹ ಮದ್ದು ಬೇಕೆಂದು ಹಿರಿಯ ನಾಗರಿಕರ ವಿಶೇಷವಾದಂತಹ ಬೇಡಿಕೆಯಾಗಿದೆ. ಅದೇರೀತಿ ಮಕ್ಕಳಿಗೂ ಸಹ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವಂತಹ ಒಂದು ಉದ್ದೇಶ ಸಹ ಇದರಲ್ಲಿದೆ. ಆಯುಷ್‌ಗೆ ಈಗಾಗಲೇ ಶಿವಮೊಗ್ಗದಲ್ಲಿ infrastructure ಇದೆ. ಸುಮಾರು 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಇದನ್ನು ಮಾಡಬಹುದು. ಇದು ಸರ್ಕಾರಕ್ಕೆ ಹೊರೆಯಾಗುವುದಿಲ್ಲ.

ಮಾನ್ಯ ಸಭಾಪತಿಯವರೇ, ಇನ್ನೊಂದು, ಸಾಹಿತ್ಯ, ಸಂಸ್ಕೃತಿ ಇರುವಂತಹ ನಮ್ಮ ಸಹ್ಯಾದ್ರಿಯ ಮಡಿಲು ಬೇರೆ ಎಲ್ಲೂ ಸಿಗುವುದಿಲ್ಲ. ನಮ್ಮ ಇಡೀ ಪ್ರಪಂಚದಲ್ಲಿ, ನಮ್ಮ ಸಹ್ಯಾದ್ರಿ, ಪಶ್ಚಿಮ ಘಟ್ಟಗಳಲ್ಲಿರುವಂತಹ ಅಮೂಲ್ಯವಾದಂತಹ ಸಸ್ಯ ಪ್ರಬೇದಗಳು ಏನಿವೆ, ಇದರ ಮೇಲೆ Research & Development ಆಗದಿದ್ದರೆ, ಯಾವ ರೀತಿ ಸಾಧ್ಯ? ಇವತ್ತಿನ ದಿವಸ ಬೊಜ್ಜು ಕರಗಿಸಬೇಕೆಂದರೆ, ಬೂದುಕುಂಬಳಕಾಯಿ ರಸ ಕುಡಿಯಿರಿ ಎಂದು ಹೇಳುತ್ತಾರೆ. ಚರ್ಮ ರೋಗಗಳಿಗೆ ಬೇವಿನ ಸೊಪ್ಪು ಸೌಂದರ್ಯವರ್ಧಕಗಳಿಗೆ ದಾಸವಾಳ, Aloe vera ಅದ್ಭುತವಾಗಿವೆ ಮತ್ತು ಹೊಟ್ಟೆಗೂ ಸಹ Aloe vera ಅನ್ನು ಕೊಡುತ್ತಾರೆ. ನಮ್ಮ ಜೀವನಾನುಭವದ ಜ್ಞಾನ ಏನಿದೆ, ಅದಕ್ಕೆ ಒಂದು ಆಕಾಡೆಮಿಕ್ ಸ್ವರೂಪವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ದೇಶಕ್ಕೆ ವಿದೇಶಿಯರು ಬರುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ನಾನು ಪಂಚಕರ್ಮದ ಬಗ್ಗೆ ಇನ್ನೊಂದು ಮಾತನ್ನು ಹೇಳುತ್ತೇನೆ. ನಮಗೆ ತುಂಬ ತಲೆನೋವು ಬಂದರೆ, ತಲೆಗೆ ಎಣ್ಣೆಯನ್ನು ಮಾಲೀಶ್ ಮಾಡಿಸಿಕೊಳ್ಳಬೇಕೆಂದು ಹೇಳುತ್ತಾರೆ. ಅದೇರೀತಿ, ಅಭ್ಯಂಜನ, ಎಣ್ಣೆ ಸ್ನಾನ ಮಾಡುವುದನ್ನು scientific ಆಗಿ ಯಾವ ರೀತಿ ಎಂದು ನುರಿತಂಥವರ ಮೂಲಕವೇ ನಮಗೆ ಅದು ಗೊತ್ತಾಗುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಹೇಗೋ ಹೇಗೋ ಮಾಡಿದರೆ, ನರ ವ್ಯವಸ್ಥೆ, ಸ್ನಾಯು ವ್ಯವಸ್ಥೆ ಶರೀರದಲ್ಲಿ ಆಗುತ್ತದೆ. ಹಾಗಾಗಿ, ಇದಕ್ಕೆ ಶಿವಮೊಗ್ಗ ಅತ್ಯಂತ ಒಳ್ಳೆಯ ಸ್ಥಳವಾಗಿದೆ. ಅಲ್ಲದೇ, ನಮಗೆ ಅಲ್ಲಿ ಬೇಕಾದಂತಹ ಮೂಲ ಸೌಲಭ್ಯ ಮತ್ತು ಸಂಪನ್ಮೂಲಗಳಾದ ಔಷಧಿಯ ಸಸ್ಯರಾಶಿ ಹೆಚ್ಚಿಗೆ ಸಿಗುತ್ತದೆ. ಹಾಗಾಗಿ, ಆಹಾರ ಪದ್ಧತಿ ಮತ್ತು ಜೀವನ ಪದ್ಧತಿ, ಪ್ರಾಚೀನ ಪದ್ಧತಿ ಮತ್ತು ಆಧುನಿಕ ಪದ್ಧತಿಯನ್ನು ಸಮತೋಲನದಲ್ಲಿ ತರುವಂತಹ ಒಂದು ಆಕಾಡೆಮಿಕ್ ಸ್ವರೂಪದಲ್ಲಿ ಇದನ್ನು ಕಲಿಯಬೇಕಾದರೆ, ಗ್ರಾಮೀಣ ಮಕ್ಕಳಿಂದ ಹಿಡಿದು ವಿದೇಶದಲ್ಲಿ ಓದುವ ಮಕ್ಕಳವರೆಗೆ ಒಂದು ಪರಿಣಿತಿಯನ್ನು ಸಾಧಿಸುವುದಕ್ಕಾಗಿ ಒಂದು ವಿಶ್ವವಿದ್ಯಾಲಯ ಬೇಕಾಗಿದೆ.

ಮಾನ್ಯ ಸಭಾಪತಿಯವರೇ. ನಾನು ಕೊನೆಯದಾಗಿ ಒಂದು ವಿನಂತಿಯನ್ನು ಮಾಡುತ್ತೇನೆ. ನನಗೆ ಏಕೋ ಏನೋ ಗೊತ್ತಿಲ್ಲ. ಭಾರತೀಯ Vaccine ಕಳಪೆ. ವಿದೇಶಿ Vaccine Ok. ಇದಕ್ಕೆ ಎಲ್ಲಾ question ಏಕೆ? ಭಾರತೀಯತೆ ಸಾವಿರಾರು ವರ್ಷಗಳ ಕಾಲದ ಸಂಶೋಧನೆ ಮತ್ತು ಜೀವನಾನುಭವದಿಂದ ಬಂದಿದೆ. ದಯಮಾಡಿ, ನಮ್ಮ ದೇಶದಲ್ಲಿ ಅಲ್ಲದಿದ್ದರೂ ಸಹ ಇನ್ಯಾವ ದೇಶದಲ್ಲಿ ಮನ್ನಣೆ ಸಿಗುತ್ತದೆ? ಆದ್ದರಿಂದ, ನಾನು ಅತ್ಯಂತ ಅಭಿಮಾನದಿಂದ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕ, 2021 ಅನ್ನು ನಾನು ಸ್ವಾಗತಿಸುತ್ತೇನೆ. ಕೇರಳ ರಾಜ್ಯದಲ್ಲಿ ಆರ್ಯುವೇದಿಕ್ ಬಹಳ ಮುಖ್ಯವಾಗಿ ಪ್ರಾರಂಭವಾಯಿತು. ಈ ಆರ್ಯುವೇದಿಕ್‌ಗೆ ತವರೂರು ಕೇರಳ ರಾಜ್ಯ. ನಂತರ Allopathy ಬರುವುದಕ್ಕಿಂತ ಮೊದಲೇ , ನಮ್ಮ ಹಳ್ಳಿಗಾಡುಗಳಲ್ಲಿ ಅವರ ಪೂರ್ವಜರು ನಾಡಿ ಮಿಡಿತದಿಂದ ಯಾವ ಕಾಯಿಲೆ ಇದೆ ಎಂದು ಹೇಳುವಂತಹ ಪರಿಣಿತರು ಇದ್ದರು. ಬಹುಶಃ ಕಾಲ ಬದಲಾದ ನಂತರ ಅದು ಕಡಿಮೆಯಾಗುತ್ತಿದೆ. ಅದರ ಬಗ್ಗೆ ಸರ್ಕಾರಗಳು, ಸಮಾಜಗಳು ಗಮನ ಕೊಡಲಿಲ್ಲ. ಈಗಲೂ ಸಹ ಇದಕ್ಕೆ ಸಂಬಂಧಪಟ್ಟಂತೆ, ಮೈಸೂರು ಮಹಾರಾಜರ ಅರಮನೆಯಲ್ಲಿ ಆಯಾ ಕಾಯಿಲೆಗೆ ಆಯ್ಯಾ ಆರ್ಯುವೇದಿಕ್ ಕೊಡುವಂತಹ ಪರಿಪಾಠ ಇದೆ. ಮಾನ್ಯ ಸಚಿವರು ತಂದಿರುವಂತಹ ಈ ವಿಧೇಯಕ ಬಹಳ ಸೂಕ್ತವಾಗಿದೆ. ಸುಮಾರು ಸಾವಿರ ಕಾಲೇಜುಗಳು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಲ್ಲಿವೆ. ಕಾಲ ಬದಲಾದಂತೆ. ಸಾಪ್ರಾದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ, ನಾವು ನೂರು ಕಾಲೇಜುಗಳಿಗೆ ಒಂದು ವಿಶ್ವವಿದ್ಯಾನಿಲಯವನ್ನು ಮಾಡುತ್ತಿದ್ದೇವೆ. ಅಂತಹ ಪರಿಸ್ಥಿತಿಯಲ್ಲಿ ಸುಮಾರು ಸಾವಿರ ಕಾಲೇಜುಗಳಿವೆ. ಈ ಒಂದು ಆರ್ಯುವೇದ. ಯುನಾನಿ, ಸಿದ್ಧ, ಹೀಗೆ ಇನ್ನೂ ಬೇರೆ ಬೇರೆ ಕಾಲೇಜುಗಳು ಸೇರಿದರೆ, ಸುಮಾರು 300 ರಿಂದ 400 ಕಾಲೇಜುಗಳು ಸೇರುತ್ತವೆ. ಕಾಲ ಬದಲಾದಂತೆ ಇದರ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಅಗತ್ಯ ಬಹಳ ಇದೆ, ಮಾನ್ಯ ಸಚಿವರು ಬಹಳ ಸೂಕ್ತ ಸಮಯದಲ್ಲಿ ಒಳ್ಳೆಯ ನಿರ್ಧಾರವನ್ನು ಮಾಡಿದ್ದಾರೆ. ಇದಕ್ಕೆ ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಜೊತೆಗೆ, ಇದರ ಕಾಲೇಜ್‌ನ್ನು ಪ್ರಾರಂಭ ಮಾಡಿದರಷ್ಟೇ ಸಾಕಾಗುವುದಿಲ್ಲ. ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಅದರಲ್ಲೂ ವಿಶೇಷವಾಗಿ ಇದಕ್ಕೆ ಅಧ್ಯಾಪಕರನ್ನು ನೇಮಕ ಮಾಡುವಂತಹ ಕೆಲಸವನ್ನು ಮಾಡಬೇಕೆಂದು ಕೇಳಿಕೊಂಡು, ಈ ಒಂದು ವಿಶ್ವವಿದ್ಯಾಲಯದಲ್ಲಿ ಯಾರು ಯಾರು ಅಧ್ಯಾಪಕರು ಇದ್ದಾರೆ.,

(ಮುಂದು)

**(1259) 22-12-2021 (2.00) ಎಂವಿ-ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ಅಪ್ಪಾಜಿಗೌಡ (ಮುಂದು):-**

ಈಗಾಗಲೇ ಯಾರ್‍ಯಾರು ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿದ್ದಾರೆ ಮತ್ತು ಸಂಶೋಧನೆಯನ್ನು ಮಾಡುತ್ತಿದ್ದಾರೆ. ಅಂತಹವರಿಗೆ ಸರ್ಕಾರದಿಂದ ಸರಿಯಾದ ಸಂಬಳ ಕೊಡುವಂಥದ್ದು ಆಗಬೇಕು. ಈಗ ಅಲೋಪತಿ ವೈದ್ಯರಿಗೆ ಮತ್ತು ಆಯುರ್ವೇದದ ವೈದ್ಯರಿಗೆ ಕೀಳರಿಮೆಯ ಭಾವನೆ ಬರಬಾರದು. ಬಹಳ ಮುಖ್ಯವಾಗಿ ಸರ್ಕಾರದ ಎಲ್ಲಾ ಆಸ್ಪತ್ರೆಗಳಲ್ಲಿ ಇವರ ನೇಮಕ ಆಗಬೇಕು. ಇದರ ಜೊತೆಗೆ ನಮ್ಮ ಹಿರಿಯ ಶಾಸಕರಾದ ಮಾನ್ಯ ಸಿ.ಎಂ.ಇಬ್ರಾಹಿಂರವರು ಹೇಳಿದ ಹಾಗೆ, ನಾವು ಆಯುರ್ವೇದದಲ್ಲಿ ಚಿಕಿತ್ಸೆ ಪಡೆದುಕೊಂಡು, ಆ ಚಿಕಿತ್ಸೆಯನ್ನು ಭರಿಸುವುದಕ್ಕೆ ಇಷ್ಟು ಕಷ್ಟಪಡುವುದಾದರೆ, ಇದನ್ನು ಯಾರ ಬಳಿ ಕೇಳಬೇಕು? ಹಾಗಾಗಿ, ಮಾನ್ಯ ಸಚಿವರು ಸ್ವತಃ ವೈದ್ಯರು, ಅವರು ಇವುಗಳ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಲಿ. ಇದು ಬಹಳ ಒಳ್ಳೆಯ ವಿಧೇಯಕ ಎಂದು ತಿಳಿಸುತ್ತಾ, ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ಒಂದು ವಿಧೇಯಕವನ್ನು ಡಾ||ಕೆ.ಸುಧಾಕರ್ ರವರು ತಂದಿರುವಂಥದ್ದಕ್ಕೆ ನಾನು ಬಹಳ ಮನಸಾರೆ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ಅವರು ಆಯುರ್ವೇದದ ವೈದ್ಯರಲ್ಲ. ಅವರು ಅಲೋಪತಿ ವೈದ್ಯರು. ಬಹುತೇಕ ಅಲೋಪತಿ ಜನರು ಈ ಆಯುರ್ವೇದದ ಜನರನ್ನು ಒಳಗೆ ಬರುವುದಕ್ಕೆ ಬಿಡುವುದಿಲ್ಲ. ಆದರೆ, ಅವರು ಒಬ್ಬ ಅಲೋಪತಿ ವೈದ್ಯರಾಗಿ ಈ ವಿಧೇಯಕವನ್ನು ತಂದಿದ್ದಾರೆ. ಅದಕ್ಕೆ ಈ ಸಂದರ್ಭದಲ್ಲಿ ಅವರಿಗೆ ಅತ್ಯಂತ ವಿನಯಪೂರ್ವಕವಾಗಿರುವಂತಹ ಅಭಿನಂದನೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ವಿಧೇಯಕವನ್ನು ತರುವುದು ಬಹಳ ಅತ್ಯಂತ ಅವಶ್ಯಕತೆ ಇದೆ. ಈ ಆಯುರ್ವೇದದ ಅವಶ್ಯಕತೆ ಎಷ್ಟು ಇದೆ ಎಂದು ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿದರು. ನಾನು ಆಯುರ್ವೇದ ಅಥವಾ ಅಲೋಪತಿಯನ್ನು ಮಾಡಿರುವುದಿಲ್ಲ. ಆದರೆ, ನಾನು ಒಬ್ಬ ರೋಗಿಯಾಗಿ ಮಾತನಾಡುತ್ತೇನೆ. ಅಂದರೆ, ನನಗೆ ನನ್ನ ಎರಡೂ ಕೈಗಳ ಚರ್ಮದ ಮೇಲೆ ರಿಂಗ್ ರೀತಿ ಬರುತ್ತಿತ್ತು. ನಾನು ಯಾವಾಗಲೂ ಸಹ ನನ್ನ ಶರ್ಟಿನ ತೋಳು

ಮಡಿಸುತ್ತೇನೆ. ಆ ರೀತಿ ಆದಮೇಲೆ ನನ್ನ ಕೈಯನ್ನು ಮುಚ್ಚಿಕೊಂಡು ತಿರುಗಾಡುವಂತಹ ಪ್ರಸಂಗ ಬಂತು. ಈಗ ಬೆಳಗಾವಿ, ಮುಂಬೈ, ಬೆಂಗಳೂರು ಮತ್ತು ಹುಬ್ಬಳ್ಳಿ ಆಯಿತು. ಮತ್ತೆ ಬೆಂಗಳೂರಿನಲ್ಲಿ ಹತ್ತು ಆಸ್ಪತ್ರೆಗಳಿಗೆ ಇದನ್ನು ತೋರಿಸಿ ಅಯಿತು. ಆಸ್ಪತ್ರೆಗೆ ಹೋದಾಗ ಇದನ್ನು ನೋಡುವರು ನಂತರ ಇದನ್ನು biopsy ಮಾಡಬೇಕು ಮತ್ತು ಇದನ್ನು ಟೆಸ್ಟಿಂಗ್ ಕಳುಹಿಸಿ ನೋಡೋಣ ಎನ್ನುತ್ತಿದ್ದರು. ಎಲ್ಲಾ ಆಸ್ಪತ್ರೆಗಳಲ್ಲೂ ಸಹ ಈ ರೀತಿ ಹೇಳುತ್ತಿದ್ದರು. ಅವರು ಪ್ರಾಕ್ಟೀಸ್‌ಗೋಸ್ಕರ ಅದನ್ನು ಪರೀಕ್ಷೆಗೆ ಕಳುಹಿಸುತ್ತಿದ್ದರು. ಆಮೇಲೆ ಇದರಲ್ಲಿ ಏನೂ ದೋಷವಿಲ್ಲವೆಂದು ಹೇಳುತ್ತಿದ್ದರು. ಹಾಗಾದರೆ, ದೋಷವಿಲ್ಲದಿದ್ದರೆ ಈ ರೀತಿ ಏಕೆ ಬರುತ್ತಿದೆ ಎಂದು ಕೇಳಿದೆ. ಕೊನೆಗೆ ನನಗೆ ಒಬ್ಬ ಆಯುರ್ವೇದದ ವೈದ್ಯರು ಸಿಕ್ಕಿದರು. ಅವರು ಈ ಸಮಸ್ಯೆಯನ್ನು ಮೂರು ತಿಂಗಳಿನ ಒಳಗೆ ಸರಿಪಡಿಸುತ್ತೇನೆಂದು ಹೇಳಿದರು. ಅದಕ್ಕೆ ನಾನು ಆಗಲಿ ಎಂದು ತಿಳಿಸಿದೆ. ಅವರು ನನಗೆ ಮೂರು ತಿಂಗಳಿಗೆ ಔಷಧ ಕೊಟ್ಟರು. ಇವತ್ತು ಮತ್ತೆ ನಾನು ನನ್ನ ಶರ್ಟ್‌ನ ತೋಳನ್ನು ಮೇಲೆ ಏರಿಸುತ್ತಿದ್ದೇನೆ. ಇದರ ಜೊತೆಗೆ ಮತ್ತೊಂದು ಏನೆಂದರೆ, ಅದು ವೈದ್ಯರಿಗೆ ಗೊತ್ತಿದೆ. ಕೋವಿಡ್-19 ಬಂದಾಗ ನನ್ನ ಪಕ್ಕದ ಕ್ಷೇತ್ರದ ರಾಯಭಾಗದಲ್ಲಿ ನಮ್ಮ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿಯಲ್ಲಿ ಹೊರಗುತ್ತಿಗೆಯ ಮೇಲೆ ಎಂಜಿನಿಯರಿಂಗ್ ಕೆಲಸ ಮಾಡುತ್ತಿದ್ದ, ಅವನ ತಂದೆ-ತಾಯಿ ತಾವು ಕೂಲಿ ಮಾಡಿ, ಅವರ ಮಗನನ್ನು ಎಂಜಿನಿಯರಿಂಗ್ ಮಾಡಿಸಿದ್ದರು. ಅವರು ಬಹಳ ಅತ್ಯಂತ ಬಡವರು. ಅವರ ಮಗನಿಗೆ ಕೋವಿಡ್-19 ಬಂತು. ಆಗ ಅವರು ಮೀರಜ್ ಆಸ್ಪತ್ರೆಗೆ ಹೋದರು. ಆ ಮೀರಜ್ ಆಸ್ಪತ್ರೆಯವರು ಅವನಿಗೆ ಬ್ಲಾಕ್ ಫಂಗಸ್ ಆಗಿದೆ ಎಂದು ತಿಳಿಸಿದರು. ಇದಕ್ಕೆ ಇಲ್ಲಿ ಚಿಕಿತ್ಸೆ ಇಲ್ಲ, ಇದಕ್ಕೆ ಬೆಂಗಳೂರಿನಲ್ಲಿ ಆಸ್ಪತ್ರೆಯನ್ನು ಪ್ರಾರಂಭ ಮಾಡಿದ್ದಾರೆ. ಆದುದರಿಂದ ಅವನನ್ನು ನೀವು ಬೆಂಗಳೂರಿಗೆ ಕಳುಹಿಸಬೇಕೆಂದು ತಿಳಿಸಿದರು. ನನಗೆ ಆ ಸುದ್ದಿ ಬಂತು ನಾನು ಒಂದು ಆಂಬ್ಯುಲೆನ್ಸ್ ಮಾಡಿ, ಅವನನ್ನು ಬೆಂಗಳೂರಿಗೆ ಕಳುಹಿಸಿದೆ. ಅವರನ್ನು ಕಳುಹಿಸಿದ ನಂತರ ಈ ಕಡೆಯಿಂದ ಅವರಿಗೆ ಫೋನ್ ಮಾಡಿದೆ. ಈ ಬ್ಲಾಕ್ ಫಂಗಸ್ ಎನ್ನುವ ಹೊಸ ರೋಗ ಬಂದಿದೆ, ಅದು ನಿಮಗೆ ಗೊತ್ತಿದೆಯೆ ಎಂದು ಕೇಳಿದೆ. ಅದಕ್ಕೆ ಅವರು ಹೌದು ಬ್ಲಾಕ್ ಫಂಗಸ್ ಎಂಬ ಹೊಸ ರೋಗ ಬಂದಿದೆ, ಅದಕ್ಕೆ ಆಸ್ಪತ್ರೆ ಪ್ರಾರಂಭ ಮಾಡಿದ್ದೇವೆ. ಈಗ ನೀವು ಕಳುಹಿಸಿರುವ ರೋಗಿ ನಾಲ್ಕನೆಯವರು ಎಂದು ಹೇಳಿದರು. ಅವನನ್ನು ಅಲ್ಲಿಗೆ ದಾಖಲು ಮಾಡಿದ್ದೆವು. ಅವನನ್ನು ದಾಖಲು ಮಾಡಿದ ಮೇಲೆ, ಅಲ್ಲಿನ ವೈದ್ಯರು ಹೇಳಿದರು ಈ ರೋಗ ಈಗಾಗಲೇ ಅವನ ಬ್ರೈನ್‌ಗೆ ಬಂದಿದೆ. ಅದಕ್ಕೆ ಅವನ ಬ್ರೈನ್ ಅನ್ನು ಆಪರೇಷನ್ ಮಾಡಬೇಕು ಎಂದರು. ಆಗ ಅವನ ಬ್ರೈನ್ ಆಪರೇಷನ್ ಮಾಡಿದರು. ಆ ನಂತರ ಅವನು ವಾಪಸ್ಸು ಬಂದ ಮೇಲೆ ಇಲ್ಲಿನ ಆಸ್ಪತ್ರೆಯ ವೈದ್ಯರು ಹೇಳಿದರು, ಈಗ ಅವನ ಒಂದು ಕಣ್ಣು ಹೋಗಿದೆ, ಇನ್ನೊಂದು ಕಣ್ಣು ಹೋಗುತ್ತದೆ ಹಾಗಾಗಿ ಅವನ ಎರಡೂ ಕಣ್ಣುಗಳನ್ನು ತೆಗೆಯಬೇಕಾಗುತ್ತದೆ ಎಂದರು. ಅವನ ಎರಡೂ ಕಣ್ಣುಗಳನ್ನು ತೆಗೆಯಬೇಕಾಗುತ್ತದೆ ಎಂದಾಗ, ಆ ಹುಡುಗನಿಗೆ ಅವನ ತಂದೆ ಇಲ್ಲ. ಅವನ ಅಕ್ಕ ಮತ್ತು ತಮ್ಮ ಆಸ್ಪತ್ರೆಯಲ್ಲಿ ಇದ್ದರು. ಅವರು ನನಗೆ ಫೋನ್ ಮಾಡಿದರು. ಇವನ ಎರಡೂ ಕಣ್ಣುಗಳನ್ನು ತೆಗೆಯಬೇಕಂತೆ, ಈಗ ಅವನ ಎರಡೂ ಕಣ್ಣುಗಳನ್ನು ತೆಗೆದು ನಂತರ ಅವನು ಬದುಕಿ ಏನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಯೋಜನ, ಅದಕ್ಕೆ ಏನು ಮಾಡಬೇಕೆಂದು ಕೇಳಿದಾಗ, ಅವನು ಅದಕ್ಕೆ ಹೇಳಿದ ನನ್ನನ್ನು ವಾಪಸ್ಸು ಕರೆದುಕೊಂಡು ಹೋಗಿ, ನಾನು ನನ್ನ ತಾಯಿಯ ತೊಡೆಯ ಮೇಲೆ ತಲೆ ಇಟ್ಟು ಪ್ರಾಣ ಬಿಡುತ್ತೇನೆ ಎಂದು ಹೇಳುತ್ತಿದ್ದಾನೆ ಅದಕ್ಕೆ ಏನು ಮಾಡಬೇಕೆಂದು ಕೇಳಿದರು. ನಾನು ವೈದ್ಯರ ಜೊತೆ ಚರ್ಚೆ ಮಾಡಿ, ಆಮೇಲೆ ಹೇಳುತ್ತೇನೆಂದು ತಿಳಿಸಿದೆ. ಆಗ ನಾನು ವೈದ್ಯರ ಬಳಿ ಚರ್ಚೆ ಮಾಡಿದೆ. ಆಗ ಅವರು ಹೇಳಿದರು, ಆಪರೇಷನ್‌ಗೆ ರೋಗಿ ಒಪ್ಪುತ್ತಿಲ್ಲ. ಅವರು discharge ಮಾಡಿ ಎಂದು ಕೇಳುತ್ತಿದ್ದಾರೆ ಎಂದರು. ಅದಕ್ಕೆ ನಾನು ಅವನನ್ನು discharge ಮಾಡಿದರೆ ಅವನ ಪರಿಸ್ಥಿತಿ ಏನೆಂದು ಕೇಳಿದೆ. ಅದಕ್ಕೆ ಅವರು ಹೇಳಿದರು ಗರಿಷ್ಠ ಮೂರು ದಿವಸ ಬದುಕಬಹುದು ಎಂದು ತಿಳಿಸಿದರು. ಅವನು ಮೂರು ದಿವಸ ಬದುಕಬಹುದು ಆ ಮೇಲೆ ಬದುಕುವುದಕ್ಕೆ ಆಗುವುದಿಲ್ಲವೆಂದರು. ಅವನ ಆಯಸ್ಸು ಕೇವಲ ಮೂರು ದಿವಸ ಮಾತ್ರ ಇದೆ ಎಂದು ವೈದ್ಯರು ಅವನ ಸೋದರರಿಗೆ ಹೇಳಿದರು. ಅದು ಮುಗಿಯಿತು ಎಂದರು. ಇದು ಅನಿವಾರ್ಯ ಮತ್ತೆ ಏನು ಮಾಡುವುದಕ್ಕೆ ಆಗುವುದಿಲ್ಲ. ನಾವು ಅವನನ್ನು ಕರೆದುಕೊಂಡು ಹೋಗುತ್ತೇವೆ. ಅವನನ್ನು discharge ಮಾಡಿ ಎಂದು ಹೇಳಿದರು. ನನ್ನ ಮನಸ್ಸು ಒಪ್ಪಲಾರದೆ ಆಂಬ್ಯುಲೆನ್ಸ್ ಮಾಡಿ ಅವನನ್ನು discharge ಮಾಡಿ ಕಳುಹಿಸಿದೆ. ನನಗೆ ಏನು ಚರ್ಮ ರೋಗಕ್ಕೆ ಔಷಧಿಯನ್ನು ಕೊಟ್ಟಿದ್ದರು. ಅವರು ಸಂಜೆ ಬಂದು ನನ್ನನ್ನು ಭೇಟಿಯಾದರು. ನನ್ನ ಬಳಿ ಕೋವಿಡ್-19 ರೋಗಕ್ಕೆ ಔಷಧಿ ಇದೆ. ನಾನು ಕೋವಿಡ್-19 ರೋಗಕ್ಕೆ ಔಷಧಿ ಕೊಡುತ್ತೇನೆ. ಅದಕ್ಕೆ ನೀವು ನನಗೆ permission ಕೊಡಿಸಿ ಎಂದು ಕೇಳಿದರು. ಅದಕ್ಕೆ ನಾನು ಕೇಳಿದೆ, ನಿಮ್ಮ ಬಳಿ ಬ್ಲಾಕ್ ಫಂಗಸ್‌ಗೆ ಔಷಧಿ ಇದೆಯ ಎಂದು. ಅದಕ್ಕೆ ಅವರು ಹೇಳಿದರು, ನಾನು ಅಲ್ಲಿಗೆ ಹೋಗಿ ಪರಿಶೀಲನೆ ಮಾಡುತ್ತೇನೆ. ನಾನು ಅದರ ಮೇಲೆ ನಿರ್ಣಯ ತೆಗೆದುಕೊಳ್ಳುತ್ತೇನೆ ಎಂದರು. ಅದಕ್ಕೆ ನಾನು ಹೇಳಿದೆ, ಹೇಗಿದ್ದರೂ ಇದು death case. ಅವನ ಮೇಲೆ ಪ್ರಯೋಗ ಮಾಡು ಎಂದು ಹೇಳಿದೆ. ಅವನಿಗೆ ಒಂದು ಕಾರು ಕೊಟ್ಟು, ಅಲ್ಲಿಂದ ನೇರವಾಗಿ ರಾಯಭಾಗ ತಾಲ್ಲೂಕಿನ ರೋಗಿ ಇರುವಂತಹ ಜಾಗಕ್ಕೆ ಕಳುಹಿಸಿದೆ. ಅವರು ಅದನ್ನು ಪರಿಶೀಲನೆ ಮಾಡಿ, ನನಗೆ ಸಾಯಂಕಾಲ ಫೋನ್ ಮಾಡಿ, ನಾನು ಇದನ್ನು ಸರಿಪಡಿಸುತ್ತೇನೆಂದು ಹೇಳಿದ. ಹೇಗಿದ್ದರೂ ಸಹ ಇದು death case ಎಂದು ಅವನ ಮೇಲೆ ಪ್ರಯೋಗ ಮಾಡು ಎಂದು ಹೇಳಿದೆ. ಅವನು unconscious ಆಗಿದ್ದಾನೆ ಮತ್ತು ಅವನು ಬದುಕುವುದಕ್ಕೆ ಸಾಧ್ಯವೇ ಇಲ್ಲ. ಅವನು ಪುನಃ ವಾಪಸ್ಸು ಹೋಗಿ ಅದಕ್ಕೆ ಆಯುರ್ವೇದದ ಔಷಧಿಯನ್ನು ತಯಾರು ಮಾಡಿ, ಆ ರೋಗಿಗೆ ಕೊಡುವುದಕ್ಕೆ ಪ್ರಾರಂಭ ಮಾಡಿದ. ಆ ನಂತರ ಏಳನೇ ದಿವಸಕ್ಕೆ ರೋಗಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ. ಇವತ್ತಿನ ದಿವಸ ಅವನ ಒಂದು ಕಣ್ಣು ಪೂರ್ಣವಾಗಿ ಹೋಗಿದೆ. ಹೋಗಿದ್ದಂತಹ ಮತ್ತೊಂದು ಕಣ್ಣು ಕಾಣುವುದಕ್ಕೆ ಪ್ರಾರಂಭವಾಗಿದೆ. ಈಗ ಓಡಾಡುವುದಕ್ಕೆ ಪ್ರಾರಂಭ ಮಾಡಿ, ಕೆಲಸ ಮಾಡುವುದಕ್ಕೆ ಶುರು ಮಾಡಿದ್ದಾನೆ. ಇದು ಪ್ರತ್ಯೇಕ್ಷವಾಗಿ ಆಗಿರುವಂಥದ್ದು. ಇದು ಆಯುರ್ವೇದದಲ್ಲಿ ಇರವಂತಹ ಶಕ್ತಿ. ಅದಕ್ಕೆ ನಾನು ವೈದ್ಯರಿಗೆ ಅಭಿನಂದನೆಯನ್ನು ಹೇಳುತ್ತೇನೆ. ಡಾ||ಕೆ.ಸುಧಾಕರ್ ರವರು ಅಲೋಪತಿ ವೈದ್ಯರು. ಅಲೋಪತಿಯಲ್ಲಿ ಸಾಕಷ್ಟು ಸಂಶೋಧನೆಗಳು ಆಗಿವೆ. ಆದರೆ, ಇಲ್ಲಿ ಸಂಶೋಧನೆ ಆಗಬೇಕಾಗಿದೆ. ಅಲೋಪತಿಯಲ್ಲಿ ಎಷ್ಟು ಸಂಶೋಧನೆಯಾಗಿದೆ ಎಂದರೆ,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ನಮ್ಮ ಕ್ಷೇತ್ರದಲ್ಲಿ ಒಂದು ಎಂಗೇಜ್‌ಮೆಂಟ್‌ಗೆ ಹೋಗಿದ್ದೆ. ಆಗ ಹುಡುಗ ಏನು ಕೆಲಸ ಮಾಡುತ್ತಾನೆಂದು ಕೇಳಿದೆ. ಹುಡಗ ಹಲ್ಲಿನ ಡಾಕ್ಟರ್ ಎಂದು ಹೇಳಿದರು. ಮತ್ತೆ ಹುಡುಗಿ ಏನು ಮಾಡುತ್ತಾಳೆಂದು ಕೇಳಿದೆ. ಅವಳು ವಸಡಿನ ಡಾಕ್ಟರ್ ಎಂದು ಹೇಳಿದರು. ಅವಳು ವಸಡಿನ ತಜ್ಞೆ, ಅವಳು ವಸಡಿನ ಬಗ್ಗೆಯೇ ಸಂಶೋಧನೆ ಮಾಡಿದ್ದಾಳೆ. ಹುಡುಗ ಹಲ್ಲಿನ ಬಗ್ಗೆ ಮಾಡಿದ್ದಾನೆ. ಅದಕ್ಕೆ ನಾನು ಹೇಳಿದೆ, ಒಳ್ಳೆಯದಾಯಿತು ಬಿಡು, ಹಲ್ಲು ಮತ್ತು ವಸಡು ಒಂದು ಕಡೆ ಇದ್ದರೆ, ಬರುವಂತಹ ರೋಗಿ ಬೇರೆ ಕಡೆ ಓಡಾಡುವುದಕ್ಕೆ ಆಗುವುದಿಲ್ಲ. ಎಲ್ಲಾ ಒಂದೇ ಕಡೆ ಆಗುತ್ತದೆ ಎಂದು. ಅಲೋಪತಿಯಲ್ಲಿ ಸಾಕಷ್ಟು ಸಂಶೋದನೆ ಆಗಿದೆ. ಅಲೋಪತಿಯಲ್ಲಿ ಕಪ್ಪು ಕೂದಲಿಗೆ ಒಬ್ಬರು ಇದ್ದಾರೆ. ಬಿಳಿ ಕೂದಲಿಗೆ ಒಬ್ಬರು ಇದ್ದಾರೆ. ಎಡಗಣ್ಣಿಗೆ ಒಬ್ಬರು ಇದ್ದಾರೆ. ಬಲಗಣ್ಣಿಗೆ ಒಬ್ಬರು ಇದ್ದಾರೆ. ಬೆರಳಿಗೆ ಒಬ್ಬರು ಇದ್ದಾರೆ. ಮುಂಗೈಗೆ ಒಬ್ಬರು ಇದ್ದಾರೆ. ಕಾಲಿಗೆ ಒಬ್ಬರು, ಕೈಗೆ ಒಬ್ಬರಂತೆ ಸಾವಿರಾರು experts ಇದ್ದಾರೆ. ಆದರೆ, ಆಯುರ್ವೇದದಲ್ಲಿ experts ಗಳನ್ನು ತಯಾರು ಮಾಡಬೇಕಾಗಿದೆ. ಮಾನ್ಯ ಸಚಿವರು ಅಲೋಪತಿ ವೈದ್ಯರಾಗಿ, ಆಯುರ್ವೇದದ ವಿಧೇಯಕವನ್ನು ತಂದಿದ್ದಾರೆಂದರೆ, ಬಹುಶಃ ಅವರು ತಮ್ಮ ಹಂಗಿನಿಂದ ಹೊರಗೆ ಬಂದು ತಂದಿದ್ದಾರೆಂದು ನಾನು ಅಭಿಮಾನದಿಂದ ಅವರಿಗೆ ಅಭಿನಂದನೆಯನ್ನು ಹೇಳುತ್ತಾ, ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿಗೆ ಏನು ಪ್ರತ್ಯೇಕ ಒಂದು ಆಯುಷ್ ವಿಶ್ವವಿದ್ಯಾಲಯದ ವಿಧೇಯಕವನ್ನು ತಂದಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ. ಈ ಆಯುರ್ವೇದ ಅತ್ಯಂತ ಪುರಾತನ ಭಾರತೀಯ ವೈದ್ಯಕೀಯ ಪದ್ಧತಿ. ಈ ವೈದ್ಯಕೀಯ ಪದ್ಧತಿಯನ್ನು ನಾವು ಬೆಳೆಸದೆ ಅದಕ್ಕೆ ಪ್ರೋತ್ಸಾಹ ಕೊಡಲಿಲ್ಲವೆಂದರೆ, ಬೇರೆಯವರು ಯಾರು ಪ್ರೋತ್ಸಾಹ ಕೊಡುತ್ತಾರೆ. ಈಗ ಯಾವ ಸದಸ್ಯರು ಕೂಡ, ಈಗ ವಿರೋಧ ಪಕ್ಷದ ಒಬ್ಬರು ಇಬ್ಬರು ವಿರೋಧ ಮಾಡಿದರು. ಆದರೆ, ಅವರು ಆ ರೀತಿ ಮಾಡಬಾರದು. ಏಕೆಂದರೆ, ನಮ್ಮ ಪದ್ಧತಿಯನ್ನು ಬೆಳೆಸುವುದು ನಮ್ಮ ಜವಾಬ್ದಾರಿ. ಆ ಹಿನ್ನೆಲೆಯಲ್ಲಿ ಇವತ್ತು ಏನು ಆಯುರ್ವೇದ ಪದ್ಧತಿ ಇದೆ. ಈ ಆಯುರ್ವೇದ ಪದ್ಧತಿಯನ್ನು ಅಲೋಪತಿಗೆ ಹೋಲಿಕೆ ಮಾಡಿದರೆ, ಆಯುರ್ವೇದ ಬಹಳ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಈ ಆಯುರ್ವೇದಕ್ಕೆ ಪ್ರೋತ್ಸಾಹ ಸಿಗಬೇಕು ಎಂದರೆ, ಇದು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಅಡಿಯಲ್ಲಿ ಇದ್ದರೆ. ಇದು ಬೆಳವಣಿಗೆ ಹೊಂದುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ತೊಂದರೆಯಾಗುತ್ತದೆ. ಆ ದಿಶೆಯೊಳಗೆ ಇದನ್ನು ಪ್ರತ್ಯೇಕ ಮಾಡಿದಾಗ ಮಾತ್ರ ಆಯುರ್ವೇದ ಶಾಸ್ತ್ರಕ್ಕೆ ಪ್ರಾಧ್ಯಾನತೆ ಕೊಟ್ಟ ಹಾಗೆ ಆಗುತ್ತದೆ. ಅದಕ್ಕೆ ಪುನಶ್ಚೇತನ ಮಾಡಿದಂತೆ ಆಗುತ್ತದೆ. ಮತ್ತೆ ಬಹಳ ಮುಖ್ಯವಾಗಿ ಆಯುರ್ವೇದ ಬಹಳ ಹಿಂದೆ ಉಳಿದಿದೆ ಎಂದರೆ, ಇದರ ಬಗ್ಗೆ ಸಂಶೋಧನೆ ಕೆಲಸ ನಡೆದಿಲ್ಲ. ಇದರ ಸಂಶೋಧನೆಗೆ ಆದ್ಯತೆ ಕೊಡುವುದಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಮಾಡುವುದರಿಂದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾಧ್ಯವಿದೆ. ಹಾಗಾಗಿ ಈ ವಿಧೇಯಕವನ್ನು ನಾನು ಸಾಗತಿಸುತ್ತೇನೆ. ಈಗ ಪ್ರತ್ಯೇಕವಾದ ಆಯುಷ್ ವಿಶ್ವವಿದ್ಯಾಲಯ ಸ್ಥಾಪನೆ ಎಂದೋ ಆಗಬೇಕಾಗಿತ್ತು. ಇದನ್ನು ಈ ಹಿಂದಿನ ಸರ್ಕಾರಗಳು ಮಾಡಬೇಕಾಗಿತ್ತು.

(ಮುಂದು)

(1260) 22.12.2021 02.10 LL-VK **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ವಿ.ಸಂಕನೂರ(ಮುಂದು)**

ಇವೊತ್ತಿನ ದಿವಸ ಶ್ರೀ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಸರ್ಕಾರ, "ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ" ಎಂಬ ಯಾವ ವಿಧೇಯಕ ತಂದಿದ್ದಾರೆ ಅದು ಅತ್ಯುತ್ತಮವಾದ ಕೆಲಸವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಸದರಿ ವಿಧೇಯಕದ ಮೇಲೆ ಚರ್ಚೆ ನಡೆದಂತಹ ಸಂದರ್ಭದಲ್ಲಿ, ಹಿರಿಯ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್‌ರವರು ಮತ್ತು ಶ್ರೀ ಮರಿತಿಬ್ಬೇಗೌಡರವರು ಕೆಲವು ಸಲಹೆಗಳನ್ನು ಕೊಟ್ಟಿರುತ್ತಾರೆ. ಅದೇನೆಂದರೆ, ಯಾರು ಆರ್ಯುವೇದಿಕ್‌ನಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದುಕೊಳ್ಳುತ್ತಾರೆ, ಅವರಿಗೆ ದಯಮಾಡಿ ನೇಮಕಾತಿಯಲ್ಲಿ ಆದ್ಯತೆಯನ್ನು ಕೊಡಬೇಕು. ಅದು ಬಹಳ ಅವಶ್ಯಕವಾಗಿದೆ. ಎರಡನೆಯದಾಗಿ, ಅವರಿಗೆ recognition ಇರುವುದಿಲ್ಲ. ಅದರ ಬಗ್ಗೆ ಕೂಡ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಮಾನ್ಯ ಸದಸ್ಯರಾದಂತಹ ಶ್ರೀ ಮರಿತಿಬ್ಬೇಗೌಡರವರು ಕೆಲವೊಂದು ಮಹತ್ವದ ವಿಷಯದ ಬಗ್ಗೆ ಹೇಳಿದರು. ಅದೇನೆಂದರೆ, "ಇದುವರೆವಿಗೂ ನಮ್ಮ ರಾಜ್ಯದಲ್ಲಿ ಯಾವ್ಯಾವ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದ್ದಾರೆ, ಅವುಗಳಿಗೆ ಕಟ್ಟಡ ಇರುವುದಿಲ್ಲ ಮತ್ತೊಂದು ಇರುವುದಿಲ್ಲ. ಆದಾಗ್ಯೂ, ಯಾವ ಕಾರಣಕ್ಕಾಗಿ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುತ್ತೀರಿ" ಎಂದು ಪ್ರಶ್ನೆ ಮಾಡುವ ದಿಸೆಯಲ್ಲಿ ಅವರು ನಮ್ಮ ಸರ್ಕಾರಕ್ಕೆ ಎಚ್ಚರಿಕೆ ಗಂಟೆ ಕೊಟ್ಟಿದ್ದಾರೆ.

ಇವೊತ್ತಿನ ದಿವಸ ಆಯುಷ್ ವಿಶ್ವವಿದ್ಯಾಲಯವನ್ನು ಶಿವಮೊಗ್ಗದಲ್ಲಿ ಸ್ಥಾಪನೆ ಮಾಡುತ್ತಿದ್ದಾರೆ. ಅದಕ್ಕೆ ಯಾವ ಮೂಲಭೂತವಾದಂತಹ ಸೌಲಭ್ಯಗಳನ್ನು ಒದಗಿಸಬೇಕಾಗಿದೆ; ಸಿಬ್ಬಂದಿಗಳನ್ನು ಒದಗಿಸಬೇಕಾಗಿದೆ; ಅದಕ್ಕೆ ಯಾವ ಹಣಕಾಸಿನ ವ್ಯವಸ್ಥೆ ಬೇಕು ಅದನ್ನು ಮುಂಬರುವ ಆಯವ್ಯಯ ಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಕೊನೆಯದಾಗಿ, ನಾನು ಹೇಳುವುದೇನೆಂದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಆಯುರ್ವೇದಿಕ್ ಔಷಧಿ ಸಸ್ಯಗಳು ಸಿಗುತ್ತವೆ ಎನ್ನುವುದಾಗಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಗದಗ ಜಿಲ್ಲೆಯ ಕಪ್ಪತಗುಡ್ಡದಲ್ಲಿ ಸಿಗತಕ್ಕಂತಹ ಆಯುರ್ವೇದಿಕ್ ಔಷಧಿಯ ಸಸ್ಯಗಳು ಎಲ್ಲಿಯೂ ಸಿಗುವುದಿಲ್ಲ. ಇದನ್ನು ಸರ್ಕಾರ ಗಮನಿಸಬೇಕು. ಹಾಗಾಗಿ, ನಾನು ಸರ್ಕಾರದಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುವುದೇನೆಂದರೆ, ಒಂದು ಆರ್ಯುವೇದ ಔಷಧಗಳ ಸಂಶೋಧನಾ ಕೇಂದ್ರ ಪ್ರಾರಂಭವಾಗಬೇಕಾದರೆ ಅದನ್ನು ಗದಗ ಜಿಲ್ಲೆಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಪ್ಪತಗುಡ್ಡದಲ್ಲಿ ಸ್ಥಾಪನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ದಿಸೆಯಲ್ಲಿ ಈಗಾಗಲೇ ಕೇಂದ್ರ ಸರ್ಕಾರ ಚಿಂತನೆ ಮಾಡುತ್ತಿದೆ. ಆ ನಿಟ್ಟಿನಲ್ಲಿ ಆಯುರ್ವೇದಿಕ್ ಸಂಶೋಧನಾ ಕೇಂದ್ರವನ್ನು ಗದಗ ಜಿಲ್ಲೆಯ ಕಪ್ಪತಗುಡ್ಡದಲ್ಲಿ ಸ್ಥಾಪನೆ ಮಾಡಬೇಕೆಂಬ ಸಲಹೆಯನ್ನು ನೀಡಿ ಈ ವಿಧೇಯಕವನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

**ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಮಾನ್ಯ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಅಭಿನಂದಿಸುತ್ತೇನೆ. ಏಕೆಂದರೆ, ಪಕ್ಷಾತೀತವಾಗಿ ಬಹಳ ಸದಸ್ಯರು ಆಯುಷ್ ವಿಶ್ವವಿದ್ಯಾಲಯ ಸ್ಥಾಪನೆ ಆಗುತ್ತಿರುವುದಕ್ಕೆ ಹರ್ಷವನ್ನು ವ್ಯಕ್ತಪಡಿಸಿರುತ್ತಾರೆ. ಈ ವಿಧೇಯಕದ ಬಗ್ಗೆ ಗಹನವಾಗಿರತಕ್ಕಂತಹ ವಿಷಯಗಳು, ಗಹನವಾದಂತಹ ಒಂದು ಸಮಾಲೋಚನೆ ಮತ್ತು ವಾದಗಳು ಸಹ ಆಗಿರುತ್ತವೆ. ಇವೊತ್ತಿನ ದಿವಸ ಈ ವಿಧೇಯಕ ಐತಿಹಾಸಿಕವಾಗಿರತಕ್ಕಂತಹ ವಿಧೇಯಕ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈ ವಿಶ್ವವಿದ್ಯಾಲಯ ಇಡೀ ಭಾರತ ದೇಶದಲ್ಲಿಯೇ ಉತ್ತಮವಾದ ವಿಶ್ವವಿದ್ಯಾಲಯವಾಗಿದೆ. ಏಕೆಂದರೆ, ಬೇರೆ ರಾಜ್ಯಗಳು ಕೇವಲ ಆಯುರ್ವೇದ ವಿಶ್ವವಿದ್ಯಾಲಯ ಮಾಡಿದ್ದಾರೆ. ಇನ್ನೂ ಕೆಲವರು ಯುನಾನಿ ವಿಶ್ವವಿದ್ಯಾಲಯ ಮಾಡಿದ್ದಾರೆ. ಆದರೆ, ನಾವು ಆಯುಷ್‌ನ ಎಲ್ಲಾ ವಿಷಯಗಳನ್ನು ಸೇರಿಸಿ ಅಂದರೆ, ಆಯುರ್ವೇದ, ಯುನಾನಿ, ಸಿದ್ಧ, ನ್ಯಾಚುರೋಪತಿ, ಯೋಗ ಇವೆಲ್ಲಾ ವಿಷಯಗಳನ್ನು ಸೇರಿಸಿ ಒಂದು ವಿಶ್ವವಿದ್ಯಾಲಯವನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪನೆ ಮಾಡುತ್ತಿದ್ದೇವೆ.

ಕೆಲವು ಸದಸ್ಯರು, "ರಾಜೀವ್ ಗಾಂಧಿ ವಿಶ್ವವಿದ್ಯಾಲಯ ವಿಶ್ವಪ್ರಸಿದ್ಧಿಯಾಗಿದೆ. ಅಂತಹ ಒಂದು ವಿಶ್ವವಿದ್ಯಾಲಯದ ಕೆಳಗಡೆ ಆಯುಷ್ ವಿಶ್ವವಿದ್ಯಾಲಯ ಇರಬೇಕು" ಎನ್ನುವ ಸಲಹೆಯನ್ನು ಸಹ ನೀಡಿದ್ದಾರೆ. ಆದರೆ, ಈ ವಿಶ್ವವಿದ್ಯಾಲಯ ಖಂಡಿತವಾಗಿಯೂ ಕೂಡ ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ. ಅದರಲ್ಲಿ ಎರಡು ಮಾತಿಲ್ಲ. ಆದರೆ, ಈ ಹಿಂದೆ 1996ರಲ್ಲಿ ಸ್ಥಾಪನೆ ಮಾಡಿದಂತಹ ವಿಶ್ವವಿದ್ಯಾಲಯ ಇವೊತ್ತಿನ ದಿನ ಸುಮಾರು 953 ಕಾಲೇಜುಗಳನ್ನು ಒಳಪಟ್ಟಿರುತ್ತದೆ. ಅದರಲ್ಲಿ ವೈದ್ಯಕೀಯ ಕಾಲೇಜು 41, ದಂತ ಕಾಲೇಜು 38; ಫಾರ್ಮಸಿ 102, ನರ್ಸಿಂಗ್ 473, ಫಿಸಿಯೋಥೆರಪಿ 83, ಅಲೈಡ್ ಹೆಲ್ತ್ ಸೈನ್ಸ್ 111 ಇದೆ ಮತ್ತು ಆಯುಷ್‌ನ ಎಲ್ಲಾ ವಿಷಯಗಳು ಸೇರಿ 105 ಕಾಲೇಜುಗಳಿವೆ. ಹಾಗಾಗಿ, ಇವೊತ್ತಿನ ದಿವಸ 953 ಕಾಲೇಜುಗಳು ಒಂದು ವಿಶ್ವವಿದ್ಯಾಲಯದ ಕೆಳಗಡೆ ಅಂದರೆ, ಒಬ್ಬ ವೈಸ್ ಚಾನ್ಸೆಲರ್ ಮತ್ತು ಒಬ್ಬರು ರಿಜಿಸ್ಟ್ರಾರ್ ಅವುಗಳನ್ನು ನಿರ್ವಹಿಸುವಂಥದ್ದು ಇರುತ್ತದೆ. ಹಾಗಾಗಿ, ಆ ವಿಶ್ವವಿದ್ಯಾಲಯಕ್ಕೆ ಆಯುಷ್‌ಗೆ ಯಾವ ರೀತಿ ಫೋಕಸ್ ಕೊಡಬೇಕೆನ್ನುವುದು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಯುಷ್‌ಗೆ ಒಟ್ಟಾರೆಯಾಗಿ ವಿಷಯಗಳು ಇರತಕ್ಕಂಥದ್ದು ಮತ್ತು ಕೇವಲ 02 ಕೋರ್ಸ್ ಇದೆ. ಆದರೆ, ಹೆಲ್ತ್ ಸೈನ್ಸ್‌ನಲ್ಲಿ ಒಟ್ಟು 49 ವೈದ್ಯಕೀಯ ಕೋರ್ಸ್‌ಗಳು ಇವೆ. ಯುನಾನಿ ಮತ್ತು ಆಯುರ್ವೇದಗಳಲ್ಲಿ ಮಾತ್ರ 02 ಕೋರ್ಸ್‌ಗಳಿವೆ. ನ್ಯಾಚುರೋಪತಿ, ಯೋಗವಿಜ್ಞಾನಗಳು ಮತ್ತು ಹೋಮಿಯೋಪತಿಗೆ ಕೇವಲ 01 ಕೋರ್ಸ್ ಇದೆ. ಹಾಗಾಗಿ, ಖಂಡಿತವಾಗಿಯೂ ಕೂಡ ಯಾವ ದೃಷ್ಟಿಕೋನ ಮತ್ತು ಯಾವ ಬದ್ಧತೆಯನ್ನು ಈ ವಿಷಯಗಳಿಗೆ ಕೊಡಬೇಕಾಗಿತ್ತು, ಕಾರಣಾಂತರಗಳಿಂದ ಅದನ್ನು ಕೊಡುವುದಕ್ಕೆ ಆಗಲಿಲ್ಲ. ಅದನ್ನು ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಇಡೀ ಪಾಶ್ಚಿಮಾತ್ಯ ದೇಶಗಳು ಆಯುಷ್‌ನ ಪದ್ಧತಿ ಮತ್ತು ವಿಜ್ಞಾನಕ್ಕೆ ಮನಸೋತಿದ್ದಾರೆ ಮತ್ತು ಅದನ್ನು ಮನಸಾರೆ ಒಪ್ಪಿದ್ದಾರೆ. ಇದರಿಂದಾಗಿ, ನಮ್ಮ ದೇಶಕ್ಕೆ ಒಂದು ದೊಡ್ಡ ಜವಾಬ್ದಾರಿಯಿದೆ. ಈ ಒಂದು ವಿಷಯಗಳಲ್ಲಿ ಇವೊತ್ತಿನ ದಿವಸ ಪ್ರಾಚೀನ ಕಾಲದಿಂದಲೂ ಅಭ್ಯಾಸ ಮಾಡಿಕೊಂಡಿರತಕ್ಕಂತಹ ಒಂದು ದಾಖಲೆಗಳು ನಮ್ಮಲ್ಲಿವೆ. ಅದಕ್ಕೆ ಹೆಚ್ಚಿನ ಸಂಶೋಧನೆ ಅಗತ್ಯವಿದೆ ಮತ್ತು ಎಲ್ಲಾ ಸಂಶೋಧನಾ ವಿಷಯಗಳನ್ನು ದಾಖಲೆ ಮಾಡುವಂಥದ್ದು ಸಹ ಬಹಳ ಅವಶ್ಯವಿದೆ. ಆಗ ಮಾತ್ರ ವಿಶ್ವಾಸ ಹೆಚ್ಚು ಮೂಡುತ್ತದೆ ಮತ್ತು ನಂಬಿಕೆ ಸಹ ಹೆಚ್ಚು ಮೂಡುತ್ತದೆ.

ಇದೇ ವಿಷಯ 2007ರಲ್ಲಿ ಬೀಜಿಂಗ್‌ನಲ್ಲಿ ಡಿಕ್ಲರೇಷನ್ ಆಯಿತು. ಅಲ್ಲಿ declaration ಆದಂತಹ ಸಂದರ್ಭದಲ್ಲಿ ಪ್ರಾಚೀನ ಕಾಲದ ಪದ್ಧತಿಗಳು ಏನು ಆರೋಗ್ಯ ಕ್ಷೇತ್ರದಲ್ಲಿ ಆಯಾ ದೇಶಗಳು ಅಳವಡಿಸಿಕೊಂಡಿದೆ, ಅದನ್ನು preserve ಮಾಡಬೇಕು, protect ಮಾಡಬೇಕು, ಮತ್ತು ಪ್ರಾಕ್ಟೀಸ್ ಮಾಡಬೇಕೆನ್ನುವ ಮೂರು ಪದಗಳಲ್ಲಿ ಒಂದು declaration ಮಾಡಿರುತ್ತದೆ. ಆ ಕಾರಣದಿಂದಲೇ ಮಾನ್ಯ ಪ್ರಧಾನ ಮಂತ್ರಿಗಳು 2014ರ ನವೆಂಬರ್ 9ರಂದು ಆಯುಷ್ ಇಲಾಖೆಯನ್ನೇ ಆರೋಗ್ಯ ಇಲಾಖೆಯಿಂದ ಬೇರ್ಪಡಿಸಿ, ಅದಕ್ಕೆ ಒಂದು ವಿಶೇಷವಾದಂತಹ ಇಲಾಖೆಯನ್ನು ಕೂಡ ಪ್ರಾರಂಭ ಮಾಡಿದರು. ಹಾಗಾಗಿ, ಇವೊತ್ತಿನ ದಿವಸ ನಿಜವಾಗಿಯೂ ಕೂಡ ಆಯುಷ್ ವಿಶ್ವವಿದ್ಯಾಲಯ ಸ್ಥಾಪನೆ ಮಾಡುವಂತಹ ಕಾಲಘಟ್ಟದಲ್ಲಿ ನಾವಿದ್ದೇವೆ. ಇಂತಹ ಸುಸಂದರ್ಭದಲ್ಲಿ ಎಲ್ಲಾ ಮಾನ್ಯ ಸದಸ್ಯರಲ್ಲಿ ಯಾವ ಅನುಮಾನಗಳಿವೆ ಆ ಎಲ್ಲಾ ಅನುಮಾನಗಳನ್ನು ದೂರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಈಗಾಗಲೇ ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ಸಿ.ಎಂ. ಇಬ್ರಾಹಿಂ ಸದಸ್ಯರು, ಎಸ್.ಡಿ.ಎಂ. ಆಯುರ್ವೇದ್ ಕಾಲೇಜು ಆಸ್ಪತ್ರೆ ಯಾವ ರೀತಿ ನಮ್ಮ ರಾಜ್ಯ ಸರ್ಕಾರದ ಜೊತೆ empanel ಆಗಿದೆ, ಅಲ್ಲಿ ಯಾವ ರೋಗಿಗಳು ಚಿಕಿತ್ಸೆ ತೆಗೆದುಕೊಳ್ಳುತ್ತಾರೆ, ಅವರಿಗೆ ಖಂಡಿತವಾಗಿಯೂ ಕೂಡ ನಾವು reimbursement ಮಾಡಿಕೊಡುವಂತಹ ಅವಕಾಶವಿದೆ. ಹಾಗಾಗಿ, ಆಯುರ್ವೇದ ಅಭ್ಯಾಸ ಮಾಡುವಂತಹ ಯಾವುದೇ ಒಂದು ಕಾಲೇಜು ಆಗಲಿ ಅಥವಾ ಆಸ್ಪತ್ರೆ ಆಗಲಿ ಅವರು ನಮ್ಮ ಜೊತೆ empanel ಮಾಡಿಕೊಳ್ಳುವಂತಹ ಒಂದು ಪದ್ಧತಿ ಇದೆ. ಅದನ್ನು ಆ ಆಸ್ಪತ್ರೆಗಳು ಮಾಡಿಕೊಂಡರೆ ಖಂಡಿತವಾಗಿಯೂ ಅವರಿಗೂ ಸಹ ನಾವು reimbursement ಮಾಡುತ್ತೇವೆ. ಇಲ್ಲ ಎನ್ನುವಂತಹ ಪ್ರಶ್ನೆಯೇ ಇರುವುದಿಲ್ಲ. ಅದೇ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿ, ಈಗಾಗಲೇ KAUP (Karnataka Ayurvedic and Unani Practitioners *Board)* ನಲ್ಲಿ ನೊಂದಾಯಿತ ವೈದ್ಯರಿಗೆ death certificate ಕೊಡಲು ಅವಕಾಶ ಮಾಡಿಕೊಡಲಾಗಿದೆ. ಈ ಬಗ್ಗೆ ಕೆಲವು ಮಾನ್ಯ ಸದಸ್ಯರು ಆ ವಿಚಾರವನ್ನು ಎತ್ತಿದ್ದರು. ಹಾಗಾಗಿ, ಉತ್ತರ ನೀಡಿರುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾನು multi usage ಬಗ್ಗೆ ಕೇಳಿರುತ್ತೇನೆ.

**ಡಾ: ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಆ ವಿಷಯ ಬೇರೆ. ಅದರ ಬಗ್ಗೆ ನಂತರ ಮಾತನಾಡೋಣ. ಪಾರಂಪರಿಕ ವೈದ್ಯರ ವಿದ್ಯೆಯನ್ನು ಮುಖ್ಯವಾಹಿನಿಗೆ ತರಬೇಕೆನ್ನುವುದೇ ಇದರ ಮೂಲ ಉದ್ದೇಶ. ಅದನ್ನು ಮಾಡಬೇಕಾದರೆ ಅದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕಾಗಿದೆ ಮತ್ತು ಸಂಶೋಧನೆಗಳನ್ನು ಸಹ ಹೆಚ್ಚಿಗೆ ಮಾಡಬೇಕಾಗಿದೆ. ಈಗಾಗಲೇ RGUHS (Rajiv Gandhi University of Health Sciences) ನಲ್ಲಿ ಅನೇಕ ಸಂಶೋಧನೆಗಳು ಆಗಿರುತ್ತವೆ. ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ, "ಆ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳು ಆಗಲಿಲ್ಲ" ಎನ್ನುವ ವಿಚಾರ ಎತ್ತಿರುತ್ತಾರೆ. ಆ ಬಗ್ಗೆ ರಾಜ್ಯ ಮಟ್ಟ, ರಾಷ್ಟ್ರ ಮಟ್ಟದ ಪೇಪರ್‌ಗಳು ಅಲ್ಲದೇ, ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಸಹ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಹಾಗಾಗಿ, ಈ ನಿಟ್ಟಿನಲ್ಲಿ ಬಹಳಷ್ಟು ಕೆಲಸ ಆಗಿರುತ್ತದೆ ಮತ್ತು ಆ ಕಟ್ಟಡ ಆಗುವುದಕ್ಕೆ ಅನುದಾನ ಕೊರತೆ ಕೂಡ ಇರುವುದಿಲ್ಲ. ಆದರೆ, ಅಲ್ಲಿ legal tussle ಇದೆ. ಜಮೀನಿನ ವ್ಯಾಜ್ಯ ನಡೆದಿದ್ದರಿಂದ ಅದು ತಡವಾಗಿರುತ್ತದೆ. ಆದರೆ, ಈ ವಿಷಯದಲ್ಲಿ ಸರ್ಕಾರ ಬದ್ಧವಾಗಿದೆ. ಇನ್ನು ಮುಂದಿನ 2 ತಿಂಗಳ ಒಳಗಾಗಿ, ನಾವು ಈಗಾಗಲೇ ರಾಮನಗರದಲ್ಲಿ ಸ್ಥಾಪನೆ ಮಾಡಬೇಕೆಂದು ಉದ್ದೇಶ ಮಾಡಿರುವ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಕಟ್ಟಡವನ್ನು ಪ್ರಾರಂಭ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಹಾಗಾಗಿ, ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ನಾವು ಮನವಿ ಮಾಡುವುದೇನೆಂದರೆ, ಇವೊತ್ತಿನ ದಿವಸ ಇಂತಹ ಒಂದು ಒಳ್ಳೆಯ...

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, Health and Medical Education ನಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತು ಅವಕಾಶ ಇರುವುದಿಲ್ಲ.

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ರಾಜೀವ್ ಗಾಂಧಿ ವಿಶ್ವವಿದ್ಯಾಲಯ ದಲ್ಲಿಅದಕ್ಕೆ ಅವಕಾಶ ನೀಡಲಾಗಿರುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆದರೆ ಈ ವಿಧೇಯಕವನ್ನು ನಾನು ನೋಡಿದೆ. ಅದರಂತೆ, ಕಾರ್ಯನಿರ್ವಾಹಕ ಪರಿಷತ್ತಿನಲ್ಲಿ there is no provision.

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಅದನ್ನು ಮಾಡೋಣ. ಅದರಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀ ಲಕ್ಷಣ ಸವದಿಯವರು ಬಹಳ ಅಮೂಲ್ಯವಾದ ಉದಾಹರಣೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, "ಆಯುರ್ವೇದದಿಂದ ಬ್ಲಾಕ್ ಫಂಗಸ್ ರೋಗ ವಾಸಿಯಾಗಿದೆ" ಎಂದು ಉದಾಹರಣೆ ನೀಡಿದ್ದಾರೆ. ಇದರ ಬಗ್ಗೆ ಸರ್ಕಾರ ಏನಾದರೂ ಸಂಶೋಧನೆ ಮಾಡಿಸಿ, ಮುಂದೆ ಆಗುವಂತಹ ಅನಾಹುತಗಳಿಗೆ ಸಹಾಯಕವಾಗುವಂತಹ ಏನಾದರೂ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ ಎಂಬ ಬಗ್ಗೆ ತಿಳಿಸಬೇಕು.

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಅದನ್ನು ಮಾಡೋಣ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಮ್ಮ ಖಾಸಗಿ ಸದಸ್ಯರ ವಿಧೇಯಕವನ್ನು ಸಹ ಇದರಲ್ಲಿ ಸೇರಿಸಿ.

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಮಾನ್ಯ ಸದಸ್ಯರೊಂದಿಗೆ ಚರ್ಚಿಸುತ್ತೇನೆ ಹಾಗೂ ಸಂಬಂಧಪಟ್ಟ ವೈದ್ಯರ ಜೊತೆ ಮಾತನಾಡಿ, ಅವರಿಗೆ ಯಾವರೀತಿಯಲ್ಲಿ ಅವಕಾಶಗಳಿವೆ ಮತ್ತು ಸಂಶೋಧನೆ ಮಾಡುವುದಕ್ಕೆ ಸರ್ಕಾರದಿಂದ ಅಗತ್ಯವಾದ ಸಹಕಾರ ಬೇಕಾಗಿದೆ ಆ ಸಹಕಾರ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ.

(ಮುಂದು)

(1261) 22.12.2021 2.20 YL-VK (ಉಪ ಸಭಾಪತಿಯವರ ಉಪಸ್ಥಿತಿ)

**ಡಾ|| ಕೆ.ಸುಧಾಕರ್(ಮುಂದು):-**

ಸರ್ಕಾರವು ಬಹಳ ಬದ್ಧತೆಯಿಂದ ಇದೆ. ಅಲೋಪತಿ, ಆಯುರ್ವೇದ, ಯುನಾನಿ ಎನ್ನುವಂಥದು ಏನಿಲ್ಲ. ಕೋವಿಡ್-19 ಬಂದ ಸಂದರ್ಭದಲ್ಲಿ Arq-e-Ajeeb ಅನೇಕ ಔಷಧಿಗಳನ್ನು ಉಪಯೋಗ ಮಾಡಿದ್ದೇವೆ. ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಆಯುಷ್ ಇಲಾಖೆಯಿಂದ ಬಹಳಷ್ಟು ಔಷಧಿಗಳನ್ನು ಸರಬರಾಜು ಮಾಡಿ, ವಿತರಿಸಲಾಗಿದೆ. ಜೊತೆಗೆ ಗುಣಾತ್ಮಕವಾಗಿ ಒಳ್ಳೆಯ ಪ್ರತಿಕ್ರಿಯೆ ಸಹ ಬಂದಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಾಗಾಗಿ ನಾವು ಆಯುಷ್ ಚಿಕಿತ್ಸೆ ಮೇಲೆ ನಂಬಿಕೆಯನ್ನಿಟ್ಟಿದ್ದೇವೆ. ಭಾರತೀಯರಾದ ನಾವು ನಂಬಿಕೆಯನ್ನು ಇಡದೇ ಬೇರೆ ಯಾರು ನಂಬಿಕೆ ಇಡಲು ಸಾಧ್ಯವಿಲ್ಲ. ಖಂಡಿತವಾಗಿ ಆಯುಷ್ ಚಿಕಿತ್ಸೆಯಿಂದ ಅನೇಕ ರೋಗಗಳಿಗೆ ಔಷಧಿಗಳು ಇದ್ದು, ಅದನ್ನು ನಾವು ನಂಬಬೇಕಾಗಿದೆ. ಅದನ್ನು ಇನ್ನು ಹೆಚ್ಚಿಗೆ ಪ್ರಚೋದಿಸಲು ಕೇವಲ ಸಂಶೋಧನೆಯಿಂದ ಮಾತ್ರ ಸಾಧ್ಯ. ಅದರ ಬಗ್ಗೆ ಹೆಚ್ಚು ಅಧ್ಯಯನ ಆಗಬೇಕು. ಆವಿಷ್ಕಾರ ಇಲ್ಲದೇ ಹೋದರೆ ಯಾರು ಸಹ ನಂಬಲು ಸಾಧ್ಯವಿಲ್ಲ. Standardization ಇಲ್ಲ. ಅಲೋಪತಿಗೂ ಮತ್ತು ಆಯುಷ್‌ಗೂ ಇರುವ ವ್ಯತ್ಯಾಸವೇನೆಂದರೆ, standardization of drugs ಇಲ್ಲ. ಯಾವ ಡ್ರಗ್‌ನಲ್ಲಿ ಎಷ್ಟು ಪ್ರಮಾಣ ಇದೆ ಎಂದು ಆಯುಷ್‌ನಲ್ಲಿ ನಿಖರತೆ ಇಲ್ಲ. ಹಾಗಾಗಿ ಕೆಲವರಿಗೆ ಶಂಕೆ ಇದ್ದು, ಅದನ್ನು ದೂರ ಮಾಡಬೇಕೆಂದರೆ ಸಂಶೋಧನೆಗೆ ಒತ್ತು ನೀಡಬೇಕು. ಅದೇ ರೀತಿ ಆಯುಷ್‌ನಲ್ಲಿ ಪದವೀಧರರು/ಸ್ನಾತಕೋತ್ತರ ಪದವಿ ಪಡೆಯುವವರಿಗೆ ಉತ್ತಮ ಅವಕಾಶವನ್ನು ಕಲ್ಪಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಸಹ ಪ್ರಾಥಮಿಕ ಚಿಕಿತ್ಸಾ ಕೇಂದ್ರದಿಂದ ಹಾಗೂ ಜಿಲ್ಲಾ ಮಟ್ಟದ ಜಿಲ್ಲಾ ಆಸ್ಪತ್ರೆಗಳಿಂದ ಸಹ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. ಸುಮಾರು 250 ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳೆಲ್ಲವನ್ನೂ ಸಹ ಮೇಲ್ದರ್ಜೆಗೇರಿಸುವ ಕೆಲಸವನ್ನು ಪ್ರಾರಂಭಿಸಲಾಗಿದೆ. ಅದರಲ್ಲಿ ಒಬ್ಬ ವೈದ್ಯನಿದ್ದು, ಈಗ ಮೂರು ವೈದ್ಯರನ್ನು ನೇಮಿಸಲಾಗುತ್ತಿದೆ. ಆ ಮೂರು ವೈದ್ಯರಲ್ಲಿ ಎರಡು ಅಲೋಪತಿ ವೈದ್ಯರು ಹಾಗೂ ಒಬ್ಬರು ಆಯುಷ್ ವೈದ್ಯರಾಗಿ ನೇಮಿಸಲಾಗಿದೆ. ಈ ರೀತಿಯಾಗಿ ರಚನಾತ್ಮಕ ಆಲೋಚನೆಯಿಂದಾಗಿ ಮಾಡಲಾಗುತ್ತಿದೆ. ಅದಕ್ಕಾಗಿ ಮತ್ತೊಮ್ಮೆ ಎಲ್ಲಾ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ, ಇಂತಹ ಒಳ್ಳೆಯ ಕಾಯ್ದೆಯನ್ನು ತಾವೆಲ್ಲರೂ ಮಂಜೂರು ಮಾಡಿಕೊಡಬೇಕು ಮತ್ತು ಆಯುಷ್ ವಿಶ್ವವಿದ್ಯಾಲಯ ನಮ್ಮ ರಾಜ್ಯದಲ್ಲಿ ಸ್ಥಾಪನೆಯಾಗುವಂಥ ಐತಿಹಾಸಿಕ ಕ್ಷಣದಲ್ಲಿ,...

**ಶ್ರೀ ಎಸ್.ವ್ಹಿ.ಸಂಕನೂರು (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿಯು ವಿಶ್ವವಿದ್ಯಾಲಯ ಸ್ಥಾಪನೆ ಮಾಡಬೇಕು.

**ಡಾ|| ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಗದಗ ಜಿಲ್ಲೆಯು ಒಂದು ಯೋಗ್ಯವಾದಂಥ ಸ್ಥಳವಾಗಿದ್ದು, ಅಲ್ಲಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲು ನನ್ನ ತಕರಾರು ಏನಿಲ್ಲ. ಆದರೆ, ಬಹಳ ಮುಂದೆ ಈಗಾಗಲೇ ಹೋಗಿದ್ದೇವೆ. ಶಿವಮೊಗ್ಗ ಜಿಲ್ಲೆಯ ಸೋಗಾನೆಹಳ್ಳಿಯಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಗೆ 100 ಎಕರೆ ಜಮೀನು ಈಗಾಗಲೇ ಮಂಜೂರು ಆಗಿದೆ. ಜೊತೆಗೆ ಆಯುರ್ವೇದ ಮಹಾ ವಿಶ್ವವಿದ್ಯಾಲಯ ಸಹ ಅಲ್ಲಿ ಸ್ಥಾಪನೆಯಾಗಿದೆ. ಈಗಾಗಲೇ ವಿಶ್ವವಿದ್ಯಾಲಯ ಸ್ಥಾಪನೆಗೆ 100 ಎಕರೆ ಜಮೀನಿಗೆ ಸಚಿವ ಸಂಪುಟ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಭೆಯಲ್ಲಿ ಅನುಮೋದನೆ ದೊರೆತ್ತಿರುವುದರಿಂದ ಎಲ್ಲಾ ಸದಸ್ಯರು ಇದಕ್ಕೆ ಒಪ್ಪಿಗೆಯನ್ನು ಸೂಚಿಸಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈಗಾಗಲೇ 3 ವೈದ್ಯರಲ್ಲಿ ಒಬ್ಬರನ್ನು ಆಯುಷ್ ವೈದ್ಯರಾಗಿ ನೇಮಕ ಮಾಡಲಾಗುವುದು ಎಂದು ಹೇಳಿರುವುದರಿಂದ ನಾನು ಅದನ್ನು ಸ್ವಾಗತಿಸುತ್ತಾ, ಮಾನ್ಯ ಸಚಿವರಿಗೆ ಧನ್ಯವ್ಹಾದಗಳನ್ನು ಸಲ್ಲಿಸುತ್ತೇನೆ. ಆದರೆ, ಸರ್ಕಾರಿ ಕೆಲಸ ಸಿಗದ ಪ್ರಯುಕ್ತ ಬೇರೆ ಖಾಸಗಿ ಆಸ್ಪತ್ರೆಯಲ್ಲಿ practice ಮಾಡುವವರಿಗೆ ಮಾನ್ಯತೆ ನೀಡಬೇಕು. ಏಕೆಂದರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರ್ಕಾರದಿಂದ 250 ರಿಂದ 500 ಜನರನ್ನು ತೆಗೆದುಕೊಳ್ಳುತ್ತಾರೆ, ಅದರಂತೆ ಒಂದು ವರ್ಷಕ್ಕೆ 5000 ಜನ ಬರುತ್ತಾರೆ. ಆದರೆ, ಖಾಸಗಿ ಆಸ್ಪತ್ರೆಯಲ್ಲಿ practice ಮಾಡುವವರಿಗೆ ಯಾವ ರೀತಿ recognition ನೀಡಬೇಕೆಂಬುದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು. ಮಾನ್ಯ ಸಚಿವರು ನನಗೆ ಉತ್ತರವನ್ನು ನೀಡಬೇಕು.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಯವರೇ, ಅಲೋಪತಿ ಬಿಟ್ಟು ಬೇರೆ ಎಲ್ಲವೂ ಆಯುಷ್ ವಿಶ್ವವಿದ್ಯಾಲಯಕ್ಕೆ ಒಳಪಡುತ್ತದೆ ಎನ್ನುವಂಥ ಮಾತನ್ನು ಮಾನ್ಯ ಸಚಿವರು ಹೇಳಿದರು. ಆದರೆ, "Sowa-Rigpa" ಎಂಬುದನ್ನು ಮಾತ್ರ ಮಾನ್ಯ ಸಚಿವರು ಹೇಳಲಿಲ್ಲ. ಹಾಗೆಂದರೆ ಏನು? ಏಕೆಂದರೆ, ಆ ರೋಗವು ಹೊಸದಾಗಿ ಕಾಣುತ್ತಿದ್ದು, ಯಾವ ದೇಶದಲ್ಲಿ ಬಂದಿರುವುದು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**(ಈ ಹಂತದಲ್ಲಿ ಮಾನ್ಯ ಸಚಿವರು ಗೊತ್ತಿಲ್ಲವೆಂದು ತಲೆ ಆಡಿಸಿದರು)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ತಿಳಿದಿಲ್ಲವೆಂದರೆ, ಹೇಗೆ ವಿಧೇಯಕದಲ್ಲಿ ತಂದಿದ್ದಾರೆ. What is the meaning of that "Sowa-Rigpa"? ಅದರ ಬಗ್ಗೆ ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ, ನಮ್ಮ ರಾಜ್ಯದಲ್ಲಿ ಅಥವಾ ಬೇರೆ ರಾಜ್ಯದಲ್ಲಿ ಅದರ ಚಿಕಿತ್ಸೆ ಯಾವ ರೀತಿ ಇದೆ ಎಂಬುದನ್ನು ನೋಡಿಲ್ಲ. ಅದರ ಬಗ್ಗೆ ತಿಳಿದುಕೊಳ್ಳಬೇಕಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಮಾನ್ಯ ಸಚಿವರಲ್ಲಿ ಮಾನ್ಯತೆ ಕುರಿತು ಮಾಹಿತಿ ಕೇಳಿದ್ದು, ಉತ್ತರ ನೀಡಲಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, That is not a private bill. ಈಗಾಗಲೇ ಸಂಪೂರ್ಣವಾಗಿ ಹೇಳಿದ್ದು, ಮತ್ತೆ ಅದನ್ನು drag ಮಾಡುವುದು ಬೇಡ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯತೆ ಕುರಿತು ಮಾನ್ಯ ಸಚಿವರು ತಿಳಿಸಲಿ.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಆಯುಷ್‌ನಲ್ಲಿ ಯಾರು ಪದವೀಧರರು ಇರುತ್ತಾರೆ, ಅಂಥವರಿಗೆ ಅವರದೇ ಆದ ಒಂದು ಮಾರ್ಗಸೂಚಿ ಇದೆ. ಯಾರು ನೋಂದಣಿ ಮಾಡಿಕೊಂಡು, ಸಂಬಂಧಪಟ್ಟ ವಿಷಯದಲ್ಲಿ ಪರಿಣಿತಿ ಹೊಂದಿರುತ್ತಾರೆ, ಅಂತಹ ವಿಷಯದಲ್ಲಿ ಮಾತ್ರ ಅವರು ಅಭ್ಯಾಸ ಮಾಡಬೇಕು. ಈಗಾಗಲೇ ಹಿರಿಯ ಸದಸ್ಯರುಗಳು ಎಂ.ಬಿ.ಬಿ.ಎಸ್. ಮಾಡಿದವರು ಆಯುರ್ವೇದ ಚಿಕಿತ್ಸೆ ನೀಡಲು ಸಾಧ್ಯವಿಲ್ಲ ಎನ್ನುವಂಥ ಮಾತನ್ನು ಹೇಳಿದ್ದರು. ಹಾಗೆಯೇ ಆಯುರ್ವೇದದಲ್ಲಿ ಪರಿಣಿತಿ ಹೊಂದಿರುವವರು ಹೋಮಿಯೋಪಥಿ ಚಿಕಿತ್ಸೆ ನೀಡಲು ಸಾಧ್ಯವಿಲ್ಲ. ಇದರಿಂದಾಗಿ ಯಾವ ಅಭ್ಯಾಸದಲ್ಲಿ ಪದವಿಯನ್ನು ಪಡೆದಿರುತ್ತಾರೆ, ಆ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಅಭ್ಯಾಸ ಹೊಂದಲು ಕಾನೂನಿನಲ್ಲಿ ಅವಕಾಶ ಇದೆ. ಇಂತಹ ಒಂದು ಕಾನೂನು ಇಡೀ ವಿಶ್ವದಲ್ಲಿಯೇ ಇದ್ದು, ನಾವು ಕೂಡ ಅದನ್ನೇ ಮುಂದುವರೆಸುತ್ತೇವೆ. ಹಾಗೆಯೇ ಮಾನ್ಯ ಪಿ.ಆರ್. ರಮೇಶ್‌ರವರು ಕೇಳಿದ ಹಾಗೆ “Sowa-Rigpa” ಎನ್ನುವುದು ಟಿಬೇಟಿಯನ್ ಮೂಲದ ಚಿಕಿತ್ಸೆಯಾಗಿದ್ದು, ಇದೆಲ್ಲವನ್ನೂ ಸಹ ಆಯುಷ್ ಚಿಕಿತ್ಸೆಗೆ ಒಳಪಡಿಸಲಾಗಿದೆ. ಹಾಗಾಗಿ ಎಲ್ಲರೂ ಈ ವಿಧೇಯಕಕ್ಕೆ ಒಪ್ಪಿಗೆ ಸೂಚಿಸಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ರಾಮನಗರ ಜಿಲ್ಲೆಯ ರಾಜೀವ್‌ಗಾಂಧಿ ವಿಶ್ವವಿದ್ಯಾಲಯ ಸ್ಥಾಪನೆ ಕುರಿತು ಮಾನ್ಯ ಸಚಿವರು ಹೇಳಲಿಲ್ಲ. ಹಾಗೆ ಬಾಕಿ ಉಳಿದಿದೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 53 ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 53ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 53ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅದಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಡಾ|| ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:-** ಈಗ ಸದನವನ್ನು 3 ಗಂಟೆ 45 ನಿಮಿಷದವರೆಗೂ ಮುಂದೂಡಲಾಗಿದೆ.

**(ಸದನವು ಭೋಜನ ವಿರಾಮಕ್ಕಾಗಿ ಅಪರಾಹ್ನ 2 ಗಂಟೆ 28 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಅಪರಾಹ್ನ 3 ಗಂಟೆ 45 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(1262) 22-12-2021 / 3.45 SK-BNS

**(ಅಪರಾಹ್ನ 2 ಗಂಟೆ 28 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಅಪರಾಹ್ನ 3 ಗಂಟೆ 56 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**8. <u>ಪ್ರಕಟಣೆ</u>**

**ಸಭಾಪತಿಯವರು:-** ಕಾಮನ್‌ವೆಲ್ತ್ ಸಂಸದೀಯ ಸಂಘ, ಕರ್ನಾಟಕ ಶಾಖೆಯ ವಾರ್ಷಿಕ ಸಾಮಾನ್ಯ ಸಭೆಯನ್ನು ಇಂದು ಸಂಜೆ 5.30 ಗಂಟೆ ಬದಲಾಗಿ, 6.30 ಗಂಟೆಗೆ ಬೆಳಗಾವಿಯ ಸುವರ್ಣ ವಿಧಾನ ಸೌಧದ ಮೊದಲನೇ ಮಹಡಿಯಲ್ಲಿರುವ ಸೆಂಟ್ರಲ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದು, ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು ಸದರಿ ಸಭೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರುತ್ತೇನೆ.

ಈಗ ವಿಧೇಯಕಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಸಿ.ಎಂ ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಮ್ಮದು ನಿಯಮ 330 ಅಡಿಯಲ್ಲಿ ವಿಷಯವನ್ನು ತೆಗೆದುಕೊಂಡ ನಂತರ ಬಿಲ್‌ಗಳನ್ನು ತೆಗೆದುಕೊಳ್ಳಬಹುದಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ ದಯವಿಟ್ಟು ಕುಳಿತುಕೊಳ್ಳಿ.

**9. ಶಾಸನ ರಚನೆ**

**<u>ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ</u>**

**<u>ಊ) ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021</u>**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, “ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021 ರ ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**<u>ಪ್ರಸ್ತಾವವನ್ನು ಮಂಡಿಸಲಾಯಿತು</u>**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 04.09.2015 ರಂದು ಸಂಗ್ರಹಿಸಿದಂತಹ ತೆರಿಗೆ, ಆ ಸುತ್ತೋಲೆ ಆಧಾರದ ಮೇಲೆ ತೆರಿಗೆಯನ್ನು ಸಂಗ್ರಹಣೆ ಮಾಡಲಾಗಿದೆ ಎಂಬ ಕಾರಣಕ್ಕೆ ಕೆಲವರು ಮಾನ್ಯ ನಾಯಾಲಯದ ಮೊರೆ ಹೋಗುತ್ತಾರೆ. ಅದನ್ನು ಮರುಪಾವತಿ ಮಾಡಬೇಕೆಂದು ಮಾನ್ಯ ನ್ಯಾಯಾಲಯ ಆದೇಶ ಕೊಡುತ್ತದೆ. ಆ ಹಿನ್ನೆಲೆಯಲ್ಲಿ ಸುಮಾರು ಎರಡು ಸಾವಿರದ ಮುನ್ನೂರ ಅರವತ್ತೆರಡು ಕೋಟಿ ರೂಪಾಯಿಗಳಷ್ಟು ಮರುಪಾವತಿಗೆ ಇರುವಂತಹ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಮತ್ತು ನ್ಯಾಯಾಲಯದ ಆದೇಶದಂತೆ, ನೂತನ ಪರಿಷ್ಕøತವಾದ ತಿದ್ದುಪಡಿಯನ್ನು ಈ ಸದನದಲ್ಲಿ ಮಂಡಿಸುತ್ತಿದ್ದೇನೆ. ಇದರಿಂದ ಇತರೆ ಶುಲ್ಕದ ವಿನಾಯಿತಿ ನೀಡಿರುವುದನ್ನು ಕೂಡ ಸಕ್ರಮಗೊಳಿಸುವುದಕ್ಕೆ ಅವಕಾಶವಾಗುತ್ತದೆ. ಇದಕ್ಕಾಗಿ ಈಗಾಗಲೇ ಅಧ್ಯಾದೇಶವನ್ನು ಹೊರಡಿಸಲಾಗಿದೆ. ಸದನದ ಒಪ್ಪಿಗೆ ಪಡೆಯುವುದಕ್ಕೋಸ್ಕರ, ಈ ತಿದ್ದುಪಡಿಯನ್ನು ತರಲಾಗಿದೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾಯಿದೆಗೆ ತಿದ್ದುಪಡಿ ಮುಖಾಂತರ ಹೆಚ್ಚುವರಿ ಸೆಕ್ಷನ್‌ಗಳನ್ನು ತರುತ್ತಿರುವುದರ ಉದ್ದೇಶ ಮಾನ್ಯ ನ್ಯಾಯಾಲಯ ರಿಟ್ ಪಿಟಿಷನ್ ಅನ್ನು ದಿನಾಂಕ 04.08.2021 ರಂದು dispose ಮಾಡಿದಾಗ, ಇದರಲ್ಲಿ observations ಮಾಡಿದ ಅಂಶಗಳ ಆಧಾರದ ಮೇಲೆ, ಈ ಒಂದು ತಿದ್ದುಪಡಿಗಳನ್ನು ತಂದಿದ್ದಾರೆ.

(ಮುಂದು)

(1263)22.12.2021/4.00/ಎಂ.ಎಂ-ಬಿ.ಎನ್.ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಆರ್. ರಮೇಶ್(ಮುಂದು):-**

ಇದರಲ್ಲಿ ಬಹಳ ಪ್ರಮುಖವಾದದ್ದು ಯೋಜನೆಗೆ ಸಂಬಂಧಪಟ್ಟಿದ್ದು plan sanction ಇರಬಹುದು, commencement certificate ಇರಬಹುದು ಅಥವಾ occupancy certificate ಇರಬಹುದು. ಇದನ್ನು ತೆಗೆದುಕೊಳ್ಳುವಾಗ ಅದಕ್ಕೆ ಹಾಕುವಂತಹ ಶುಲ್ಕವನ್ನು ನಿಮ್ಮ ಆಕ್ಟ್‌ನಲ್ಲಿ ಅವಕಾಶವಿಲ್ಲವೆಂದು, ಅದು ಕಾನೂನುಬಾಹಿರವಾಗಿದೆಯೆಂದು ನ್ಯಾಯಾಲಯ ತೆಗೆದುಹಾಕಿದೆ. ಈ ರೀತಿ 2362 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಲಾಗಿದೆಯೆಂದು ಇಲ್ಲಿ ನಮಗೆ ಮಾಹಿತಿ ಕೊಟ್ಟಿದ್ದಾರೆ. ಈ ಹಣವನ್ನು ನಾವು ಮತ್ತೆ ಕೊಡುವುದಕ್ಕಾಗುವುದಿಲ್ಲ, ಕೊಡುವುದಕ್ಕೆ ಬರುವುದಿಲ್ಲ, ಅದನ್ನು ಉಳಿಸುವುದಕ್ಕೆ ಈ ತಿದ್ದುಪಡಿ. ಎರಡನೆಯದಾಗಿ ಇನ್ನು ಮುಂದೆ ಇದನ್ನು ಮಾಡಬೇಕಾದರೆ ಮುಖ್ಯ ಆಯುಕ್ತರಿಗೆ ಅಧಿಕಾರ ಕೊಟ್ಟಿದ್ದಾರೆ. ಇದು ಬಹಳ ಮುಖ್ಯವಾದುದು. ಈಗ ಪ್ರಶ್ನೆ ಇರುವುದು, ನೀವು ಈ ಶುಲ್ಕವನ್ನು ಹಾಕಿರುವುದು ಕೆ.ಎಂ.ಸಿ. ಕಾಯಿದೆ ಇದ್ದಾಗ. ಕೆ.ಎಂ.ಸಿ. ಕಾಯಿದೆ ಹೋಗಿ ಬಿ.ಬಿ.ಎಂ.ಪಿ. ಕಾಯಿದೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಂದದ್ದು 2021ರಲ್ಲಿ. 2021ರಲ್ಲಿ ಬಂದ ಆದೇಶದ ಆಧಾರದ ಮೇಲೆ ಇವರು ಬಿ.ಬಿ.ಎಂ.ಪಿ. ಆಕ್ಟ್‌ಗೆ ತಿದ್ದುಪಡಿ ತರುತ್ತಿದ್ದಾರೆ. ಅಂತಿಮವಾಗಿ enforce ಮಾಡಿದ್ದು ಕೆ.ಎಂ.ಸಿ. ಆಕ್ಟ್. ಕೆ.ಎಂ.ಸಿ. ಆಕ್ಟ್‌ನಲ್ಲಿ ಹಾಕಿ ಬಿ.ಬಿ.ಎಂ.ಪಿ. ಆಕ್ಟ್‌ನಲ್ಲಿ amendment ಮಾಡಿದರೆ ಇದು ಎಲ್ಲಿ ನಿಲ್ಲುತ್ತದೆ? ಇದರ ಶುಲ್ಕವನ್ನು ತೆಗೆದುಕೊಳ್ಳುವುದಕ್ಕೆ ಹೋದಾಗ, ಕೊಡಬೇಕೆಂದು ಕೋರ್ಟ್ ಆದೇಶ ಮಾಡಿದೆ ಅದನ್ನು ಉಳಿಸಬೇಕೆಂದು ನನಗನಿಸುತ್ತದೆ, it will further be a litigation. ಸೆಕ್ಷನ್ ಮಾಡಿರುವುದರಲ್ಲಿ ಗೊಂದಲವನ್ನು ಸೃಷ್ಟಿ ಮಾಡಿದ್ದಾರೆ. It is not for the public purpose. ಜಾಸ್ತಿ ಹಣವನ್ನು ಕೊಡಬೇಕಲ್ಲಾ, ಅದನ್ನು ಉಳಿಸುವುದಕ್ಕೆ ಒಂದು ಅಮೆಂಡ್‌ಮೆಂಟ್ ತಂದಿದ್ದಾರೆ ಮತ್ತು ಅದನ್ನು ಮುಂದುವರೆಸುವುದಕ್ಕೆ ಶುಲ್ಕಗಳನ್ನು ಹೇಗೆಲ್ಲಾ ಹಾಕಬೇಕು ಎಂದು ಆಯುಕ್ತರಿಗೆ ಅಧಿಕಾರ ಕೊಟ್ಟಿದ್ದಾರೆ. ಸಭಾಪತಿಯವರಿಗೆ ನನಗಿಂತಾ ಚೆನ್ನಾಗಿ ಗೊತ್ತು. ಒಂದು ಕಟ್ಟಡವನ್ನು ಕಟ್ಟಬೇಕಾದರೆ ಒಂದು ಲೈಸೆನ್ಸ್ ಫೀಸ್‌ಗೆ ಒಂದು ಕೋಟಿ ರೂಪಾಯಿ ಶುಲ್ಕವಾಗುತ್ತದೆ. ಇವತ್ತು ಹೆಚ್ಚುವರಿಯಾಗಿ ಹಾಕುತ್ತಾ ಹೋದರೆ ನನ್ನ ಪ್ರಕಾರ ಬೆಂಗಳೂರಿನಲ್ಲಿ ಯಾರೂ ಕಟ್ಟಡವನ್ನು ಕಟ್ಟುವುದಿಲ್ಲ. ಎಲ್ಲರೂ ಅನಧಿಕೃತವಾಗಿ ಕಟ್ಟುತ್ತಾರೆ. ಎ.ಇ.ಇ., ಮತ್ತು ಎ.ಇ., ಗೆ ಒಂದಷ್ಟು ಹಣವನ್ನು ಕೊಟ್ಟು ಅನಧಿಕೃತವಾಗಿ ಕಟ್ಟುತ್ತಾರೆ. ಬೆಂಗಳೂರಿನಲ್ಲಿ ಶೇ.85 ರಿಂದ ಶೇ.90ರಷ್ಟು ಕಟ್ಟಡಗಳನ್ನು ನಕ್ಷೆಯಿಲ್ಲದೇ ಕಟ್ಟುತ್ತಿದ್ದಾರೆ. ಇದಕ್ಕೆ ಬೇಕಾದಷ್ಟು ಆಧಾರಗಳಿವೆ. ಇವತ್ತು ನೀವು ಈ ರೀತಿ ಸಾರ್ವಜನಿಕರಿಗೆ ಹೇರುತ್ತಿರುವುದು ಇಷ್ಟೊಂದು ದುಬಾರಿಯಾದ ಕಟ್ಟಡ; ಕಟ್ಟಡ ಕಟ್ಟುವುದಕ್ಕೆ ನಿಮಗೆ ಎಷ್ಟು ಖರ್ಚು ಆಗುತ್ತದೋ ಅದಕ್ಕಿಂತ ಹೆಚ್ಚಿಗೆ ಫೀಸ್ ಮತ್ತು ಇಂತಹವುಗಳಿಗೆ ಕೊಡಬೇಕಾಗುತ್ತದೆ. ಅದರ ಮಧ್ಯೆ ಬೇರೆ ಬೇರೆ ಕಾಟಗಳು ಬೇಕಾದಷ್ಟಿದೆ. ಇವತ್ತು ಬೆಂಗಳೂರು ಬ್ರ್ಯಾಂಡೆಡ್ ಆಗಿದೆ. ಈ ರೀತಿ ಶುಲ್ಕವನ್ನು ಹೇರುತ್ತಿದ್ದರೆ ಇಲ್ಲಿ ಸುಗಮವಾದಂತಹ ಸರ್ಕಾರ ಇದೆ ಮತ್ತು ಸುಗಮವಾದ ಬ್ಯುಸಿನೆಸ್ ಮಾಡಬೇಕೆಂದು ಆಚೆಯಿಂದ ಬರುವ ಜನರು ಕಡಿಮೆಯಾಗಿ ಹೋಗುತ್ತಾರೆ. ಇದು ಬಹಳ ಗಂಭೀರವಾದಂತಹ ವಿಚಾರವಾಗಿದೆ. ನಾನು ಹೇಳಿರುವ ಈ ಅಂಶವನ್ನು ತಾವು ಪರಿಶೀಲನೆ ಮಾಡಿ. ಕೆ.ಎಂ.ಸಿ. ಆಕ್ಟ್‌ನಲ್ಲಿ ಸೆಕ್ಷನ್ ತೆಗೆದುಕೊಂಡು ಬಿ.ಬಿ.ಎಂ.ಪಿ. ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ತಂದರೆ ಹೇಗೆ ಸಲ್ಲುತ್ತದೆ? ಇದಕ್ಕೆ ಉತ್ತರ ಕೊಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಮ್ಮ ಸ್ನೇಹಿತರಾದ, ಮಾಜಿ ಮೇಯರ್ ಆದ ಮಾನ್ಯ ಪಿ.ಆರ್. ರಮೇಶ್‌ರವರು ಎತ್ತಿರುವ ಪ್ರಶ್ನೆ ಮೂಲವಾಗಿರುವ ಪ್ರಶ್ನೆಯಾಗಿದೆ. ಕಾಯಿದೆ ತಿದ್ದುಪಡಿಗಿರುವುದು ಬಿ.ಬಿ.ಎಂ.ಪಿ. ಆಕ್ಟ್‌ಗಲ್ಲ. ಅಧಿಕೃತವಾಗಿ ಅವರು ತಂದಿರುವುದು ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ)ವಿಧೇಯಕ ಎಂದು ಹೇಳಿದರೆ ಇಂದಿನ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರ ಆರು ಮಹಾನಗರ ಪಾಲಿಕೆಗಳಿಗೆ ಸಂಬಂಧಪಟ್ಟಂತಹ ಕಾಯಿದೆಗೆ ತಿದ್ದುಪಡಿಯನ್ನು ತಂದಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಕೇವಲ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಸಂಗ್ರಹ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದಂತಹ ತೆರಿಗೆಗೆ ಅಥವಾ ಬೇರೆ ರೀತಿಯ fee ಗೆ, ಲೈಸೆನ್ಸ್ ಫೀಸ್‌ಗೆ ಸಂಬಂಧಪಟ್ಟಂತೆ ಇತರ ಆರು ಮಹಾನಗರ ಪಾಲಿಕೆಗಳಿಗೆ ಸಂಬಂಧಪಟ್ಟಂತೆ ಕಾಯಿದೆಗೆ ಸಂಬಂಧಪಟ್ಟಂತಹ ಪ್ರಶ್ನೆಯಾಗಿದೆ. ಈಗ ನಮ್ಮ ಸ್ನೇಹಿತರು ಹೇಳಿದ ಹಾಗೆ ಈಗಾಗಲೇ ಬಿ.ಬಿ.ಎಂ.ಪಿ. ಕಾಯಿದೆ 2021 ಜಾರಿಯಲ್ಲಿದ್ದಾಗ ಯಾವ ರೀತಿಯಾಗಿ ನೀವು retrospectively ಈ ಕಾಯಿದೆಗೆ ತಿದ್ದುಪಡಿ ತರುತ್ತೀರಿ? ಇದು ಹೈಕೋರ್ಟ್ ಆದೇಶಕ್ಕೆ ಹಿನ್ನೆಡೆಯಾಗುವುದಿಲ್ಲವೇ? ಏನಿದ್ದರೂ prospective ಆಗಿ ಇರಬೇಕು. ಈ ಬಗ್ಗೆ ನೀವು ಆಲೋಚನೆ ಮಾಡಿದ್ದೀರಾ? ನೀವು ಮಾಡಿರುವುದು ಕೇವಲ ಆರ್ಥಿಕ ವ್ಯವಸ್ಥೆ ಮಹಾನಗರ ಪಾಲಿಕೆ, ಇತರ ಪಾಲಿಕೆಗಳು ಇದಾಗುತ್ತದೆ ಎಂದು ಆ ದೃಷ್ಟಿಯಲ್ಲಿ ತಾವು 2362 ಕೋಟಿ ರೂಪಾಯಿಗಳನ್ನು ವಾಪಸ್ ಕೊಡಬೇಕೆನ್ನುವ ದೃಷ್ಟಿಯಲ್ಲಿ ಇದರ ಸಂಬಂಧವಾಗಿ ತರುವಂತಹ ತಿದ್ದುಪಡಿಯಾಗಿದೆ. ಇದು ಹೈಕೋರ್ಟ್‌ನ scrutiny ಗೆ ನಿಲ್ಲುವುದಿಲ್ಲ. ಎಂದಾದರೂ ಒಂದು ದಿವಸ ಹಣವನ್ನು ಕಟ್ಟಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ದಯಮಾಡಿ ಸರ್ಕಾರ ಮರು ಆಲೋಚನೆ ಮಾಡಬೇಕು, ಕೋರ್ಟ್‌ನ ನಿಂದನೆಗೆ ಒಳಗಾಗಬೇಡಿ, ದಯಮಾಡಿ ಈ ಬಿಲ್ಲನ್ನು ವಾಪಸ್ ಪಡೆಯಬೇಕು. ಏಕೆಂದರೆ ಬಿ.ಬಿ.ಎಂ.ಪಿ. ಆಕ್ಟ್ ಇದೆ. ಇದರಲ್ಲಿ main respondent ಇರುವುದು ಬಿ.ಬಿ.ಎಂ.ಪಿ. ಕಮೀಷನರ್. ನೀವು ಯಾವ ರೀತಿ retrospective ಆಗಿ ಪೂರ್ವಾನ್ವಯವಾದ ರೀತಿಯಲ್ಲಿ ಇದನ್ನು ಜಾರಿಗೆ ತರುತ್ತೀರಿ? ಸರ್ಕಾರ ಇದನ್ನು ಆಲೋಚನೆ ಮಾಡಿಲ್ಲವೇ? ಸುಮಾರು ಸಲ ಬಿ.ಡಿ.ಎ. ಮತ್ತು ಬಿ.ಬಿ.ಎಂ.ಪಿ. ಗೆ ಸಂಬಂಧಪಟ್ಟಂತೆ ಹೈಕೋರ್ಟ್‌ನಲ್ಲಿ ಛೀಮಾರಿ ಹಾಕಿಸಿಕೊಂಡಿದ್ದಾರೆ. ದಯಮಾಡಿ ಇದನ್ನು ವಾಪಸ್ ಪಡೆದುಕೊಂಡು re-examine ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪಿ.ಆರ್. ರಮೇಶ್ ಮತ್ತು ಕೆ.ಎ. ತಿಪ್ಪೇಸ್ವಾಮಿಯವರು ಕೆ.ಎಂ.ಸಿ. ಆಕ್ಟ್‌ನಲ್ಲಿ ಈ ಕಾಯಿದೆ ಇತ್ತು ಅದಕ್ಕೆ ತಿದ್ದುಪಡಿ ತರಬೇಕಾಗಿತ್ತು, ಬಿ.ಬಿ.ಎಂ.ಪಿ. ಆಕ್ಟ್‌ಗೆ ತಿದ್ದುಪಡಿ ತರಲಾಗುತ್ತಿದೆ ಎಂದು ಹೇಳಿದರು. ಇಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. 1987ರ ಕರ್ನಾಟಕ ಅಧಿನಿಯಮದ ಸಂಖ್ಯೆ 14ರ ತಿದ್ದುಪಡಿ ಸೇರಿದಂತೆ 2020ರ ತಿದ್ದುಪಡಿಯು ಕೂಡ ಸೇರಿದೆ. ಆದ್ದರಿಂದ ಯಾವ ಗೊಂದಲಗಳಿಗೂ ಅವಕಾಶವಿಲ್ಲ. ಸ್ಪಷ್ಟವಾಗಿ ಇರುವುದು ಇಷ್ಟೇ. 2015ನೇ ಇಸವಿಯಲ್ಲಿ ಸರ್ಕಾರ ಆದೇಶವೊಂದನ್ನು ಹೊರಡಿಸಿ ತೆರಿಗೆ ಸಂಗ್ರಹಣೆ ಮಾಡಿತು ಎನ್ನುವುದಕ್ಕೆ ತಿದ್ದುಪಡಿ ಇಲ್ಲದೇ, ಕಾಯಿದೆ ಇಲ್ಲದೇ ಯಾವ ರೀತಿ ಮಾಡಿದ್ದಾರೆ ಎಂದು ನ್ಯಾಯಾಲಯಕ್ಕೆ ಹೋದ ಹಿನ್ನೆಲೆಯಲ್ಲಿ ನ್ಯಾಯಾಲಯವು ಇದಕ್ಕೆ ಬೇಕಾದಂತಹ ತಿದ್ದುಪಡಿಯನ್ನು ತರಬಹುದು ಎಂದು ಒಂದು ಅವಕಾಶವನ್ನು ಕೊಡುತ್ತದೆ. ಅದನ್ನು ನಾವು ಸಂಗ್ರಹ ಮಾಡಿದಂತಹ ತೆರಿಗೆಯನ್ನು ಮರುಪಾವತಿ ಮಾಡಬೇಕೆಂದು ಹೇಳಿದೆ. 2362 ಕೋಟಿ ರೂಪಾಯಿಯ ತೆರಿಗೆಯನ್ನು ವಾಪಸ್ ಮಾಡುವ ಸ್ಥಿತಿ ಇರಲಿಲ್ಲ. ಆ ಹಿನ್ನೆಲೆಯಲ್ಲಿ ನ್ಯಾಯಾಲಯ ಕೊಟ್ಟಿರುವ ಆದೇಶವನ್ನು ಗಮನದಲ್ಲಿಟ್ಟುಕೊಂಡು ಎರಡಕ್ಕೂ ಪರಿಷ್ಕೃತವಾದ ತಿದ್ದುಪಡಿ ಮಾಡಿದ್ದೇವೆ. ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಮತ್ತು ರಮೇಶ್‌ರವರು ತಮ್ಮ ಅನುಭವದಿಂದ ಹೇಳಿರುವ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತುಗಳನ್ನು ಅರ್ಥಮಾಡಿಕೊಂಡು ನಿಯಮಗಳನ್ನು ರೂಪಿಸುವಾಗ ಅವರಿಗೆ ಬೇಕಾದ ನ್ಯಾಯ ಮಾಡುತ್ತೇವೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ನ್ಯಾಯಾಲಯ ಹೇಳಿರುವುದು ಏನೆಂದರೆ. . .

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತ್ತಿಯವರೇ, ನ್ಯಾಯಾಲಯ ನೇರವಾಗಿ ಕಾನೂನು ಮತ್ತು ಕಾನೂನಿನ ಬಲ ಇರಲಾರದೇ ತೆರಿಗೆಯನ್ನು ಸಂಗ್ರಹ ಮಾಡಿದ್ದೀರಿ ಎಂದು ಹೇಳಿದೆ. ಈ ದೇಶದಲ್ಲಿ, ಈ ರಾಜ್ಯದಲ್ಲಿ ಕಾನೂನಿಲ್ಲದೇ ತೆರಿಗೆಯನ್ನು ಸಂಗ್ರಹ ಮಾಡುವುದಕ್ಕೆ ಬರುತ್ತದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, . .

**ಶ್ರೀ ಎಸ್.ಆರ್. ಪಾಟೀಲ್:-** ನಿಮ್ಮದೇನು ಕಾನೂನು? No law or rule. ಯಾವುದಾದರೂ ತೆರಿಗೆಯನ್ನು ಸಂಗ್ರಹ ಮಾಡಬೇಕಾದರೆ;

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, 2015ರಲ್ಲಿ ಅಂದಿನ ಸರ್ಕಾರ ಕೊಟ್ಟ ಸುತ್ತೋಲೆಯ ಆಧಾರದಲ್ಲಿ ತೆರಿಗೆಯನ್ನು ಸಂಗ್ರಹಿಸಲಾಗಿದೆ. ಅದು ಯಾವ ಸರ್ಕಾರವೇ ಆಗಿರಲಿ ನಿಯಮದ ಪ್ರಕಾರವೇ ಮಾಡಿದ್ದಾರೆ. ಕಾನೂನಿನ ತಡೆಯಾಜ್ಞೆ ಬಂದಾಗ ಇದನ್ನು ಸರಿಪಡಿಸುವುದು ಜವಾಬ್ದಾರಿ. ಆ ಹಿನ್ನೆಲೆಯಲ್ಲಿ ಈ ಕಾಯಿದೆಗೆ ತಿದ್ದುಪಡಿ ತರಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಭಾನಾಯಕರು ಹೇಳುವುದೇನೆಂದರೆ, ಆಗಿನ ಸರ್ಕಾರ ಯಾವುದೇ ಇರಲಿ ಸುತ್ತೋಲೆ ಹೊರಡಿಸಬೇಕಾದರೆ, ಸರ್ಕಾರದ ಆದೇಶವನ್ನು ಪಾಸ್ ಮಾಡಬೇಕಾದರೆ, it should be as per the provisions of any existing law. ಯಾವುದಾದರೂ ಒಂದು ಕಾನೂನಿನ ಅಡಿಯಲ್ಲಿ ಸರ್ಕಾರ ಸುತ್ತೋಲೆ ಹೊರಡಿಸಬೇಕಾಗುತ್ತದೆ. ಮನಸೋಯಿಚ್ಛೆ, as per their whims and fancies they cannot issue the Government order. ಸರ್ಕಾರದ ಆದೇಶವನ್ನು ಹೊರಡಿಸಬೇಕಾದರೆ, under which provision of law? ಯಾವುದೇ ಕಾನೂನಿಲ್ಲದೇ ಪ್ರಾವಿಜನ್ ಇಲ್ಲದೇ ಹುಚ್ಚರ ಹಾಗೆ ಸುತ್ತೋಲೆಯನ್ನು ಹೊರಡಿಸಿ 2362 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುವುದೆಂದರೆ ಇದು ಹಗಲು ದರೋಡೆಯಲ್ಲವೇ? ಅದಕ್ಕೆ ಹೈಕೋರ್ಟ್‌ನವರು, ‘you refund that tax amount to the concerned people’ ಎಂದು struck down

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದಾರೆ. ಅದನ್ನು ಬಿಟ್ಟು ಇಲ್ಲೊಂದು ಅಮೆಂಡ್‌ಮೆಂಟ್ ಮಾಡಿದರೆ ಅದು ನಿಲ್ಲುತ್ತದೆಯೇ? How does it stand? As on the day of collecting the tax amount, there was no law at all. Lawlessness ಇದು. ಈಗ ತಿದ್ದುಪಡಿ ಮಾಡಿದರೆ ಹೇಗಾಗುತ್ತದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗಿರುವ ಸ್ಥಿತಿಗೆ ಸಂಬಂಧಪಟ್ಟಂತೆ . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ಇನ್ನೂ ಪೂರ್ತಿಯಾಗಿ ಕೇಳಿ. ನಾನು ಕಾನೂನಾತ್ಮಕವಾಗಿಯೇ ಮಾತನಾಡುತ್ತಿದ್ದೇನೆ. ನಾನು vague ಆಗಿ ಸಾಹಿತ್ಯಿಕವಾಗಿ ಮಾತನಾಡುತ್ತಿಲ್ಲ. ಈಗ ಈ ರಾಜ್ಯದಲ್ಲಿ ಯಾವುದೂ ಕಾನೂನಿಲ್ಲ. 2362 ಕೋಟಿ ರೂಪಾಯಿಗಳ ತೆರಿಗೆಯನ್ನು ಸಂಗ್ರಹ ಮಾಡಿದ್ದಾರೆ. ಇದು ಕಾನೂನುಬಾಹಿರವಾಗಿದೆ. ಕಾನೂನಿಲ್ಲದೇ ಹೇಗೆ ತೆರಿಗೆಯನ್ನು ಸಂಗ್ರಹ ಮಾಡಿದಿರಿ ಅದನ್ನು refund ಮಾಡಲು ಹೇಳಿದರು. ಅದನ್ನು ಹೇಗೆ regularize ಮಾಡುತ್ತೀರಿ? ಅಂದು ಕಾನೂನಿನಲ್ಲಿಲ್ಲ, ಇಂದು ಕಾನೂನು ಮಾಡುತ್ತಾರಾ? How can it be done? Definitely, it goes against the order of the High Court.

(ಮುಂದು)

(1264) 22-12-2021 KH/GR 4-10 **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ನ್ಯಾಯಾಲಯ ಕೊಟ್ಟ ನಿರ್ಣಯಕ್ಕೆ ವ್ಯತಿರಿಕ್ತವಾಗಿ, ನ್ಯಾಯಾಲಯದ ನಿರ್ಣಯವನ್ನು nullify ಮಾಡುವುದಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಇದನ್ನು nullify ಮಾಡುವುದಕ್ಕೆ ಬರುತ್ತದೆಯೇ? It will be nothing but a Contempt of Court. ಇದನ್ನು ತಿದ್ದುಪಡಿ ಮಾಡಿ, ಈ ರೀತಿ ಮಾಡಿರಲಿಲ್ಲ. ಇದು ಕಾನೂನು ಬಾಹಿರ ಎಂದು ನಾಳೆ ಇವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಅದರ ಬಗ್ಗೆ ತಾವು clarify ಮಾಡಿ. ಇದು retrospective operation. ಇದನ್ನು ಎರಡು-ಮೂರು ವರ್ಷಗಳ ಹಿಂದೆ ಮಾಡಿರುವುದಾಗಿದೆ. ಈಗ ಇದನ್ನು ಹೇಗೆ ಸರಿಮಾಡುವುದಕ್ಕೆ ಆಗುತ್ತದೆ. There was no law at all, at the time of collecting taxes illegally. ‘Broad daylight dacoity’ ಎಂದು ಹೇಳುತ್ತಾರೆಯಲ್ಲವೇ, ಡಕಾಯಿತಿ ಆದ ಹಾಗೆ ಇದು. It is nothing but a dacoity made by the Government. ಅದನ್ನು ಇವತ್ತಿನ ದಿವಸ ಅಮೆಂಡ್‌ಮೆಂಟ್ ಮಾಡಿ, ಅದನ್ನು ಸರಿ ಮಾಡುವುದಕ್ಕೆ what right is Government has got?

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, 'ಡಕಾಯಿತಿ' ಎಂಬ ಶಬ್ದವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಏಕೆಂದರೆ, 2015ನೇ ಸಾಲಿನಲ್ಲಿ ಯಾವ ಸರ್ಕಾರ ಅಧಿಕಾರದಲ್ಲಿತ್ತು. ಆ ಸುತ್ತೋಲೆ ಹೊರಡಿಸುವಾಗ ಇದು ಯಾರ ಜವಾಬ್ದಾರಿಯಾಗಿತ್ತು?

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕಾನೂನಿನಿಂದ ವಸೂಲಿ ಮಾಡಿದರೆ ಏನು ಪ್ರಯೋಜನ? ಯಾವುದೇ ಸರ್ಕಾರ ಇರಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರು ಕಾನೂನು ಬಗ್ಗೆ ಮಾತನಾಡುವಾಗ . . .(ಗೊಂದಲ) ಆಗ ತಾವೇ ಮಂತ್ರಿಯಾಗಿದ್ದೀರಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, . . .

**ಡಾ||ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಡಕಾಯಿತಿ ಎಂದರೆ ಏನು ಅರ್ಥ? This is an elected Government. ಡಕಾಯಿತಿ ಎನ್ನುವ ಶಬ್ದವನ್ನು ಕಡತದಿಂದ ತೆಗೆಸಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಡಕಾಯಿತಿ ಎಂಬ ಶಬ್ದ unparliamentary word ಅಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿದರೆ, ಮಧ್ಯದಲ್ಲಿ ಇವರು ಏನು ಮಾತನಾಡುತ್ತಿದ್ದಾರೆ? ಯಾವುದೇ ಸರ್ಕಾರ ಇರಲಿ, ಯಾವುದೇ ಪಕ್ಷದ ಸರ್ಕಾರ ಇರಲಿ,

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ರೀತಿ ಸಂಗ್ರಹ ಮಾಡುವುದು ಇದು ಕಾನೂನುಬಾಹಿರ ಅಲ್ಲವೇ? ಈಗ ದಾರಿ ಹಿಡಿದು ಹೋಗುವವರನ್ನು ಬಡಿದು ವಸೂಲಿ ಮಾಡುವುದು ಕಾನೂನುಬದ್ಧವೇ? ದಾರಿ ಹಿಡಿದು ಹೋಗುವವರಿಗೆ assault ಮಾಡಿ, ದುಡ್ಡು ವಸೂಲಿ ಮಾಡಬಾರದು. ಇದನ್ನು ಡಕಾಯಿತಿ ಆದ ಹಾಗಾಗುತ್ತದೆ ಎಂದು ಹೇಳುತ್ತಾರೆ. ಹಾಗೆಯೇ, ಈ ಕಾನೂನು ಇಲ್ಲದೆಯೇ ತೆರಿಗೆ ಸಂಗ್ರಹ ಮಾಡುವುದು ಕಾನೂನು ಬಾಹಿರ ಅಲ್ಲವೇ?

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಒಂದು ನಿಮಿಷ. ಡಕಾಯಿತಿ ಎನ್ನುವ ಪದ it is not in good taste.  ಆದರೆ, unparliamentary word ಅಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಡಕಾಯಿತಿ ಎಂಬ ಶಬ್ದ ತಪ್ಪೋ, ಸರಿಯೋ ಎನ್ನುವುದಕ್ಕಿಂತ . . .

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನ್ಯಾಯಾಲಯದವರು ಕೊಟ್ಟಿರತಕ್ಕಂಥಹ . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, it is not in good taste.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೊಟ್ಟೆಗೆ ಏನು ಇಲ್ಲದವರು, ಡಕಾಯಿತಿ ಮಾಡಿದರೆ ಅದನ್ನು ಡಕಾಯಿತಿ ಎನ್ನುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನನ್ನ ಚರ್ಚೆ ಇರುವುದೇನೆಂದರೆ, . . .

**(ಗೊಂದಲ)**

**ಸಭಾಪತಿಯವರು:-** ನಾನು ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನೇ ಮಾಡಲಿ ಅಥವಾ ಸರ್ಕಾರ ಮಾಡಲಿ. It is nothing but a dacoity.  This is how they are collecting taxes.

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಆಯಿತು. ನಾನು ಹೇಳಿದ್ದೇನೆ. ತಾವು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಡಕಾಯಿತಿ ಎಂಬ ಶಬ್ದದ ಉಚ್ಚಾರದ ಬಗ್ಗೆ . . .

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಕಾನೂನು ಬೇಕಲ್ಲವೇ? ಕಾನೂನು ಇಲ್ಲದೇ ಇದನ್ನು ವಸೂಲಿ ಮಾಡಿದರೆ ಹೇಗೆ? This is a welfare Government. ಇದಕ್ಕೆ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಯಾವುದಾದರೂ ಕಾನೂನು ಮಾಡಲಿ. ಆ ಕಾನೂನಿನ ಅಡಿಯಲ್ಲಿ ವಸೂಲಿ ಮಾಡಲಿ. ಕಾನೂನು ಇಲ್ಲದೇ ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಒಂದು ನಿಮಿಷ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಒಂದು ನಿಮಿಷ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, I will tell this word hundred times.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಡಕಾಯಿತಿ ಎಂಬ ಶಬ್ದ unparliamentary word ಅಲ್ಲ ಎಂದು ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹೇಳಿದರು. ನಮಗೆ ಅದರ ಬಗ್ಗೆ ವಾದ ಅಲ್ಲ. ಬಹಳ ಸಜ್ಜನರಾಗಿರುವ ವಿರೋಧ ಪಕ್ಷದ ನಾಯಕರ ಬಾಯಿಂದ ಆ ಶಬ್ದ ಬರಬಾರದಿತ್ತು ಎನ್ನುವುದು ನಮ್ಮ ವಿನಂತಿ ಅಷ್ಟೇ. ನಾನು ಹೇಳುವುದೇ ಸರಿ ಎಂದರೆ ನನ್ನ ವಾದ ಏನು ಇಲ್ಲ. ಆದರೆ, ತಾವು ಈ ಶಬ್ದ ಹೇಳಿರುವುದರಿಂದ ನನ್ನ ಆಕ್ಷೇಪ ಇದೆ ಅಷ್ಟೇ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು ಮಾತನಾಡುವುದನ್ನು ಬೇಗ ಮುಗಿಸಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, Hon'ble High Court ನವರು ಕೊಟ್ಟಿರುವಂತಹ ತೀರ್ಪು ಇಷ್ಟೆ. ಇದರಲ್ಲಿ 7 ಅಂಶಗಳನ್ನು ನಮೂದಿಸಿದ್ದಾರೆ. In page no.6 of the Bill, it reads thus:

"(a) The bye-laws under which Ground Rent, Licence Fee, Building Licence Fee, Scrutiny Fee, Security Deposit are all held ultravires the Act and are resultantly rendered unenforceable.

(b) The Circular bearing No. ಹನಿನಯ/ಜೆಡಿ(ಉ)/ಡಿಎಂ3/ಪಿಆರ್/೩೨೦/2015-16, ದಿನಾಂಕ 04.09.2015 stands quashed."

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

It cannot be done. ಏಕೆ ಎಂದರೆ, ದಿನಾಂಕ:04-09-2015 ರಲ್ಲಿ ಯಾವುದೋ ಒಂದು ಸುತ್ತೋಲೆ ಮಾಡಿದ್ದಾರೆ. That stands quashed ಎಂದು ನ್ಯಾಯಾಲಯದವರು quash ಮಾಡಿದ್ದಾರೆ. ಹೀಗೆ ಇದನ್ನು ಸರಿಪಡಿಸುವುದಕ್ಕೆ suitable amendment to the Act ತರಲಾಗುತ್ತಿದೆ. ಎಂದರೆ, ಆವತ್ತು ನ್ಯಾಯಾಲಯ ಏನು ಅಮೆಂಟ್‌ಮೆಂಟ್ ತರಬೇಕೆಂದು ಸಲಹೆ ಕೊಟ್ಟಿದೆ. ಅಲ್ಲಿಂದ ಆಚೆಗೆ ತಾವು ತರುವಂತಹದ್ದು. ಇವತ್ತು ತಮಗೆ ಇದೆನ್ನೆಲ್ಲಾ retrospective ರೀತಿಯಲ್ಲಿ ಕೊಡಿ ಎಂದು ನ್ಯಾಯಾಲಯ ಏನು ಹೇಳಲಿಲ್ಲ. ಆಮೇಲೆ Chief Commissioner ಎಂದು the Karnataka Municipal Corporations Act ನಲ್ಲಿ ಎಲ್ಲಿ ಹೇಳಿದೆ. ತಾವು Chief Commissioner ಗೆ ಎಂದು ಕೊಟ್ಟಿದ್ದೀರಿ. ಅದನ್ನು ಓದುತ್ತೇನೆ ಕೇಳಿ. Clause 3 of the Bill reads thus:

> “**240A. Levy of imposts, restriction and condition**.-(1) The Chief Commissioner may grant such permission to execute the work together with a site plan of the land, ground plan, elevations and sections of the building subject to such restrictions and conditions, as may be specified in the bye-laws or he may refuse to grant such licence, subject to the conditions specified in Section 244.”

‘Chief Commissioner’ ಎಂದು ಕೆ.ಎಂ.ಸಿ., ಕಾಯ್ದೆಯಲ್ಲಿ ಎಲ್ಲಿದೆ?

**ಸಭಾಪತಿಯವರು:-** ವಿಧೇಯಕದ ಕನ್ನಡ ಪ್ರತಿಯಲ್ಲಿ ಏನಿದೆ ನೋಡಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾನ್ಯ ಮಂತ್ರಿಗಳು ದಯವಿಟ್ಟು ಹೇಳಬೇಕು. ಬಿ.ಬಿ.ಎಂ.ಪಿ., ಕಾಯ್ದೆಯಲ್ಲಿ Zonal Commissioners ಗಳು ಮತ್ತು Chief Commissioner ಗಳು ಇದ್ದಾರೆ. ಕೆ.ಎಂ.ಸಿ., ಕಾಯ್ದೆಯಲ್ಲಿ Chief Commissioner ಎಲ್ಲಿದ್ದಾರೆ?

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನ್ನದೊಂದು clarification ಇದೆ.

**ಸಭಾಪತಿಯವರು:-** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ತಾವು ಒಂದು ಸಾರಿ ಕೇಳಿ. ತಮಗೆ ಎಷ್ಟು ಸಾರಿ ಅವಕಾಶ ಕೊಡಬೇಕು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೆ.ಎಂ.ಸಿ., ಕಾಯ್ದೆಯಲ್ಲಿ ಇದನ್ನು ತಂದಿದ್ದೀರಿ. ಸರ್ಕಾರಕ್ಕೆ ಅಧಿಕಾರ ಇದೆ. ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ನ್ಯಾಯಾಲಯಗಳು ಈ ಪ್ರಾವಿಷನ್ ಸರಿಯಿಲ್ಲ ಎಂದು ಒಡೆದು ಹಾಕಬಹುದೇನೋ, ಕಾಯಿದೆಯನ್ನು ತರಬಾರದೆಂದು ಯಾವುದೇ ಸರ್ಕಾರಗಳು ಕೈಯನ್ನು ಕಟ್ಟಿ ಹಾಕುವುದಿಲ್ಲ. ಸರ್ಕಾರಕ್ಕೆ omnipotent ಇದೆ. ನಾನೇನು ಹೇಳುತ್ತಿದ್ದೇನೆ ಎಂದರೆ, ತಾವು ಕೆ.ಎಂ.ಸಿ., ಕಾಯ್ದೆಯನ್ನು ತಂದಿದ್ದೀರಿ. ಇದು ಕೇವಲ ಆ ಕಾರ್ಪೋರೇಷನ್‌ಗಳಿಗೆ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಅನ್ವಯವಾಗುತ್ತದೆ. ಇದು ಬಿ.ಬಿ.ಎಂ.ಪಿ.ಗೆ ಅನ್ವಯವಾಗುವುದಿಲ್ಲ. Retrospective ಆಗಿ ಬಿ.ಬಿ.ಎಂ.ಪಿ., ಕಾಯ್ದೆಯಿಂದ ತಾವು ಮಾಡುವುದಕ್ಕೆ ಬರುವುದಿಲ್ಲ. ತಮಗೆ ಅಧಿಕಾರ ಇಲ್ಲ. ಈಗಾಗಲೇ as far as the K.M.C., Act is concerned, B.B.M.P., has been excluded from the purview of the Act. ಇದನ್ನು ಏಕೆ ತರುತ್ತೀರಿ?

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು ಕುಳಿತುಕೊಳ್ಳಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, financial implication ಇದೆ ಎನ್ನುವ ದೃಷ್ಟಿಯಲ್ಲಿ ಮಾತ್ರ ತಾವು retrospective ಅನ್ನು ಮಾಡುತ್ತಿದ್ದೀರಿ. ದಯಮಾಡಿ ಇದನ್ನು ಮಾಡುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ಮತ್ತೊಮ್ಮೆ ಮರು ಪರಿಶೀಲನೆ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೆ.ಎಂ.ಸಿ., ಮತ್ತು ಬಿ.ಬಿ.ಎಂ.ಪಿ., ಕಾಯ್ದೆಗಳಿಗೂ ಈ ವಿಧೇಯಕದಲ್ಲಿ ತಿದ್ದುಪಡಿಯಲ್ಲಿ ಅಳವಡಿಸಲಾಗಿದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಮೊದಲು ಬೈಲಾಗಳ ಮೂಲಕ ಈ ಫೀ ಗಳನ್ನು ಸಂಗ್ರಹಿಸಲಾಗುತ್ತಿತ್ತು. ಈಗ ಕೆ.ಎಂ.ಸಿ., ಕಾಯ್ದೆಯಲ್ಲಿ ಈ ಬಗ್ಗೆ ಉಪಬಂಧಗಳು ಇರಲಿಲ್ಲ. ಆ ಹಿನ್ನೆಲೆಯಲ್ಲಿ ಈಗ ಎರಡು ಕಾಯ್ದೆಗಳಿಗೆ ತಿದ್ದುಪಡಿ ಮಾಡಿ, ಕಾನೂನಿನಲ್ಲಿ ಬೈಲಾ ಮುಖಾಂತರ ಈ ರೀತಿ ಫೀ ಸಂಗ್ರಹ ಮಾಡಲು ಅವಕಾಶ ಇರುವುದರಿಂದ, ಕಾನೂನು ಪ್ರಕಾರ ಈ ಕಾಯ್ದೆಯಲ್ಲಿ ಈ ಎರಡನ್ನು ಕೂಡ ಅಳವಡಿಸಿಕೊಳ್ಳಲಾಗಿದೆ. ಆದರೆ, ಉಪಬಂಧಗಳನ್ನು ಕಲ್ಪಿಸುವುದಕ್ಕೆ ಉಚ್ಚ ನ್ಯಾಯಾಲಯ ಆದೇಶ ಕೊಟ್ಟ ಹಿನ್ನೆಲೆಯಲ್ಲಿ ನಿಯಮಗಳನ್ನು ರೂಪಿಸುವಾಗ ಅವರು ಏನೇನು ಹೇಳುತ್ತಾರೆ. ಅದನ್ನು ಮಾಡುತ್ತೇವೆ. ನಮ್ಮಲ್ಲಿ ಯಾವುದೇ ಗೊಂದಲಗಳು ಇಲ್ಲ. 2015ನೇ ಸಾಲಿನಲ್ಲಿ ಆಗಿರುವಂತಹ ಸಣ್ಣ-ಪುಟ್ಟ ಗೊಂದಲಗಳನ್ನು ಸರಿಪಡಿಸಿ, ಆಡಳಿತ ಯಂತ್ರವನ್ನು ಕಾನೂನಿನ ಚೌಕಟ್ಟಿನಲ್ಲಿ ಮುಂದುವರೆಸುವುದು ಈ ಕಾಯ್ದೆಯ ಉದ್ದೇಶವಾಗಿದೆ.

**ಡಾ|| ಸಿ.ಎನ್.ಅಶ್ವಥ ನಾರಾಯಣ (ಉನ್ನತ ಶಿಕ್ಷಣ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಫ್ಲೋರ್ ಲೀಡರ್ ಹೇಳಿರುವಂತಹದ್ದು ಇದೆ. ಮಾನ್ಯ ಪಿ.ಆರ್.ರಮೇಶ್‌ರವರು ಬಿ.ಬಿ.ಎಂ.ಪಿ., ಬಗ್ಗೆ ಸಾಕಷ್ಟು ಗೊತ್ತಿರುವಂತಹವರು. ಸಾಕಷ್ಟು ಅನುಭವ ಇರುವಂತಹವರು. ಹಾಗೆಯೇ, ನಮ್ಮ ಪ್ರತಿ ಪಕ್ಷದ ನಾಯಕರು ಸಹ ವಿಚಾರವನ್ನು ತಿಳಿಸಿದ್ದಾರೆ. ಬಹಳ ಮುಖ್ಯವಾಗಿ Building Plan Fee ಅನ್ನು ಸಂಗ್ರಹ ಮಾಡುವುದಕ್ಕೆ ಬೇರೆ ಬೇರೆ Licence Fee, Scrutiny Fee, Security Deposit ಇವೆಲ್ಲಾವನ್ನೂ ಮೊದಲಿನಿಂದಲೂ ಸಂಗ್ರಹ ಮಾಡುತ್ತಿದ್ದೆವು. ಇದು ಕಾನೂನಿನಲ್ಲಿ ಇಲ್ಲ ಎನ್ನುವ ಕಾರಣದಿಂದಾಗಿ ಇವತ್ತು ನ್ಯಾಯಾಲಯದಲ್ಲಿ ಇದನ್ನು quash ಮಾಡುವಂತಹದ್ದು,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇದನ್ನು ಬೈಲಾ ಮೂಲಕ ಸಂಗ್ರಹ ಮಾಡುತ್ತಿದ್ದೆವು. ಈ ಬೈಲಾ ಮೂಲಕ ಸಂಗ್ರಹ ಮಾಡುತ್ತಿರುವುದನ್ನು ಪ್ರಶ್ನಿಸಿ ಇವತ್ತು ನ್ಯಾಯಾಲಯವು ಅದನ್ನು quash ಮಾಡಿರುವಂತಹದ್ದು ಇದೆ. ಹಾಗೆಯೇ, ಇದಕ್ಕೆ ತೀರ್ಪು ಕೊಟ್ಟಿದೆ. ಹಾಗಾಗಿ, ಇವತ್ತು ಅದನ್ನು ಕಾನೂನಿನಲ್ಲಿ ತರಬೇಕೆನ್ನುವುದಕ್ಕೆ retrospective ಆಗಿ 2015 ರಿಂದ ಅನ್ವಯವಾಗುವ ರೀತಿಯಲ್ಲಿ ಇದನ್ನು ತರುವಂತಹದ್ದಾಗಿದೆ. ಮೊದಲಿದ್ದ ಸರ್ಕಾರ ಇದನ್ನು ಮಾಡಿರಲಿಲ್ಲ. ಹಾಗೆಯೇ ಸಂಗ್ರಹ ಮಾಡಿದ್ದರು. ಹಾಗೇ ಸಂಗ್ರಹ ಮಾಡಿರುವುದು ಸೂಕ್ತವಾಗಿಲ್ಲ. ಕಾನೂನುಬದ್ಧವಾಗಿಲ್ಲ ಎನ್ನುವ ಕಾರಣದಿಂದಾಗಿ ಈಗ ಕಾನೂನುಬದ್ಧವಾಗಿ ಸಂಗ್ರಹ ಮಾಡುವುದಕ್ಕೆ retrospective ಅನ್ವಯವಾಗುವ ರೀತಿಯಲ್ಲಿ ಇವತ್ತು ಈ ಕಾನೂನನ್ನು ತರುವಂತಹದ್ದು ಆಗುತ್ತಿದೆ. ಇದಕ್ಕೆ ನಮ್ಮ ಎಲ್ಲಾ ಪ್ರತಿ ಪಕ್ಷದ ಸದಸ್ಯರು ಸಹಕಾರ ಕೊಡಬೇಕು. ಇದರಲ್ಲಿ ತರ್ಕ ಮಾಡುವಂತಹದ್ದು ಏನಿಲ್ಲ. ವಾದ-ವಿವಾದಗಳು ಏನಿಲ್ಲ. ಇವತ್ತು ಬಿ.ಬಿ.ಎಂ.ಪಿ., ಯಲ್ಲಿ ತಮಗೆ ಗೊತ್ತಿರುವ ಹಾಗೆ ದೊಡ್ಡ ದೊಡ್ಡ ಬಿಲ್ಡರ್‌ಗಳು ಅನುಕೂಲತೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ನಾವೇನಾದರೂ ಇದರಿಂದ ಹಿಂದೆ ಸರಿದರೆ ಯಾರಿಗೆ ಅನುಕೂಲತೆ ಆಗುತ್ತದೆ ಎನ್ನುವುದು ತಮಗೆ ಗೊತ್ತಿದೆ. ಇವತ್ತು ಎಲ್ಲಾ ರೀತಿಯ ಬೇರೆ ಬೇರೆ ಅನುಕೂಲತೆಗಳನ್ನು ಬಿ.ಬಿ.ಎಂ.ಪಿ., ಮತ್ತು ರೆವಿನ್ಯೂ ಇಲಾಖೆಗೆ ಬರುತ್ತಿರುವಂತಹದ್ದು ತಮಗೆ ಗೊತ್ತಿದೆ. ಎಷ್ಟರಮಟ್ಟಿಗೆ ಬಿ.ಬಿ.ಎಂ.ಪಿ., ಮತ್ತು ಸ್ಥಳೀಯ ಸಂಸ್ಥೆಗೆ ರೆವಿನ್ಯೂ ಕಲೆಕ್ಷನ್, ತೆರಿಗೆಯ ಜೊತೆ ಜೊತೆಯಲ್ಲಿಯೇ ಈ ಬಿಲ್ಡಿಂಗ್ ತೆರಿಗೆಯನ್ನು ಹೆಚ್ಚಿನ ರೀತಿ tax mobilisation or revenue collection ಆಗುವಂತಹದ್ದು ಇದೆ. ಇವತ್ತು ಈ ರೀತಿ ಮಾಡುವ ಮೂಲಕ ಒಂದು ಸ್ಥಳೀಯ ಸಂಸ್ಥೆಗೆ ದೊಡ್ಡ ಹಿನ್ನಡೆ ಆಗುವಂತಹದ್ದಾಗುತ್ತದೆ. ಹಾಗಾಗಿ ಇವತ್ತು ಈ ತಿದ್ದುಪಡಿ ತಂದಿರುವುದಕ್ಕೆ ಪ್ರತಿ ಪಕ್ಷದ ನಾಯಕರು ಮತ್ತು ಸದಸ್ಯರು ಸಹಕಾರ ಕೊಡಬೇಕು. ಇದನ್ನು ಅನುಮೋದಿಸಬೇಕೆಂದು ನಾನು ಮತ್ತೊಮ್ಮೆ ನಮ್ಮ ಸಭಾಪತಿಯವರ ಮೂಲಕ ನಾನು ಕೇಳಿಕೊಳ್ಳುತ್ತೇನೆ. ಇದರಿಂದ ಖಂಡಿತವಾಗಿ ಯಾವುದೇ ತೊಂದರೆಯಾಗುವುದಿಲ್ಲ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇರಲಿಲ್ಲ. ಇದನ್ನು ಕಾನೂನಿನಲ್ಲಿ ತರಬೇಕೆಂದು ನ್ಯಾಯಾಲಯವು ತಿಳಿಸಿದೆ. ಆ ಪ್ರಕಾರ ಇವತ್ತು ಕಾನೂನಿನಲ್ಲಿ ತರುವಂತಹದ್ದನ್ನು ನಾವು ಕೆ.ಎಂ.ಸಿ., ಕಾಯ್ದೆಯಲ್ಲಿಯೂ ತಂದಿದ್ದೇವೆ. ಬಿ.ಬಿ.ಎಂ.ಪಿ., ಕಾಯ್ದೆಯಲ್ಲಿಯೂ ತಂದಿದ್ದೇವೆ. ದಯವಿಟ್ಟು, ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ, ಸ್ಥಳೀಯ ಸಂಸ್ಥೆಗಳಿಗೆ ದೊಡ್ಡ ಸವಾಲಾಗುತ್ತದೆ. ದೊಡ್ಡ ಪೆಟ್ಟಾಗುತ್ತದೆ ಎಂದು ಹೇಳುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದೊಂದು ಬಹಳ ಗಂಭೀರವಾದ ವಿಚಾರ. ಬಿ.ಬಿ.ಎಂ.ಪಿ., ಮತ್ತು ಬೇರೆ ಏಜೆನ್ಸಿಗಳು ಯಾವ ರೀತಿಯಲ್ಲಿ ತೆರಿಗೆಯನ್ನು ಸಂಗ್ರಹ ಮಾಡುತ್ತದೆ ಮತ್ತು ಜನರ ರಕ್ತ ಯಾವ ರೀತಿ ಹೀರುತ್ತಿದ್ದಾರೆ ಎನ್ನುವುದು ಬೆಂಗಳೂರಿನಲ್ಲಿರುವ ಜನರಿಗೆಲ್ಲಾ ಗೊತ್ತಿದೆ. ಇದು ದೊಡ್ಡ ಬಿಲ್ಡರ್‌ಗಳಿಗೆ, ಸಣ್ಣವರಿಗೆ ಬಿಟ್ಟಿದ್ದಾರೆ ಎಂದಲ್ಲ. ಇವತ್ತು ಬೆಳಿಗ್ಗೆಯಿಂದ 3-4 ಬಿಲ್‌ಗಳನ್ನು ಪಾಸ್ ಮಾಡಲಾಯಿತು. ಇದಕ್ಕೆ ಯಾರಾದರೂ object ಮಾಡಿದ್ದಾರೆಯೇ, ಯಾವುದಕ್ಕೂ ಮಾಡಲಿಲ್ಲ. ಬಹಳ smooth ಆಗಿ ಆಯಿತು. ದಯವಿಟ್ಟು ಇದನ್ನು revise ಮಾಡಿ, Advocate General ರವರನ್ನು ಕರೆಯಿಸಿ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪುನಃ ಮಾತನಾಡಿ ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು. ಇದು ಬೆಂಗಳೂರಿನ ಭವಿಷ್ಯದ ವಿಚಾರ.

**ಡಾ|| ಸಿ.ಎನ್. ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಇದಕ್ಕೆ Ordinance ಆಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, Advocate General ರವರ ಹತ್ತಿರ ಮಾತನಾಡಿ ತರಿಸಿ. Ordinance ಆಗಿದೆ ಎಂದು ತಾವು ಹೇಳುವುದಕ್ಕೆ ಆಗುವುದಿಲ್ಲ.

(ಮುಂದು)

(1265) ಎಸ್‌ಪಿಆರ್/ಜಿಆರ್ 4:20 22/12/2021 (ಸಭಾಪತಿಯವರ ಉಪಸ್ಥಿತಿ)

**ಡಾ||ಸಿ.ಎನ್.ಅಶ್ವಥ್ ನಾರಾಯಣ(ಉನ್ನತ ಶಿಕ್ಷಣ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ಹರಿಪ್ರಸಾದ್‌ರವರಿಗೆ ಇದು ಗೊತ್ತಿಲ್ಲದಿರುವ ವಿಚಾರವೇನಲ್ಲ. ಇದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ಎಲ್ಲಿಯೋ ಒಂದು ಕಡೆ ಸ್ಥಳೀಯ ಸಂಸ್ಥೆಗಳು...,

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬಂಗಾರದ ಕತ್ತಿ ಎಂದು ಕಣ್ಣು ಚುಚ್ಚಿಕೊಳ್ಳುವುದಕ್ಕಾಗುತ್ತದೆಯೇ? ಇಲ್ಲಿ ಆ ಪ್ರಶ್ನೆಯಿಲ್ಲ. ಇಲ್ಲಿ ಸುಗ್ರೀವಾಜ್ಞೆ ಬಂದಿದೆ ಅದು ಬೇರೆ ಪ್ರಶ್ನೆಯಾಗಿದೆ.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಇದು ಬಂಗಾರದ ಕತ್ತಿ ಅಲ್ಲ. ಬಂಗಾರದ ಕತ್ತಿ ಎಂದು ಅದನ್ನು ಜೊತೆಯಲ್ಲಿಟ್ಟುಕೊಳ್ಳಿ; ಕಣ್ಣು ಚುಚ್ಚಿಕೊಳ್ಳಬೇಡಿ ಎಂದು ನಾವು ಹೇಳುತ್ತಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬೆಳಗ್ಗೆಯಿಂದ ಎಲ್ಲಾ ಸದಸ್ಯರುಗಳು ಸಹಕಾರವನ್ನು ನೀಡಿದ್ದಾರೆ; ಹೀಗಾಗಿ ಮೂರ್ನಾಲ್ಕು ವಿಧೇಯಕಗಳು ಇಲ್ಲಿ ಅನುಮೋದನೆಗೊಂಡಿವೆ.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಸಹ ವಿಧೇಯಕಗಳ ಅನುಮೋದನೆಯಾಗಿದೆ. ಈ ಕಾರಣಕ್ಕಾಗಿ ನಾವು ವಿರೋಧ ಪಕ್ಷದ ಸಹಕಾರವನ್ನು ...,

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಯಾರೂ ಸಹ ಎಲ್ಲಿಯೂ ಪ್ರಶ್ನಿಸಿಲ್ಲ. ಈ ವಿಧೇಯಕದಲ್ಲಿ ಎಲ್ಲಿಯೋ ಒಂದು ತಪ್ಪು ಕಾಣುತ್ತಿದೆ. ಪಾಲಿಕೆಗೆ ಸಂಬಂಧಪಟ್ಟಂತೆ, ಶ್ರೀ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಪಿ.ಆರ್.ರಮೇಶ್ ರವರಿಗೆ ಇರುವಷ್ಟು ಅನುಭವ ಯಾರಿಗೂ ಸಹ ಇಲ್ಲ. ಶ್ರೀ ಕೆ.ಎ.ತಿಪ್ಪೇಸ್ವಾಮಿ ರವರಿಗೆ administrative ಆಗಿ ....,

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಅವರ ಅನುಭವವು ಒಳ್ಳೆಯ ರೀತಿಯಲ್ಲಿ ಬಳಕೆಯಾಗಲಿ ಎಂದು ನಾವು ಆಶಿಸುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, no, no. ದಯಮಾಡಿ ಆ ರೀತಿಯಾಗಿ ಹೇಳಬೇಡಿ. ನಮ್ಮ ಬೆಂಗಳೂರು ನಗರದಲ್ಲಿ...,

**ಶ್ರೀ ಪಿ.ಆರ್.ರಮೇಶ್:-**ಮಾನ್ಯ ಸಭಾಪತಿಯವರೇ, ಪಾಲಿಕೆಗಳ ನಾಡಿ ಮಿಡಿತವನ್ನು...

**(ಗೊಂದಲ)**

**ಸಭಾಪತಿಯವರು:-** ಯಾರಾದರೂ ಒಬ್ಬರು ಮಾತನಾಡಿ. ಶ್ರೀ ಪಿ.ಆರ್.ರಮೇಶ್ ನವರೇ ಒಬ್ಬರು ಮಾತನಾಡುವಾಗ ನೀವು ಮಾತನಾಡಬೇಡಿ. ನಾನು ನಿಮಗೆ ಮಾತನಾಡಲು ಈಗಾಗಲೇ ಅವಕಾಶವನ್ನು ನೀಡಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದ ಹಿತದೃಷ್ಟಿಯಿಂದ ಮಾನ್ಯ ರಮೇಶ್‌ನವರು ತಮಗಿರುವ ಅನುಭವದಲ್ಲಿ ಪ್ರಸ್ತುತ ವಿಧೇಯಕಕ್ಕೆ ಸಂಬಂಧಪಟ್ಟಂತೆ ತಮ್ಮ ಸಲಹೆಗಳನ್ನು ನೀಡಿದ್ದಾರೆ. ಅವರಿಗೆ ಯಾವುದೇ ದುರುದ್ದೇಶವಿಲ್ಲ. ದಯಮಾಡಿ, ಸರ್ಕಾರವು ಇದನ್ನು ಸ್ವೀಕರಿಸಬೇಕು. ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ಸರ್ಕಾರ ಹಿಂಪಡೆಯುವುದು ಒಳ್ಳೆಯದು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಬಿ.ಬಿ.ಎಂ.ಪಿ.,ಗೆ ಹಿನ್ನಡೆ ಮಾಡಬೇಕು; ಇದರ ಆದಾಯಕ್ಕೆ ಖೋತಾ ಮಾಡಬೇಕು ; ತೊಂದರೆ ನೀಡಬೇಕೆನ್ನುವ ವಿಚಾರಗಳು ನಮಗೆ ಇಲ್ಲ. ಬಿ.ಬಿ.ಎಂ.ಪಿ., ಯು ನ್ಯಾಯಸಮ್ಮತವಾಗಿ ತೆರಿಗೆಗಳನ್ನು ಸಂಗ್ರಹಿಸಬೇಕು. ಇವತ್ತಿನ ಬೆಳಗ್ಗೆ ವಿಧೇಯಕದ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ ಸದಸ್ಯರೊಬ್ಬರು ಮಾತನಾಡಿದರು. ಪಾಲಿಕೆಯಲ್ಲಿ ಸಂಗ್ರಹಣೆಗೊಳ್ಳುವ ತೆರಿಗೆಗಳನ್ನು ಒಟ್ಟುಗೂಡಿಸಿದರೆ, ಅದು ಒಂದು ಕೋಟಿ ರೂಪಾಯಿಗಳಷ್ಟಾಗುತ್ತದೆ. ಯಾವುದೇ ಒಂದು ಕಟ್ಟಡವನ್ನು ನಿರ್ಮಿಸಲು ಅನುಮತಿ ಪಡೆದುಕೊಂಡು, ನಕ್ಷೆಯನ್ನು ಅನುಮೋದಿಸಿಕೊಳ್ಳಬೇಕಾದರೆ, ಒಂದು ಕೋಟಿ ರೂಪಾಯಿಗಳಷ್ಟು ಹಣವನ್ನು ಬಿ.ಬಿ.ಎಂ.ಪಿ.,ಗೆ ನೀಡಬೇಕಾಗುತ್ತದೆ. ಹೀಗಾಗಿ ಜನರು ಕಾನೂನುಬಾಹಿರವಾಗಿ ಸ್ಥಳೀಯ ಕಾರ್ಯಪಾಲಕ ಇಂಜಿನಿಯರ್ ಅಥವಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹೇಳಿ,

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕಟ್ಟಡಗಳನ್ನು ನಿರ್ಮಿಸಿಕೊಳ್ಳುವ ವ್ಯವಸ್ಥೆಯು ಬೆಂಗಳೂರಿನಲ್ಲಿ ನಡೆದಿದೆ ಎಂಬುದಾಗಿ ತಿಳಿಸಿದರು. ಇವತ್ತು ಬೆಳಗ್ಗೆಯೇ ಇದರ ಬಗ್ಗೆ ಮಾತನಾಡಿದರು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮೊದಲು ಅಕ್ರಮ ಇರುವುದನ್ನು ನಂತರದಲ್ಲಿ ಸಕ್ರಮ ಮಾಡಿಕೊಳ್ಳಲಾಗುವುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಂತರದಲ್ಲಿ ಕಟ್ಟಡವನ್ನು ಸಕ್ರಮಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಈ ರೀತಿಯ ಅಧಿಕ ತೆರಿಗೆಯನ್ನು ವಿಧಿಸಿದ್ದಲ್ಲಿ, ನಗರದಲ್ಲಿ ಈ ರೀತಿಯ ಪ್ರಕರಣಗಳಾಗುತ್ತಿವೆ. ವಾಸ್ತವವಾಗಿ ನಾನು ಸರ್ಕಾರಕ್ಕೆ ಸಹಾಯವನ್ನು ಮಾಡುತ್ತಿದ್ದೇನೆ. ಸರ್ಕಾರಕ್ಕೆ ತೊಂದರೆ ಕೊಡುವ ಸಲುವಾಗಿ ಅಥವಾ Bill defeat ಮಾಡಲು ಮತ್ತು ವಿಧೇಯಕವನ್ನು ವಿರೋಧಿಸಿ, ನಾವು ಮಾತನಾಡುವುದಿಲ್ಲ. ನನಗನ್ನಿಸಿದಂತೆ, as far as my knowledge is concerned, ನಾಳೆಯ ದಿನ, ಪ್ರಸ್ತುತ ಮಂಡಿಸಿರುವ ತಿದ್ದುಪಡಿ ವಿಧೇಯಕವು Legislation can be done retrospectively as well as prospectively. ಇದು ಸರ್ಕಾರದ ಹಕ್ಕಾಗಿದ್ದು; ಇದನ್ನು ಸರ್ಕಾವು ಮಾಡಬಹುದಾಗಿದೆ. ಆದರೆ, ಪ್ರಸ್ತುತ ಮಂಡಿಸಿರುವ ತಿದ್ದುಪಡಿ ವಿಧೇಯಕವು it will go for a scrutiny of the Judiciary. ಆಗ ಈಗಿನ ತಿದ್ದುಪಡಿಯು ಮಾನ್ಯವಾಗುವುದಿಲ್ಲ. ಆಗ ಸರ್ಕಾರವು ಪೇಚಿಗೆ ಸಿಲುಕುತ್ತದೆ. ಹೀಗಾಗಿ ಸರ್ಕಾರವು ವಿಧೇಯಕವನ್ನು ಹಿಂಪಡೆದು, ಇದರ ಬಗ್ಗೆ ಇನ್ನಷ್ಟು ವಿಚಾರ ಮಾಡುವುದು ಹಾಗೂ ಒಳ್ಳೆಯದು. ಇದರ ಬಗ್ಗೆ ಇನ್ನಷ್ಟು ಯೋಚಿಸಿ, ಕಾನೂನು ಬದ್ಧವಾಗಿ ಜಾರಿಗೊಳಿಸಿದಾಗ, ಮುಂದಿನ ದಿನ ಇದು judicial scrutiny ಗೆ ಹೋದಾಗಲೂ ಸಹ ವಿಧೇಯಕವು ಊರ್ಜಿತಗೊಳ್ಳಬೇಕು. ಹೀಗೆ ಮಾಡಬೇಕೆಂದು ಹೇಳಿ, ನಾವು ಸರ್ಕಾರಕ್ಕೆ ಸಹಾಯ ಮಾಡುತ್ತಿದ್ದೇವೆ. ಸರ್ಕಾರಕ್ಕೆ ತೊಂದರೆ ನೀಡಬೇಕು; ವಿಧೇಯಕವನ್ನು ವಿರೋಧಿಸಬೇಕೆಂಬ; ಪಾಲಿಕೆಗೆ ಹಿನ್ನಡೆಯಾಗಬೇಕೆಂಬ ಯಾವುದೇ ಉದ್ದೇಶವೂ ಸಹ ನಮಗಿಲ್ಲ. ಕೇವಲ ಸದುದ್ದೇಶದಿಂದಲೇ ನಾವು ಹೇಳುತ್ತಿದ್ದೇವೆ. We have got a bonafide intention. When a legislation is made, it should have a bonafide intention. ಯಾವುದೇ ಕಾನೂನುಗಳು defeat ಆಗಬಾರದು. 2,362 ಕೋಟಿ ರೂಪಾಯಿಗಳಷ್ಟು ಸಂಗ್ರಹಗೊಂಡ ತೆರಿಗೆಯನ್ನು ಹಿಂದಿರುಗಿಸಲು ಆಗುವುದಿಲ್ಲ ಎಂಬುದಾಗಿ ಸರ್ಕಾರವು ಹೇಳುತ್ತಿದೆ. ಇದನ್ನು ನಾನೊಪ್ಪಿಕೊಳ್ಳುತ್ತೇನೆ. ನ್ಯಾಯಾಲಯವು observe ಮಾಡಿರುವ ಅಂಶಗಳಿಗನುಗುಣವಾಗಿ ಪ್ರಸ್ತುತ ಮಂಡಿಸಿರುವ ತಿದ್ದುಪಡಿ ವಿಧೇಯಕವು ಇಲ್ಲ ಎನ್ನುವುದು ನನ್ನ ಕಲ್ಪನೆಯಾಗಿದೆ. ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ಸರ್ಕಾರವು ಹಿಂಪಡೆದು, ಇದರ ಬಗ್ಗೆ ಮತ್ತಷ್ಟು ಯೋಚನೆಯನ್ನು ಮಾಡಿ, ತಿದ್ದುಪಡಿಯಾದ ಮತ್ತು ಒಳ್ಳೆಯ ವಿಧೇಯಕವನ್ನು ಪುನಃ ಮಂಡಿಸಿದಾಗ, ಅದು ನ್ಯಾಯಾಲಯಕ್ಕೆ ಪರಿಶೀಲನೆಗಾಗಿ ಸಲ್ಲಿಸಿದರೂ ಸಹ ಅದು ಊರ್ಜಿತವಾಗುವಂತೆ ಸರ್ಕಾರವು ಮಾಡಿದರೆ ಒಳ್ಳೆಯದು ಎನ್ನುವುದು ನಮ್ಮ ಅಭಿಪ್ರಾಯವಾಗಿದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎನ್.ರವಿಕುಮಾರ್(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್ ಮತ್ತು ಹಿರಿಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್ ರವರುಗಳು ಹೇಳಿದ ರೀತಿಯಲ್ಲಿ ಪ್ರಸ್ತುತ ವಿಧೇಯಕವನ್ನು ಹಿಂಪಡೆಯುವ ಪ್ರಮೇಯವು ಸರ್ಕಾರಕ್ಕೆ ಇಲ್ಲ. ಹಾಗೆ ಹಿಂಪಡೆಯಲೂ ಬಾರದು. ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಇದಕ್ಕೆ ಕಾರಣವೇನೆಂದರೆ, ನ್ಯಾಯಾಲಯವು ಕಾನೂನಾತ್ಮಕವಾಗಿ ತೆರಿಗೆಯನ್ನು ಸಂಗ್ರಹಿಸಿ ಎಂದು ಪಾಲಿಕೆಗೆ ಹೇಳಿದೆ. ಇಂತಿಷ್ಟೆ ತೆರಿಗೆಯನ್ನು ವಿಧಿಸಿ ಮತ್ತು ಇಂತಿಷ್ಟೆ ತಗೆರಿಗೆಯನ್ನು ಸಂಗ್ರಹಿಸಿ ಎಂದು ನ್ಯಾಯಾಲಯವು ತಿಳಿಸಿಲ್ಲ. ತೆರಿಗೆಯನ್ನು ವಿಧಿಸುವ ಅಧಿಕಾರವು ಸರ್ಕಾರಕ್ಕಿದೆ. At the time of fixing the fees, you can debate. ಅಲ್ಲಿ ಚುನಾಯಿತ ಪ್ರತಿನಿಧಿಗಳಿದ್ದಾರೆ ಇಲ್ಲಿ ಅಧಿಕಾರಿಗಳಿದ್ದಾರೆ. ಎಲ್ಲರೂ ಕುಳಿತುಕೊಂಡು ತೆರಿಗೆಯನ್ನು ನಿಗದಿಪಡಿಸುವುದು ಚರ್ಚೆಯ ವಿಷಯವಾಗಿದೆ. ಇದರ ಬಗ್ಗೆ ಟೇಬಲ್‌ಗಳ ಮೇಲೆ ಕುಳಿತುಕೊಂಡು ಚರ್ಚಿಸೋಣ. ಇಲ್ಲಿ ಕಾನೂನಾತ್ಮಕವಾಗಿ ತೆರಿಗೆಯನ್ನು ವಿಧಿಸುವುದೇ ಇಲ್ಲಿಯ ವಿಷಯವಾಗಿದೆ. ಹೀಗಾಗಿ ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ಹಿಂಪಡೆಯುವ ಪ್ರಮೇಯವು ಇಲ್ಲಿ ಬರುವುದಿಲ್ಲ. At the time of fixing the fees, ಎಲ್ಲರೂ ಕುಳಿತುಕೊಂಡು ತೆರಿಗೆಯನ್ನು ನಿಗದಿಪಡಿಸೋಣ; ಇದು ಜನ, ಬೆಂಗಳೂರು ಮತ್ತು ನಗರ ಅಭಿವೃದ್ಧಿಗಳ ಸ್ನೇಹಿಯಾಗಿರಬೇಕು. ಇವುಗಳ ಹಿನ್ನೆಲೆಯಲ್ಲಿ ತೆರಿಗೆಯನ್ನು ನಿಗದಿಪಡಿಸೋಣ. ಎಷ್ಟು ತೆರಿಗೆಯನ್ನು ವಿಧಿಸಬೇಕು ಎನ್ನುವುದು ಜನರ ಅನುಕೂಲಕರವಾಗಿರಬೇಕು. ತೆರಿಗೆಯು ಬಡವರ ಮತ್ತು ಮಧ್ಯಮ ವರ್ಗದ ಜನರಿಗೆ ಅನುಕೂಲವಾಗುವ ತೆರಿಗೆಯನ್ನೇ ನಾವು ನಿಗದಿಪಡಿಸೋಣ. ಆದರೆ, ಈ ವಿಚಾರವು ಪ್ರಸ್ತುತ ಮಂಡಿಸಿರುವ ವಿಧೇಯಕದಲ್ಲಿಲ್ಲ. ಇದರಲ್ಲಿ ಕಾನೂನಾತ್ಮಕವಾಗಿ ತೆರಿಗೆಯನ್ನು ಸಂಗ್ರಹಿಸುವ ವಿಚಾರವು ಸಂಬಂಪಟ್ಟಂತೆ ಮಾತ್ರವೇ ಇರುವ ವಿಧೇಯಕವು ಇದಾಗಿದೆ. ಹೀಗಾಗಿ ಈ ವಿಧೇಯಕವನ್ನು ನಾವು ಸ್ವಾಗತಿಸುತ್ತೇವೆ. ಸರ್ಕಾರವು ಇದನ್ನು ಹಿಂಪಡೆಯುವ ಅಗತ್ಯವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲರೂ ಕೂಡಿ ಮಾಡುವ ಮತ್ತು ಹಂಚಿಕೊಳ್ಳುವ ಕೆಲಸಗಳು ಕೇವಲ ಹೆಂಡದ ಅಂಗಡಿಯಲ್ಲಿಯೇ ಮಾತ್ರವೇ ಸಾಧ್ಯವಾಗುತ್ತದೆ. ತೆರಿಗೆಯನ್ನು ಆ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಸದಸ್ಯರು ಏಕೆ ಹೀಗೆ ಹೇಳುತ್ತಿದ್ದಾರೆ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತೆರಿಗೆಯನ್ನು ಯಾರು ನಿಗದಿಪಡಿಸುತ್ತಾರೆ ಎನ್ನುವುದು ಶ್ರೀ ಮರಿತಿಬ್ಬೇಗೌಡರು ತಿಳಿಸಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಶ್ರೀ ಅಶ್ವಥ್ ನಾರಾಯಣರವರೇ ನೀವು ಮುಂದುವರೆಸಿ.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ವಿರೋಧ ಪಕ್ಷದ ನಾಯಕರನ್ನು ಕೇಳಿಕೊಳ್ಳುವುದೇನೆಂದರೆ, ಪ್ರಶ್ನಿತ ವಿಚಾರದಲ್ಲಿ ಈಗಾಗಲೇ ತೆರಿಗೆಯನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಲಾಗದ ತೆರಿಗೆಯನ್ನು ನಾವು ಇಲ್ಲಿ ಸಂಗ್ರಹಿಸಲು ಹೊರಟಿಲ್ಲ. ಈಗಾಗಲೇ ಸಂಗ್ರಹಿಸಲಾದ ತೆರಿಗೆಯನ್ನು ಕಾನೂನುಬದ್ಧವಾಗಿ ತಿದ್ದುಪಡಿಗಳನ್ನು ಜಾರಿಗೆ ತರುವುದರ ಮೂಲಕ ಅವಕಾಶ ಮಾಡಿಕೊಡಲಾಗುತ್ತಿದೆ. ಈ ಮೊದಲು ಪಾಲಿಕೆಯ ಬೈಲಾ ಗಳನ್ವಯ ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು. ಹೀಗಾಗಿ ಇದನ್ನು ಕಾನೂನು ಬದ್ಧವಾಗಿ ಮಾಡಬೇಕೆಂಬ ನಿಲುವನ್ನು ನ್ಯಾಯಾಲಯವು ತೆಗೆದುಕೊಂಡಿದೆ. ಕಾನೂನು ತಿದ್ದುಪಡಿಗಳ ಮೂಲಕ ಇದನ್ನು ಮಾಡಬಹುದು ಎಂಬುದಾಗಿ ನ್ಯಾಯಾಲಯವೂ ಸಹ ತಿಳಿಸಿದೆ. ನಾವು ಹೊಸದಾಗಿ ತೆರಿಗೆಯನ್ನು ಸಂಗ್ರಹಿಸಲು ಹೊರಟಿಲ್ಲ. ಈಗಾಗಲೇ ಸಂಗ್ರಹಿಸಿದ ತೆರಿಗೆಗೆ ಕಾನೂನಿನ ರಕ್ಷಣೆಯನ್ನು ತೆಗೆದುಕೊಳ್ಳಬೇಕು; ಹೀಗಾಗಿ ತಿದ್ದುಪಡಿ ವಿಧೇಯಕಗಳ ಮೂಲಕ ಈ ಕೆಲಸವನ್ನು ಮಾಡುವ ಅವಕಾಶಗಳಿವೆ. ಹೀಗಾಗಿ ಈ ಸದನಕ್ಕೆ ಅಧಿಕಾರವಿದೆ. ಈ ಕಾರಣದಿಂದಾಗಿ ನಾವು ತಿದ್ದುಪಡಿ ವಿಧೇಯಕವನ್ನು ಮಂಡಿಸಿದ್ದೇವೆ. ದಯಮಾಡಿ ಈ ವಿಚಾರದಲ್ಲಿ ವಿರೋಧ ಪಕ್ಷದ ಸದಸ್ಯರು ಸಹಕಾರವನ್ನು ನೀಡಬೇಕು; ಇಲ್ಲವೆಂದಾದರೆ, ಸ್ಥಳೀಯ ಸಂಸ್ಥೆಗಳಿಗೆ ಕಷ್ಟವಾಗುತ್ತದೆ. ದಯಮಾಡಿ ಎಲ್ಲರೂ ಸಹ ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ಅನುಮೋದಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸಹಕಾರವನ್ನು ನಾವು ನೀಡುವುದಿಲ್ಲವೆಂದು ಹೇಳುತ್ತಿಲ್ಲ. ನಾವು ಸರ್ಕಾರದ ಭಾಗವಾಗಿದ್ದೇವೆ. ಆಳುವ ಪಕ್ಷ ಮತ್ತು ಪ್ರತಿಪಕ್ಷ ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಹಾಗೂ ರಥದ ಎರಡು ಗಾಲಿಗಳಿದ್ದಂತೆ. ನಾನು ಸರ್ಕಾರಕ್ಕೆ ಸಲಹೆಗಳನ್ನು ನೀಡಬೇಕು. ಸರ್ಕಾರವು ಎಲ್ಲಿ ಎಡುವುತ್ತದೆ ಎಂದು ತಿಳಿಸಲು ನಾವು ಈ ಸ್ಥಾನದಲ್ಲಿ ಕುಳಿತುಕೊಂಡಿದ್ದೇವೆ. 'ಬಾರಾ ಖೂನ್ ಮಾಫ್' ಎನ್ನುವ ರೀತಿಯಲ್ಲಿ ಎಲ್ಲವನ್ನೂ ಕ್ಷಮಿಸಲು ನಾವು ಇಲ್ಲಿ ಕುಳಿತುಕೊಂಡಿಲ್ಲ. ನೀವು ಈಗಾಗಲೇ ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕೆಂದು ನಾವು ಹೇಳುತ್ತೇವೆ.

**ಸಭಾಪತಿಯವರು:-** ವಿರೋಧ ಪಕ್ಷದವರು ಹೇಳಿರುವಂತೆ ಸರ್ಕಾರವು ತಿದ್ದುಪಡಿಗಳನ್ನು ಮಾಡಿಕೊಳ್ಳಬೇಕು.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಅವರು ಹೇಳಿದಂತೆ ಸರಿಪಡಿಸಿಕೊಳ್ಳಲು ನಾವು ಪ್ರಯತ್ನಿಸುತ್ತೇವೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಪ್ಪುಗಳನ್ನು ತಿದ್ದಿಕೊಳ್ಳುವಂತೆ ನಾನು ಸಲಹೆಗಳನ್ನು ನೀಡುತ್ತೇವೆ. ಈಗ ವಿಧೇಯಕಕ್ಕೆ ತಿದ್ದುಪಡಿ ತಂದಿರುವುದರಿಂದ, ಮುಂಬರುವ ದಿನಗಳಲ್ಲಿ ಸಂಗ್ರಹಿಸುವ ತೆರಿಗೆಯು ಸಕ್ರಮವಾಗಿರುತ್ತದೆ. ಇವತ್ತಿನ ದಿವಸ ವಿಧೇಯಕವು ಅನುಮೋದನೆಗೊಂಡರೆ, ನಂತರದ ದಿನಗಳಲ್ಲಿ ಸರ್ಕಾರವು ತೆರಿಗೆಯನ್ನು ಸಂಗ್ರಹಿಸಬಹುದು. Prospectively they can collect. They are authorized. ಆದರೆ, ಈ ಹಿಂದೆ ಕಾನೂನುಬಾಹಿರವಾಗಿ ಅಕ್ರಮವಾಗಿ ಸಂಗ್ರಹಣೆ ಮಾಡಿದ ತೆರಿಗೆಯನ್ನು ಸರಿ ಮಾಡಿಕೊಳ್ಳುವುದನ್ನು ಬಹುತರವಾಗಿ ಪ್ರಸ್ತುತ ಮಂಡಿಸಿರುವ ವಿಧೇಯಕಕ್ಕೆ ಆ ರೀತಿಯ ಶಕ್ತಿಯು ಇಲ್ಲ ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ಇದನ್ನು ಸರ್ಕಾರವು ತಿಳಿದುಕೊಳ್ಳಬೇಕು. ವಿನಾಕಾರಣ ಇದನ್ನು ಪ್ರತಿಷ್ಠೆಯ ವಿಚಾರವಾಗಿ ತೆಗೆದುಕೊಳ್ಳಬಾರದು. ಇದನ್ನು ಸರ್ಕಾರವು ಪುನಃ ಪರಿಶೀಲಿಸಬೇಕು. ಅಡ್ವೋಕೇಟ್ ಜನರಲ್‌ರವರೊಂದಿಗೆ ಚರ್ಚಿಸಿ. ಹೀಗಾಗಿ ಈಗ ಮಂಡಿಸಿರುವ ವಿಧೇಯಕವು ಅನುಮೋದನೆಗೊಳ್ಳಬೇಕೆಂಬ ನಿಯಮವಿಲ್ಲ. ಸರ್ಕಾರವು ಇದನ್ನು ಹಿಂಪಡೆದು, ನಂತರದಲ್ಲಿ ಪುನಃ ಮಂಡಿಸಬಹುದಾಗಿದೆ. ಸರ್ಕಾರದ ಹಿತಕ್ಕಾಗಿ ನಾನು ಹೇಳುತ್ತಿದ್ದೇನೆ. ಒಂದು ವೇಳೆ ಸರ್ಕಾರಕ್ಕೆ ನ್ಯಾಯಾಲಯದಲ್ಲಿ ಹಿನ್ನಡೆಯಾದರೆ...., ಇವತ್ತಿನ ದಿವಸ ನಾವುಗಳು ಮಾತನಾಡಿರುವುದೆಲ್ಲವೂ ದಾಖಲೆಗಳಲ್ಲಿರುತ್ತವೆ. 2,362 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಪಾವತಿಸಿದವರು ಇದನ್ನು ನಾಳೆಯ ದಿನ ಪ್ರಶ್ನಿಸುವುದಿಲ್ಲವೆಂದು ಸರ್ಕಾರವು ತಿಳಿದುಕೊಳ್ಳಬಾರದು. They will go to the Court of law. Whatever we have discussed will be on record. ಈ ಸಂಗತಿಗಳೆಲ್ಲವನ್ನೂ ಸಹ ನ್ಯಾಯಾಲಯದಲ್ಲಿ ಮಂಡಿಸುತ್ತಾರೆ. ಹೀಗಾಗಿ ಈ ಹಿಂದೆ ಕಾನೂನಾತ್ಮಕವಾಗಿಲ್ಲದೇ ಸಂಗ್ರಹಿಸಿದ ತೆರಿಗೆಯನ್ನು ಈ ತಿದ್ದುಪಡಿ ವಿಧೇಯಕದ ಮೂಲಕ ಮಂಡಿಸಿರುವುದು ಊರ್ಜಿತವಾಗುವುದಿಲ್ಲ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ.

**ಸಭಾಪತಿಯವರು:-** ಕಾನೂನುಬಾಹಿರವಾಗಿ ಸಂಗ್ರಹಿಸಿದ ತೆರಿಗೆಯನ್ನು ಕಾನೂನಾತ್ಮಕವಾಗಿ ಹೇಗೆ ಮಾಡಲಾಗುತ್ತದೆ ಎನ್ನುವ ಬಗ್ಗೆ ಸರ್ಕಾರವು ಉತ್ತರಿಸಬೇಕು.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಮಗೆ ಇನ್ಯಾವುದೇ ದಾರಿ ಇಲ್ಲ. ವಿಧೇಯಕದ ಮಂಡನೆಯ ಮೂಲಕವೇ ನಮಗೆ ದಾರಿ ಇದೆ. ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದ್ದು; ಅದಕ್ಕೆ ರಾಜ್ಯಪಾಲರ ಅನುಮೋದನೆಯೂ ಸಹ ದೊರೆತಿರುತ್ತದೆ. ಪ್ರಸ್ತುತ ಮಂಡಿಸಿರುವ ಮೂಲಕ ಇದನ್ನು ಮಂಡನೆ ಮಾಡಲಾಗುತ್ತದೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವುಗಳು ಹೇಳಿರುವುದನ್ನು ಸರ್ಕಾರವು ಕೇಳುವುದಿಲ್ಲ; ತನ್ನ ಮೊಂಡುತನವನ್ನು ಬಿಡುವುದಿಲ್ಲ. ಸರ್ಕಾರವು ಪುನಃ ನ್ಯಾಯಾಲಯದಲ್ಲಿ 'ಛೀಮಾರಿ'ಯನ್ನು ಹಾಕಿಸಿಕೊಳ್ಳುತ್ತದೆ. ಇದನ್ನು ನಾವು ವಿರೋಧಿಸಿ, ಸಭಾತ್ಯಾಗ ಮಾಡುತ್ತೇವೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021 ನೇ ಸಾಲಿನ ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಕಾನೂನು ವಿರುದ್ಧವಾಗಿ ಕಾಯ್ದೆಯನ್ನು ತಂದಿರುವ ಕಾರಣಕ್ಕಾಗಿ ನಾವೂ ಸಹ ಸಭಾತ್ಯಾಗ ಮಾಡುತ್ತಿದ್ದೇವೆ. **(ಗೊಂದಲ)** ಬೆಂಗಳೂರಿನ ನಾಗರೀಕರ ಮೇಲೆ ಅನಗತ್ಯವಾಗಿ ಹಾಕತಕ್ಕ ..... **(ಗೊಂದಲ)** ಅವರುಗಳು ಮನೆಯನ್ನು ಕಟ್ಟಿಕೊಳ್ಳಬೇಕಲ್ಲ... **(ಗೊಂದಲ)**

**(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>**

**<u>ಖಂಡ 2 ರಿಂದ 4 ವರೆಗೆ</u>**

**ಸಭಾಪತಿಯವರು:-** "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲಾಯಿತು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ||ಸಿ.ಎನ್.ಅಶ್ವಥ್ ನಾರಾಯಣ(ಉನ್ನತ ಶಿಕ್ಷಣ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ "ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು)

(1266) 04.30 22-12-2021 CS.AK (ಸಭಾಪತಿಯವರ ಉಪಸ್ಥಿತಿ)

(ಈ ಹಂತದಲ್ಲಿ ಸಭಾತ್ಯಾಗ ಮಾಡಿದ್ದ ವಿರೋಧ ಪಕ್ಷಗಳ ಮಾನ್ಯ ಸದಸ್ಯರು ಪನಃ ಸದನವನ್ನು ಪ್ರವೇಶಿಸಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತರು)

**ಋ) ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾನಿಲಯ ವಿಧೇಯಕ, 2021**

**ಪರ್ಯಾಲೋಚನಾ ಪ್ರಸ್ತಾವ**

**ಡಾ||ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಭಾಪತಿಗಳೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಡಾ||ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಗಳೇ, ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು, ಈ ಸಂಸ್ಥೆಯನ್ನು "The University of Visvesvaraya College of Engineering" ಆಗಿ ಪರಿವರ್ತನೆಯನ್ನು ಮಾಡಲಿಕ್ಕೆ ಈ ವಿಧೇಯಕವನ್ನು ಜಾರಿಗೆ ತರಲಾಗುತ್ತಿದೆ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು 1917 ರಲ್ಲಿ ಭಾರತರತ್ನ ಸರ್. ಎಂ.ವಿಶ್ವೇಶ್ವರಯ್ಯನವರು ಸ್ಥಾಪನೆ ಮಾಡಿದಂತಹ ಸಂಸ್ಥೆಯಿದು. ಈ ಸಂಸ್ಥೆ ಈಗಾಗಲೇ ಶತಮಾನೋತ್ಸವವನ್ನು ಆಚರಿಸಿ, ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಬಹಳ ಉತ್ತಮವಾದ ಶಿಕ್ಷಣವನ್ನು ನೀಡಿ, ಲಕ್ಷಾಂತರ ವಿದ್ಯಾರ್ಥಿಗಳಿಗೆ ಒಳ್ಳೆಯ ಭವಿಷ್ಯವನ್ನು ನೀಡಿದೆ. ಈಗ ಕಾಲಕ್ಕೆ ತಕ್ಕ ಹಾಗೆ ಸಾಕಷ್ಟು ಬದಲಾವಣೆಗಳು ಆಗಿರುವ ಹಿನ್ನಲೆಯಲ್ಲಿ ಬೆಂಗಳೂರಿನಲ್ಲಿ ಅವಿಷ್ಕಾರ ತಂತ್ರಜ್ಞಾನ ಮತ್ತು ಮಾಹಿತಿಗಳಿಗೆ ಹೆಸರುವಾಸಿಯಾಗಿರುವ ಸಂಸ್ಥೆ. ರಾಜ್ಯಕ್ಕೆ ಪ್ರಸ್ತುತವಾಗಿರುವ ರೀತಿಯಲ್ಲಿ ಈ ಶಿಕ್ಷಣ ಸಂಸ್ಥೆಯನ್ನು ಬೆಳಸಬೇಕೆನ್ನುವ ದೃಷ್ಟಿಯಲ್ಲಿ ಈ ವಿಧೇಯಕವನ್ನು ಜಾರಿಗೆ ತರಲಾಗುತ್ತಿದೆ. ಇವತ್ತು ನಾವೆಲ್ಲರೂ ಎದುರು ನೋಡುವಂತಹ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳು ಬೆಂಗಳೂರು ನಗರದಲ್ಲಿ ಇವತ್ತು ಇಲ್ಲ. ಹಾಗಾಗಿ ಈ ಕಾಲೇಜನ್ನು ಉನ್ನತೀಕರಿಸಿ, ಐಐಟಿ ಮಾದರಿಗಿಂತ ಉತ್ತಮವಾಗಿ ಮಾಡಬೇಕೆನ್ನುವ ಕಲ್ಪನೆಯಲ್ಲಿ ಈ ಸಂಸ್ಥೆಗೆ ಆಡಳಿತಾತ್ಮಕ ಮತ್ತು ಶೈಕ್ಷಣಿಕವಾಗಿ ಸ್ವಾಯತ್ತತೆಯನ್ನು ನೀಡಬೇಕೆನ್ನುವ ಉದ್ದೇಶದಿಂದ ಈ ಕಾಯಿದೆಯನ್ನು ಜಾರಿಗೆ ತರಲಾಗುತ್ತಿದೆ. ಇದರ ಬಗ್ಗೆ ಈ ಹಿಂದೆ ಎಸ್.ವಿ. ರಂಗನಾಥನ್ ಸಮಿತಿಯು ಸಹ ಶಿಫಾರಸ್ಸನ್ನು ಮಾಡಿದ್ದರು. ತದನಂತರ ನಮ್ಮ IIIT ಸಂಸ್ಥೆಯ ನಿರ್ದೇಶಕರಾಗಿ ಕಾರ್ಯವನ್ನು ನಿರ್ವಹಿಸಿದಂತಹ, ಇಡೀ ಭಾರತದಲ್ಲಿಯೇ IIT concept ನೀಡಿದಂತಹ, ಶ್ರೀ ಸದ್ಗೋಪಾಲ್ ಎನ್ನುವವರು ಸಹ ಈ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆಯನ್ನು ಮಾಡಿ, ಈ ಸಂಸ್ಥೆ ಯಾವ ರೀತಿ ಇರಬೇಕೆನ್ನುವ ಬಗ್ಗೆ ಒಂದು ಸಮಿತಿಯ ವರದಿಯನ್ನು ಕೂಡ ನೀಡಿ, ಅದರಲ್ಲಿ ಶಿಫಾರಸ್ಸುಗಳನ್ನು ಕೂಡ ಮಾಡಿದ್ದಾರೆ. ಅವುಗಳ ಆಧಾರದ ಮೇಲೆಯೇ ಈ ಕಾಯಿದೆಯನ್ನು ಮಾಡಲಾಗಿದೆ. ಇವತ್ತು ಬೆಂಗಳೂರಿನಲ್ಲಿ Indian Institute of Science ಸಂಸ್ಥೆ ಬಿಟ್ಟರೆ ಇಂಜಿನಿಯರಿಂಗ್ ಬೇರೆ ಎಲ್ಲಿಯೂ ಅಷ್ಟೊಂದು ಸಂಬಂಧ ಇರುವುದಿಲ್ಲ. ಅವರಿಗೆ ಬೇಸಿಕ್ ಸೈನ್ಸ್ ವಿಚಾರದಲ್ಲಿ ಸಂಬಂಧ ಇರುತ್ತದೆ. ಹಾಗಾಗಿ ಇವತ್ತು engineering and technology startup ಅವಿಷ್ಕಾರಕ್ಕೆ ಹೆಚ್ಚು ಒತ್ತನ್ನು ನೀಡಲು ಈ ಸಂಸ್ಥೆಯನ್ನು ಇನ್ನೂ ಎತ್ತರಕ್ಕೆ ಬೆಳೆಸಿದರೆ, ಪ್ರಸ್ತುತವಾಗಿ ಅವಿಷ್ಕಾರ ತಂತ್ರಜ್ಞಾನವನ್ನು ಬೆಳೆಸಲಿಕ್ಕೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೆಚ್ಚು ಒತ್ತು ಸಿಗುತ್ತದೆ. ಹಾಗಾಗಿ ನಮ್ಮ ಎಲ್ಲಾ ಮಾನ್ಯ ಸದಸ್ಯರು ಈ ಕಾಯಿದೆಯನ್ನು ಅನುಮೋದಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯ ಸರ್ಕಾರ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾನಿಲಯ 2021 ಅನ್ನು ಮಂಡನೆ ಮಾಡಿದೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈ ಬಗ್ಗೆ ಸರ್ಕಾರಕ್ಕೆ ಕೆಲವೊಂದು ಸಲಹೆಗಳನ್ನು ನೀಡಬಯಸುತ್ತೇನೆ. ಅದನ್ನು ಸರ್ಕಾರ ಮತ್ತು ಮಾನ್ಯ ಮಂತ್ರಿಗಳು ಪರಿಗಣಿಸಬೇಕೆಂದು ನಾನು ಇಚ್ಛಿಸುತ್ತೇನೆ.

ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಹೇಳಿದ ಹಾಗೆ ಈ ಸಂಸ್ಥೆಯ Board of Governors ಯಾರಿದ್ದಾರೆ, Indian Institute of Technology, Indian Institute of Management ಇರಬಹುದು, ಅದನ್ನು ಆ ಕಲ್ಪನೆಯ ಮೇಲೆ ಮಾಡಲಾಗಿದೆ ಎಂದು ನಾನು ಭಾವಿಸುತ್ತೇನೆ. ಅದರ ಕೂಡ ಮಾನ್ಯ ಸಚಿವರು ವಿವರಣೆಯನ್ನು ನೀಡಿದ್ದಾರೆ. ನನ್ನ ಸಲಹೆ ಏನೆಂದರೆ ಯಾರನ್ನು ನಿರ್ದೇಶಕರನ್ನಾಗಿ ನೇಮಕ ಮಾಡಲಾಗುವುದು ಅವರಿಗೆ 70 ವರ್ಷಗಳನ್ನು ನಿಗದಿ ಮಾಡಬಾರದು. 65 ವರ್ಷಗಳಿಗೆ ಅವರ ವಯೋಮಿತಿಯನ್ನು ಸೀಮಿತಗೊಳಿಸಬೇಕು. Jayadeva Institute of Cardiology, ಕಿದ್ವಾಯಿ, NIMHANS ಎಲ್ಲಾ ಕಡೆಗಳಲ್ಲಿಯೂ ಸಹ ನಿರ್ದೇಶಕರಿಗೆ 65 ವರ್ಷಗಳನ್ನು ನಿಗದಿ ಮಾಡಲಾಗಿದೆ. ಅದೊಂದು cap ಅನ್ನು ದಯಮಾಡಿ ಅಲ್ಲಿ ಹಾಕಿ.

ಮತ್ತೊಂದು ವಿಚಾರ ಏನು ಈ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾನಿಲಯವಾಗಿ ಪರಿವರ್ತನೆ ಹೊಂದುತ್ತಿದೆ, ಅದಕ್ಕಾಗಿ ಜ್ಞಾನಭಾರತಿಯಲ್ಲಿ ಕನಿಷ್ಟ 50 ಎಕರೆ ಭೂಮಿಯನ್ನು ಮೀಸಲಿರಿಸಬೇಕು. ಎಲ್ಲೋ ದೂರದಲ್ಲಿ ಅದನ್ನು ಮಾಡುವುದು ಬೇಡ. ಅದಕ್ಕಾಗಿ 50 ಎಕರೆ ಭೂಮಿಯನ್ನು ಮೀಸಲಿಡಬೇಕೆಂದು ನಾನು ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಇನ್ನು ಸೀಟುಗಳನ್ನು ಹಂಚಿಕೆ ಮಾಡುವಾಗ 75% ಸೀಟುಗಳನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ ಮೀಸಲಿಡಬೇಕು. ಅದು N.E.E.T (National Eligibility cum Entrance Test) ಅಥವಾ ಬೇರೆ ಯಾವುದೇ ಪರೀಕ್ಷೆ ಮೂಲಕ ಆಗಬಹುದು. All India level ನಲ್ಲಿ N.E.E.T ಪರೀಕ್ಷೆಯ ಮೂಲಕ ಬೇರೆ ಬೇರೆ ರಾಜ್ಯಗಳಿಗೆ ನಮ್ಮ ಸೀಟುಗಳು ಹೋಗುತ್ತವೆ, ಅದಕ್ಕಿಂತ ಹೆಚ್ಚಾಗಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ನೀಡಬೇಕೆಂಬ ಕಲ್ಪನೆಯನ್ನು ಸರ್ಕಾರ ಇಟ್ಟುಕೊಳ್ಳಬೇಕೆಂದು ಹೇಳಬಯಸುತ್ತೇನೆ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ಇದಕ್ಕೆ ಮಹಾನ್ ಇಂಜಿನಿಯರ್ ವಿಶ್ವೇಶ್ವರಯ್ಯನವರ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೆಸರನ್ನು ಇಡಲಾಗಿದೆ. ಇದು ಮುಂದಿನ ದಿವಸಗಳಲ್ಲಿ ಶ್ರೇಯೋಭಿವೃದ್ಧಿಯನ್ನು ಹೊಂದಲಿ ಎನ್ನುವ ಮಾತುಗಳನ್ನು ಹೇಳುತ್ತಾ, Board of Governors ನೇಮಕ ಮಾಡಲಾಗುವುದೋ ಅಲ್ಲಿಗೆ ದಯಮಾಡಿ ಒಳ್ಳೆಯವರನ್ನು ಮತ್ತು ಪರಿಣಿತರನ್ನು ಹಾಕಬೇಕೆಂದು ಹೇಳಬಯಸುತ್ತೇನೆ. Indian Institute of Management ಆಗಲಿ, ಯಾವ ರೀತಿ IIT ನಲ್ಲಿ Board of Governors ಇದ್ದಾರೆ, ಆ ರೀತಿಯಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಆ ಹುದ್ದೆಯನ್ನು ಕೊಡಿ. ಹಾಗೆಯೇ ಈ ವಿಶ್ವವಿದ್ಯಾನಿಲಯಕ್ಕೆ ಸಾಕಷ್ಟು ಸಂಪನ್ಮೂಲಗಳನ್ನು ಕೊಡಿ. ಈಗ ಈ ವಿಶ್ವವಿದ್ಯಾನಿಲಯಕ್ಕಾಗಿ 10 ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಮುಂದಿನ ದಿನಗಳಲ್ಲಿ 100 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಎಂ.ಲಿಂಗಪ್ಪ( ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೇ, ಅವಕಾಶ ನೀಡಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ತಂದಿರತಕ್ಕ ಒಂದು ಹೊಸ concept, ಉದ್ದೇಶಗಳು ನಿಜವಾಗಿಯೂ ಸಹ ನಮಗೆ ಒಪ್ಪಿಗೆಯಾಗುತ್ತವೆ. ಸುಮಾರು 105 ವರ್ಷಗಳಷ್ಟು ಹಳೆಯದಾದ ಕಾಲೇಜು, ಲಕ್ಷಾಂತರ ವಿದ್ಯಾರ್ಥಿಗಳು ಇಲ್ಲಿಂದ ತೇರ್ಗಡೆ ಹೊಂದಿ, ವಿಶ್ವದ ಎಲ್ಲಾ ಭಾಗಗಳಲ್ಲೂ ನಮ್ಮ ಇಂಜಿನಿಯರ್‌ಗಳು ವ್ಯಾಪಿಸಿ, ಉತ್ತಮ ಹೆಸರನ್ನು ಪಡೆದಿದ್ದಾರೆ. ಇದು ಎಲ್ಲರೂ ಮೆಚ್ಚತಕ್ಕ ವಿಚಾರ.

ಮಾನ್ಯ ಸಭಾಪತಿಗಳೇ, ನನಗೆ ಬಂದಿರುವ ಅನುಮಾನ ಏನೆಂದರೆ Visvesvaraya Technological University, Belgaum, ಈಗ ಅವರ ವ್ಯಾಪ್ತಿಯಲ್ಲಿಯೇ ಸುಮಾರು 200 ಇಂಜಿನಿಯರಿಂಗ್ ಕಾಲೇಜುಗಳಿದ್ದಾವೆ. ಈ deemed university ಎನ್ನುವ concept ತಂದು ಗ್ರಾಮಾಂತರದ ಅಥವಾ ಪಟ್ಟಣ ವ್ಯಾಪ್ತಿಯಲ್ಲಿ ಹೆಚ್ಚು ಸಾಮರ್ಥ್ಯ ಹೊಂದಿರುವವರು ಕಾಲೇಜುಗಳನ್ನು ಮುಚ್ಚುತ್ತಿದ್ದಾರೆ. ಆ ಕಾಲೇಜುಗಳಿಗೆ ಪ್ರವೇಶಾತಿ ಆಗುತ್ತಿಲ್ಲ. ಬೆಂಗಳೂರಿನಲ್ಲಿ ಒಂದು ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ಇದೆ. ನಾನು ಅದನ್ನು ಬೇಡ ಎಂದು ಹೇಳುವುದಿಲ್ಲ. ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಹೇಳಿದ ಹಾಗೆ ಈ ಕಾಲೇಜಿಗಾಗಿ 50 ಎಕರೆ ಭೂಮಿಯನ್ನು ಮೀಸಲಿಡಬೇಕು.

(ಮುಂದು)

(1267)/4-40/22-12-2021/ಎಲ್ಎಂ/ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಎಂ.ಲಿಂಗಪ್ಪ(ಮುಂದು)**:-

ದೇಶದಲ್ಲಿ ಅನೇಕ ಐಐಟಿ ಗಳು ಇವೆ. ಅವು ಎಲ್ಲವು ಹೆಸರುವಾಸಿಯಾಗಿವೆ. ಅವೆಲ್ಲಕ್ಕಿಂತಲೂ ಹೆಚ್ಚು ಹೆಸರು ಮಾಡುವಂತಹ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು ತಾವು ಹೊರಟಿರುವ ತಮ್ಮ concept ನ್ನು ನೋಡಿ ನಾನು ಆ ಪ್ರದೇಶದವನ್ನಾಗಿ ಬಹಳ ಸಂತೋಷಪಡುತ್ತೇನೆ. At the same time, ಈ

ಕಾಲೇಜುಗಳನ್ನು ಕೂಡಾ ಅವರವರ ಮಟ್ಟಿಗೆ ಉನ್ನತ ಮಟ್ಟಕೆ ಏರಿಸುವುದಾಗಲಿ, ಈಗ ಎಲ್ಲಾ ಖಾಸಗಿ ಕಾಲೇಜುಗಳು ತಮ್ಮ ಅಸ್ಥಿತ್ವವನ್ನು ಉಳಿಸಿಕೊಂಡು ಸಾಕಷ್ಟು ವಿದ್ಯಾರ್ಥಿಗಳು ಅಲ್ಲಿಯು ಬರುವಂತೆ ಹೊಸ ಕಾನೂನನ್ನು ತಂದರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ರಾಜ್ಯದಲ್ಲಿರುವ 200 ಇಂಜಿನೀಯರಿಂಗ್ ಕಾಲೇಜುಗಳು ಇಂದು ಒಂದು ವ್ಯವಸ್ಥೆಗೆ ಬಂದಿವೆ ಎಂದರೆ ಅದರಿಂದಲೂ ತಮಗೆ ಒಳ್ಳೆಯ ಹೆಸರು ಬರುತ್ತದೆ. ಬೇರೆ ಕಾಲೇಜುಗಳು ಇದರ ವ್ಯಾಪ್ತಿಗೆ ಬರುತ್ತವೆ ಎಂದು ನಾನು ಅಂದುಕೊಂಡಿದೆ. ಆದರೆ ಬೇರೆ ಕಾಲೇಜುಗಳ ವ್ಯಾಪ್ತಿಯಲ್ಲಿ ಇದನ್ನು ಕೊಡುತ್ತಿಲ್ಲ. ಬೇರೆ ಯಾವ ಕಾಲೇಜುಗಳನ್ನು ಇದಕ್ಕೆ affiliate ಮಾಡುವುದಿಲ್ಲ. ಇದರಿಂದ ಇರುವ 200 ಕಾಲೇಜುಗಳು ಹಿಂದಕ್ಕೆ ಹೋಗದಂತೆ ನೋಡಿಕೊಳ್ಳಬೇಕು.

ಇನ್ನು deemed university ಗಳ ಬಗ್ಗೆ ಹೇಳುವುದೇ ಬೇಡ. ಇವುಗಳಿಗೆ ಹೇಳುವವರು ಕೇಳುವವರು ಯಾರು ಇಲ್ಲ. ಉನ್ನತ ಶಿಕ್ಷಣ ಇಲಾಖೆಯ ನಿಯಂತ್ರಣದಲ್ಲಿ ಇಲ್ಲ, AICTE ನಿಯಂತ್ರಣದಲ್ಲಿಯು ಇಲ್ಲ. ಒಂದು deemed university ತನ್ನ ಕಾಲೇಜಿನಲ್ಲಿ Computer Science ನಲ್ಲಿ ಮೊದಲನೇ ವರ್ಷಕ್ಕೆ 1200 ಮಕ್ಕಳನ್ನು admit ಮಾಡಿಕೊಂಡಿದೆ. 25 ಕಾಲೇಜುಗಳಿಗೆ ಆಗುವಷ್ಟು ಹುಡುಗರನ್ನು ಒಂದೇ ಒಂದು deemed university ತುಂಬಿಕೊಂಡುಬಿಟ್ಟಿತು. ಹೀಗಾದಾಗ ಹುಡುಗರು ಬೇರೆ ಕಡೆ ಹೋಗಲು ಸಾಧ್ಯವಿಲ್ಲ. ಇಲ್ಲಿ ಏಕೆ ಇಷ್ಟೊಂದು ಮಕ್ಕಳು ಸೇರಿಕೊಳ್ಳುತ್ತವೆ ಎಂದರೆ, ಅಲ್ಲಿಯ ಮಕ್ಕಳಿಗೆ Internals ಇಲ್ಲ. Internals ಮಾಡಿದರೂ fail ಮಾಡುವುದಿಲ್ಲ. First Semester exam ನಲ್ಲಿ fail ಆದವರು ಇನ್ನೊಂದು ವಾರದಲ್ಲಿ ಪರೀಕ್ಷೆ ಕುಳಿತು ಪಾಸಾಗಿ ಬಿಡುವುದು. Fast track ರೀತಿ. ಹಿಂದಿನ ಸರ್ಕಾರಗಳು ಇಷ್ಟೆಲ್ಲಾ ಕಾಲೇಜುಗಳನ್ನು ಪ್ರಾರಂಭಿಸಲು ಅವಕಾಶವನ್ನು ಕೊಡಬಾರದಿತ್ತು ಎಂದು ನನ್ನಗನ್ನಿಸುತ್ತದೆ. ಮೊಟ್ಟಮೊದಲ ತಪ್ಪು ಅಲ್ಲಿಯೇ ಆಗಿದೆ. ಕೊಟ್ಟ ಮೇಲೆ ಅವುಗಳನ್ನು ಕಾಪಾಡುವ ಗುರುತರವಾದ ಜವಾಬ್ದಾರಿ ಸರ್ಕಾರದ್ದು. Deemed university ಯವರು ಶಿಕ್ಷಣವನ್ನು ತೀರಾ ಕೆಳಮಟ್ಟಕ್ಕೆ ತೆಗೆದುಕೊಂಡು ಹೋಗಿಬಿಡುತ್ತಾರೆ. 'Deemed' ಹೋಗಿ 'doomed' ಆಗುತ್ತಿವೆ. ವಿಶ್ವೇಶ್ವರ ವಿಶ್ವವಿದ್ಯಾನಿಲಯವನ್ನು ಉನತ್ನ ಮಟ್ಟಕೆ ಅಂತರ ರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು ಎನ್ನುವ ಉದ್ದೇಶವನ್ನು ತಾವು ಹೊಂದಿದ್ದೀರಿ, ಹಾಗೆ ಕರ್ನಾಟಕದಲ್ಲಿರುವ 200 ಇಂಜಿನಿಯರಿಂಗ್ ಕಾಲೇಜುಗಳು ಚೆನ್ನಾಗಿವೆ ನಾವು ಅಲ್ಲಿ ಸೇರಿಕೊಂಡು ಅಭ್ಯಾಸ ಮಾಡಬೇಕೆಂದು ವಿದ್ಯಾರ್ಥಿಗಳು ಬರುವಂತಹ ಮಟ್ಟಕೆ ತಾವು ಅವುಗಳನ್ನು ತೆಗೆದುಕೊಂಡು ಹೋಗಬೇಕು ಸಭಾಪತಿಗಳ ಮೂಲಕ ತಮಗೆ ಪ್ರಾರ್ಥನೆ ಮಾಡಿಕೊಂಡು ವಂದನೆಗಳನ್ನು ಹೇಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಗಳೆ, ಇವತ್ತು ಸರ್ ಎಂ.ವಿಶ್ವೇಶ್ವರಯ್ಯನವರ ಹೆಸರು ಜಗತ್ತಿನಲ್ಲಿ ಅಚಲವಾಗಿ ಉಳಿದಿದೆ. Technology ಮತ್ತು engineering ವಿಭಾಗದಲ್ಲಿ ಅವರು ನೀಡಿರುವ ಸೇವೆ ಅಗಾಧವಾಗಿದೆ. ಮತ್ತು ಅವರು ಕರ್ನಾಟಕಕ್ಕೆ ಕೊಟ್ಟಿರುವ ಕೊಡುಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೊಡ್ಡದು. ಅವರ ಹೆಸರಿನಲ್ಲಿರುವ ಇಂಜಿನಿಯರಿಂಗ್ ಕಾಲೇಜನ್ನು ಐಐಟಿ ಮಾದರಿಯಲ್ಲಿ standard ಆಗಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕು ಎನ್ನುವುದು ಸದ್ದುದ್ದೇಶವಾಗಿದೆ. ಈಗಾಗಲೇ ಮಾನ್ಯ ಸಿ.ಎಂ.ಲಿಂಗಪ್ಪನವರು ಹೇಳಿದ ಹಾಗೆ, ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಸರ್ಕಾರಿ ವಿಶ್ವವಿದ್ಯಾನಿಲಯಗಳು ಯಾವುದೆ ರೀತಿಯಲ್ಲಿ ಹಿಂದಕ್ಕೆ ಹಾಕಿ ಹೋಗದಂತೆ ನಾವು ಕಾನೂನಿನಲ್ಲಿ ಅವರಿಗೆ ಸಾಕಷ್ಟು ಮುದ್ರೆಯನ್ನು ಒತ್ತಿ ಕೊಟ್ಟುಬಿಟ್ಟಿದ್ದೇವೆ. ಈ ಬಿಲ್‌ಗೆ ಸಂಬಂಧಪಟ್ಟ ಹಾಗೆ ಎರಡು-ಮೂರು ಅಂಶಗಳನ್ನು ಹೇಳಬಯಸುತ್ತೇನೆ. ಒಂದು ಅಧ್ಯಕ್ಷರ ನೇಮಕದ ಬಗ್ಗೆ, ವಿಶ್ವವಿದ್ಯಾನಿಲ್ಲಯಗಳಲ್ಲಿ ವಿಶೇಷವಾದ ಕಾಯಿದೆ ಇದು. ಬೇರೆ ನಮ್ಮ ಸಾಮಾನ್ಯ ವಿಶ್ವವಿದ್ಯಾನಿಲಯಗಳಿಗಿಂತ ವಿಶೇಷವಾದ ಕಾಯಿದೆ ಇದು. ಆಡಳಿತ ಮಂಡಳಿ ಅಧ್ಯಕ್ಷರನ್ನು ನೇಮಕ ಮಾಡುವಾಗ, ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್, ವ್ಯವಸ್ಥಾಪನಾ, ಕೈಗಾರಿಕಾ ಕ್ಷೇತ್ರ ಅಥವಾ ಇತರ ಸಂಬಂಧಿತ ಕ್ಷೇತ್ರಗಳಲ್ಲಿ... ಇತರ ಸಂಬಂಧಿತ ಕ್ಷೇತ್ರಗಳೆಂದು ಹೇಳುವಲ್ಲಿಯೇ ಅಪಾಯವಿರುವುದು. ಇತರ ಸಂಬಂಧಿ ಎನ್ನುವುದನ್ನು ಉಪಯೋಗಿಸಿಕೊಂಡು ಇನ್ಯಾವುದೋ ಕ್ಷೇತ್ರದಲ್ಲಿ ಕೆಲಸ ಮಾಡಿದವರನ್ನು ಅಲ್ಲಿ ಅಧ್ಯಕ್ಷರನ್ನಾಗಿ ನೇಮಕ ಮಾಡುತ್ತಾರೆ. 'ಅಥವಾ ಇತರೆ ಸಂಬಂಧಿ' ಎನ್ನುವುದನ್ನು ದಯಮಾಡಿ ತೆಗೆದು ಹಾಕಿ. ಇದರಿಂದ ಅಧ್ಯಕ್ಷರ ನೇಮಕಾತಿಯಲಿಲ್ಲ ಬಹಳ ಕೈಚಳಕ ತೋರಿಸುತ್ತಾರೆ. ಶ್ರೇಷ್ಠ ವ್ಯಕ್ತಿಗಳ ಪೈಕಿ ಆಡಳಿತ ಮಂಡಳಿಯು ಶಿಫಾರಸ್ ಮಾಡಿರುವ ಮೂರು ವ್ಯಕ್ತಿಗಳ ಪಟ್ಟಿಯಿಂದ ಅಧ್ಯಕ್ಷರನ್ನು ಕುಲಾಧ್ಯಕ್ಷರು ನೇಮಕ ಮಾಡತಕ್ಕದ್ದು. ಮೂರು ವ್ಯಕ್ತಿಗಳ ಪೈಕಿ ಶ್ರೇಷ್ಠ ವ್ಯಕ್ತಿಗಳು ಅಂದರೆ ಯಾರು? ಯಾವುದೇ ಆಡಳಿತ ಮಂಡಳಿ ಇರಲಿ, ತಮಗೆ ಬೇಕಾದ ಮೂರು ವ್ಯಕ್ತಿಗಳನ್ನೆ ಶ್ರೇಷ್ಠ ವ್ಯಕ್ತಿಗಳೆಂದು ಶಿಫಾರಸ್ಸು ಮಾಡಿ ಅದರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುವ ವ್ಯವಸ್ಥೆ ಇಂದು ನಡೆಯುತ್ತಿದೆ. ಹೀಗೆ ಆಗಬಾರದು. ಅದಕ್ಕಾಗಿ ದಯಮಾಡಿ ಇದನ್ನು ಬದಲಾವಣೆ ಮಾಡಿ. ಶ್ರೇಷ್ಠ ವ್ಯಕ್ತಿಗಳು ಅಂದ್ರೆ ಯಾರು? ವ್ಯಾಖ್ಯಾನ ಮಾಡಿ, definition ಕೊಡಿ.

**ಸಭಾಪತಿಯವರು**:- ಬೇಗ ಮಾತನಾಡಿ ಮುಗಿಸಿ. ಇನ್ನು ಎರಡೇ ದಿನ ಅಧಿವೇಶನ ಇರುವುದು. ಇನ್ನು ಸಾಕಷ್ಟು ವಿಷಯಗಳು ಇವೆ. ಬೇಗ ಮಾತನಾಡಿ ಮುಗಿಸಿ.

**ಶ್ರೀ ಮರಿತಿಬ್ಬೇಗೌಡ**:- ಇದು ಬಹಳ ಪ್ರಮುಖವಾದ ವಿಧೇಯಕ. ಇದರ ಮೇಲೆ ಇನ್ನು ಮಾತನಾಡುವುದು ಇದೆ. ಐದು ನಿಮಿಷದಲ್ಲಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

**ಡಾ: ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ ಸಚಿವರು)**:- ಮಾನ್ಯ ಸಭಾಪತಿಗಳೆ, ಇಲ್ಲಿ ನಾನು ನಿಮ್ಮ ಸಹಕಾರವನ್ನು ಕೇಳುತ್ತಿರುವುದು, ಮೊದಲನೆಯ ಬಾರಿಗೆ ನಮ್ಮ ರಾಜ್ಯದಲ್ಲಿ Institute of Excellence ಎಂದು ಮಾಡುತ್ತಿರುವ ನಮ್ಮ ಮೊದಲನೆಯ ಸಂಸ್ಥೆ ಕರ್ನಾಟಕ ರಾಜ್ಯದು. ಇದು affiliating

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

university ಅಲ್ಲ, ಇದು unitary; ಕೇವಲ Visvesvaraya College of Engineering ಗೆ ಮಾತ್ರ ಸಿಮೀತವಾಗಿ ಮಾಡುತ್ತಿರುವುದು. ಇದನ್ನು ಐಐಟಿ, ಐಐಎಂ ಮಾದರಿಯಲ್ಲಿ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಸ್ವಾಯತ್ತತೆ ಮತ್ತು leadership ಕೊಡಲು Institute of Excellence ಎಂದು ಮೊದಲನೆಯ ಬಾರಿಗೆ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಇಲ್ಲಿ ವಿಶೇಷವಾಗಿ ಹೇಳಬೇಕಾಗಿರುವುದು, ಈ ಕಾಲೇಜಿನಲ್ಲಿ ಈಗ regular ಇರುವ ಬಜೆಟ್ 40 ಕೋಟಿ ರೂಪಾಯಿಗಳು. ಅದೇ IIT, ಮುಂಬೈ ಬಜೆಟ್ ವರ್ಷಕ್ಕೆ 1200 ಕೋಟಿ ರೂಪಾಯಿಗಳು. ಈ ಕಾಲೇಜನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಇಂಜಿನೀಯರಿಂಗ್ ಮಾತ್ರವಲ್ಲ, ಇಂಜಿನಿಯರಿಂಗ್‌ನಿಂದ ಮುಂದುವರೆದು technology ಬಂದಿದೆ. Engineering leading to technology, technology leading to innovation, ಈ ರೀತಿ ಎಲ್ಲಾ aspects ನ್ನು cover ಮಾಡಲು ಸಂಪನ್ಮೂಲಗಳ ಸವಾಲು ಇದೆ, ಗುಣಮಟ್ಟದ ಸವಾಲು ಇದೆ ಇವೆಲ್ಲವುಗಳನ್ನು ಎದುರಿಸಿ ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಸರ್ಕಾರ ಕೆಲಸ ಮಾಡುತ್ತಿದೆ. ಒಳ್ಳೆಯ ಉದ್ದೇಶವಿಟ್ಟುಕೊಂಡು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇವೆ. ಇದು ಮೊದಲನೆಯ ಬಾರಿಗೆ ಮಾಡುತ್ತಿರುವಂತಹ ಪ್ರಯತ್ನ ಆದ್ದರಿಂದ ಬೇರೆ ಯಾವುದರ ಜೊತೆಗೂ ಇದನ್ನು ಜೋಡಿಸಬಾರದೆಂದು ಕೇಳಿಕೊಳ್ಳುತ್ತೇನೆ.

(ಮುಂದು)

(1268)22-12-2021(04-50) bsd-rn (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಅವರು ಇರುತ್ತಾರೆ, ನಾಳೆ ಇನ್ನೊಂದು ಸರ್ಕಾರ ಬರುತ್ತದೆ. ಆದರೆ ಅಧ್ಯಕ್ಷರು ಮತ್ತು ನಿರ್ದೇಶಕರುಗಳನ್ನು ಇದೇ ಕಾನೂನಿನಡಿಯಲ್ಲಿ ನೇಮಕ ಮಾಡುತ್ತಾರೆ. ಇಲ್ಲಿರುವ loop-holes ಗಳ ಬಗ್ಗೆ ಹೇಳುತ್ತಿದ್ದೇನೆ. ಇದರಿಂದ ಸಂಸ್ಥೆ ಹಾಳಾಗುವ ಬಗ್ಗೆ ಹೇಳುತ್ತಿದ್ದೇನೆ. ಈ ವಿಧೇಯಕದಲ್ಲಿ ಶೋಧನಾ ಮಂಡಳಿಗೆ ೩ ಜನರ ಹೆಸರನ್ನು ಶಿಫಾರಸ್ಸು ಮಾಡುವುದಾಗಿ ತಿಳಿಸಿದ್ದು, ಅದರಲ್ಲಿ ಅಧ್ಯಕ್ಷರು ಮತ್ತು ಸದಸ್ಯರೊಬ್ಬರನ್ನು ಆಡಳಿತ ಮಂಡಳಿಯೇ ನೇಮಕ ಮಾಡುತ್ತದೆ. ಇನ್ನೊಂದು ಸರ್ಕಾರದ ಪ್ರತಿನಿಧಿಯಾಗಿ ಸರ್ಕಾರ ಶಿಫಾರಸ್ಸು ಮಾಡಿದ ಹೆಸರನ್ನು ರಾಜ್ಯಪಾಲರು ನೇಮಕ ಮಾಡುತ್ತಾರೆ. ಇನ್ನೊಂದು ಕಡೆ ರಾಜ್ಯ ಸರ್ಕಾರ ಅಥವಾ ವಿಶ್ವವಿದ್ಯಾಲಯದ ವ್ಯವಹರಣೆಗಳೊಂದಿಗೆ ಪ್ರಸ್ತುತ ಸಂಬಂಧವಿರುವ ಯಾವೊಬ್ಬ ವ್ಯಕ್ತಿಯನ್ನು ಶೋಧನ ಮತ್ತು ಆಯ್ಕೆ ಸಮಿತಿಯ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡತಕ್ಕದ್ದಲ್ಲ ಎಂದು ಸರ್ಕಾರವೇ ಸೂಚಿಸಿದ್ದಾರೆ. ಆದರೆ ಸರ್ಕಾರವೇ ರಾಜ್ಯಪಾಲರಿಗೆ ಇಂತಹವರನ್ನು ನೇಮಕ ಮಾಡಿ ಎಂದು ಸೂಚಿಸುತ್ತದೆ. ಇನ್ನೊಂದು ಕಡೆ ಇಬ್ಬರನ್ನು ಕಳುಹಿಸಿ, ಅದರಲ್ಲಿ ಒಬ್ಬರು ಅಧ್ಯಕ್ಷರು ಹಾಗೂ ಮತ್ತೊಬ್ಬರು ಸದಸ್ಯರಾಗುತ್ತಾರೆ. ಇವತ್ತು ಎಲ್ಲಾ ವಿಶ್ವವಿದ್ಯಾಲಯಗಳ Search Committee ಯಲ್ಲಿ ಹಾಲಿ Vice Chancellor ಗಳನ್ನು ಹಾಕುತ್ತಿದ್ದು, ಹಾಲಿ Vice Chancellor ಗಳಿಗೂ ಸರ್ಕಾರಕ್ಕೂ ಸಂಬಂಧವಿಲ್ಲವೇ? ಅದೇರೀತಿ ಇದೂ ಆಗುತ್ತದೆ. ಇದರಿಂದ ಯಾವ ಸಾಧನೆ ಮಾಡಿದಂತಾಗುತ್ತದೆ? ಆದ್ದರಿಂದ ಸರ್ಕಾರ ಮತ್ತು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವುದೇ ವಿಶ್ವವಿದ್ಯಾಲಯಗಳಿಗೆ ಸಂಬಂಧ ಇಲ್ಲದೇ ಇರುವಂತಹ ತಜ್ಞರನ್ನು Search Committee ಯಲ್ಲಿ ಹಾಕಬೇಕು.

ಇನ್ನು ಎರಡನೆಯದಾಗಿ ರೂ. ೧೦ ಲಕ್ಷಗಳನ್ನು ಇಟ್ಟಿದ್ದು, ಇದನ್ನು ಬಹಳ ಘನ ಉದ್ದೇಶ ಇಟ್ಟುಕೊಂಡು ತರುತ್ತಿದ್ದಾರೆ. ಇಂತಹ ವಿಚಾರದಲ್ಲಿ ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಸಚಿವರು ಬಂದ ಮೇಲೆ ಮಂಡ್ಯ ಮತ್ತು ಬೆಂಗಳೂರು ಸೇರಿ ೨ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡ್ತಿದ್ದಾರೆ. ಆ ವಿಶ್ವವಿದ್ಯಾಲಯಗಳು Innovative, Cluster, ಹಾಗೆ-ಹೀಗೆ ಎಂದೆಲ್ಲಾ ಹೇಳಿದರು. ಆದರೆ ಅಲ್ಲಿ ಪ್ಲಾಸ್ಟಿಕ್ ಚೇರ್‌ಗಳನ್ನು ಬಾಡಿಗೆಗೆ ತೆಗೆದುಕೊಂಡು ಬಂದು ಹಾಕಿ ಪಾಠ ನಡೆಸುತ್ತಿದ್ದಾರೆ. ಒಬ್ಬ ಅಧ್ಯಾಪಕರ ನೇಮಕವಾಗಿಲ್ಲ, ಒಂದು ಸಮಿತಿಯನ್ನು ರಚನೆ ಮಾಡಿಲ್ಲ. ಇವತ್ತಿನವರೆಗೂ ಅಲ್ಲಿ Registrar, Vice Chancellor ಹುದ್ದೆಗಳನ್ನು ಬಿಟ್ಟರೆ ಯಾವ ಹುದ್ದೆಗಳನ್ನು ಮಂಜೂರು ಮಾಡಿಲ್ಲ. ಕುಳಿತುಕೊಳ್ಳಲು ಕುರ್ಚಿ ಇಲ್ಲ, ಪಾಠ ಮಾಡಲು ಮೇಜು ಇಲ್ಲ. ಎರಡು ವರ್ಷ ಕಳೆದರೂ ಪಾಠ ಮಾಡಲು ಒಬ್ಬ permanent faculty ಇಲ್ಲ. ಈ ಮಾದರಿಯಲ್ಲಿ ಆ ವಿಶ್ವವಿದ್ಯಾಲಯಗಳು ನಡೆಯುತ್ತಿವೆ. ಇವತ್ತು technical ಗೆ ಸಂಬಂಧಪಟ್ಟಂತೆ ೧೦ ಸರ್ಕಾರಿ Engineering ಕಾಲೇಜುಗಳಿವೆ, ನನ್ನ ಕ್ಷೇತ್ರವಾದ ಚಾಮರಾಜನಗರ Engineering ಕಾಲೇಜಿನಲ್ಲಿ ಒಂದು ತಿಂಗಳಿಂದ electricity ಬಿಲ್ ಕಟ್ಟಲಿಲ್ಲ ಎಂದು ವಿದ್ಯುತ್ ಸಂಪರ್ಕ ಇಲ್ಲ. ಇಂತಹ ಕಡೆ ಯಾವರೀತಿ ಅಡ್ಮಿಷನ್ ಮತ್ತು ಪ್ರಯೋಗ ಶಾಲೆಗಳು ನಡೆಯುತ್ತವೆ? ಈಗ ವಿದ್ಯುಲ್ ಬಿಲ್ ಕಟ್ಟಲು ಹಣ ಇಲ್ಲ. ೧೦ ಸರ್ಕಾರಿ Engineering ಕಾಲೇಜುಗಳು ಪ್ರಾರಂಭವಾಗಿ ೧೩ ವರ್ಷ ಕಳೆದರೂ ಅವುಗಳಿಗೆ faculty ಮತ್ತು ಮೂಲಭೂತ ಸೌಲಭ್ಯಗಳು ಇಲ್ಲ. Attenders, Peon, Night Watchmen ಗಳು ಇಲ್ಲವೇ ಇಲ್ಲ. Full-fledged faculties ಇಲ್ಲ. ಇದೊಂದು ಐಐಟಿ ಮಾದರೆ ಎಂದು ಮಾಡಿಬಿಟ್ಟರೆ ಎಲ್ಲವೂ ಬಗೆಹರಿದುಬಿಡುತ್ತದೆಯೇ? ಬಡವರು ಮಕ್ಕಳು ಕಲಿಯಲು ಸರ್ಕಾರಿ Engineering College ಗಳನ್ನು ತಂದಿದ್ದಾರೆ. ಅವರ ಅವಧಿಯಲ್ಲಿ ೨ ಕಾಲೇಜುಗಳು ಆಗಿವೆ. ನಾನು ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ, ಮೈಸೂರು ವಿಶ್ವವಿದ್ಯಾಲಯ ಶತಮಾನೋತ್ಸವ ಆಚರಣೆ ಮಾಡಿಕೊಂಡಿದೆ. ದೇಶ ವಿದೇಶಗಳಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಹೆಸರಿದೆ. ಮೈಸೂರು ವಿಶ್ವವಿದ್ಯಾಲಯಕ್ಕೆ NAAC (National Assessment and Accreditation Council) ನಲ್ಲಿ 'A'-Grade ಬಂದಿದೆ. ಒಂದೇ ಒಂದು ಕಾರಣದಿಂದ ಅಂದ್ರೆ 80% permanent faculties ಇಲ್ಲ ಎಂಬ ಕಾರಣದಿಂದ ಹೆಸರಾಂತ ಮೈಸೂರು ವಿಶ್ವವಿದ್ಯಾಲಯಕ್ಕೆ ಪಂಚತಾರಾ ಬರಲಿಲ್ಲ, ಅದರ ಬದಲು A-Grade ಬಂತು. ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ 70% faculty ಇಲ್ಲ. Faculty ಕೊಡಲು ಆಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅಂತಹವುಗಳನ್ನು ಗಮನಿಸಬೇಕು. ಈ ವಿಶ್ವವಿದ್ಯಾಲಯದ ಜೊತೆಗೆ ಬಡವರ ಮಕ್ಕಳು ಕಲಿಯುವ ವಿಶ್ವವಿದ್ಯಾಲಯಗಳಿಗೆ ಪ್ರಾಧಾನ್ಯತೆ ಕೊಡಬೇಕು. ಅದನ್ನು ಮಾಡುವುದಿಲ್ಲ. ರಾಜ್ಯದಲ್ಲಿ ಒಂದೊಂದು ವಿಶ್ವವಿದ್ಯಾಲಯಕ್ಕೆ ಒಂದೊಂದು ತರಹ ವಿಧೇಯಕ ಮಾಡಿರುವುದನ್ನು ನೋಡುತ್ತಿದ್ದೀರಿ. ಎಲ್ಲಾ

ವಿಧೇಯಕಗಳಲ್ಲಿ loopholes ಇವೆ. ಅಲ್ಲಿ ಎಂತಹವರನ್ನೋ ನೇಮಕ ಮಾಡಲು ಅವಕಾಶ ಆಗುತ್ತದೆ. ಆದ್ದರಿಂದ ಸರಿಪಡಿಸಲು ಸಲುವಾಗಿ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆಯೇ ವಿನಃ ಅವರ ಉತ್ಸಾಹಕ್ಕೆ ತಣ್ಣೀರೆರಚುತ್ತಿಲ್ಲ. ನಮ್ಮ ಬೆಂಗಳೂರು ಬೆಳೆಯಬೇಕು, ಅದನ್ನು ಸ್ವಾಗತ ಮಾಡುತ್ತೇನೆ. ಹಾಲಿ ಇರುವ ವಿಶ್ವವಿದ್ಯಾಲಯಗಳಿಗೆ ಸ್ವಲ್ಪ ಹಣ ಕೊಟ್ಟು ಬೆಂಬಲ ಕೊಡಲಿ. ರೂ.೧೦ ಲಕ್ಷ ಕೊಟ್ಟು ಅಲ್ಲಿ ಐಐಟಿ ಮಾದರಿ ಎಂದು ಬೋರ್ಡ್ ನೇತು ಹಾಕಿದರೆ ನಾಳೆ ಇವರು ಹೋದಾಗ ಆ ವಿಶ್ವವಿದ್ಯಾಲಯನ್ನು ನೋಡುವವರು ಯಾರು? ರೂ.೧೦೦ ಕೋಟಿಗಳನ್ನು ಕೊಡಲಿ, ಮುಂಬೈನಲ್ಲಿ ಕೊಡುವಂತೆ ಸಾವಿರಾರು ಕೋಟಿ ರೂಪಾಯಿಗಳು ಬೇಡ. ಈ ವಿಶ್ವವಿದ್ಯಾಲಯದ ಬೆಳವಣಿಗೆಗೆ ರೂ.೧೦೦ ಕೋಟಿ ಕೊಡುತ್ತೇವೆ ಎಂದು ಬಜೆಟ್‌ನಲ್ಲಿ ಹೇಳಲಿ. ಬಡವರ ಮಕ್ಕಳು ಕಲಿಯಲಿ ಹಾಗೂ ಉತ್ತಮ ಶಿಕ್ಷಣ ಸಿಗಲಿ ಎಂದು ಹೇಳಲಿ. ಅದನ್ನು ನಾವು ಸ್ವಾಗತ ಮಾಡುತ್ತೇನೆ. ಆದರೆ ರೂ. ೧೦ ಲಕ್ಷ ಕೊಟ್ಟು ಒಂದು ಬೋರ್ಡ್ ನೇತುಹಾಕಿದರೆ ಈಗಾಗಲೇ ಇರುವ ವಿಶ್ವವಿದ್ಯಾಲಯಗಳ ಜೊತೆಗೆ ಇದೂ ಸೇರುತ್ತದೆ. ಕರ್ನಾಟಕ ರಾಜ್ಯದಲ್ಲಿ ತಾಂತ್ರಿಕ ವಿಶ್ವವಿದ್ಯಾಲಯದ ಮೊದಲನೆಯ ವೈಸ್ ಚಾನ್ಸಲರ್ ಆಗಿ ಶ್ರೀಯುತ ರಾಜಶೇಖರಯ್ಯನವರು ಹಾಗೂ ಎರಡನೆಯವರಾಗಿ ಶ್ರೀ ಬಲವೀರರೆಡ್ಡಿ ರವರುಗಳ ಅವಧಿಯಲ್ಲಿ ಭಾರತ ದೇಶದಲ್ಲಿ Technical University ಬಹಳ ಎತ್ತರಕ್ಕೆ ಹೋಯಿತು. ಅದನ್ನು ಅದೇರೀತಿ ವಿಸ್ತರಣೆ ಮಾಡಿದರು. ಆ ಮಾನ್ಯರು ಕಟ್ಟಿದ್ದನ್ನು ಯಾವ ಪರಿಸ್ಥಿತಿಯಲ್ಲಿ ನಾವೆಲ್ಲರೂ ನಡೆಸಿಕೊಂಡು ಬರುತ್ತಿದ್ದೇವೆ. ಏನೂ ಉಳಿದಿಲ್ಲ. ಮಾನ್ಯ ಲಿಂಗಪ್ಪನವರು ಬಹಳ ಚೆನ್ನಾಗಿ ಹೇಳಿದರು. ಆದ್ದರಿಂದ ಈಗ ಇರುವ ಸಾಮಾನ್ಯ ವಿಶ್ವವಿದ್ಯಾಲಯಗಳ ಸ್ಥಿತಿಗತಿಗಳನ್ನು ಅರ್ಥಮಾಡಿಕೊಂಡು ಕೊಡಬೇಕು. ಸರ್ಕಾರಿ ಇಂಜನಿಯರಿಂಗ್ ಕಾಲೇಜು ಉಳಿಸಲು ಅಗತ್ಯ ಅನುದಾನವನ್ನುಕೊಡಬೇಕು, ಮಕ್ಕಳಿಗೋಸ್ಕರ faculty ಕೊಡಬೇಕು ಎಂದು ಹೇಳುತ್ತಾ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಇಲ್ಲಿ ಆಡಳಿತ ಮಂಡಳಿ ಎಂದು ಹೇಳಿದ್ದು, ಆ ಆಡಳಿತ ಮಂಡಳಿಯ ಸದಸ್ಯರು ಯಾರು ಯಾರು ಎಂದು ಹೇಳಿಲ್ಲ. ದಯಮಾಡಿ ಇಂತಹವುಗಳನ್ನು ಸರಿಪಡಿಸಿ, ನಿಯಮ ರೂಪಿಸುವಾಗ ಇವುಗಳನ್ನು ಗಮನಿಸಿ ಸರಿಪಡಿಸಬೇಕು. ಇಲ್ಲದಿದ್ದರೆ ನಾವು ಅವರೂ ಯಾರೂ ಇರುವುದಿಲ್ಲ. ಮುಂದೆ ಬರುವವರು ಬಹಳ ದುರ್ಬಳಕೆ ಮಾಡಿಕೊಳ್ಳುತ್ತಾರೆ. ಅದು ಆಗಬಾರದು ಎಂದು ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜನ್ನು unique ಆಗಿ ವಿಶಿಷ್ಟವಾದ ರೀತಿಯಲ್ಲಿ develop ಮಾಡಬೇಕು ಎಂದು ಪ್ರತ್ಯೇಕವಾಗಿ ಬಿಲ್ ತಂದಿರುವ ಡಾ: ಅಶ್ವಥನಾರಾಯಣ ರವರ ಬದ್ಧತೆ ಮತ್ತು ಕ್ಷಮತೆಯನ್ನು ಅಭಿನಂದಿಸುತ್ತಿದ್ದೇನೆ. ನಾನೂ ಆ ಕಾಲೇಜಿನಲ್ಲಿ ಓದಿದವನಾಗಿದ್ದೇನೆ. ಈ UVCE (University Visvesvaraya College of Engineering) ಎಂದರೆ ವಿಶೇಷವಾದ ಗೌರವವುಳ್ಳ ಇಂಜಿನಿಯರಿಂಗ್ ಕಾಲೇಜಾಗಿದೆ. ಬೆಂಗಳೂರಿನ ಕೆ.ಆರ್. ಸರ್ಕಲ್‌ನಲ್ಲಿ ಎಲ್ಲಾ ಬದಲಾವಣೆ ಆದರೂ UVCE ಯ ಚಿತ್ರಣ ಇಂದಿಗೂ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬದಲಾವಣೆಯಾಗಿಲ್ಲ, ಬದಲಾವಣೆಯಾಗಲೂ ಯಾರೂ ಬಿಡಬಾರದು, ಅದು ಹಾಗೆಯೇ ಇರಬೇಕು. ೧೮೮೭ನೇ ಇಸ್ವಿಯಲ್ಲಿ ಭೀಕರ ಬಲಗಾಲದ ಸಮಯದಲ್ಲಿ ಮೈಸೂರು ಪ್ರಾಂತ್ಯದಲ್ಲಿ ಯಾರೂ ಇಂಜಿನಿಯರ್‌ಗಳು ಇಲ್ಲದೇ ಇರುವಾಗ ಮತ್ತು ವಿಶೇಷವಾಗಿ Chief Engineers, Deputy Chief Engineers ಗಳೆಲ್ಲರೂ ಬ್ರಿಟಿಷರು ಇರುವ ಜಾಗದಲ್ಲಿದ್ದು, ಏನಾದರೂ ಮಾಡಿ ನಮ್ಮ ರಾಜ್ಯದಲ್ಲಿ ಇಂಜಿನಿಯರ್‌ಗಳನ್ನು ತಯಾರು ಮಾಡಬೇಕೆಂದು ಮಾನ್ಯ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರು ಕಲ್ಪನೆಯನ್ನು ಕಂಡರು. ಅವರಿಬ್ಬರ ಕನಸಿನ್ನ ಕೂಸಾಗಿ ೧೯೧೭ನೇ ಇಸವಿಯಲ್ಲಿ ಈ ಸಂಸ್ಥೆ ಸ್ಥಾಪನೆಯಾಯಿತು. ಇದು ಇಡೀ ದಕ್ಷಿಣ ಭಾರತದಲ್ಲಿ ಮೊದಲನೆಯ ಸಂಸ್ಥೆಯಾಗಿದೆ. ಆಗ intake ಕೇವಲ ४೦ ಸೀಟುಗಳು. Mechanical and Civil ಸೇರಿ ಎರಡು ಬ್ರಾಂಚ್‌ಗಳಿದ್ದವು.

(ಮುಂದು)

(1269)/22.12.2021/ 5.00/hv.rn (ಸಭಾಪತಿಯವರ ಉಪಸ್ಥಿತಿ)

**ಡಾ||ವೈ.ಎ.ನಾರಾಯಣಸ್ವಾಮಿ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಮಾತನಾಡುತ್ತಾ, ಈ ಕಾಲೇಜನ್ನು ವಿ.ಟಿ.ಯೂ ಮತ್ತು ಸರ್ಕಾರಿ ಇಂಜಿನಿಯರಿಂಗ್‌ಗೆ ಹೋಲಿಕೆ ಮಾಡಿದ್ದಾರೆ. ಆದರೆ, ಕನ್ನಡಿಗರ ಸ್ವಾಭಿಮಾನದ ಒಂದೇ ಒಂದು ಕಾಲೇಜು ಇದ್ದರೆ ಅದು ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ಮಾತ್ರ. ಇಲ್ಲಿ ಕನ್ನಡಿಗರು ಮಾತ್ರ ಓದುತ್ತಾರೆಯೇ ಹೊರತು ಬೇರೆ ಯಾರೂ ಓದುವುದಕ್ಕೆ ಸಾಧ್ಯವಾಗುವುದಿಲ್ಲ. ಬಡವರಿಗೆ ಅತ್ಯಂತ ಕಡಿಮೆ ಶುಲ್ಕದಲ್ಲಿ ಉತ್ಕೃಷ್ಟವಾದ ಶಿಕ್ಷಣವನ್ನು ನೀಡುತ್ತಿರುವ ಏಕೈಕ ಕಾಲೇಜು ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು. ಈ ಕಾಲೇಜನ್ನು ಎನ್.ಐ.ಟಿ., ಐ.ಐ.,ಟಿ., ಮಾದರಿಯಲ್ಲಿ ಅಥವಾ ಅವುಗಳಿಗಿಂತಲೂ ಉತ್ಕೃಷ್ಟವಾದ ಮಟ್ಟಕ್ಕೆ ತೆಗೆದುಕೊಂಡು ಹೋಗುವುದಕ್ಕಾಗಿ ಸರ್ಕಾರ ಈ ವಿಧೇಯಕವನ್ನು ತಂದಿದೆ.

ಸನ್ಮಾನ್ಯ ಸಭಾಪತಿಯವರೇ, ಈ ಕಾಲೇಜಿಗೆ ಬೆನ್ನೆಲುಬಾಗಿ ನಿಂತವರು Alumni Association ನವರು. ಇಲ್ಲಿ ಓದಿದವರು ಮಹಾನ್ ವ್ಯಕ್ತಿಗಳಾಗಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ, ಪ್ರೊ: ರೊದ್ದಂ ನರಸಿಂಹರವರು ರಾಷ್ಟ್ರೀಯ ವೈಮಾನಿಕ ಸಂಸ್ಥೆಯ ನಿರ್ದೇಶಕರಾಗಿ ತಮ್ಮ ದೀರ್ಘಕಾಲಿನ ಸೇವೆಯನ್ನು ಸಲ್ಲಿಸಿದರು. ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಅವರು ಭಾರತೀಯ ಸುಪ್ರಸಿದ್ದ ಅಂತರಿಕ್ಷ ವಿಜ್ಞಾನಿಗಳಲ್ಲಿ ಒಬ್ಬರಾಗಿದ್ದಾರೆ. ಪ್ರಧಾನಮಂತ್ರಿಗಳಿಗೆ ಟೆಕ್ನಿಕಲ್ ಅಡ್ವೈಸರ್ ಆಗಿದ್ದರು. ಅದೇ ರೀತಿಯಲ್ಲಿ ಡಾ||ವಿ.ಕೆ. ಅತ್ರೆ Defence Advisor to Prime Minister of India ಅವರು ಸಹ ಇದೇ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಯಾಗಿದ್ದರು. ಸುಂದರ್‌ರಾಜ್ ಸೀತಾರಾಮ್ ಅಯ್ಯಂಗಾರ್ ಅವರು ಸಹ ಈ ಸಂಸ್ಥೆಯ ವಿದ್ಯಾರ್ಥಿಯಾಗಿದ್ದರು. You can name many number. ಬಹಳ ಉತ್ಕೃಷ್ಟವಾಗಿರುವ ಇಂಜಿನಿಯರ್‌ಗಳನ್ನು ಸೃಷ್ಟಿಸಿ ದೇಶಕ್ಕೆ ಕೊಡುಗೆ ಕೊಟ್ಟಂಥ ಸಂಸ್ಥೆ ಇದು. ನಾನು ಅಲ್ಲಿಗೆ alumni.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ನಸೀರ್ ಅಹ್ಮದ್(ವಿಧಾನಸಭೇಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ.ನಾರಾಯಣ ಸ್ವಾಮಿಯವರು ಆ ಕಾಲೇಜಿನ ವಿದ್ಯಾರ್ಥಿಯಾಗಿದ್ದಾರೆ. ಯಾವುದೋ ಚುನಾವಣೆಯಲ್ಲಿ ಸ್ಪರ್ಧಿಸಿ ಮುಂದಿನ ಹದಿನಾಲ್ಕು ದಿವಸಗಳಲ್ಲಿಯೇ ಪುನಃ ವಿಧಾನ ಪರಿಷತ್ತಿಗೆ ಆಯ್ಕೆಗೊಂಡು ಬಂದಿರುವುದು ಇಂತಹ ಪ್ರತಿಭೆಗಳೆಲ್ಲ ಅವರಲ್ಲಿಯೇ ಇರುವುದು ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ.

**ಡಾ||ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, Alumni Students ಸೇರಿಕೊಂಡು ಮತ್ತು ವಿದೇಶದಲ್ಲಿರುವ ವಿದ್ಯಾರ್ಥಿಗಳೆಲ್ಲ ಸೇರಿಕೊಂಡು 2017ನೇ ಇಸವಿಯಲ್ಲಿ ಶತಮಾನೋತ್ಸವ ಪ್ರಾರಂಭವಾದ ಮೇಲೆ, Water Institute ಎಂದು ಪ್ರಾರಂಭ ಮಾಡಿದ್ದೆವು. ಈ ಕಾಲೇಜನ್ನು ಯುನಿರ್ವಸಿಟಿ ಮಾಡಬೇಕೆಂದು ಒತ್ತಾಯ ಮಾಡಿದವರು ಅವರೇ. ಬೋರ್ಡ್ ಆಫ್ ಗೌರ್ನರ್ಸ್‌ನಲ್ಲಿ ಇಬ್ಬರು Alumni Association ನಿಂದ ಅವರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ ಎನ್ನುವ ಮಾತುಗಳನ್ನು ಹೇಳಿದ್ದಾರೆ. ಇದೊಂದು ಬಹಳ ಅದ್ಭುತವಾಗಿರುವ ವಿಧೇಯಕವಾಗಿದೆ. ಇದು ಬೇರೆ ಇಂಜಿನಿಯರಿಂಗ್ ಕಾಲೇಜುಗಳ ರೀತಿ ಅಲ್ಲ. ಇದನ್ನು ಬೇರೆ ಸರ್ಕಾರಿ ಕಾಲೇಜುಗಳಿಗೆ ಅಥವಾ ವಿ.ಟಿ.ಯು.ಗೆ ಹೋಲಿಕೆ ಮಾಡುವುದಕ್ಕೆ ಹೋಗಬಾರದು it has got its unique identification. ಅದು ಇನ್ನೂ ಎತ್ತರಕ್ಕೆ ಬೆಳೆಯಬೇಕು ಆ ನಿಟ್ಟಿನಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ತಂದಿರುವಂತಹ ವಿಧೇಯಕವನ್ನು ನಾನು ಸ್ವಾಗತಿಸುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ವಿ.ಟಿ.ಯು. ಏನೇನೂ ಅಲ್ಲ ಎನ್ನುವ ಅರ್ಥದಲ್ಲಿ ಮಾತನಾಡುತ್ತಿದ್ದಾರೆ.

**ಡಾ||ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ನಾನು ವಿ.ಟಿ.ಯು ಬಗ್ಗೆ ಕೇವಲವಾಗಿ ಮಾತನಾಡಲಿಲ್ಲ. ಈ ಸಂಸ್ಥೆ ಎಲ್ಲದಕ್ಕೂ ಎತ್ತರದಲ್ಲಿದೆ. ಆ ಸಂಸ್ಥೆಗೆ ಯಾವುದೇ ಅಫಿಲಿಯೇಶನ್ ಕಾಲೇಜುಗಳು ಇಲ್ಲ. ಯಾವುದೂ constituent college ಮಾಡಬಾರದು. ಇದನ್ನೇ ಒಂದು ಪ್ರತ್ಯೇಕ ಸಂಸ್ಥೆಯನ್ನಾಗಿ ಬೆಳೆಸುವುದರ ಜೊತೆಗೆ ಇದಕ್ಕೆ ಹೆಚ್ಚಿನ ಅನುದಾನವನ್ನು ನೀಡಿ, ವಿಸ್ತಾರವಾಗಿರುವ ಜಾಗವನ್ನು ನೀಡಿ ಇದನ್ನು ಬಹಳ ವಿಶೇಷವಾಗಿ ಬೆಳೆಸಬೇಕೆಂದು ಹೇಳುತ್ತಾ, ಸದರಿ ವಿಧೇಯಕಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ ವಿಧೇಯಕ 2021ಅನ್ನು ನಾನು ಸ್ವಾಗತಿಸುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಬಹಳಷ್ಟು ವಿಚಾರಗಳನ್ನು ನಮ್ಮ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿಗೆ 1992ಕ್ಕೂ ಮೊದಲು ಬಹಳ ದೊಡ್ಡ ಹೆಸರನ್ನು ಗಳಿಸಿಕೊಂಡಿತ್ತು. ನಂತರ ಅಧಿಕಾರಕ್ಕೆ ಬಂದಂತಹ ಸರ್ಕಾರಗಳು ಇಲ್ಲಿಗೆ ಅಧ್ಯಾಪಕರುಗಳನ್ನು ನೇಮಕ ಮಾಡಲಿಲ್ಲ. ಹಿಂದೆ ಬಂದಂತಹ ಸರ್ಕಾರಗಳು ಇಲ್ಲಿಗೆ ಅಧ್ಯಾಪಕರುಗಳನ್ನು ನೇಮಕ ಮಾಡಿದ್ದರೆ, ಇದರಂತಹ ಉತ್ತಮವಾದ ಕಾಲೇಜು ಮತ್ತೊಂದು ಇರುತ್ತಿರಲಿಲ್ಲ. ಹಳ್ಳಿಗಾಡಿನಿಂದ ಬಂದಂತಹ ಬಡ ಮಕ್ಕಳು ಆರ್.ವಿ. ಇಂಜಿನಿಯರಿಂಗ್, ಕಾಲೇಜು, ಪಿ.ಇ.ಎಸ್. ಇಂಜಿನಿಯರಿಂಗ್ ಮತ್ತು ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜುಗಳಿಗಿಂದ ಮೊದಲು ಈ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು.

ಸನ್ಮಾನ್ಯ ಸಭಾಪತಿಯವರೇ, ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇರುವಂತಹ Mechanical, Electrical, Civil and Architecture ಈ ಎಲ್ಲಾ ವಿಭಾಗಗಳನ್ನು ಸೇರಿಸಿಕೊಂಡು ಈ ಯುನಿರ್ವಸಿಟಿಯನ್ನು ಮಾಡಲಾಗುತ್ತಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಹೇಳಿದಂತೆ ಬೆಂಗಳೂರಿನ ಕೆ.ಆರ್. ಸರ್ಕಲ್‌ನಲ್ಲಿರುವ ಈ ಕಟ್ಟಡಕ್ಕೆ ಈಗಾಗಲೇ ನೂರು ವರ್ಷಗಳಾಗಿವೆ. ಪಾರಂಪರಿಕ ಕಟ್ಟಡಗಳ ಸಾಲಿಗೆ ಈ ಕಟ್ಟಡಗಳು ಸೇರ್ಪಡೆಗೊಳ್ಳುತ್ತವೆ. ಈ ಕಟ್ಟಡಗಳನ್ನು ವಿರೂಪಗೊಳಿಸದೇ ಹಾಗೆಯೇ ಉಳಿಸಿಕೊಂಡು ಇದನ್ನು ಆಡಳಿತಾತ್ಮಕ ಕಟ್ಟಡವನ್ನಾಗಿ ಬಳಸಿಕೊಳ್ಳಬೇಕೆನ್ನುವುದು ನನ್ನ ಸಲಹೆಯಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಡಾ|| ಹೆಚ್.ನರಸಿಂಹಯ್ಯನವರು ಬಹಳ ಹೋರಾಟ ಮಾಡಿ ಸರ್ಕಾರದ ನೆರವನ್ನು ಪಡೆದುಕೊಂಡು ಸುಮಾರು 1500 ಎಕರೆ ಪ್ರದೇಶವನ್ನು ಪಡೆದುಕೊಂಡಿದ್ದರು. ನಂತರ ಬಂದಂತಹ ಸರ್ಕಾರಗಳು ಆ ಪ್ರದೇಶವನ್ನು ಬೇರೆಬೇರೆ ಕಾರಣಗಳಿಗಾಗಿ ಬಳಸಿಕೊಂಡಿವೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಪ್ರದೇಶದಲ್ಲಿ ಸುಮಾರು 50 ಎಕರೆ ಜಾಗವನ್ನು ಜ್ಞಾನಭಾರತಿ ಆವರಣದಲ್ಲಿ ಪಡೆದುಕೊಂಡು ಅಲ್ಲಿ ಈ ವಿಶ್ವವಿದ್ಯಾಲಯಕ್ಕೆ ಅಗತ್ಯ ಇರುವ ಕಟ್ಟಡವನ್ನು ಕಟ್ಟಬೇಕೆನ್ನುವುದು ನನ್ನ ಸಲಹೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, 2017ರಲ್ಲಿ Dr. Ambedkar Institute of Management ಪ್ರಾರಂಭವಾಗಿದೆ. ಇಲ್ಲಿಯವರೆಗೆ ಅದನ್ನು ಉದ್ಘಾಟನೆ ಮಾಡಿಲ್ಲ. ಬಹಳ ಸುಂದರವಾದ ಕಟ್ಟಡ ನಿರ್ಮಾಣವಾಗುತ್ತಿದೆ. ಈಗಾಗಲೇ ಉದ್ಘಾಟನೆಗೆ ದಿನಾಂಕವನ್ನು ನಿಗದಿಗೊಳಿಸಲಾಗಿತ್ತು. ಇದನ್ನು Indian Institute of Management ಮಾದರಿಯಲ್ಲಿ ಮಾಡುತ್ತೇವೆ ಎನ್ನುವ ಆಶ್ವಾಸನೆಗಳನ್ನು ಹಿಂದಿನ

ಸರ್ಕಾರಗಳು ನೀಡಿದ್ದವು. ಆದರೆ, ಅಲ್ಲಿಗೆ ಯಾವುದೇ ನೇಮಕಾತಿಗಳನ್ನು ಮಾಡಿಕೊಂಡಿಲ್ಲ. ಮಾನ್ಯ ಸಿ.ಎಂ.ಲಿಂಗಪ್ಪನವರು ಹೇಳಿದಂತೆ, ಡೀಮ್ಡ್ ಯುನಿರ್ವಸಿಟಿಯಿಂದ 1999-2000ನೇ ಇಸವಿಯಲ್ಲಿ ಪ್ರಾರಂಭವಾದ ಕಾಲೇಜುಗಳ ಪರಿಸ್ಥಿತಿ ಶೋಚನೀಯವಾಗಿದೆ. ಇಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಯವರು ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿವೆ. ಡೀಮ್ಡ್ ಯುನಿರ್ವಸಿಟಿಗಳಲ್ಲಿ ಪ್ರವೇಶದ ಸಂಖ್ಯೆಯನ್ನು ತಡೆಗಟ್ಟದೇ ಹೋದರೆ, ಯಾವ ಇಂಜಿನಿಯರಿಂಗ್ ಕಾಲೇಜುಗಳು ಉಳಿಯುವುದಿಲ್ಲ. ಇಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಯವರು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿಗೆ ತಲುಪುತ್ತಿದ್ದಾರೆ. ಆದ್ದರಿಂದ ಸರ್ಕಾರ ಅದ್ಯಾದೇಶವನ್ನು ಹೊರಡಿಸುವುದರ ಮೂಲಕ ಅಥವಾ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ಡೀಮ್ಡ್ ಯುನಿರ್ವಸಿಟಿಗಳನ್ನು ನಿಯಂತ್ರಿಸುವುದಕ್ಕೆ ಹೊಸ ಕಾನೂನುಗಳನ್ನು ತರದೇ ಹೋದರೆ, ಮುಂದಿನ ದಿನಗಳಲ್ಲಿ ಬಹಳ ಕಷ್ಟದ ದಿನಗಳನ್ನು ಕಾಣಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಶೇಕಡಾ 95ರಷ್ಟು ಡೀಮ್ಡ್ ಯುನಿರ್ವಸಿಟಿಗಳನ್ನು ಸ್ಥಾಪನೆ ಮಾಡಿರುವುದು ಭಾರತೀಯ ಜನತಾ ಪಕ್ಷದ ಸರ್ಕಾರವೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಎನ್.ಅಪ್ಪಾಜಿಗೌಡ:-** ಸನ್ಮಾನ್ಯ ಸಭಾಪತಿಯವರೇ, 2012-13ನೇ ಇಸವಿಯಲ್ಲಿ ಡೀಮ್ಡ್ ಯುನಿರ್ವಸಿಟಿಗಳು ಪ್ರಾರಂಭವಾದವು. ಈ ಡೀಮ್ಡ್ ಯುನಿರ್ವಸಿಟಿಗಳಿಗೆ ಕಡಿವಾಣ ಹಾಕದೇ ಹೋದರೆ, ಯಾವುದೇ ಇಂಜಿನಿಯರಿಂಗ್ ಕಾಲೇಜುಗಳು ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ತಂದಿರುವಂತಹ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ ವಿಧೇಯಕ 2021ಅನ್ನು ನಾವು ತುಂಬು ಹೃದಯದಿಂದ ಸ್ವಾಗತಿಸುತ್ತಿದೇನೆ. World Class City ಎನ್ನಿಸಿಕೊಳ್ಳುವ ಬೆಂಗಳೂರು IT Capital of India, College Capital of India ಆಗಿರುವ ಬೆಂಗಳೂರು ನಗರದ್ದ ಕಿರೀಟಕ್ಕೆ ಮತ್ತೊಂದು ಗರಿ ಸೇರಿಸಿದಂತಾಗಿದೆ. ಈ ವಿಧೇಯಕವನ್ನು ತಂದಿರುವ ಉದ್ದೇಶ ಒಳ್ಳೆಯದಾಗಿದೆ. ಈ ಕಾಲೇಜನ್ನು ಐ.ಐ.ಟಿ., ಎನ್.ಐ.ಟಿ. ಮತ್ತು ಐ.ಐ.ಎಂ. ಮಾದರಿಯಲ್ಲಿ ಉನ್ನತ್ತೀಕರಣಗೊಳಿಸುವಂತಹ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಎತ್ತರಕ್ಕೆ ಬೆಳೆಯಬೇಕು ಈ ನಾಡಿನ ಮಕ್ಕಳಿಗೆ ಗುಣಾತ್ಮಕವಾದ ತಾಂತ್ರಿಕ ಶಿಕ್ಷಣ ದೊರೆಯಬೇಕು ಎನ್ನುವ ಸದುದ್ದೇಶದಿಂದ ಈ ವಿಧೇಯಕವನ್ನು ತರಲಾಗಿದೆ. ಇದನ್ನು ನಾನು ಸ್ವಾಗತಿಸುತ್ತಿದ್ದೇನೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಪ್ರಸ್ತಾವಿಕವಾಗಿ ಮಾತನಾಡುತ್ತಿದ್ದ ಸಂದರ್ಭದಲ್ಲಿ Indian Institute of Information Technology

ಪರಿಕಲ್ಪನೆಯನ್ನು ಬಲಗೊಳಿಸಿದವರು ಮಾನ್ಯ ಸದ್ ಗೋಪಾಲನ್‌ರವರು ನಾನು ಐ.ಟಿ., ಬಿ.ಟಿ. ಮಂತ್ರಿಯಾಗಿದ್ದ ಸಂದರ್ಭದಲ್ಲಿ ನನ್ನ ಜೊತೆಗೆ ನಿಕಟವಾಗಿರುವ ಸಂಬಂಧವನ್ನು ಹೊಂದಿದ್ದರು. ಅವರ ಬಗ್ಗೆ ನನಗೆ ಅಪಾರವಾಗಿರುವ ಗೌರವವಿದೆ. ಅವರ ಅನುಭವ ಮತ್ತು ಅವರ ವಿದ್ವತ್ತುಗಳನ್ನು ನಿಜವಾಗಿಯೂ ನಾವೆಲ್ಲರೂ ಮೆಚ್ಚಿಕೊಳ್ಳಬೇಕಾಗಿದೆ. ಅವರು ಉನ್ನತ ಶಿಕ್ಷಣ ಸಚಿವರಿಗೆ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ ಬಗ್ಗೆ ಹೇಳಿದ್ದಾರೆಂದರೆ, ನಾನು ಯಾವುದೇ ರೀತಿಯಲ್ಲಿಯೂ ಯೋಚನೆ ಮಾಡದೇ ಈ ವಿಧೇಯಕವನ್ನು ಒಪ್ಪಿಕೊಳ್ಳುತ್ತಿದ್ದೇನೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

(ಮುಂದು)

(1270) 22.12.2021 5.10 ಪಿಕೆ:ವಿಕೆ

**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಶ್ವವಿದ್ಯಾಲಯದಲ್ಲಿ ಶೇಕಡ 75 ರಷ್ಟು ನಮ್ಮ ರಾಜ್ಯದ ಮಕ್ಕಳಿಗೆ ಮತ್ತು ಶೇಕಡ 25 ರಷ್ಟು ಸೀಟು ಇತರ ರಾಜ್ಯದ ಮಕ್ಕಳಿಗೆ ಎಂದು ಹೇಳುತ್ತಿದ್ದೀರಿ. ಈ ರೀತಿ ಏಕೆ ಮಾಡುತ್ತಿದ್ದೀರಿ? ಅತ್ಯುತ್ತಮ ಶಿಕ್ಷಣ ನೀಡುವಂತಹ, ಕರ್ನಾಟಕ ಸರ್ಕಾರ ಬಹಳಷ್ಟು ಶ್ರಮವಹಿಸಿ, ಕಷ್ಟಪಟ್ಟು ಇದನ್ನು ಐಐಟಿ, ಎನ್‌ಐಟಿ ಮಾದರಿಯಲ್ಲಿ ಉನ್ನತೀಕರಣ ಮಾಡುತ್ತಿರುವ ಈ ಶಿಕ್ಷಣ ಸಂಸ್ಥೆಯಲ್ಲಿ ಶೇಕಡ 100 ರಷ್ಟು ನಮ್ಮ ಕರ್ನಾಟಕದ ಮಕ್ಕಳಿಗೆ ಮೀಸಲಿಡಬೇಕು ಎನ್ನುವುದ ನನ್ನ ಸ್ಪಷ್ಟ ಅಭಿಪ್ರಾಯ. ರಾಜ್ಯದ ಹೊರಗಿನವರಿಗೆ ಕೊಡುವ ಅವಶ್ಯಕತೆ ಏನಿದೆ? ಐಟಿ ವಿಚಾರದಲ್ಲಿ ಕರ್ನಾಟಕಕ್ಕೆ ವಿಶೇಷವಾದ ಸ್ಥಾನ ಇದೆ. ಎಕ್ಸ್‌ಪೋರ್ಟ್ ವಿಷಯಕ್ಕೆ ಬಂದರೆ 3ನೇ ಒಂದರಷ್ಟು ಕಂಪನಿಗಳು ನಮ್ಮ ಬೆಂಗಳೂರಿನಲ್ಲಿವೆ. ಇಂಜಿನಿಯರ್‌ಗಳನ್ನು ತಯಾರು ಮಾಡುವುದಕ್ಕೆ ನೂರಕ್ಕೆ ನೂರು ಸೀಟುಗಳನ್ನು ನಮ್ಮ ರಾಜ್ಯದವರಿಗೆ ಒದಗಿಸಿದರೆ ಬಹಳ ಒಳ್ಳೆಯ ಕೆಲಸ ಮಾಡಿದ ಹಾಗೆ ಆಗುತ್ತದೆ ಮತ್ತು ನಿಮಗೂ ಒಳ್ಳೆಯ ಹೆಸರು ಬರುತ್ತದೆ. ಮಾನ್ಯ ಅಪ್ಪಾಜಿ ಗೌಡರು ಹೇಳಿದ ಹಾಗೆ, ಇದಕ್ಕೆ 50 ಎಕರೆ ಜಮೀನು ಬೇಕು. ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಸಾವಿರಾರು ಎಕರೆ ಜಮೀನು ಇದೆ. ಮತ್ತೆ ಬೇರೆ ಕಡೆ ಹೋಗಿ ಜಮೀನು ಖರೀದಿಸುವ ಕೆಲಸ ಮಾಡಬೇಡಿ. ಈ ಕ್ಯಾಂಪಸ್‌ನಲ್ಲೇ ಜಾಗವನ್ನು ತೆಗೆದುಕೊಂಡು ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಡೈರೆಕ್ಟರ್‌ರವರಿಗೆ age limit 70 ವರ್ಷ ಇಟ್ಟಿದೀರಿ. ವೈಸ್ ಚಾನ್ಸಲರ್‌ರವರಿಗೆ 67 ವರ್ಷ ಇಟ್ಟಿದ್ದೀರಿ. ಇದರ ಸಮಾನವಾಗಿಯೇ ಮಾಡಿ. ಯಾರನ್ನೋ ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಮಾಡಬೇಡಿ. ವೈಸ್ ಚಾನ್ಸಲರ್‌ಗೇನು upper limit ಇದೆ, ಅದನ್ನೇ ಅಳವಡಿಸಿಕೊಳ್ಳಬೇಕು. 70 ವರ್ಷವೆಂದೇನು ವಿಚಾರ ಮಾಡಿದ್ದೀರೋ ಅದು ಸರಿಯಾದುದಲ್ಲ. ಯಾವುದೇ ಸ್ಥಿತಿಯಲ್ಲಿ ಕರ್ನಾಟಕ ರಾಜ್ಯದ ಮಕ್ಕಳಿಗೆ ಶೇಕಡ ನೂರರಷ್ಟು ಸೀಟು ಕೊಡುವಂತಹ ಕೆಲಸ ಮಾಡಿ. ಈ ವಿಧೇಯಕ ಟೆಕ್ನಾಲಜಿಯಲ್ಲಿ ಬಹಳಷ್ಟು ಉಪಯುಕ್ತವಾಗುವಂಥದ್ದು, ಹೊಸ ಮೈಲಿಗಲ್ಲು ಹೊಂದುವ ದೃಷ್ಟಿಕೋನವನ್ನು ಹೊಂದಿದೆ. Men and material ಮತ್ತು ಹಣ ಒದಗಿಸುವ ವಿಚಾರದಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದೂ ಹಿಂದೇಟು ಹಾಕಲಾರದೆ, ಐಐಟಿ ಮತ್ತು ಎನ್‌ಐಟಿಗೆ ಸರಿಸಮಾನವಾದಂತಹ ಸಂಸ್ಥೆಯಾಗಿ ಹೊರಹೊಮ್ಮುವ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ಸಭಾಪತಿಗಳ ಮುಖಾಂತರ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜನ್ನು ಐಐಟಿ ಯ ಮಾದರಿಯಲ್ಲಿ ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಪ್ರಸ್ತಾವನೆ ಒಳ್ಳೆಯ ಪ್ರಸ್ತಾವನೆಯಾಗಿದೆ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಯುನಿವರ್ಸಿಟಿ ಕಾಲೇಜಿನ ಬಗ್ಗೆ ಈಗಾಗಲೇ ಮಾನ್ಯ ನಾರಾಯಣಸ್ವಾಮಿಯವರು ಸಾಕಷ್ಟು ಹೇಳಿದ್ದಾರೆ. ಆದರೆ ನನ್ನ ಪ್ರಕಾರ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಯುನಿವರ್ಸಿಟಿ ಕಾಲೇಜಿನ ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಹೆಸರನ್ನು ಗಳಿಸಿದ್ದಾರೆ ಮತ್ತು ಇವತ್ತು ಕೂಡ ಒಳ್ಳೆಯ ಹೆಸರು ಇದೆ. ಸರ್ಕಾರ ಇದನ್ನು ಉನ್ನತೀಕರಿಸಿ ಐಐಟಿ ಮಾದರಿ ಮಾಡುತ್ತೇವೆ ಎಂದು ಹೇಳುವುದು ಸ್ವಾಗತಕರವಾದುದು. ಆದರೆ, ವಿಶ್ವವಿದ್ಯಾಲಯ ಮಾಡುವ proposal ಏನಿದೆ, ಇದು "ನೀಟ್" ಅಡಿಯಲ್ಲಿ ಬರುತ್ತದೆಯೋ ಅಥವಾ ಇದನ್ನು ಸಪರೇಟ್ ಆಗಿ ಐಐಟಿ ಮತ್ತು ಐಐಎಂ ಗಳಲ್ಲಿ ಹೇಗೆ ಅಡ್ಮೀಷನ್ ಮಾಡುತ್ತಾರೋ ಆ ರೀತಿ ಮಾಡುತ್ತೀರಾ? ಅಥವಾ ಮತ್ತೆ ಇದನ್ನು "ನೀಟ್"ನ ಅಡಿಯಲ್ಲೇ ಬರುವ ಹಾಗೆ ಮಾಡುತ್ತೀರಾ ಎಂಬ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ತಾವು, ಈ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಯುನಿವರ್ಸಿಟಿ ಕಾಲೇಜಿಗೆ ರೂ. 40 ಕೋಟಿ ಇಡುತ್ತಿದ್ದೇವೆ ಎಂದು ಹೇಳಿದಿರಿ. ಆದರೆ ತಾವು, ಇದನ್ನು ಉನ್ನತೀಕರಣ ಮಾಡಿ, ಐಐಟಿ ಮಾದರಿ ಮಾಡಿದರೆ ಇದಕ್ಕೆ ಎಷ್ಟು ಹಣ ಬೇಕಾಗುತ್ತದೆ? ಐಐಎಂ ಗೆ ರೂ. 1500 ಕೋಟಿ ಬಜೆಟ್ ಇದೆ ಎಂದು ಹೇಳಿದಿರಿ. ಇದಕ್ಕೆ ಬಜೆಟ್ provision ಇದೆಯೇ? ಅಥವಾ ಆಯವ್ಯಯದಲ್ಲಿ ಇದನ್ನು ತರುತ್ತೀರಾ? ಇದಕ್ಕೆ ಎಷ್ಟು ಮೊತ್ತವನ್ನು ಖರ್ಚು ಮಾಡುತ್ತೀರಿ? ಅದಕ್ಕೆ ವ್ಯವಸ್ಥೆ ಏನಾದರೂ ಮಾಡಿದ್ದೀರಾ ಎನ್ನುವುದನ್ನು ಹೇಳಬೇಕು. ಇದರ ಜೊತೆಗೆ, ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ಕೆ.ಆರ್. ಸರ್ಕಲ್‌ನಲ್ಲಿದೆಯೋ ಅದು heritage building ಆಗಿದೆ. ಅದನ್ನು ತಾವು ಬದಲು ಮಾಡಬಾರದು. ಹಿಂದೆ ಯುನಿವರ್ಸಿಟಿ ಕಾಲೇಜು ನಡೆಯುತ್ತಿರಬೇಕಾದರೆ ಅದನ್ನು ಜ್ಞಾನಭಾರತಿಗೆ ಸ್ಥಳಾಂತರ ಮಾಡುವ proposal ಇತ್ತು. ಅಲುಮ್ನಿಯವರು, ರೂ. 100 ಕೋಟಿ ವೆಚ್ಚ ಮಾಡಿ ಆಧುನೀಕರಣ ಮಾಡುವುದಕ್ಕೆ proposal ಕೊಟ್ಟಿದ್ದಾರೆ. ಅಲ್ಲೇನು mechanical department ಇದೆ, ಅದನ್ನು ಸ್ಥಳಾಂತರ ಮಾಡಬೇಕು ಎಂದು proposal ಇತ್ತು; ಆದರೆ ಅದು ಅಲ್ಲಿಗೆ ನಿಂತಿದೆ. ಹಾಗಾದರೆ ಈಗ ಇದರ ಪರಿಸ್ಥಿತಿ ಏನಾಗುತ್ತದೆ? ಈಗ್ಯಾರು faculty ಗಳು teach ಮಾಡುತ್ತಿದ್ದಾರೋ ಅವರು ಅಲ್ಲೇ continue ಆಗುತ್ತಾರೋ ಅಥವಾ ಹೊಸದಾಗಿ ಐಐಟಿ, ಐಐಎಂ ಗ್ರೇಡ್‌ಗೆ ಬೇಕಾಗುವಂತಹ ಸಿಬ್ಬಂದಿಯನ್ನು ತೆಗೆದುಕೊಳ್ಳುತ್ತೀರಾ ಎಂಬ ಬಗ್ಗೆ ತಿಳಿಸಬೇಕು. ವಿಶೇಷವಾಗಿ, reservation is open for all classes of persons ಎಂದು ಹೇಳಿದ್ದೀರಿ. ಅದರಲ್ಲೂ, Scheduled Cast, Scheduled Tribes, Backward Classes,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Nominees of Central and State ಅವರುಗಳಿಗೆ, Defense ಅವರಿಗೆ, Physically Handicaps ಗೆ, ಮಹಿಳೆಯರಿಗೆ, transgender ಮತ್ತು ಸ್ಪೋರ್ಟ್ಸ್‌ಗೆಂದು ಕೊಟ್ಟಿದ್ದೀರಿ. ವಿಶೇಷವಾಗಿ ಸ್ಪೋರ್ಟ್ಸ್‌ಗೆ ತಾವು ಹೆಚ್ಚಿನ ಆದ್ಯತೆ ಕೊಡಬೇಕು ಎನ್ನುವುದು ನನ್ನ ಮನವಿಯಾಗಿದೆ. ಮೊದಲು ಅದು ಕಾಲೇಜಿದ್ದಾಗ ನಾವು ಕ್ರಿಕೆಟ್ ಆಡಬೇಕಾದರೆ ಒಳ್ಳೊಳ್ಳೆ ಟೀಮ್‌ಗಳಿತ್ತು. ಅದು ತಮಗೂ ಗೊತ್ತಿದೆ. ಅಭಿರಾಮ್ ಆಗಲಿ, ಶ್ರೀನಿವಾಸ್ ಪ್ರಸಾದ್ ಆಗಲಿ ಮತ್ತು ಇವತ್ತಿನ ವೈಸ್ ಚಾನ್ಸಲರ್ ಆಗಿರುವ ವೇಣುಗೋಪಾಲ್‌ರವರು ನಮ್ಮ ಜೊತೆ ಕ್ರಿಕೆಟ್ ಆಡಿದ್ದಾರೆ. ಆದರೆ ಇವತ್ತು ಸ್ಪೋರ್ಟ್ಸ್‌ಗೆ ಆದ್ಯತೆ ಕೊಡುತ್ತಿಲ್ಲ. ಇದೊಂದೇ ವಿಶ್ವವಿದ್ಯಾಲಯ ಅಲ್ಲ, ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕ್ರೀಡೆಗೆ ಪ್ರೋತ್ಸಾಹ ಸಿಗುತ್ತಿಲ್ಲ. ಜಾಗವೂ ಕಡಿಮೆ ಆಗುತ್ತಿದೆ. ನಾನು ಕೇವಲ ಕ್ರಿಕೆಟ್ ಬಗ್ಗೆ ಹೇಳುತ್ತಿಲ್ಲ. ಟೆನ್ನಿಸ್ ಆಗಬಹುದು, ಬ್ಯಾಡ್‌ಮಿಂಟನ್ ಆಗಬಹುದು. ಈ ಕ್ರೀಡೆಗಳನ್ನು ಆಡುವುದಕ್ಕೂ ಅವಕಾಶ ಮಾಡಿಕೊಡಬೇಕು. ತಾವು ಇದನ್ನು ಜ್ಞಾನ ಭಾರತಿಗೆ ಶಿಫ್ಟ್ ಮಾಡುವ ಬದಲು, ಐಐಎಂ ಗೆ ದೂರ ಬೇರೆ ಜಾಗ ಕೊಟ್ಟಿದ್ದೀರೋ, Dr. B.R. Ambedkar School of Economics University ಗೆ ಸಪರೇಟ್ ಜಾಗ ಕೊಟ್ಟಿದ್ದೀರೋ ಅದೇರೀತಿ ಇದಕ್ಕೆ ಸಪರೇಟ್ ಆಗಿ ಜಾಗ ಗುರುತಿಸಿ ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

Board of Governors ನಲ್ಲಿ ವಿಶೇಷವಾಗಿ ಎಂಎಲ್‌ಎ ಮತ್ತು ಎಂಎಲ್‌ಸಿ ಗಳನ್ನು include ಮಾಡಿಲ್ಲ. ಈಗ ನಾನು Bangalore University Academic Council ನಲ್ಲಿದ್ದೇನೆ. ಅದೇರೀತಿ ಇದರಲ್ಲೂ ಎಂಎಲ್‌ಎ ಮತ್ತು ಎಂಎಲ್‌ಸಿ ಗಳಿಗೆ ಆದ್ಯತೆ ಕೊಡಬೇಕು. ಮತ್ತೆ Chairperson ಗೆ 4 ವರ್ಷದ ಅವಧಿ ಕೊಟ್ಟಿದ್ದಾರೆ. ಆದರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕಡಿಮೆ ಅವಧಿ ಇರುತ್ತದೆ.

**ಸಭಾಪತಿಯವರು:-** ಎಲ್ಲಾ ಕಡೆ 4 ವರ್ಷವೇ ಇದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಆದರೆ Board of Directors ಗೆ 3 ವರ್ಷ ಮಾಡಿದ್ದೀರಿ. Chairperson ಗೆ 4 ವರ್ಷವೆಂದು ಮಾಡಿದ್ದೀರಿ. ಎಲ್ಲರಿಗೂ ಒಂದೇ ರೀತಿ ಮಾಡಬೇಕು. Academic Senate ನಲ್ಲಿ ಕೂಡ seniority ಮೇಲೆ ಇಬ್ಬರನ್ನು ನೇಮಕಾತಿ ಮಾಡುತ್ತೀರಿ. ಮತ್ತೆ, ಹೊಸದಾಗಿ ಬಂದವರನ್ನು ಮಾಡುತ್ತೀರಿ. ಈ ರೀತಿ ಏಕೆ distinguish ಮಾಡುತ್ತಿದ್ದೀರಿ. ತಾವು 4 ಜನರನ್ನೂ ನೇಮಕ ಮಾಡಿ. ಸೀನಿಯಾರಿಟಿಯಲ್ಲಿ distinguish ಮಾಡುವುದು ಸರಿಯಲ್ಲ ಎಂದು ನಾನು ಭಾವಿಸುತ್ತೇನೆ. ಸೀಟ್ ಅಲಾಟ್‌ಮೆಂಟ್ ಶೇಕಡ ನೂರರಷ್ಟು ಕರ್ನಾಟಕದವರಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಈಗ all India level ಬರುವುದಕ್ಕೆ IIMs ಯಲ್ಲಿ ಸಾಕಷ್ಟು ಅವಕಾಶ ಇದೆ. ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಅವಕಾಶವಾಗಲು ಶೇಕಡ ನೂರರಷ್ಟು ಅವರಿಗೆ ಮೀಸಲಿಡಬೇಕೆಂದು ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ:ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, ಈ ಸದನದ ಒಳಗಡೆ ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯನವರ ಭಾವಚಿತ್ರ ಇದೆ. ಅವರು ತನು, ಮನ, ಧನ ದೇಶಕ್ಕಾಗಿ ಬದುಕಿದವರು. ಈ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ ವಿಧೇಯಕ 2021 ಅನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಮಾನ್ಯ ಅಶ್ವತ್ಥನಾರಾಯಣರವರು ಗ್ರಾಮೀಣ ಭಾಗದ ಬಗ್ಗೆ ಹೊಂದಿರುವ ಬದ್ದತೆಗೆ ವಿಶ್ವೇಶ್ವರಯ್ಯನವರು ಹುಟ್ಟೂರಿನ ಸಮೀಪ ಮುದ್ದೇನಹಳ್ಳಿ ಸಮೀಪ ಇರುವಂತಹ ವಿಟಿಯೂನಲ್ಲಿ ಇತ್ತೀಚಿಗೆ ಕೋವಿಡ್ ಸಂದರ್ಭದ್ದಲ್ಲಿ MBA ಸೀಟುಗಳಿಗೆ ಹಳ್ಳಿಯ ಮಕ್ಕಳುಗಳಲ್ಲಿ ತುಂಬಾ demand create ಆಯಿತು. ಅವರು ವಿಸಿಗೆ ಹೇಳಿ, ಅವರ ಇಡೀ academic department ಏನಿದೆ, ಅವರು ತಕ್ಷಣ 25 ಸೀಟುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಿಕೊಟ್ಟರು.

(ಮುಂದು)

1271/22-12-2021/5-20/ಬಿಕೆಪಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಡಾ||ತೇಜಶ್ವಿನಿ ಗೌಡ(ಮುಂದ):-**

ಹೀಗಾಗಿ, ನಾನು ಅವರಿಗೆ ವಿದ್ಯಾರ್ಥಿಗಳ ಪರವಾಗಿ ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಇದು ಒಂದು iconic building ನಾವು ಏನು ಬೆಂಗಳೂರಿನಲ್ಲಿ ನಮ್ಮ ಜೀವನದ ಅವಿಭಾಜ್ಯ ಅಂಗ. ಒಂದು ಕಡೆ ಭಾರತೀಯ ಸರ್ವೆ ಇಲಾಖೆ wonderful architectural building ಇದೆ. ಮತ್ತೊಂದು ಕಡೆ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜು ಇದೆ. ಈ ಕಡೆ ಸರ್.ಎಂ. ವಿಶ್ವೇಶ್ವರಯ್ಯ ಕಾಲೇಜಿನ ಬಿಲ್ಡಿಂಗ್ ಏನಿದೆ, ಅದು ನಮ್ಮ ಜೀವನದ ವ್ಯಕ್ತಿತ್ವದ ಭಾಗವಾಗಿ ಹೋಗಿದೆ. ಈ brand ಮುಖ್ಯವಾಗುತ್ತದೆ. ಸರ್.ಎಂ. ವಿಶ್ವೇಶ್ವರಯ್ಯರವರ ಹುಟ್ಟೂರಿನಲ್ಲಿ ಕುಡಿಯಲಿಕ್ಕೆ ನೀರು ಇಲ್ಲ. ಅದು ತುಂಬಾ ಬರಗಾಲ ಪೀಡಿತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇದೆ. ಭಾರತದಾದ್ಯಂತ ಕರ್ನಾಟಕ ರಾಜ್ಯದಲ್ಲಿ ಜೀವನದಲ್ಲಿ ಅವರ ಕೊಡುಗೆ ಇಲ್ಲದ ಜಾಗವೇ ಇಲ್ಲ. ಅಂತಹ ಮಹನೀಯರ ಹೆಸರಿನಲ್ಲಿ ಕರ್ನಾಟಕ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಎಸ್.ವಿ. ರಂಗನಾಥ್‌ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿದ್ದೀರಿ. ಅನೇಕ ಸನ್ಮಿತ್ರರು ಆ ಭಾಗದ ಅನೇಕ ಆತಂಕಗಳನ್ನು ವ್ಯಕ್ತ ಮಾಡಿದರು. ನಾವು ಅದನ್ನು ಕಾಳಜಿಯಿಂದ ನೋಡುತ್ತೇವೆ. ೧೦ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೀರಿ. ೫೦ ಕೋಟ್ಟಿ ರೂಪಾಯಿಗಳನ್ನು ಮುಂದಿನ ೧೦ ವರ್ಷಗಳ ವಿತ್ತೀಯ ಕ್ರಿಯಾ ಯೋಜನೆಯನ್ನು ನಮ್ಮ ಇಲಾಖೆ ಮಾಡಿದೆ. ೫೦-೧೦೦ ಕೋಟಿ ರೂಪಾಯಿಗಳಾಗುತ್ತದೆ. ತಮ್ಮ ಸಹಕಾರ ಇರುವುದರಿಂದ ಖಂಡಿತವಾಗಿಯೂ ಆಗುತ್ತದೆ. ತಡವಾಗಿದೆ. Better late than never ಎಂದು ಹೇಳಿ, ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ಅಜರಾಮಗೊಳಿಸಿ, ಇದು ಸರ್ಕಾರಿ ಸಂಸ್ಥೆಯಾಗಿದೆ. ಇದು ನಮಗೆ ಪ್ರೇರಣಾದಾಯಿಯಾಗಿರುತ್ತದೆ. ಇಂತಹ ಹೆಚ್ಚು ಹೆಚ್ಚು ಸಂಸ್ಥೆಗಳು ಬರಬೇಕು. ಅದಕ್ಕೆ ಬೇಕಾದಂತಹ ಎಲ್ಲಾ ಅನುಕೂಲಗಳನ್ನು ಸರ್ಕಾರ ಕಲ್ಪಿಸಿಕೊಡಬೇಕೆಂದು ಹೇಳಿ, ನಾನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮತ್ತೊಮ್ಮೆ ಈ ಬಿಲ್ ಅನ್ನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ. ಮಾನ್ಯ ಸಚಿವರಾದ ಡಾ ಅಶ್ವಥ್ ನಾರಾಯಣರವರಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಉದ್ದೇಶ ಬಹಳ ಚೆನ್ನಾಗಿದೆ. ತಾವು ಏನೋ ಮಾಡಬೇಕೆಂದು ಹೊರಟಿದ್ದೀರಿ. ಆದರೆ, ದುಡ್ಡು ಇಲ್ಲ. ಇಂಜಿನೀಯರಿಂಗ್ ಕಾಲೇಜಿಗೆ ಒಂದು ತಿಂಗಳಾದರೂ ಬಿಲ್ ಕಟ್ಟಿಲ್ಲವೆಂದರೆ ನೀವು ಇನ್ನೊಂದು ಹೊಸ ಬಿಲ್ ಮಾಡುತ್ತೇನೆಂದರೆ ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು ಎಂದು ಪತ್ರಿಕೆಯವರು ಬರೆಯುತ್ತಾರೆ. ದಯವಿಟ್ಟು ತಾವು ಆರ್ಥಿಕ ಇಲಾಖೆಗೆ ಹೇಳಿ, ನಿಮ್ಮ ಉದ್ದೇಶ ಚೆನ್ನಾಗಿದ್ದು, ಒಳೆಯ ಕೆಲಸ ಮಾಡಿಕೊಂಡು ಬರುತ್ತಿದ್ದೀರಿ. I appriciate it. ನಾನು ಸಹ ಇಂಜಿನೀಯರಿಂಗ್ ಕಾಲೇಜನ್ನು ನಡೆಸುತ್ತಿದ್ದೇನೆ. ಡೋನೇಷನ್ ಇಲ್ಲ, ೫೭ ಕೋಟಿ ರೂಪಾಯಿಗಳ ಸಾಲ ಇದೆ. ಏಕೆಂದರೆ, ಬಂದವರಿಗೆಲ್ಲಾ ಪುಕ್ಕಸಟ್ಟೆ ಕೊಡುತ್ತೇವೆ. ಜಾತಿಯಿಲ್ಲ. ೨೦ ವರ್ಷಗಳ ಕಾಲ ನೀವೇ ಮಂತ್ರಿ ಇದ್ದೀರಿ. ನಾಳೆ ಕಳುಹಿಸಿ ಚೆಕ್ ಮಾಡಿ. ಶೇಕಡ ಐವತ್ತಕ್ಕಿಂತ ಕಡಿಮೆ ರಿಸಲ್ಟ್ ಬಂದೇ ಇಲ್ಲ. ಏಕೆಂದರೆ ಅಲ್ಲಿ ಅಧ್ಯಾಪಕರುಗಳ ಪ್ಯಾಕಲ್ಟಿಯಲ್ಲಿ ಜಾತಿ ನೋಡಿಲ್ಲ. ಮೊದಲು ಪ್ರಾಂಶುಪಾಲರು ದಲಿತರು. ಎರಡನೇ ಪ್ರಾಂಶುಪಾಲರು ಲಿಂಗಾಯಿತರು, ಮೂರನೇ ಪ್ರಾಂಶುಪಾಲರು ಬ್ರಾಹ್ಮಣರು. ಆದ್ದರಿಂದ, ಆ ಕಾಲೇಜನ್ನು ನಡೆಸಲಿಕ್ಕೆ ಆ ಕಾಲೇಜಿನವರಿಗೆ ಬಿಟ್ಟಿದ್ದೇವೆ. ಈ ಡೀಮ್ಡ್ ಕಾಲೇಜುಗಳು ಬಂದಮೇಲೆ ಸುಮಾರು ವಿದ್ಯಾರ್ಥಿಗಳು ೩೦-೪೦ ಸಾವಿರ ರೂಪಾಯಿಗಳ ಫೀ ಕಟ್ಟಲು ಸಾಧ್ಯವಾಗದೇ ವಿಷ ಕುಡಿದು ಸತ್ತು ಹೋಗಿದ್ದಾರೆ. ದಯವಿಟ್ಟು ಅದರ ಮೇಲೆ ಏನಾದರೂ ಕಡಿವಾಣ ಹಾಕುವಂತಹ ಕೆಲಸ ಮಾಡಿ. ಇದು ಬಿಲ್ಡಿಂಗ್ ಏನು ಇದೆ, ಅದನ್ನು ಹಾಗೆಯೇ ಇಡಿ. ಅದು ಒಂದು ರೀತಿಯಲ್ಲಿ ಇದೆ. ಅದನ್ನು ನೋಡಿದರೆ ಭಯವಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ರಾಥೋಡ್ ರವರು ಹೇಳಿದ ಹಾಗೆ ಸೆಂಟ್ರಲ್‌ನವರ NEET ಗೆ ಇದನ್ನು ಬಿಡಬೇಡಿ. ಶೇಕಡ 100 ರಷ್ಟು ಕರ್ನಾಟಕದ ಮಕ್ಕಳು ಓದಲಿಕ್ಕೆ ಶಕ್ತಿ ಇದೆ. ನಮ್ಮ ಹುಡುಗರಿಗೆ ಶಿಕ್ಷಣ ಸಿಕ್ಕಿದರೆ ತುಂಬಾ ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಕಾಲೇಜಿನಲ್ಲಿ ಓದಿದಂತಹ ೧೦ ಸಾವಿರ ಮಕ್ಕಳು ಹೊರಗಡೆ ಇದ್ದು. ಲಕ್ಷಾಂತರ ರೂಪಾಯಿಗಳನ್ನು ದುಡಿಯುತ್ತಿದ್ದಾರೆ. ಇದನ್ನು ನೋಡಿ ನಮಗ್ಗೆ ಸಂತೋಷವಾಗುತ್ತದೆ. ನಮ್ಮಲ್ಲಿ ಆ ಒಂದು ಚೈತನ್ಯ ಇದೆ. ಅವರಿಗೆ ಈ ಒಂದು ರೀತಿಯಲ್ಲಿ ಪ್ರೋತ್ಸಾಹ ಸಿಕ್ಕಿದರೆ ಖಂಡಿತವಾಗಿಯೂ ಆಗುತ್ತದೆ. ಇದನ್ನು ನೀವು ಮಾಡಿ ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ)-** ಮಾನ್ಯ ಸಭಾಪತಿಯವರೆ, ನಾನು ಒಂದೇ ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಇದನ್ನು ವಿಶ್ವೇಶ್ವರಯ್ಯ ಇಂಜನೀಯರಿಂಗ್ ಕಾಲೇಜು

ವಿಶ್ವವಿದ್ಯಾನಿಲಯ ವಿಧೇಯಕ ಎಂದು ಹೇಳುತ್ತೀರಿ. VTU (*Visvesvaraya Technological University*). ದಯಮಾಡಿ ಡಾ|| ಸರ್. ಎಂ. ವಿಶ್ವೇಶ್ವರಯ್ಯ ಎಂದು ಹಾಕಿ. ಎರಡು ಸಹ ವಿಶ್ವೇಶ್ವರಯ್ಯ ವಿಶ್ವೇಶ್ವರಯ್ಯ ಎಂದಾಗುತ್ತದೆ. ಮತ್ತೆ, ಅದಕ್ಕೊಂದು ಬಿಲ್ ಬೇಡ. ಎರಡನೆಯದಾಗಿ ನೀವು CET, NEET ಮೂಲಕ ಮಾಡುವುದಾದರೆ ಇದಕ್ಕೆ ವಿಶ್ವವಿದ್ಯಾನಿಲಯವೇ ಬೇಕಾಗುವುದಿಲ್ಲ. ನೀವು ಐಐಟಿ ಮಾದರಿಯಲ್ಲಿ ಮಾಡುವುದಾದರೆ ನಿಮ್ಮದೇ admission pattern ಬೇರೆ ಇರಬೇಕು. ಮೂರನೆಯದಾಗಿ, ಮತ್ತು ಕಡೆಯದಾಗಿ Cluster University ಯನ್ನು ಮೈಸೂರು ಮಹಾರಾಣಿ ಕಾಲೇಜು, ಮಂಡ್ಯ ಮಹಿಳಾ ಕಾಲೇಜನ್ನು ನೋಡಿದ್ದೇವೆ. ಹಳೆ ಕಾಲೇಜುಗಳು ಇದ್ದಾಗಲೇ ಚೆನ್ನಾಗಿತ್ತು. ನೀವು ಯುನಿವರ್ಸಿಟಿ ಮಾಡಿದ ಮೇಲೆ ಬೀಗ ಹಾಕುವುದಷ್ಟೆ. ಪಿ.ಜಿ ಕೋರ್ಸ್‌ಗಳಿಗೆ ಈಗ ಪಾಠ ಮಾಡುವರೇ ಇಲ್ಲ. ನೀವು ಯುನಿವರ್ಸಿಟಿ ಎಂದ ತಕ್ಷಣ ಈ ಉಪನ್ಯಾಸಕರುಗಳು ನಾಳೆಯೇ ಹೊರಟು ಬಿಡುತ್ತಾರೆ. ಅವರು ಸರ್ಕಾರದ ಬೇರೆ ಇಲಾಖೆಗಳಿಗೆ ಹೊರಟುಬಿಡುತ್ತಾರೆ. ನೀವು faculty ಕೊಡಬೇಕಲ್ಲವೇ ಅದು ಬಹಳ ದೊಡ್ಡ ಅನಾಹುತ. ನೀವು ಕಾಲೇಜನ್ನೇ ಉಳಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ಈಗ ಮೈಸೂರು ಮಹಾರಾಣಿ ಕಾಲೇಜು, ಮಂಡ್ಯ ಮಹಿಳಾ ಕಾಲೇಜು Cluster University ಆಗಿ ಹಾಳಾಗಿ ಹೋಯಿತು. ನೀವು ಹೇಳಿದ ಯುನಿವರ್ಸಿಟಿಯ ಏನೂ ಸ್ವರೂಪ ಉಳಿದಿಲ್ಲ. ದಯಮಾಡಿ, ಇದು ಹಾಗೆ ಆಗಬಾರದು, ನಮಸ್ಕಾರ.

ಮತ್ತೆ, ನಿರ್ದೇಶಕರಿಗೆ ನೀವು ೪ ವರ್ಷ ಅವಕಾಶ ಕೊಟ್ಟು, ಮತ್ತೆ ೨ ವರ್ಷ ಅವಕಾಶವನ್ನು ಕೊಡುತ್ತೀರಿ. ಅದನ್ನು ಏತಕ್ಕೆ ಮಾಡುತ್ತೀರಿ, ಅವರಿಗೆ ೪ ವರ್ಷ ಸಾಕು. ೨ ವರ್ಷಕ್ಕೆ ಮತ್ತೆ ೨ ವರ್ಷ ಕೊಡುತ್ತೀರಿ. ಆಗ ೪ ಮತ್ತು ೨ ವರ್ಷ ಸೇರಿ ೬ ವರ್ಷ ಆಗುತ್ತದೆ. ೬ ವರ್ಷಗಳ ಕಾಲ ನಿರ್ದೇಶಕರು ಇದ್ದರೆ ಯುನಿವರ್ಸಿಟಿ ಉಳಿಯುತ್ತದೆಯೇ ದಯಮಾಡಿ ಈ ರೀತಿ ಮಾಡುವುದು ಬೇಡ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)-** ಮಾನ್ಯ ಸಭಾಪತಿಯವರೆ, ಈ ವಿಶ್ವೇಶ್ವರಯ್ಯ ಇಂಜಿನೀಯರಿಂಗ್ ಕಾಲೇಜು ವಿಶ್ವವಿದ್ಯಾನಿಲಯ ವಿಧೇಯಕವನ್ನು ಸ್ವಾಗತ ಮಾಡುತ್ತಾ, intake ಗೆ capping ಹಾಕುತ್ತೀರಾ ಎನ್ನುವುದನ್ನು ದಯವಿಟ್ಟು ಹೇಳಬೇಕು. ಏಕೆಂದರೆ, ಈಗ ಉಲ್ಲೇಖ ಮಾಡಿದರು. ಒಂದೊಂದು ಬ್ರಾಂಚ್‌ನಲ್ಲಿ ನಾಳೆ ಒಂದು-ಎರಡು ಸಾವಿರ intake ಆದಲ್ಲಿ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಏನೋ ಹೇಳಬೇಕು. ಅವರಿಗೆ ಸ್ವಾಯತ್ತತೆ ಕೊಡುತ್ತೀರಾ ಒಂದು ವಿಷಯ. ಎರಡನೆಯದಾಗಿ ಅವರ ಸ್ವಾಯತ್ತತೆಯನ್ನು ಪ್ರತಿ 5 ವರ್ಷಕ್ಕೊಮ್ಮೆ ಏನಾದರೂ review ಮಾಡುವುದನ್ನು ಇಟ್ಟುಕೊಂಡಿದ್ದೀರಾ ಹೇಗೆ ಈ ಎರಡು ಪಾಯಿಂಟ್‌ಗಳನ್ನು ದಯವಿಟ್ಟು clarify ಮಾಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಸಭಾಪತಿಯವರು:-** ಇದರ ಬಗ್ಗೆ ಸಚಿವರು ಈ ಎಲ್ಲದರ ಬಗ್ಗೆ ಹೇಳಬೇಕು.

**ಡಾ: ಸಿ.ಎನ್.ಅಶ್ವಥ್ ನಾರಾಯಣ(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಗೌರವಾನ್ವಿತ ಸದಸ್ಯರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಎಲ್ಲಾ ಸಲಹೆಗಳ ಬಗ್ಗೆ ನಾನು ಕೇಳಿಸಿಕೊಂಡಿದ್ದು, ಇದರ ಬಗ್ಗೆ ನಾನು ಒಂದಿಷ್ಟು ಸ್ಪಷ್ಟತೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಬಹಳ ಮುಖ್ಯವಾಗಿ, ಇವತ್ತು ಬಹಳಷ್ಟು ವಿದ್ಯಾ ಸಂಸ್ಥೆಗಳು ಸ್ಥಾಪನೆಯಾಗುತ್ತವೆ, ಬಹಳಷ್ಟು ಮಕ್ಕಳು ಇಂಜಿನಿಯರಿಂಗ್ ಸೇರಬಹುದು. ಮಾನ್ಯ ಸದಸ್ಯರಾದ ಶ್ರೀಮಾನ್ ಸಿ.ಎಂ. ಲಿಂಗಪ್ಪನವರು ಮತ್ತು ಶ್ರೀಮಾನ್ ಸಿ.ಎಂ ಇಬ್ರಾಹಿಂರವರು ಸೇರಿದಂತೆ ಎಲ್ಲಾ ಸದಸ್ಯರಿಗೆ ತಿಳಿಸುವುದೇನಂದರೆ ಎಲ್ಲರೂ ಇಂಜಿನಿಯರಿಂಗ್ ಸೇರಬಹುದು. ಗುಣಮಟ್ಟ ಹಾಗೂ ಕಲಿಕೆಯಲ್ಲಿ ಗುಣಮಟ್ಟ ಇದ್ದಾಗ ಮಾತ್ರ ಅವರಿಗೆ ಉದ್ಯೋಗ ಸಿಗುತ್ತದೆ. ಹೀಗಾಗಿ, ಬಹಳ ಪ್ರಮುಖವಾಗಿ ಕಲಿಕೆಯಲ್ಲಿ ಬಹಳ ದೊಡ್ಡ ಸುಧಾರಣೆಯಾಗಬೇಕು. ಇಂಜಿನೀಯರ್ ಆಗಿದ್ದೇವೆ ಎಂದ ತಕ್ಷಣ ಉದ್ಯೋಗ ಸಿಗುವುದಿಲ್ಲ. ಉದ್ಯೋಗ ಸಿಗಬೇಕೆಂದರೆ ಗುಣಮಟ್ಟ ಇರಬೇಕು. ಉದ್ಯೋದಗಕ್ಕೇನೂ ಕೊರತೆಯಿಲ್ಲ. ಇವತ್ತು ಲಕ್ಷಾಂತರ ಉದ್ಯೋಗ ಸಿಗುತ್ತದೆ ನನಗೆ ತಿಳಿದಮಟ್ಟಿಗೆ ಇನ್ನು ಮುಂದಿನ ಕನಿಷ್ಟ ೧೦ ವರ್ಷಗಳಿಗೆ ಲಕ್ಷಾಂತರ ಯುವಕರು ಏನು ಇಂಜಿನಿಯರ್ಸ್‌ಗಳು ಬಹಳ ದೊಡ್ಡ ಸಂಖ್ಯೆಯಲ್ಲಿ ಬೇಕಾಗಿದೆ. ಪದವೀಧರರು ಬೇಕು. ನೀವು ಹೇಳಿದಂತಹ ವಿಷಯದ ಬಗ್ಗೆಯೂ ನಾನು ಹೇಳುತ್ತೇನೆ. ಉದ್ಯೋಗದ ಬಗ್ಗೆ ನೀವು ಮಾತನಾಡಿರುವುದರಿಂದ ನಾನು ಇದರ ಬಗ್ಗೆ ಬೇರೆ ಸಮಯದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಹೀಗಾಗಿ, ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಾನು ಉನ್ನತ ಶಿಕ್ಷಣಕ್ಕೆ ಸಿಮೀತವಾಗಿ ಹೇಳಲಿಕ್ಕೆ ಆಗುವುದಿಲ್ಲ. ನಾನು ಐಟಿ-ಬಿಟಿ ಸಚಿವನೂ ಆಗಿರುವುದರಿಂದ skill and development ಸಚಿವನಾಗಿ ನಿರ್ವಹಣೆ ಮಾಡುತ್ತಿರುವುದರಿಂದ ಈ ಮೂರು ಇಲಾಖೆಗಳನ್ನು ಅರ್ಥೈಸಿಕೊಂಡು ನಾನು ಕೆಲಸ ಮಾಡುತ್ತೇನೆ. ಒಟ್ಟಿನಲ್ಲಿ ನಮ್ಮ ಕನ್ನಡಿಗರಿಗೆ ಒಳ್ಳೆಯದಾಗುತ್ತದೆ. ಯಾವ ರೀತಿಯಲ್ಲಿ ಅವರಿಗೆ ಅವಕಾಶ ಮಾಡಿಕೊಡಬೇಕು. ಯಾವ ರೀತಿಯಲ್ಲಿ ಅವರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆನ್ನುವುದು ಬಹಳ ಮುಖ್ಯವಾದ ವಿಚಾರ. ನಮ್ಮ ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ವಿಶೇಷವಾಗಿ ಅಂತರ್‌ರಾಷ್ಟ್ರೀಯ ನಗರವೆಂದು ಇವತ್ತು ನಾವು ಏನು ಕರೆಯುತ್ತೇವೆ. ಇಲ್ಲಿಗೆ ಇಡೀ ವಿಶ್ವದಿಂದ ಎಲ್ಲರೂ ಬರುತ್ತಾರೆ. ಮತ್ತೆ ಭಾರತದ ಬೇರೆ ಬೇರೆ ಭಾಗಗಳಿಂದ ಬರುತ್ತಿದ್ದಾರೆ. ನಿಜವಾದ ಭಾರತೀಯರನ್ನು ನೀವು ನೋಡಬೇಕೆಂದರೆ ಎಲ್ಲಿಯೂ ನೋಡಬೇಕಾಗಿಲ್ಲ, ಕರ್ನಾಟಕದ ಬೆಂಗಳೂರಿನಲ್ಲಿ ನೋಡಬಹುದಾಗಿದೆ. ನಿಜವಾದ ಪ್ರಪಂಚವನ್ನು ನೋಡಬೇಕೆಂದರೆ ಬೆಂಗಳೂರಿನಲ್ಲಿಯೇ ನೋಡಬಹುದಾಗಿದೆ. ಎಲ್ಲಾ ಭಾಷೆಯ, ಸಂಸ್ಕೃತಿಯವರು ಸಹ ಬೆಂಗಳೂರಿನಲ್ಲಿಯೇ ವಾಸ ಮಾಡುತ್ತಿದ್ದಾರೆ. ಇಲ್ಲಿ ಪರಸ್ಪರ ಸೌಹಾರ್ದತೆ ಇದೆ. ಉತ್ತಮವಾಗಿ

ಬಾಳಿ ಬದುಕುವಂತಹ ನಗರ ಬೆಂಗಳೂರು ಆಗಿದೆ. ಇದೆಲ್ಲವು ಏತಕ್ಕೆ ಆಗಲಿಕ್ಕೆ ಸಾಧ್ಯವಾಗಿರುವುದರಿಂದ ಇವತ್ತು ಇಡಿ ವಿಶ್ವದಲ್ಲಿ ಇವತ್ತು ಅಮೇರಿಕಾಗಿಂತ ಕರ್ನಾಟಕ ಭರವಸೆಯ ರಾಜ್ಯವಾಗಿ ಬೆಳೆಯುತ್ತಿದೆ. ಇದನ್ನು ನಾನು ಬಹಳ ನಂಬಿಕೆಯಿಂದ ವಿಶ್ವಾಸದಿಂದ ಹೇಳಲಿಕ್ಕೆ ಬಯಸುತ್ತೇನೆ. City of opportunity, land of opportunity and very promising land. ಈ ರೀತಿ ಇರುವುದರಿಂದ ಇವತ್ತು ಅಮೇರಿಕಾಕ್ಕೆ ಹೋಗಿ ಸೇವೆ ಕೊಡಬೇಕಾಗಿಲ್ಲ. ಈ ಕೋವಿಡ್-19 ಬಂದನಂತರ ಇವತ್ತು ನಾವು virtual world ಗೆ ಬಂದಿದ್ದೇವೆ. ಈ virtual world ಬಂದಿರುವುದರಿಂದ ನಾವು ಯಾವ ಊರಿಗ್ಗೂ ಒಲಸೆ ಹೋಗಬೇಕಾಗಿಲ್ಲ. ಇವತ್ತು start-up ಕಂಪನಿಗಳಿಗೆ ಇಲ್ಲಿಂದಲೇ America ಗೆ ಸೇವೆ ಕೊಡಲಿಕ್ಕೆ ಸಾಧ್ಯವಿದೆ. Start-up Company ಯಿಂದ ನಮ್ಮ ಹುಡುಗರಿಗೆ ಕೇವಲ ಉದ್ಯೋಗ ಮಾತ್ರವಲ್ಲ. ಅದರಲ್ಲಿ ಷೇರುಗಳು ಸಹ ಸಿಗುತ್ತವೆ. ITS (Indian Trade Services) ನಿಂದ ಪ್ರಾರಂಭವಾಗಿದೆ.

(ಮುಂದು)

**(1272) 22.12.2021 05.30 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಡಾ:ಸಿ.ಎನ್.ಅಶ್ವತ್ಥನಾರಾಯಣ (ಮುಂದು):-**

ಬರೀ ITS services ಒಂದರಿಂದಲೇ 60 ಬಿಲಿಯನ್ ಯುಎಸ್ ಡಾಲರ್ಸ್ ಇದೆ. ಜಿಸಿಸಿ, ಜಿಐಸಿ, ಟೆಕ್ನಾಲಜಿ, startup, ಇವೆಲ್ಲವನ್ನೂ ಬಿಟ್ಟು 60 ಬಿಲಿಯನ್ ಡಾಲರ್ ಎಂದರೆ ನಮ್ಮ ರಾಜ್ಯದಲ್ಲಿ ಸಂಪೂರ್ಣ ವಹಿವಾಟು ಇರುವುದೇ 250 ಬಿಲಿಯನ್ ಯುಎಸ್ ಡಾಲರ್ಸ್. ಕೇವಲ ಐಟಿಎಸ್ ಸರ್ವೀಸಸ್‌ನಲ್ಲಿಯೇ 60 ಬಿಲಿಯನ್ ಡಾಲರ್ಸ್ ಇದೆ. ಇಂದು ಲಕ್ಷಾಂತರ ಉದ್ಯೋಗ ಇದೆ. ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ನಾನು ನೋಡಿದಂತೆ ಉನ್ನತ ಶಿಕ್ಷಣ ಅಥವಾ ಐ.ಟಿ. ಬಿ.ಟಿ. ಸಭೆಗಳು, ಇತ್ತೀಚೆಗೆ ನಡೆದಂತಹ Bengaluru Tech Summit ನಲ್ಲಿ industry ಯವರು ಬಂದಿದ್ದರು. ನಮಗೆ skilled manpower availability ಇಲ್ಲ. ಉದ್ಯೋಗ ಕೊಡಲು ಮತ್ತು ಉದ್ಯೋಗ ಪಡೆಯಲು ಕೌಶಲ್ಯತೆ ಇರುವಂತಹ ಯುವಕರು ಇಲ್ಲ. ಹೇಗೆ ಬಗೆಹರಿಸುವುದು ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ. ಇಂದು ಇಡೀ ದೇಶಕ್ಕೆ ಸಲ್ಲುವಂತಹ ರೀತಿಯಲ್ಲಿ destination Karnataka ಆಗಿದೆ. ಈ ಮುಂಚೆ 220 ಕಾಲೇಜುಗಳು ಪ್ರಾರಂಭವಾದಾಗ ಬೇರೆ ಬೇರೆ ರಾಜ್ಯಗಳಲ್ಲಿ ಇಂಜಿನಿಯರಿಂಗ್ ಕಾಲೇಜುಗಳು ಇರಲಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಕಾಲೇಜುಗಳು ಇಲ್ಲದ ಕಾರಣ ಇಡೀ ದೇಶದ ವಿವಿಧ ಭಾಗಗಳಿಂದ ಕರ್ನಾಟಕಕ್ಕೆ ಬಂದು ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ನಮ್ಮಲ್ಲಿರುವವರಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜುಗಳನ್ನು ನಾವು ಮಾಡಿಬಿಟ್ಟಿದ್ದೇವೆ. ಹಾಗಾಗಿ ಇಂದು ಬೇರೆ ಬೇರೆ ಕಡೆಯಿಂದ ಬರುವುದಕ್ಕೆ ಪೂರಕವಾಗಿ ಸುಧಾರಣೆಗಳನ್ನು ತರಲಿಕ್ಕೆ ನಮ್ಮ ಕರ್ನಾಟಕದಲ್ಲಿ ಎಲ್ಲಾ ಕೋರ್ಸ್‌ಗಳನ್ನು completely revise ಮಾಡಿ revamp ಮಾಡಿದ್ದೇವೆ. Revamp ಮಾಡಿ ಇಂದು ಎಲ್ಲಾ ರೀತಿಯ technology and research ಕಂಪನಿಗಳು ಎಲ್ಲವೂ ಇಲ್ಲಿವೆ ಎನ್ನುವ ಕಾರಣದಿಂದ ಉತ್ತಮವಾದ ಶಿಕ್ಷಣ ಕರ್ನಾಟಕದಲ್ಲಿ ಸಿಗುತ್ತದೆ. Internship

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನ್ನು ಹೇಗೆ integrate ಮಾಡುತ್ತೇವೆ. Internship ಅನ್ನು integrate ಮಾಡಿ ಕಲಿಯುವುದರ ಜೊತೆಯಲ್ಲಿ ಇಂಡಸ್ಟ್ರಿಗಳ ಜೊತೆ ಯಾರಾದರೂ ಸಿಬ್ಬಂದಿಯವರು ಪಾಸ್ ಆದಾಗ ಮಾತ್ರ. ಪಾಸ್ ಆಗಿ campus ನಿಂದ ಆಚೆ ಹೋಗುವಾಗ campus interview ಗೆ ಬರುತ್ತಾರೆ. ಅದು ಬಿಟ್ಟು ಬೇರೆ ಯಾವ ಸಮಯದಲ್ಲಿ ಒಂದೇ ಒಂದು ಕಾಲೇಜಿನಲ್ಲಿ ಒಂದೇ ಒಂದು staff member ಕಂಪನಿಗಳೊಂದಿಗೆ ಸಂಪರ್ಕಿಸಿ internship ಗಳನ್ನು ಮಾಡುವಂತಹ ಪ್ರಯತ್ನಗಳನ್ನು ಮಾಡಿಲ್ಲ. ಎಲ್ಲವೂ ನೆಪ ಮಾತ್ರಕ್ಕೆ ನಡೆದುಕೊಂಡು ಬಂದಿದೆ. ಏನೆಂದರೆ ಆ ಹುಡುಗರಿಗೆ ಆ ವಯಸ್ಸಿನಲ್ಲಿ ತಿಳುವಳಿಕೆಯೇ ಇರಲಿಲ್ಲ. ತಿಳುವಳಿಕೆ ಇರುವವ್ರು ಏನು ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಂಡು ಬದುಕಿ ಬಾಳುತ್ತಾರೆ. ಹೆಚ್ಚಿನ ಹುಡುಗರಿಗೆ ಯಾವ ರೀತಿಯಿಂದ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎನ್ನುವಂತಹದ್ದೇ ಕಲ್ಪನೆಯಲ್ಲಿರುವುದಿಲ್ಲ. ಆ ವಯಸ್ಸಿನಲ್ಲಿ ಎಲ್ಲವೂ ನಡೆದು ಹೋಗುತ್ತದೆ. ಆ ವಿದ್ಯಾರ್ಥಿಗೆ ಏನು ಮಾಡಿದರೆ ಅವನ dream job, ಕನಸಿನ ಉದ್ಯೋಗ ಭವಿಷ್ಯವನ್ನು ರೂಪಿಸಿಕೊಳ್ಳಲಿಕ್ಕೆ ಏನು ಮಾಡಬೇಕೆಂಬುದನ್ನು ಬಹಳ ಸ್ಪಷ್ಟವಾಗಿ ಎಲ್ಲಾ ಹಂತದಲ್ಲಿಯೂ ತಿಳಿಸಲಾಗುತ್ತದೆ. ಪ್ರಥಮ ವರ್ಷದಲ್ಲಿಯೇ ಮೂರು ವಾರಗಳ ಕಾಲ ಅವನು industry ಗಳ ಜೊತೆಯಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಡಲಾಗುತ್ತದೆ. ಎರಡನೆಯ ವರ್ಷದಲ್ಲಿಯೂ ಮೂರು ವಾರಗಳ ಕಾಲ ಕೆಲಸ ಮಾಡಲು ಅವಕಾಶ ಮಾಡಿಕೊಡಲಾಗುತ್ತದೆ. ಮೂರನೇ ವರ್ಷ ಮತ್ತು ಅಂತಿಮ ವರ್ಷದಲ್ಲಿ ಆರು ತಿಂಗಳ ಕಾಲ ಅವರು industry ಗಳ ಜೊತೆಯಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಡಲಾಗುತ್ತದೆ.

ಇಲ್ಲಿ ನಾವು ಎಷ್ಟು ದುಡ್ಡು ಖರ್ಚು ಮಾಡುತ್ತೇವೆ ಎನ್ನುವುದು ಮುಖ್ಯವಲ್ಲ. Industry ಗಳಲ್ಲಿರುವ ತಂತ್ರಜ್ಞಾನ, ಆವಿಷ್ಕಾರಗಳನ್ನು ಕೋಟ್ಯಂತರ ರೂಪಾಯಿ ಖರ್ಚು ಮಾಡಿದರೂ ಸಿಗದಂತಹ ವ್ಯವಸ್ಥೆ ಕಂಪನಿಗಳಲ್ಲಿದೆ. ಆದರೆ ಬಳಕೆಯೇ ಮಾಡಿಕೊಳ್ಳುತ್ತಿಲ್ಲ. ಹಣದ ಸಂಪನ್ಮೂಲದ ಕೊರತೆ ಇದೆ. ನಿಜವಾಗಿಯೂ ಕೊರತೆ ಇದೆ. ಇಲ್ಲವೆಂದು ಹೇಳುತ್ತಿಲ್ಲ. ಇದನ್ನು ಸರಿಪಡಿಸಿಕೊಳ್ಳಲು ಅವಕಾಶಗಳು ಹೇಗಿವೆ ಎನ್ನುವುದು ಬಹಳ ಮುಖ್ಯವಾದ ವಿಚಾರ. ಇಂದು ಸಾಕಷ್ಟು ಅವಕಾಶಗಳಿವೆ.

ಮಾನ್ಯ ಸಭಾಪತಿಯವರೇ, ನಾನು ಸುಮ್ಮನೆ ಏನೋ ಮಾತನಾಡಬೇಕೆಂದು ಹೇಳುತ್ತಿರುವುದಲ್ಲ. ನಮ್ಮ ಗೌರವಾನ್ವಿತ ಸದಸ್ಯರಿಗೆ ರಾಜ್ಯದ ಶಕ್ತಿ ಏನು ಎಂದು ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಿಜವ್ವಾಗಿಯೂ ನನಗೂ ತಿಳಿದಿರಲಿಲ್ಲ. ನಾನು ಐ.ಟಿ. ಬಿ.ಟಿ. ಸಚಿವನಾಗುವವರೆವಿಗೂ ನನಗೆ ಸತ್ಯವಾಗಿಯೂ ತಿಳಿದಿರಲಿಲ್ಲ. ಏನಾಗುತ್ತಿದೆ ಎನ್ನುವ ಅರಿವು ನನಗೂ ಸಹ ಇರಲಿಲ್ಲ. ಈ ಇಲಾಖೆಯಲ್ಲಿ ಕೆಲಸ ಮಾಡಿ ಅವರೊಂದಿಗೆ ಸಾಕಷ್ಟು ಕಾಲವನ್ನು ಕಳೆದ ಕಾರಣ ಹೆಚ್ಚು ಮಾಹಿತಿ, ತಿಳುವಳಿಕೆ ಒಂದು ರೀತಿ information highway ನಲ್ಲಿ ನಾನು ಸೇರಿಕೊಂಡು ಸಣ್ಣ ಸಣ್ಣದನ್ನು ಕಲಿಯುವಂತಾಗಿದೆ.

ಇಂದು ಏನೆಲ್ಲಾ ವ್ಯವಸ್ಥೆಗಳು ಲಭ್ಯವಿದೆಯೋ ಅವುಗಳನ್ನು ಬಳಸಿಕೊಂಡು ಇಂದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ವಿಶ್ವದಲ್ಲಿ ಎಲ್ಲಿ ಬೇಕಾದರೂ ಕಲಿಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಎಲ್ಲಾ ದೇಶಗಳಲ್ಲಿಯೂ ಇವತ್ತು ಪ್ರತಿಭಾವಂತರು ಬೇಕು ಬೇಕು ಎಂದು ಹುಡುಕುತ್ತಿದ್ದಾರೆ. ಯಾವ ರಾಜ್ಯವು ಪ್ರತಿಭಾವಂತರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತದೆಯೋ ಆ ರಾಜ್ಯಕ್ಕೆ ಭವಿಷ್ಯವಿದೆ, ಆ ಸಮಾಜಕ್ಕೆ ಮಾತ್ರ ಭವಿಷ್ಯವಿದೆ. ಎಲ್ಲೆಲ್ಲಿ ಈ ಪ್ರಯತ್ನವನ್ನು ಮಾಡುವುದಿಲ್ಲವೋ ಅಂತಹ ರಾಜ್ಯಕ್ಕೆ ಸಂಖ್ಯೆಯಲ್ಲಿ ಹೆಚ್ಚಿದ್ದರೂ ಭವಿಷ್ಯವನ್ನು ಕಾಣುವುದಕ್ಕೆ ಮಾತ್ರ ಸಾಧ್ಯವಿಲ್ಲ.

ಮಾನ್ಯ ನಾರಾಯಣಸ್ವಾಮಿಯವರು ಹೇಳಿದಂತೆ ಬೆಂಗಳೂರಿನ ಯು.ವಿ.ಸಿ.ಇ. ಏಕೆ ಈ ಮಟ್ಟಕ್ಕೆ ಬೆಳೆದಿತ್ತುಎಂದು ಹೇಳಿದರು. ಮಾನ್ಯ ಶ್ರೀಕಂಠೇಗೌಡರು ಅದಕ್ಕೆ separate entrance examination like IIT ಮಾಡಿ ಎಂದು ಹೇಳಿದರು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಹೇಳಬೇಕಾದರೆ ಇಲ್ಲಿ ಸೇರುವಂತಹವರ rank ಪ್ರಾರಂಭವಾಗುವುದು 1500 ರಿಂದ 2000 ರವರೆಗೆ ಬಂದವರಾಗಿದ್ದಾರೆ. ಮೊದಲನೆಯ ranking ನಲ್ಲಿ ಬೇರೆ ಬೇರೆ ಕಾಲೇಜುಗಳಿಗೆ ಸೇರುತ್ತಿದೆ. ಯಾವ ಕಾಲೇಜುಗಳು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನೆಲ್ಲಾ ನೋಡಿದಾಗ ನನಗೂ ಆಶ್ಚರ್ಯವಾಯಿತು. ಸರ್ಕಾರಿ ಕಾಲೇಜುಗಳಲ್ಲಿ benchmark ಅಂದರೆ ಗುಣಮಟ್ಟ ಎನ್ನುವುದು ನಮ್ಮ ಸರ್ಕಾರದಿಂದಲೇ ಪ್ರಾರಂಭ ಆಗಬೇಕು. ನಮ್ಮಿಂದ ಇನ್ನೊಬ್ಬರಿಗೆ ತೋರಿಸುವಂತಹದ್ದು ಆಗಬೇಕು. ಯಾವ ರೀತಿ ಮಾದರಿ ಸಂಸ್ಥೆ ಮಾಡಬಹುದು ಎನ್ನುವುದನ್ನು ಹೇಳುತ್ತೇನೆ.

ಇಂದು ಯು.ವಿ.ಸಿ.ಇ.ಗೆ ಖರ್ಚು ಮಾಡುತ್ತಿರುವುದು ರೂ.40 ಕೋಟಿ ಎಂದು ಮುಕ್ತವಾಗಿ ಹೇಳುತ್ತೇನೆ. ಐಐಟಿ, ಮುಂಬೈನಲ್ಲಿ ವರ್ಷಕ್ಕೆ ರೂ.1200 ಕೋಟಿ. ಅಂತಹ ಸಂಸ್ಥೆಗೆ ಆ ಮಟ್ಟದಲ್ಲಿ ಖರ್ಚಾಗುತ್ತಿದೆ. ಕೇಂದ್ರ ಸರ್ಕಾರದಿಂದ ಇದೆ, ಕಂಪನಿಗಳಿಂದ funds raise ಮಾಡಲಾಗುತ್ತಿದೆ. ಕೇಂದ್ರ ಸರ್ಕಾರವು ಐಐಟಿಗಳಿಗೆ ರೂ.7200 ಕೋಟಿ ಖರ್ಚಾಗುತ್ತಿದೆ. 30ಕ್ಕಿಂತ ಹೆಚ್ಚು ಐಐಟಿಗಳಿವೆ. ಕೇವಲ ಕೇಂದ್ರ ಸರ್ಕಾರದ ಮೇಲೆ ಐಐಟಿಗಳು ಅವಲಂಬಿತವಾಗಿಲ್ಲ. ಬೇರೆ ಬೇರೆ ದೇಶಗಳಲ್ಲಿ ನಾನು ನೋಡಿರುವಂತೆ ನಮ್ಮ ರಾಜ್ಯ ಸರ್ಕಾರದ ಬಜೆಟ್‌ನ ಮೊತ್ತದಷ್ಟು ಹಣವನ್ನು ವಿಶ್ವವಿದ್ಯಾಲಯಗಳಿಗೆ ಖರ್ಚು ಮಾಡುತ್ತಿವೆ. ಹಾಗೆಂದು ನಾವು ಅಷ್ಟು ಖರ್ಚು ಮಾಡಬೇಕೆಂದು ನಾನು ಅಲ್ಲಿಗೆ ಹೋಲಿಸುತ್ತಿಲ್ಲ. ಆದರೂ ನಮ್ಮಲ್ಲಿ ಗುಣಮಟ್ಟವನ್ನು ಹೆಚ್ಚಿಸಲಿಕ್ಕೆ ಏನೆಲ್ಲಾ ಮಾಡಬೇಕೆಂಬುದನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ.

ಮಾನ್ಯ ಮರಿತಿಬ್ಬೇಗೌಡರು ಹೇಳಿದಂತೆ ಸೂಪರ್ 30 ಸಂಸ್ಥೆಗಳನ್ನು ಮಾಡುತ್ತಿದ್ದೇವೆ. 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಸೂಪರ್ 30 ಅಡಿಯಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಇದರ ಗುಣಮಟ್ಟಕ್ಕಾಗಿ industry ಯವರಿಗೆ ಭಾಗವಹಿಸಲು ಅವಕಾಶ ಮಾಡಿಕೊಡುತ್ತಿದ್ದೇವೆ. VTU University

ಅವರು ಭಾಗವಹಿಸುತ್ತಿದ್ದಾರೆ. ಸರ್ಕಾರವೂ ಭಾಗಿಯಾಗಿದೆ. ಒಟ್ಟಾರೆ ಮೂರು ಜನರೂ ಸೇರಿ ಎಲ್ಲಿ ಸರ್ಕಾರಿ ಕಾಲೇಜುಗಳಿವೆಯೋ ಅದನ್ನು ಅಭಿವೃದ್ಧಿ ಮಾಡುತ್ತೇವೆ. ಇನ್ನುಳಿದ 16 ಖಾಸಗಿ ಕಾಲೇಜುಗಳನ್ನು ಬೇರೆ ಬೇರೆ ಜಿಲ್ಲೆಗಳಿಂದ ಆಯ್ಕೆ ಮಾಡಲು ಒಂದು ಸಮಿತಿಯನ್ನು ಮಾಡಲಾಗಿದೆ. ಆ ಸಮಿತಿಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಇನ್ನೂ ಏಳು ಸರ್ಕಾರಿ ಕಾಲೇಜುಗಳನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿಗೊಳಿಸಬೇಕು ಎಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡಿದ್ದಾರೆ. ಅದರ ಪ್ರಾರಂಭ ಬೆಳಗಾವಿಯಲ್ಲಿರುವ ವಿಟಿಯು ಕಾಲ್ಲೇಜಿನಿಂದ ಮಾಡಲಾಗಿದೆ. ಅದನ್ನು ಐಐಟಿ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಅವರ ಬಳಿ ಸಂಪನ್ಮೂಲ ಇದೆ. ನಮ್ಮ ಬೆಳಗಾವಿ ಕಾಲೇಜಿಗೆ ಈಗಾಗಲೇ ಮೂರು ದಿನಗಳ ಹಿಂದೆ ನಾನು ಭೇಟಿ ಕೊಟ್ಟಿದ್ದೆನು. 30 ಮಕ್ಕಳಿಗೆ ಫೆಲೋಶಿಪ್ ಅನ್ನು ಕೊಡಲಾಯಿತು. ಆ ಫೆಲೋಶಿಪ್ ಕೊಡುವಂತಹ ಸಂದರ್ಭದಲ್ಲಿ ನಾನು ಅವರಿಗೆ ಹೇಳಿದೆ. ನಾವು ಬೇರೆ ಬೇರೆ ಕಾಲೇಜುಗಳ ಜೊತೆಯಲ್ಲಿ ಹೋಲಿಕೆ ಮಾಡಿಕೊಳ್ಳುತ್ತಿದ್ದೇವೆ. ನಮ್ಮ ಹೋಲಿಕೆ ಯಾವುದೋ ಖಾಸಗಿ ಕಾಲೇಜಿನೊಡನೆ ಹೋಲಿಕೆಯಲ್ಲ. ವಿಶ್ವಮಟ್ಟದಲ್ಲಿರುವ ಸಂಸ್ಥೆಯೊಡನೆ ಹೋಲಿಕೆ ಮಾಡಬೇಕು. ಅದಕ್ಕೆ ಬೇಕಾದಂತಹ ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಅವರಿಗೆ ತಿಳಿಸಿದ ತಕ್ಷಣ ಡಾ:ಕರಿಸಿದ್ದಪ್ಪನವರು ಒಪ್ಪಿ ಖಂಡಿತ ಒಂದು ತಿಂಗಳೊಳಗಾಗಿ ನಾವು action plan ಅನ್ನು ತರುತ್ತೇವೆ. ಬೆಳಗಾವಿಯಲ್ಲಿರುವ ಈ ಸಂಸ್ಥೆಯನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿ ಮಾಡುತ್ತೇವೆಂದು ಬಹಳ ಸ್ಪಷ್ಟವಾಗಿ ತಿಳಿಸಿದರು.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಏಕೆಂದರೆ ಇಂದು ಬೆಳಗಾವಿಯಲ್ಲಿ ನಡೆಯುತ್ತಿರುವ ಈ ಅಧಿವೇಶನದಲ್ಲಿ ನಾನು ಬೆಂಗಳೂರಿನ ಬಗ್ಗೆ ಹೆಚ್ಚು ಹೇಳಿದರೆ ಅದು ಸೂಕ್ತವಾಗಿರುವುದಿಲ್ಲ. ಹಾಗಾಗಿ ಬೆಳಗಾವಿಯಲ್ಲಿ ಈ ಸಂಸ್ಥೆಯ ಅಭಿವೃದ್ಧಿಯನ್ನು ಮಾಡುತ್ತೇವೆ. ಇನ್ನೂ 6 ಕಾಲೇಜುಗಳನ್ನು ಬೇರೆ ಬೇರೆ ಭಾಗಗಳಲ್ಲಿ ಅಭಿವೃದ್ಧಿಯನ್ನು ಮಾಡುತ್ತೇವೆ.

ಮಾನ್ಯ ಸದಸ್ಯರು ಮಾತನಾಡುವಾಗ ನೇಮಕಾತಿಯ ಬಗ್ಗೆ ಹೇಳಿದರು. ಇಲ್ಲಿನ appointment pattern ನಲ್ಲಿ ವರ್ಷಾನುಗಟ್ಟಲೆಯಿಂದ ನೇಮಕವಾಗುತ್ತಿಲ್ಲ. ತಾವೂ ಸಾಕಷ್ಟು ಬಾರಿ ನಮಗೆ ತಿಳಿಸಿದ್ದೀರಿ. ಶಿಕ್ಷಕರ ಕ್ಷೇತ್ರ, ಪದವೀಧರರ ಕ್ಷೇತ್ರಗಳಿಂದ ಚುನಾಯಿತರಾದ ಸದಸ್ಯರು ಹಲವಾರು ಬಾರಿ ನಮಗೆ ತಿಳಿಸಿದ್ದಾರೆ. 3000ಕ್ಕಿಂತಲೂ ಹೆಚ್ಚು ಹುದ್ದೆಗಳು ವಿಶ್ವವಿದ್ಯಾಲಯಗಳಲ್ಲಿ ಖಾಲಿಯಿವೆ. ಬೇರೆ ಬೇರೆ ಸಂಸ್ಥೆಗಳಲ್ಲಿಯೂ ಖಾಲಿಯಿವೆ. ಇವುಗಳನ್ನು ಭರ್ತಿ ಮಾಡುವುದಕ್ಕಾಗಿ ಇಂದು ಸಮಿತಿಯನ್ನು ರಚಿಸಲಾಗಿದೆ. ಆ ಸಮಿತಿಯಲ್ಲಿ ಚರ್ಚಿಸಿ ಯಾವ ರೀತಿಯಿಂದ ನೇಮಕಾತಿಯನ್ನು ಮಾಡಿಕೊಳ್ಳಬಹುದು ಎಂದು ಪರಿಶೀಲಿಸಲಾಗುವುದು. ಯಾವುದೋ ವಿಷಯದ ಹುದ್ದೆಗಾಗಿ ಯಾವುದೋ ಕಾಲದಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಂಜೂರು ಮಾಡಿಸಿಕೊಂಡಿರುತ್ತಾರೆ. ಈ ಕಾಲಕ್ಕೆ ಆ ವಿಷಯವು ಪ್ರಸ್ತುತವಾಗಿರುವುದಿಲ್ಲ. ಇವುಗಳ ಸ್ವಾಯತ್ತತೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಕೊಡುವುದಕ್ಕಾಗಿ ಈ ಸಮಿತಿಗೆ ಎಲ್ಲಾ ರೀತಿಯ ಅಧಿಕಾರವನ್ನು ಕೊಟ್ಟು ಇವುಗಳನ್ನು ಗಮನಿಸಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ನಾನು ಈ ಸದನಕ್ಕೆ ವಿಶ್ವಾಸವನ್ನು ಕೊಡುತ್ತೇನೆ. ಸಂಪೂರ್ಣ ಪ್ರಯತ್ನವನ್ನು ಮಾಡಿ ನಮ್ಮ tenure of Government ನಲ್ಲಿ ಹೆಚ್ಚು ಕಡಿಮೆ ಈ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಪ್ರಯತ್ನಿಸುತ್ತೇವೆ. ಏಕೆಂದರೆ, ಶಿಕ್ಷಕರು important stake holders. ಶಿಕ್ಷಕರನ್ನು ನೇಮಕ ಮಾಡುವ ಬಗ್ಗೆ ಹೆಚ್ಚು ಗಮನ ವಹಿಸಲ್ಲಾಗುವುದು ಎನ್ನುವ ವಿಶ್ವಾಸವನ್ನು ಕೊಡುತ್ತೇವೆ. ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ವರ್ಷ ವರ್ಷವೂ ನೇಮಕಾತಿಯಾಗಬೇಕು. ವರ್ಷ ವರ್ಷವೂ appointments ಆಗದೆ ಯಾವುದೋ ಒಂದು ಹಬ್ಬಕ್ಕೆ ಬಂದಂತೆ appointments ಆಗುತ್ತಿವೆ. ಇದರಿಂದ ಸಮಸ್ಯೆಗಳು cascading effect ಆಗುತ್ತಿವೆ. ಇದನ್ನು ಮಾಡಲೇ ಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಚಿವರೇ, ಹಲವಾರು ವರ್ಷಗಳಿಂದ ಕಾಲೇಜು ಉಪನ್ಯಾಸಕರಿಗೆ ಬಡ್ತಿಯನ್ನೇ ಕೊಟ್ಟಿಲ್ಲ. AGP ಕೊಟ್ಟಿಲ್ಲ. ನಿಮ್ಮ ಅವಧಿಯಲ್ಲಿ ಅಂತೂ ನೀವು ಹೇಳಿದುದನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ. ಬಿಡಿ.

(ಮುಂದು)

(1273) 22-12-2021 (5.40) ಕೆಜಿ – ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಡಾ|| ಸಿ.ಎಸ್.ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದನ್ನು ನಮ್ಮ ಕಾಲದಲ್ಲಿ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಆದರೂ ಸಹ, ನಾವು ಇದನ್ನು ಮಾಡಿ ತೋರಿಸುತ್ತೇವೆಂದು ವಿಶ್ವಾಸದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಖಂಡಿತವಾಗಿ ಮಾಡಿ ತೋರಿಸುತ್ತೇವೆ. ತಮಗೆ ಗೊತ್ತಿದೆ. ಕಳೆದ 30 ವರ್ಷಗಳಿಂದ ಡಿಗ್ರಿ ಕಾಲೇಜುಗಳಲ್ಲಿ promotion ಕೊಟ್ಟಿಲ್ಲ. ಈಗ ನಾವು promotion ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. AICTE Guidelines ಪ್ರಕಾರ, ಸಂಬಳ ಬೇಕು. AICTE Guidelines ಪ್ರಕಾರ, promotion ಆಗುವುದು ಬೇಡವೇ?

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಮಾನ್ಯ ಸಚಿವರಿಂದ ವಿಧೇಯಕದ ಮೇಲೆ ಉತ್ತರ ಕೊಡಿಸಿ. ಮಾನ್ಯ ಸಚಿವರು ಭಾಷಣ ಮಾಡಿದ್ದಾರೆ. ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಲಿಲ್ಲ.

**ಡಾ|| ಸಿ.ಎನ್.ಅಶ್ವಥನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಬಹಳ ಮುಖ್ಯವಾದ ವಿಚಾರವನ್ನು ಕೇಳಿದ್ದಾರೆ. ಹಾಗಾಗಿ, ಆ ವಿಚಾರದ ಬಗ್ಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳುತ್ತೇನೆ. ಏಕೆಂದರೆ, ಅವರಿಗೆ ಕೊನೆಗೆ ಬಂದರೆ, ಅದೇ score ಮುಗಿದು ಹೋಗುವುದು. ಮಾನ್ಯ ಸದಸ್ಯರು ಕೇಳಿದಂತಹ ಬೇರೆ ಬೇರೆ ವಿಚಾರಗಳಿಗೆ ಹೇಳಿದ್ದೇನೆ. ಶ್ರೀ ತಿಪ್ಪೇಸ್ವಾಮಿಯವರು ಕೊನೆಗೆ master stroke ಅನ್ನು ಇಟ್ಟಿದ್ದರು. ಅದನ್ನು ಕೊನೆಗೆ ಇಟ್ಟುಕೊಂಡಿದ್ದೆ. ಇದರಲ್ಲಿ ಮುಖ್ಯವಾಗಿ ನಿರ್ದೇಶಕರನ್ನು ನೇಮಕ ಮಾಡುವುದಕ್ಕೆ 70 ವರ್ಷದ ಗರಿಷ್ಠ ಮಿತಿಯನ್ನು ಇಟ್ಟಿದೆ. ಇದನ್ನು ಏಕೆ ಇಟ್ಟಿದ್ದೇವೆಂದರೆ, UGC Guidelines ಪ್ರಕಾರ, ಮೊದಲು 65 ವರ್ಷ ಇತ್ತು. ನಂತರ 65 ವರ್ಷದಿಂದ 67 ವರ್ಷ ಆಗಿದೆ. ಈಗ 67 ವರ್ಷದಿಂದ 70 ವರ್ಷ ಆಗಿದೆ. 2000 ನೇ ಇಸವಿಯಲ್ಲಿ Karnataka State Universities Act ಅನ್ನು ಮಾಡಲಾಗಿದೆ. ಇದನ್ನು 21 ವರ್ಷಗಳ ಹಿಂದೆ ಮಾಡಲಾಗಿದೆ. ಈಗ 70 ವರ್ಷಕ್ಕೆ ಆಗಿದೆ. IIT, IIM ನಲ್ಲಿಯೂ ಸಹ 70 ವರ್ಷ ಇದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ,. ಅದು ಬಹಳ ವರ್ಷಗಳಿಂದ ಇದೆ. ಆದರೆ, ಆಯಾಯ State Government ಗಳು, ಇದನ್ನು ನಮ್ಮ University ಗಳಲ್ಲಿ, ನಮ್ಮ ರಾಜ್ಯದಲ್ಲಿ .,

**(ಗೊಂದಲ)**

**ಸಭಾಪತಿಯವರು:-** ಸಚಿವರೇ, start ಮಾಡಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಅದನ್ನು ಹೇಳುತ್ತೀರಿ. ಹೋಗಲಿ ವಿಧೇಯಕವನ್ನು ಸುಮ್ಮನೆ pass ಮಾಡಿಕೊಳ್ಳಿ.

**(ಗೊಂದಲ)**

**ಡಾ||ಸಿ.ಎನ್.ಅಶ್ವಥನಾರಾಯಣ (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 50 ಎಕರೆ ಜಮೀನಿನ ಬಗ್ಗೆ ಹೇಳಿದ್ದಾರೆ. ಸಿಟಿಯಲ್ಲಿ 12 ಎಕರೆ ಇದೆ. ಜ್ಞಾನ ಭಾರತಿಯಲ್ಲಿ 50 ಎಕರೆ ಇದೆ. Bangalore University ಯಲ್ಲಿ ಈ resolution ಸಹ ಪಾಸ್ ಆಗಿದೆ. ಅದನ್ನು ಅನುಷ್ಠಾನ ಮಾಡುತ್ತೇವೆಂಬ ವಿಶ್ವಾಸವನ್ನು ಕೊಡುತ್ತೇನೆ. 100% ಬಗ್ಗೆಯೂ ಮಾತನಾಡುತ್ತೇನೆ. 75% admission ಅನ್ನು ನಮ್ಮ Karnataka State entrance examination ಮೂಲಕವೇ admission

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುವುದು ಆಗುತ್ತದೆ. ಇನ್ನು 25% ಮಾತ್ರ, ಸಂಸ್ಥೆ ಬಹಳ ಉತ್ತಮವಾಗಿ ಬೆಳೆಯಬೇಕಾದರೆ, ಬಹಳ ಮುಖ್ಯವಾದ ಭಾಗ 80% ಸಂಸ್ಥೆಯ ಗುಣಮಟ್ಟವನ್ನು ಹೆಚ್ಚಿಸಬೇಕೆಂದರೆ, ಅದು ವಿದ್ಯಾರ್ಥಿಗಳ ಕೈಯಲ್ಲಿದೆ. ಹಾಗಾಗಿ, ಒಂದು ಕಡೆ JEE based 25% seats admission ಮಾಡಬೇಕು. ಈ ಸಂಸ್ಥೆಯಲ್ಲಿ ಇನ್ನೂ ಉತ್ತಮ ಗುಣಮಟ್ಟದ ವಿದ್ಯಾರ್ಥಿಗಳು ಬರಬೇಕು, ಅವರಿಗೆ ಅವಕಾಶವನ್ನು ಕೊಡಬೇಕು. ನಮ್ಮ ಬೆಂಗಳೂರು ನಗರ, ಇವತ್ತು I.T.-B.T. ಗೆ ಹೆಸರು ವಾಸಿಯಾಗಿರುವಂತಹ ನಗರದಲ್ಲಿ IIIT, IIT ಕ್ಕಿಂತಲೂ ಆಕರ್ಷಣೆಯಾಗುವುದಕ್ಕಿಂತ ನಮ್ಮ ಈ ಸಂಸ್ಥೆಗೆ ಬಂದು ಸೇರುವಂತಹದ್ದು ಆಗಬೇಕು. ಅದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ, ಸಂಸ್ಥೆಯಲ್ಲಿ ಗುಣಮಟ್ಟ ಖಂಡಿತವಾಗಿಯೂ 25% ವಿದ್ಯಾರ್ಥಿಗಳು ಸೇರುವುದರ ಮೂಲಕ ಖಂಡಿತ ಈ diversity ನಲ್ಲಿ ಗುಣಮಟ್ಟ ಮತ್ತು performance improve ಆಗುತ್ತದೆ. ಹಾಗಾಗಿ, ದಯವಿಟ್ಟು ಎಲ್ಲಾ ಸದಸ್ಯರು ಇದಕ್ಕೆ ಸಾಕಷ್ಟು ಸಹಕಾರವನ್ನು ಕೊಡಿ. ಈಗ UVCE ಎಂದು ಇದೆ. ಈಗಲೂ University of Visvesvaraya College of Engineering ಎಂದು ಇದೆ. ಅದೇರೀತಿ ಈಗ ನೇಮಕವಾಗುತ್ತಿರುವುದು University of Visvesvaraya College of Engineering ಎಂದು ಮುಂದುವರಿಸುತ್ತಿದ್ದೇವೆ. ಹಾಗಾಗಿ, ಏನು ಗೊಂದಲ, ಸಮಸ್ಯೆ ಇಲ್ಲದೇ ಮುಂದುವರಿದಿದೆ. ಇದು 105 ವರ್ಷಗಳನ್ನು ಪೂರೈಸಿರುವಂತಹ ಸಂಸ್ಥೆ. ಹಾಗಾಗಿ, ಅದೇರೀತಿ ಮುಂದುವರಿಸಬೇಕು. ಹಾಗಾಗಿ, ಈ ವಿಧೇಯಕಕ್ಕೆ ಎಲ್ಲರೂ ಒಪ್ಪಿಗೆಯನ್ನು ಕೊಟ್ಟು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 56 ರವರೆಗೆ**

**ಸಭಾಪತಿಯವರು:-** “ಖಂಡ 2 ರಿಂದ 56 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 56 ರವರೆಗೆ ಎರಡೂ ಸೇರಿದಂತೆ ವಿಧೇಯಕ್ಕೆ ಸೇರಿಸಲಾಯಿತು)

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ||ಸಿ.ಎಸ್.ಅಶ್ವಥ್ ನಾರಾಯಣ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಶಿಕ್ಷಕರ ವರ್ಗಾವಣೆ ನಿಯಂತ್ರಣ ತಿದ್ದುಪಡಿಯ ವಿಧೇಯಕವನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆ ವಿಧೇಯಕ ಬಂದಿತ್ತು. ಅದನ್ನು ತೆಗೆದುಕೊಂಡಿದ್ದೆ. ಆದರೆ, ಸಚಿವರು ಇಲ್ಲ. ನಾಳೆ ತೆಗೆದುಕೊಳ್ಳಿ ಎಂದು ಹೇಳಿದರು. ಅದಕ್ಕೆ ಅದನ್ನು ನಾಳೆ ತೆಗೆದುಕೊಳ್ಳುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, 40% ವಿಷಯವನ್ನು ತೆಗೆದುಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಇಬ್ರಾಹಿಂರವರೇ, ಏನು 40%? ತಾವು ಸದನದಲ್ಲಿ ಇಲ್ಲಿಯವರೆಗೆ ಕುಳಿತುಕೊಂಡಿದ್ದೀರಿ, ಅದಕ್ಕೆ ನಮಗೆ ಬಹಳ ಹುರುಪು ಬಂದಿದೆ. ತಾವು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ), ವಿಧೇಯಕ, 2021 ಅನ್ನು ಮಾನ್ಯ ಸಚಿವರಾದ ಡಾ|| ಸಿ.ಎನ್.ಅಶ್ವಥ್ ನಾರಾಯಣರವರು ಮಾನ್ಯ ಪ್ರಾಥಮಿಕ ಪ್ರಾಥಮಿಕ, ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರ ಪರವಾಗಿ ಸದನದಲ್ಲಿ ಪ್ರಸ್ತಾಪ ಮಾಡುತ್ತಾರೆ. ಅದಕ್ಕೆ ತಾವು ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಸಭಾನಾಯಕರೇ, ತಾವು ಇದನ್ನು ಮೊದಲೇ ಹೇಳಬಹುದಾಗಿತ್ತು ಅಲ್ಲವೇ; ಆಗಲೇ ನಾಳೆ ಎಂದು ಹೇಳಿದಕ್ಕೆ ನಾನು ಮುಂದಿನ ವಿಷಯವನ್ನು ತೆಗೆದುಕೊಂಡೆ. ಆಯಿತು. ಈಗ ತೆಗೆದುಕೊಳ್ಳಿ.

**ಎ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕ, 2021**

**ಪರ್ಯಾಲೋಚನಾ ಪ್ರಸ್ತಾವ**

**ಡಾ|| ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ), ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಡಾ|| ಸಿ.ಎನ್.ಅಶ್ವಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಈ ಮುಂಚೆ ತಂದಹ teachers' transfer Act ನಲ್ಲಿ PU Lecturers, ಪದವಿ ಪೂರ್ವ ಉಪನ್ಯಾಸಕರನ್ನು ಒಳಗೊಂಡಿರಲಿಲ್ಲ. ಅವರು ಬಿಟ್ಟು ಹೋಗಿದ್ದರು. ಹಾಗಾಗಿ, ಅವರನ್ನು ಇದರಲ್ಲಿ ಸೇರ್ಪಡೆ ಮಾಡುವಂಥದ್ದು ಆಗುತ್ತಿದೆ. ಈ ಆಕ್ಟ್‌ಗೆ ತಿದ್ದುಪಡಿಯನ್ನು ತರಲಾಗುತ್ತಿದೆ. ಈ ಮೊದಲು PU Lecturers ಗೆ compulsory transfer ಆಗುತ್ತಿತ್ತು. ಅವರಿಗೆ ಮೊದಲು counselling ಗೆ ಅಥವಾ ಆಯ್ಕೆ ಮಾಡುವುದಕ್ಕೆ ಅವಕಾಶ ಇರಲಿಲ್ಲ. ಇದರಲ್ಲಿ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

counselling ಮೂಲಕ ಅವಕಾಶವನ್ನು ಮಾಡಿಕೊಡಲಾಗಿದೆ. ಹಾಗಾಗಿ, ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ತಾವು ಏನು ಮಾತನಾಡುತ್ತೀರಿ? ಈಗ ಇದನ್ನು PU Lecturers ಗೆ extend ಮಾಡಿದ್ದಾರೆ. ಅಲ್ಲಿಗೆ ಮುಗಿಯಿತು. ಬೇರೆ ಏನಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ವಿರೋಧ ಪಕ್ಷದಿಂದ ಮಾತನಾಡಬೇಕು. ಎಲ್ಲ ಆಡಳಿತ ಪಕ್ಷದಿಂದಲೇ ಮಾತನಾಡುತ್ತಿದ್ದಾರೆ. ಇದು ಯಾವ ಸಂಪ್ರದಾಯ?

**ಶ್ರೀ ಮರಿತಿಬ್ಬೇಗೌಡ**:- ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಇಷ್ಟೊಂದು ವಿಧೇಯಕದ ಮೇಲೆ ಮಾತನಾಡುತ್ತಾರೆ? ತಾವು ವಿರೋಧ ಪಕ್ಷದವರಿಗೆ ಅವಕಾಶ ಕೊಡಿ. ಅವರೇ ವಿಧೇಯಕ ತಂದು ಅವರೇ ಮಾತನಾಡಿ ಅವರ ಬೆನ್ನನ್ನು ಅವರೇ ತಟ್ಟಿಕೊಳ್ಳುವುದು ಮಾಡುತ್ತಿದ್ದಾರೆ. ನಾವೇನು ಮಾಡಬೇಕು?

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ವಿಧೇಯಕವನ್ನು ತಂದಿದೆ. ಹಾಗಾಗಿ, ನಮಗೆ ಮಾತನಾಡುವುದಕ್ಕೆ ಹಕ್ಕು ಇದೆ.

**ಶ್ರೀ ಎಸ್.ಆರ್.ಪಾಟೀಲ್**:- ವಿರೋಧ ಪಕ್ಷದಿಂದ initiation ಆಗಬೇಕು.

**ಸಭಾಪತಿಯವರು:-** ಆಯಿತು. ಎಲ್ಲರೂ ಕುಳಿತುಕೊಳ್ಳಿ. ಶ್ರೀಕಂಠೇಗೌಡರವರು ಎರಡು ಬಾರಿ ಮಾತನಾಡುವುದಕ್ಕೆ ಸಮಯ ಕೇಳಿದ್ದರು. ಅವರಿಗೆ ಅವಕಾಶ ಕೊಟ್ಟಿರಲಿಲ್ಲ. ಹಾಗಾಗಿ, ಈಗ ಶ್ರೀಕಂಠೇಗೌಡರವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಈಗ ಅವರು ಮಾತನಾಡಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಈ ವಿಧೇಯಕವನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಈ ಕಾಯ್ದೆ ಯಾವತ್ತೋ ಆಗಬೇಕಾಗಿತ್ತು. ಬಹುಶಃ ನಮ್ಮಗಳ ಒತ್ತಡದಿಂದ ಇವತ್ತು ಈ ಕಾಯಿದೆ ಬಂದಿದೆ. ಆದರೆ, ನನ್ನ ನಾಲ್ಕು ಮಾತುಗಳಲ್ಲಿ, ಮೂರು ಸಲಹೆಗಳನ್ನು ಕೊಡ ಬಯಸುತ್ತೇನೆ. ಇದರಲ್ಲಿ ವರ್ಗಾವಣೆ ಮಿತಿಯನ್ನು 10% ಗೆ ಇಟ್ಟಿದ್ದಾರೆ. ಈ 10% ಗೆ ದಯವಿಟ್ಟು ಆದ್ಯಾತ ವಲಯವನ್ನು ಸೇರಿಸಬಾರದು. ಪತಿ-ಪತ್ನಿ ಪ್ರಕರಣ, ಕಾಯಿಲೆ ಬಿದ್ದವರು ಅಥವಾ ಅಂಗವಿಲಕರು ಈ ತರಹ 8 ರಿಂದ 10 category ಗಳಿವೆ. ಏಕೆಂದರೆ, ಕಳೆದ ಹತ್ತಾರು ವರ್ಷಗಳಿಂದ ಶಿಕ್ಷಕರಿಗೆ ವರ್ಗಾವಣೆ ಸಿಕ್ಕಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1274) 22-12-2021 (5.50) ಎಂವಿ-ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ನಿಯಮ ರೂಪಿಸುವಾಗ ದಯವಿಟ್ಟು ಆದ್ಯತಾ ವಲಯವನ್ನು ಬಿಟ್ಟು, ಈ ಹತ್ತು ಪರ್ಸೆಂಟ್ ಅನ್ನು ವರ್ಗಾವಣೆಗೆ ಇಟ್ಟುಕೊಳ್ಳಲಿ. ಇನ್ನು ಕಡ್ಡಾಯ ವರ್ಗಾವಣೆ ಬಗ್ಗೆ ನಮ್ಮ ಮಾನ್ಯ ಸಭಾಪತಿಯವರು ಯಾವಾಗಲೂ ಹೇಳುತ್ತಾರೆ. ಈಗ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೂ ಅವಕಾಶ ಮಾಡಿಕೊಟ್ಟಿದ್ದಾರೆ. ಅವರು ನಿಯಮವನ್ನು ರೂಪಿಸುವಾಗ, ಕಡ್ಡಾಯಕ್ಕೆ ಕೊಟ್ಟಿರುವುದರ ಜೊತೆಗೆ ಹೆಚ್ಚುವರಿಗೂ ಸಹ ಅವಕಾಶ ಮಾಡಿಕೊಡಲಿ. ಇದರಲ್ಲಿ ಇನ್ನು ಕೇವಲ 150 ರಿಂದ 160 ಜನರು ಮಾತ್ರ ಉಳಿದಿದ್ದಾರೆ ಅಷ್ಟೆ. ಅವರಿಗೆ ಒಂದು ಅವಕಾಶ ನೀಡಿದರೆ, ಅವರು ವಾಪಸ್ಸು ಬಂದು ಬಿಡುತ್ತಾರೆ. ಇನ್ನು ಕಡೆಯದಾಗಿ, ಪ್ರಾಂಶುಪಾಲರನ್ನು ಈ ವರ್ಗಾವಣೆಯಲ್ಲಿ ಸೇರಿಸಿದ್ದಾರೆ. ದಯಮಾಡಿ ಬೇಡ. ಏಕೆಂದರೆ, ಪ್ರಿನ್ಸಿಪಾಲ್ ಆಗುವವರು ಕೇವಲ ಆರು ತಿಂಗಳು, ಒಂದು ವರ್ಷ, ಒಂದೂವರೆ ವರ್ಷ ಮತ್ತು ಎರಡು ವರ್ಷ ಮಾತ್ರ ಇರುತ್ತಾರೆ. ಅಷ್ಟರಲ್ಲಿ ಅವರು ನಿವೃತ್ತಿ ಆಗಿಬಿಡುತ್ತಾರೆ. ಅವರು ನಿಮ್ಮ ವರ್ಗಾವಣೆಗಾಗಿ ಕಾಯುವುದಕ್ಕೆ ಆಗುವುದಿಲ್ಲ. ಅವರಿಗೆ ವರ್ಗಾವಣೆಗೆಯಾದರೆ, ಅವರು ಕಡಿಮೆ strength ಇರುವ ಕಡೆಗೆ ಹೋಗಿಬಿಡುತ್ತಾರೆ. ಅವರು ಹೆಚ್ಚು strength ಇರುವ ಕಡೆಗೆ ಬರುವುದಿಲ್ಲ. ಇಲ್ಲಿ ಬೇರೆ ರೀತಿಯ ಕಾಯ್ದೆಗಳ ಹಾಗೆ 'ಎ', 'ಬಿ', 'ಸಿ' ಮತ್ತು 'ಡಿ' ವಲಯ ಎಂದು ಹೋದರೆ, ಅವರು ಕಡಿಮೆ strength ಇರುವ 'ಸಿ' ವಲಯದ ಕಡೆಗೆ ಹೊರಟು ಹೋಗುತ್ತಾರೆ. ಐ.ಎ.ಎಸ್., ಅಧಿಕಾರಿಯಾದ್ದ ಶ್ರೀಮತಿ ಶಿಖಾರವರು ಹಾಗೆಯೇ ಮಾಡಿದರು. ಒಂದು ಬಾರಿ ವರ್ಗಾವಣೆ ಮಾಡಿದಾಗ, ಎಲ್ಲರೂ ಸಹ 'ಸಿ' ವಲಯಕ್ಕೆ ಹೋಗಿಬಿಟ್ಟರು. ಈಗ 'ಎ' ವಲಯದಲ್ಲಿ ಎರಡು ಸಾವಿರ ಮತ್ತು ಮೂರು ಸಾವಿರ ಮಕ್ಕಳು ಇರುವ ಕಡೆಗೆ ಪಾಠ ಮಾಡುವುದಕ್ಕೆ ಬರುವುದೇ ಇಲ್ಲ. ಅಂದರೆ, ಅಲ್ಲಿ ಅತಿಥಿ ಉಪನ್ಯಾಸಕರು ಪಾಠ ಮಾಡುತ್ತಾರೆ.

**ಸಭಾಪತಿಯವರು:-** ಹೌದು, ಬರುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆದುದರಿಂದ, ಈ ರೀತಿಯ ಅನಾಹುತಗಳು ಆಗದ ರೀತಿ ನೋಡಿಕೊಂಡು, ದಯಮಾಡಿ ಈ ಬಾರಿ ವರ್ಗಾವಣೆಯನ್ನು ಕೊಟ್ಟುಬಿಟ್ಟರೆ, ನಾವು ಮತ್ತು ನಮ್ಮ ಶಿಕ್ಷಕರೆಲ್ಲರೂ ಸಹ ಸಮಾಧಾನಪಟ್ಟುಕೊಳ್ಳುತ್ತೇವೆ ಮತ್ತು ಮಾನ್ಯ ಸಚಿವರಿಗೆ ಧನ್ಯವಾದ ಹೇಳುತ್ತೇವೆ. ಇನ್ನು ಏನು ಹೆಚ್ಚುವರಿ ಮಾತಿಲ್ಲ. ನಾನು ಮತ್ತೊಮ್ಮೆ ಈ ವಿಧೇಯಕವನ್ನು ಬಹಳ ಪ್ರೀತಿಯಿಂದ ಸ್ವಾಗತಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕ, 2021 ಅನ್ನು ಸ್ವಾಗತಿಸುತ್ತೇನೆ. ದಯವಿಟ್ಟು ಪ್ರತಿವರ್ಷ ಪ್ರಾಂಶುಪಾಲರಿಗೆ ಬಡ್ತಿ ಸಹ ಆಗಬೇಕು. ಅದರ ಜೊತೆಗೆ ಮಾನ್ಯ ಸಭಾಪತಿಯವರು 2007ರಲ್ಲಿ ಶಿಕ್ಷಣ ಸಚಿವರಾಗಿದ್ದಾಗ ತಂದಿದ್ದಂತಹ ವಿಧೇಯಕದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಕರ ಹಾಗೂ ಮುಖ್ಯ ಗುರುಗಳ ವರ್ಗಾವಣೆ ಇತ್ಯಾದಿ ಬಂದಿತ್ತು. ಆ ಕಾಲದಲ್ಲಿ ಯಾವುದೋ ಕಾರಣಕ್ಕೆ ಪಿ.ಯು. ಉಪನ್ಯಾಸಕರು ಮತ್ತು ಪ್ರಾಂಶುಪಾಲರ ವರ್ಗಾವಣೆ ಬಿಟ್ಟು ಹೋಗಿತ್ತೆಂದ್ದು, ಈಗ ಈ ವಿಧೇಯಕವನ್ನು ತಂದಿದ್ದಾರೆ. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಆದರೆ, ಇವತ್ತು ಕೆ.ಪಿ.ಎಸ್ ಶಾಲೆ ಬರುವ ಕಾರಣದಿಂದ ಪ್ರಾಂಶುಪಾಲರಿಗೆ ಜವಾಬ್ದಾರಿ ಜಾಸ್ತಿಯಾಗಿದ್ದೆ. ಆ ಕಾರಣದಿಂದ ದಯವಿಟ್ಟು ಈ ಪ್ರಾಂಶುಪಾಲರ ವರ್ಗಾವಣೆಯ ಅಧಿಕಾರ ಮಂತ್ರಿಗಳ ಬಳಿಯೇ ಇರಲಿ. ಅದು ಕಾಯ್ದೆಯಲ್ಲಿ ಬಂದರೆ, ನಾನಾ ತರಹದ ಸಮಸ್ಯೆಗಳು ಉಂಟಾಗುತ್ತವೆ. ಇಲ್ಲಿ ಇನ್ನೊಂದು ಏನಾಗುತ್ತದೆಂದರೆ, ಇದು ಬೇರೆ ರೀತಿ ಅಲ್ಲ. ಕೆಲವು ಗ್ರಾಮಾಂತರ ಪ್ರದೇಶದ ಕಾಲೇಜುಗಳಲ್ಲಿ 20 ರಿಂದ 30 ಜನ ವಿದ್ಯಾರ್ಥಿಗಳು ಇದ್ದಾರೆ. ಆದರೆ, ನಗರ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಬಹಳ ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಕಳೆದ ಬಾರಿ ಆಗಿದ್ದಂತಹ ಒಂದು ಸಮಸ್ಯೆಯನ್ನು ಹೇಳಬಯಸುತ್ತೇನೆ. ಅಲ್ಲಿ ನೇರವಾಗಿ ಕೌನ್ಸಿಲಿಂಗ್ ಕೊಟ್ಟುಬಿಟ್ಟರು. ಆದರೆ, ಕೌನ್ಸಿಲಿಂಗ್ ಕೊಟ್ಟಾಗ ಹತ್ತು, ಹದಿನೈದು ವರ್ಷಗಳಿಂದ ಹಳ್ಳಿಗಳಲ್ಲಿ ಕೆಲಸ ಮಾಡುತ್ತಿದ್ದಂತಹ ಪ್ರಾಂಶುಪಾಲರು ಹಾಗೆಯೇ ಉಳಿದು ಹೋದರು. ಆದರೆ, ಇವರಿಗೆ ಅವಕಾಶ ಸಿಕ್ಕಿತು. ಈಗ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಮುಖ್ಯ ಗುರುಗಳಿಗೆ ಏನು ಕಾಯ್ದೆ ಇದೆ. ಅದೇ ನಿಯಮವನ್ನು ಇಲ್ಲಿಗೆ ತರಬೇಕು. ಅದು ಏನೆಂದರೆ, ಪ್ರಾಂಶುಪಾಲರನ್ನು ವರ್ಗಾವಣೆ ಮಾಡುವಾಗ ಅಥವಾ ಬಡ್ತಿ ಕೊಡುವಾಗ ಮೊದಲು ಇದ್ದಂತಹವರಿಗೆ 'ಸಿ' ವಲಯದಿಂದ 'ಬಿ' ವಲಯಕ್ಕೆ ಹಾಗೂ 'ಬಿ' ವಲಯದಿಂದ 'ಎ' ವಲಯಕ್ಕೆ ತರಬೇಕು. ಆ ನಿಯಮವನ್ನು ಇಲ್ಲಿಗೂ ಸಹ ತೆಗೆದುಕೊಂಡು ಬರಲಿ ಎಂದು ನಾನು ಈ ವಿಚಾರಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದೇನೆ. ಬಹುಶಃ ಈ ರೀತಿ ಎರಡನ್ನು ಮಾಡಿದರೆ ಅದು ಸರಿಯಾಗುತ್ತದೆ. ಆದುದರಿಂದ, ಪ್ರಾಂಶುಪಾಲರನ್ನು ಈ ವ್ಯಾಪ್ತಿಯಿಂದ ಕೈಬಿಡಬೇಕು. ಈಗ ಯಾವುದೇ ಬಡ್ತಿ ಕೊಟ್ಟಾಗ 'ಸಿ' ವಲಯದಿಂದ 'ಬಿ' ವಲಯಕ್ಕೆ ಹಾಗೂ 'ಬಿ' ವಲಯದಿಂದ 'ಎ' ವಲಯಕ್ಕೆ ಕೊಟ್ಟು. ಆಮೇಲೆ ಇದನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊಟ್ಟ ಮೊದಲನೆಯದಾಗಿ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ನಾನು ಜಾಸ್ತಿ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಕೇವಲ ಎರಡು ಪಾಯಿಂಟ್‌ಗಳನ್ನು ಮಾತ್ರ ಹೇಳುತ್ತೇನೆ. 2018-19ನೇ ಇಸವಿಯಲ್ಲಿ ಕಡ್ಡಾಯವಾಗಿ ವರ್ಗಾವಣೆಯಾದ ಉಪನ್ಯಾಸಕರಿಗೆ ಒಂದು ಅವಕಾಶ ಕೊಡಬೇಕೆಂದು

ನಮ್ಮ ಆಗ್ರಹ. 2018-19ನೇ ಇಸವಿಯಲ್ಲಿ ಕಡ್ಡಾಯವಾಗಿ ಅವೈಜ್ಞಾನಿಕವಾಗಿ ವರ್ಗಾವಣೆಯನ್ನು ಮಾಡಲಾಯಿತು. ಈಗ ಅವರುಗಳು ಬಹಳ ಕಷ್ಟದಲ್ಲಿದ್ದಾರೆ. ಈಗ 'ಬಿ' ವಲಯದಲ್ಲಿ ಇದ್ದಂತಹ ಉಪನ್ಯಾಸಕರನ್ನು 'ಸಿ' ವಲಯಕ್ಕೆ ವರ್ಗಾಯಿಸಿದಾಗ, ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ, ಉಪನ್ಯಾಸಕರು ಜಾಸ್ತಿ ಇದ್ದಾರೆ. ಮತ್ತೆ 'ಬಿ' ವಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಇದೆ. ಆದರೆ, ಉಪನ್ಯಾಸಕರ ಸಂಖ್ಯೆ ಕಡಿಮೆ ಇದೆ. ಅದರ ಬಗ್ಗೆ ನಿಯಮ ಮಾಡಬೇಕಾದರೆ, ಅವರಿಗೆ ಒಂದು ಅವಕಾಶ ಕೊಡಬೇಕೆಂದು ನನ್ನ ಮೊದಲನೆ ಮನವಿ. ಎರಡನೆಯದಾಗಿ, ಈ ವರ್ಗಾವಣೆಯನ್ನು ಏನಾದರೂ ಮಾಡಿ ಈ ವರ್ಷ ಮಾಡಲೇ ಬೇಕು ಎಂಬುದು ನನ್ನ ಮನವಿ. ಏಕೆಂದರೆ, ವರ್ಗಾವಣೆ ಮಾಡಿ ನಾಲ್ಕು ವರ್ಷವಾಗಿದೆ. ಮೂರನೆಯದು ಮನವಿ ಏನೆಂದರೆ, ಪ್ರಾಂಶುಪಾಲರ ವರ್ಗಾವಣೆಯನ್ನು ಈ ಕಾಯ್ದೆಯಲ್ಲಿ ತರುವುದು ಬೇಡ. ದಯವಿಟ್ಟು ಅವರನ್ನು ಸರ್ಕಾರದ ಹಿಡಿತದಲ್ಲಿಟ್ಟುಕೊಳ್ಳಲಿ ಎಂದು. ನಾನು ಈ ಮೂರು ಅಂಶಗಳನ್ನು ಹೇಳಿ, ಈ ವಿಧೇಯಕಕ್ಕೆ ಸ್ವಾಗತ ಕೋರಿ, ಇದನ್ನು ಬೆಂಬಲಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಮೊಟ್ಟ ಮೊದಲನೆಯದಾಗಿ ಇಡೀ ಭಾರತ ದೇಶದಲ್ಲೇ ಶಿಕ್ಷಕರ ವರ್ಗಾವಣೆ ನಿಯಂತ್ರಣ ಕಾಯ್ದೆ ಬಂದದ್ದು ಕರ್ನಾಟಕ ರಾಜ್ಯದಲ್ಲಿ. ಅದರ ಪಿತಾಮಹರೆ, ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು. ಏಕೆಂದರೆ, ಎಷ್ಟೋ ಶಾಲೆಗಳಲ್ಲಿ ಶಿಕ್ಷಕರು ನಿಲ್ಲುತ್ತಿರಲಿಲ್ಲ. ಇವತ್ತು ಭಾರತ ದೇಶದ ನಾನಾ ರಾಜ್ಯಗಳಲ್ಲಿ ಶಿಕ್ಷಕರ ವರ್ಗಾವಣೆ ಕಾಯ್ದೆಯನ್ನು ಶಿಕ್ಷಕರಿಗೆ ಮತ್ತು ಇತರೆ ಇಲಾಖೆಯವರಿಗೆ ಕೂಡ ಈ ಕಾಯ್ದೆಯನ್ನು ತರುತ್ತಿದ್ದಾರೆ. ಈ ಕಾಯ್ದೆ ಒಂದು ದೊಡ್ಡ ಮಾದರಿಯಾಗಿರುವಂಥದ್ದು. ಏಕೆಂದರೆ, ವಿದ್ಯಾರ್ಥಿಗಳಿಗೆ ಎಲ್ಲಾ ಕಡೆಗಳಲ್ಲಿ ಶಿಕ್ಷಕರು ಸಿಗಬೇಕು ಮತ್ತು ಎಲ್ಲಾ ಕಡೆಗಳಲ್ಲಿ ಪಾಠಗಳು ನಡೆಯಬೇಕು. ಈಗ ಯಾವುದೋ ಒತ್ತಡ ಮತ್ತು ಶಿಫಾರಸ್ಸಿನ ಮೇಲೆ ಒಂದೇ ಕಡೆಗೆ ಶಿಕ್ಷಕರು ಬಂದು ಬಿಡುತ್ತಾರೆ. ಆಗ ಬೇರೆ ಕಡೆಗಳಲ್ಲಿ ಶಿಕ್ಷಕರು ಇರುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ, ಈ ಭಾಗದ ಏಳು ಜಿಲ್ಲೆಗಳಲ್ಲಿ ಶಿಕ್ಷಕರೇ ನಿಲ್ಲುತ್ತಿರಲಿಲ್ಲ. ಆಗ ವಿಶೇಷವಾದಂತಹ ಒಂದು ನಿಯಮ ರೂಪಿಸಿದರು. ಈ ಜಿಲ್ಲೆಗಳಲ್ಲಿ ನೇಮಕಗೊಂಡವರು ಕನಿಷ್ಠ ಹತ್ತು ವರ್ಷ ಇದೇ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಬೇಕು ಎಂದು. 2006-07ನೇ ಸಾಲಿನಲ್ಲಿ ಮಾನ್ಯ ಸಭಾಪತಿಗಳಾದ ಸನ್ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಅಂದಿನ ಶಿಕ್ಷಣ ಸಚಿವರಾಗಿ ಇದೆಲ್ಲಾ ಶೋಷಣೆಯನ್ನು ತಪ್ಪಿಸಬೇಕು ಮತ್ತು ಮಕ್ಕಳಿಗೆ ಒಂದು ಒಳ್ಳೆಯ ಶಿಕ್ಷಣ ಕೊಡಬೇಕೆಂದು ಈ ಮಸೂದೆಯನ್ನು ತಂದರು. ಅಲ್ಲಿಂದ ಇದಕ್ಕೆ ಹಲವಾರು ತಿದ್ದುಪಡಿಗಳಾಗಿದೆ. ನಾನು ಇದಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಅಂದಿನ ಅಧಿವೇಶನದಲ್ಲಿ ಈ ವಿಧೇಯಕ ಪಾಸ್ ಆಗಿರುವುದು ಒಂದು ಇತಿಹಾಸ. ಅಂದು ಈ ವಿಧೇಯಕ ಬೆಳಗಿನ ಜಾವ 3 ಗಂಟೆ 25 ನಿಮಿಷಕ್ಕೆ ಪಾಸ್ ಆಯಿತು. ಅಂದು ವಿಧಾನ ಪರಿಷತ್ತಿನ ಅಧಿವೇಶದ ಕೊನೆಯ ದಿನದಲ್ಲಿ, ಅದುವರೆಗೂ ಕೂಡ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿವೇಶನ ರಾತ್ರಿ ಒಂದು ಗಂಟೆಯವರೆಗೆ ನಡೆದಿತ್ತು. ದಯಮಾಡಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದಕ್ಕೆ ಅನೇಕ ತಿದ್ದುಪಡಿಗಳಾಗಿವೆ. ಈ ತಿದ್ದುಪಡಿಗಳು ಆಗುತ್ತಾ, ಆಗುತ್ತಾ ಮತ್ತೆ ಒಂದು ಕಡೆ ನಮ್ಮ ಪದವಿ ಪೂರ್ವ ಉಪನ್ಯಾಸಕರುಗಳಿಗೆ ಶೋಷಣೆಗಳು ಸಹ ಆಗುತ್ತಿದೆ. ಇದರ ತಿದ್ದುಪಡಿಗೋಸ್ಕರ ನಾಲ್ಕು ವರ್ಷದಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವರ್ಗಾವಣೆಯಾಗಿಲ್ಲ. ನಾಲ್ಕು ವರ್ಷದಿಂದ ವರ್ಗಾವಣೆಯಾಗದೆ ಇರುವುದಕ್ಕೆ ಬಹಳಷ್ಟು ಮಂದಿಗೆ ನೋವಾಗಿದೆ. ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚು ಮಹಿಳಾ ಉಪನ್ಯಾಸಕಿಯರೇ ಇದ್ದಾರೆ. ಅವರೆಲ್ಲರಿಗೂ ಸಹ ತುಂಬಾ ನೋವಾಗಿದೆ.  ಇದರ ನಡುವೆ ಇದಕ್ಕೆ ಒಂದು ತಿದ್ದುಪಡಿ ತಂದು ಕಡ್ಡಾಯ ವರ್ಗಾವಣೆ ಎಂದು ಮಾಡಿಬಿಟ್ಟರು. ಅದರಿಂದ ಅವರಿಗೆ ಇನ್ನೂ ಹೆಚ್ಚಿನ ತೊಂದರೆಯಾಗಿಬಿಟ್ಟಿತು. ಆದ್ದರಿಂದ ಕಡ್ಡಾಯ ವರ್ಗಾವಣೆಯಾಗಿ ಅದರಿಂದ ನೊಂದಂತಹವರಿಗೆ ಮತ್ತೆ ಪರಿಹಾರ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಅದಕ್ಕೆ ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಅವರು ಮತ್ತೊಂದು ಏನು ಮಾಡಿದ್ದಾರೆಂದರೆ, ಈಗ ಹೊಸದಾಗಿ ನೇಮಕಗೊಂಡವರಿಗೆ ಮತ್ತು ಬಡ್ತಿ ಪಡೆದವರಿಗೂ ಕೂಡ 'ಸಿ' ವಲಯಕ್ಕೆ ಕಳುಹಿಸುತ್ತೇವೆಂದು ಇದೆ. ಈಗ ಹೊಸದಾಗಿ ನೇಮಕಗೊಂಡವರಿಗೆ 'ಸಿ' ವಲಯಕ್ಕೆ ಹಾಕುವುದು ಅದು ಸರಿ ಮತ್ತು ನ್ಯಾಯಸಮ್ಮತವಾಗಿದೆ. ಈಗ ಮೊದಲು ಉಪನ್ಯಾಸಕರು ಇಪ್ಪತ್ತು ವರ್ಷ 'ಸಿ' ವಲಯದಲ್ಲಿ ಕರ್ತವ್ಯ ನಿರ್ವಹಿಸಿ, ಅವರು ಬಡ್ತಿ ಪಡೆದಾಗ ಮತ್ತೆ ಅವರನ್ನು 'ಸಿ' ವಲಯದಲ್ಲೇ ಹಾಕುತ್ತೇವೆಂದು ಈ ವಿಧೇಯಕದಲ್ಲಿ ಇದೆ. ಇದನ್ನು ದಯಮಾಡಿ ನಿಯಮ ಮಾಡುವಾಗ ಸರಿಪಡಿಸಬೇಕು. ಉದಾಹರಣೆಗೆ; ಈಗ ನಾನು ಬಡ್ತಿ ಪಡೆಯುವ ಸಂದರ್ಭದಲ್ಲಿ 'ಸಿ' ವಲಯದಲ್ಲಿ ಕರ್ತವ್ಯ ನಿರ್ವಹಿಸಿದ್ದರೆ, ದಯಮಾಡಿ ನಾನು ಬಡ್ತಿ ಪಡೆದಾಗ ಖಾಲಿ ಇರುವಂತಹ 'ಎ' ಅಥವಾ 'ಬಿ' ವಲಯಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮಾನ್ಯ ಸಚಿವರೆ, ಅದನ್ನು ನೀವು ಪರಿಗಣಿಸಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮೂರನೇ ಅಂಶ ಏನೆಂದರೆ, ಈಗ ಸುಮಾರು ಹತ್ತು ವರ್ಷ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುವವರು ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರ ಇದ್ದಾರೆ. ಈಗ ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚು ಎಂದರೆ, ಆರು ತಿಂಗಳು, ಒಂದು ವರ್ಷ, ಎರಡು ವರ್ಷ, ಮೂರು ವರ್ಷ ಅಥವಾ ಐದು ವರ್ಷಗಳಷ್ಟು ಮಾತ್ರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಾರೆ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(1275) 22.12.2021 06.00 LL-GR **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ(ಮುಂದು)**

ದಯವಿಟ್ಟು ಈ ವರ್ಗಾವಣೆಯನ್ನು ಪಿ.ಯು., ಕಾಲೇಜು ಪ್ರಾಂಶುಪಾಲರ ವರ್ಗಾವಣೆಯಿಂದ ಕೈಬಿಡತಕ್ಕಂಥದ್ದು ಸೂಕ್ತ. ಏಕೆಂದರೆ, ಇದು ಆಡಳಿತಾತ್ಮಕ ಹುದ್ದೆಯಾಗಿರುವುದರಿಂದ, ಅವರನ್ನು ಯಾವಾಗ ಬೇಕಾದರೂ ವರ್ಗಾವಣೆ ಮಾಡುವಂಥದ್ದನ್ನು ಮಾಡಬೇಕು. ಇಲ್ಲವಾದರೆ, ಈ ವರ್ಗಾವಣೆಯನ್ನು ಪ್ರಾಂಶುಪಾಲರಿಗೆ 3 ವರ್ಷಕ್ಕೆ ಸೀಮಿತಗೊಳಿಸಬೇಕು. ಅಂದರೆ, 3 ವರ್ಷ ಕಳೆದ ನಂತರ ಅವರನ್ನು ವರ್ಗಾವಣೆ ಮಾಡಬಹುದು ಎಂದು ಮಾಡಬೇಕು. ಏಕೆಂದರೆ, ಕೆಲವರು ಪ್ರಾಂಶುಪಾಲರಾಗಿ ಸುಮಾರು 09 ವರ್ಷಗಳು ಆಗಿರುತ್ತದೆ. ಇದರಿಂದಾಗಿ, ಅವರು ಆ ಕಾಲೇಜನ್ನು ಅಭಿವೃದ್ಧಿ ಮಾಡುವುದಿಲ್ಲ ಅಥವಾ ಏನೂ ಮಾಡುವುದಿಲ್ಲ. ಅಂತಹವರಿಗೆ ಅಲ್ಲಿ ಶೆಲ್ಟರ್ ಕೊಟ್ಟಂತೆ ಆಗುತ್ತದೆ. ಒಂದು ವೇಳೆ ವರ್ಗಾವಣೆಯನ್ನು ಪ್ರಾಂಶುಪಾಲರಿಗೂ ಇಟ್ಟುಕೊಳ್ಳಬೇಕೆಂದರೆ, 03 ವರ್ಷಕ್ಕೊಮ್ಮೆ ಅವರನ್ನು ಖಾಲಿ ಇರುವ ಕಡೆಗೆ ವರ್ಗಾವಣೆ ಮಾಡತಕ್ಕಂಥ ತಿದ್ದುಪಡಿ ಇನ್ನೂ ಕೂಡ ಉಪಯುಕ್ತವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ದಯಮಾಡಿ, ಈ ವರ್ಗಾವಣೆ ಪ್ರಾರಂಭ ಮಾಡುವ ಪ್ರಾರಂಭದಲ್ಲಿ ಕಡ್ಡಾಯ ವರ್ಗಾವಣೆಯವರಿಗೆ ಮೊದಲು ರಿಲೀಫ್ ಕೊಡಬೇಕು.

ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರವರು ಹೇಳಿದ ಹಾಗೆ, ಪತಿ-ಪತ್ನಿಯರು ಮತ್ತು ಅಂಗವಿಕಲರನ್ನು ಹಾಗೂ ವಿಶೇಷ ಪ್ರಕರಣದಡಿ ಬರತಕ್ಕಂತಹವರನ್ನು ಶೇಕಡ 10ಕ್ಕಿಂತ ಹೊರತಾಗಿ ಅವರ ವರ್ಗಾವಣೆಗಳನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇದರ ಜೊತೆಗೆ, ಈ ಶೈಕ್ಷಣಿಕ ವರ್ಷ ಮಾರ್ಚ್ ತಿಂಗಳು ಮುಗಿದ ನಂತರ, ವರ್ಗಾವಣೆ ಭಾಗ್ಯಕ್ಕಾಗಿಯೇ ಕಾಯುತ್ತಾ ಕುಳಿತಿರುವಂತಹವರಿಗೆ ವರ್ಗಾವಣೆ ಭಾಗ್ಯವನ್ನು ತಕ್ಷಣ ಕಲ್ಪಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಈ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವರೇ ಈ ವಿಧೇಯಕಕ್ಕೆ ಉತ್ತರ ಕೊಡುತ್ತಿರುವುದರಿಂದ, ದಯಮಾಡಿ ಉನ್ನತ ಶಿಕ್ಷಣ ಇಲಾಖೆಯಲ್ಲಿ ವರ್ಗಾವಣೆ ಕಾಯಿದೆ ಆಗಲಿ ಮತ್ತೊಂದಾಗಲಿ ಇರುವುದಿಲ್ಲ. ಮಾನ್ಯ ಸಭಾಪತಿಯವರು ಈ ಹಿಂದೆ ಇದೇ ಸದನದಲ್ಲಿ, ಡೆಪ್ಯೂಟೇಷನ್ ಮೇಲೆ ವರ್ಗಾವಣೆ ಮಾಡಿರುವ ಬಗ್ಗೆ ವಾದಗಳನ್ನು ಮಾಡಿರುತ್ತಾರೆ. ಅದರಂತೆ, ಈ ಭಾಗದಲ್ಲಿ ಇರತಕ್ಕಂತಹವರೆಲ್ಲರೂ ಸಹ ಡೆಪ್ಯೂಟೇಷನ್ ತೆಗೆದುಕೊಂಡು ಆ ಭಾಗಕ್ಕೆ ಬಂದರು. ಆದರೆ, ಆ ಭಾಗದಲ್ಲಿ ಇರತಕ್ಕಂತಹವರಲ್ಲಿ ಕೆಲವೇ ಕೆಲವು ಮಂದಿ, ಈ ಭಾಗದಲ್ಲಿ ಉಪನ್ಯಾಸಕರು ಇಲ್ಲವೆಂದು ದೊಡ್ಡ ಹೋರಾಟ ಮಾಡಿದರು. ಆದುದರಿಂದ, ಅದನ್ನು ಹಿಂಪಡೆಯಬೇಕೆಂದು ಒತ್ತಾಯ ಮಾಡಿದರು. ಆಗ ಮಾನ್ಯ ಉನ್ನತ ಶಿಕ್ಷಣ ಸಚಿವರು ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದರು. ಆದರೆ, ಇದುವರೆವಿಗೂ ಅದನ್ನು ಹಿಂಪಡೆಯದೇ, ವರ್ಗಾವಣೆಗೆ ಹೊಸ ನೀತಿಯನ್ನು ಮಾಡಿದರು. ಸದರಿ ಹೊಸ ವರ್ಗಾವಣೆ ನಿಯಮಾವಳಿಯನ್ನು ಕೆ.ಎ.ಟಿ., ಸಂಪೂರ್ಣವಾಗಿ ವಜಾ ಮಾಡಿರುತ್ತದೆ. ಉನ್ನತ ಶಿಕ್ಷಣ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇಲಾಖೆಯ ಉನ್ನತ ಅಧಿಕಾರಿಗಳು, ಶಾಸಕರಾದ ನಾವುಗಳು ಎಷ್ಟು ಹೇಳಿದರೂ ನಮ್ಮ ಮಾತನ್ನು ಕೇಳಲಿಲ್ಲ. ಆದರೂ, ಅಂತಹ ಕೆಟ್ಟ ವರ್ಗಾವಣೆ ನೀತಿಯನ್ನು ತಂದರು. ಮಾನ್ಯ ನ್ಯಾಯಾಲಯ ಅದನ್ನು ಕಿತ್ತು ಆಚೆಗೆ ಬಿಸಾಕಿತು. ಆದುದರಿಂದ, ದಯಮಾಡಿ ಈ ಕೂಡಲೇ ಒಂದು ಹೊಸ ವರ್ಗಾವಣೆ ನೀತಿಯನ್ನು ಮಾಡಬೇಕು. ಏಕೆಂದರೆ, ಆ ಇಲಾಖೆಯಲ್ಲಿ ಸುಮಾರು 10 ವರ್ಷಗಳಿಂದ ವರ್ಗಾವಣೆ ಇರುವುದಿಲ್ಲ. ಇದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿರುವ ಭೀಕರ ಸಮಸ್ಯೆಯಾಗಿದೆ. ಆ ವರ್ಗಾವಣೆಯನ್ನು ಕೂಡ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ, ತಕ್ಷಣ ಜಾರಿಗೆ ಕೊಡಬೇಕೆಂದು ಹೇಳಿ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕ, 2021 ಅನ್ನು ನಾನು ಅನುಮೋದಿಸುತ್ತೇನೆ. ಇದರಲ್ಲಿ ಅತ್ಯಂತ ಪ್ರಮುಖವಾದಂತಹ ಸಲಹೆಗಳನ್ನು ಮಾತ್ರ ಕೊಡುತ್ತೇನೆ. ಬದಲಾಗಿ, ನಾನು ಭಾಷಣ ಮಾಡುವುದಿಲ್ಲ. ಈ ವಿಧೇಯಕದಲ್ಲಿ ಪ್ರಾಂಶುಪಾಲರನ್ನು ಯಾವುದೇ ಕಾರಣಕ್ಕೂ ಕೌನ್ಸಿಲಿಂಗ್‌ಗೆ ಸೇರಿಸಬಾರದು. ಆದರೆ, ಪ್ರಮೋಷನ್ ಕೊಡುವಂತಹ ಸಂದರ್ಭದಲ್ಲಿ ಕೌನ್ಸಿಲಿಂಗ್ ಮಾಡಲಿ. ಆ ಸಂದರ್ಭದಲ್ಲಿ ಒಟ್ಟಿಗೆ 50 ರಿಂದ 100 ಜನ ಪ್ರಮೋಷನ್ ಆಗುತ್ತಾರೆ. ಆಗ ಕೌನ್ಸಿಲಿಂಗ್ ಮಾಡಲಿ. ಕೌನ್ಸಿಲಿಂಗ್ ಮಾಡುವಾಗ ಇಲಾಖೆಯವರು ಹೇಗೆ ಮಾಡುತ್ತಾರೆಂದರೆ, 100 ವಿದ್ಯಾರ್ಥಿಗಳು ಇರುವಂತಹ ಕಾಲೇಜುಗಳಿಗೆ ಪ್ರಾಂಶುಪಾಲರನ್ನು ಕೊಡುತ್ತಾರೆ. ಆದರೆ, 2000 ವಿದ್ಯಾರ್ಥಿಗಳು ಇರುವಂತಹ ಕಾಲೇಜುಗಳಿಗೆ ಪ್ರಾಂಶುಪಾಲರನ್ನು ಕೊಡುವುದಿಲ್ಲ. ಆ ರೀತಿ ರೂಲ್ಸ್‌ಗಳನ್ನು ಮಾಡಿಕೊಂಡಿರುತ್ತಾರೆ. ಅಂದರೆ, 1000 ಅಥವಾ 2000 ವಿದ್ಯಾರ್ಥಿಗಳು ಇರುವಂತಹ ಕಾಲೇಜುಗಳಲ್ಲಿ actual ಆಗಿ ಪ್ರಾಂಶುಪಾಲರನ್ನು ಕೊಡಬೇಕು. ಆದರೆ, ಅಲ್ಲಿ ಪ್ರಾಂಶುಪಾಲರನ್ನು ಕೊಡುವುದಿಲ್ಲ. ಏಕೆಂದರೆ, ಆ ಕಾಲೇಜನ್ನು ‘A place’ ಎನ್ನುತ್ತಾರೆ. ‘C place’ ಇರುವ ಕಾಲೇಜುಗಳಲ್ಲಿ 60 ರಿಂದ 100 ವಿದ್ಯಾರ್ಥಿಗಳು ಇರುವ ಕಡೆ ಪ್ರಾಂಶುಪಾಲರನ್ನು ಕೊಡುತ್ತಾರೆ. ಆ ರೀತಿ ಆಗಬಾರದು. ಅದರಲ್ಲಿ ಮುಕ್ತ ಅವಕಾಶ ಇರಬೇಕು. ಎಲ್ಲೆಲ್ಲಿ Taluk Headquarters ಮತ್ತು District Headquarters ನಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಓದುತ್ತಿದ್ದಾರೆ, ಅಲ್ಲಿಗೆ ಪ್ರಾಂಶುಪಾಲರನ್ನು ಕಡ್ಡಾಯವಾಗಿ ಕೊಡಬೇಕು. ಆ ರೀತಿಯ ರೂಲ್ಸ್ ಮಾಡಬೇಕು.

ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಹೈಯರ್ ಎಜುಕೇಷನ್‌ನಲ್ಲಿ ಕೆಲವು ಅಧಿಕಾರಿ ಮಹಾಶಯರು ಹೇಗೆ ರೂಲ್ಸ್ ಮಾಡಿದ್ದಾರೆಂದರೆ, ಉದಾಹರಣೆಗೆ ಹೇಳುವುದಾದರೆ ಸೀನಿಯಾರಿಟಿ ತೆಗೆದುಕೊಳ್ಳುವುದನ್ನು ಕಾಲೇಜಿನ ಸೀನಿಯಾರಿಟಿ ಮೇರೆಗೆ ಪರಿಗಣನೆಗೆ ತೆಗೆದುಕೊಳ್ಳುತ್ತಾರೆ. ಅಂದರೆ, ಕಾಲೇಜಿನ ಸೇವಾವಧಿಯನ್ನು ಪರಿಗಣಿಸುತ್ತಾರೆ. ಉದಾಹರಣೆಗೆ, ಬೆಳಗಾವಿಯಲ್ಲಿ ಎರಡು ಕಾಲೇಜು ಇದ್ದು,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ಕಾಲೇಜಿನಿಂದ ಆ ಕಾಲೇಜಿಗೆ ಹೋಗಿದ್ದರೆ, ಆ ಕಾಲೇಜಿನ ಸೇವಾವಧಿಯನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಾರೆ. ಅಂದರೆ, ಬೆಳಗಾವಿಯ ಮತ್ತೊಂದು ಕಾಲೇಜಿನಲ್ಲಿ ಮಾಡಿರುವ ಸೇವೆ ಅವರಿಗೆ ಲೆಕ್ಕ ಇರುವುದಿಲ್ಲ. ಇದನ್ನು ಕೆ.ಎ.ಟಿ., heldup ಮಾಡಿರುತ್ತದೆ. ಅದೇ ರೀತಿ ಇಲ್ಲಿಯೂ ಕೂಡ ಮಾಡಿರುತ್ತಾರೆ. ಈ ಬಗ್ಗೆ ತಮಗೆ ಚೆನ್ನಾಗಿ ಗೊತ್ತಿರುತ್ತದೆ. ಈ ವರ್ಗಾವಣೆಗೆ ಸಂಬಂಧಪಟ್ಟಂತೆ, ಕನಕಪುರದಿಂದ ಒಬ್ಬ ಶಿಕ್ಷಕರು ನನಗೆ ಒಂದು ಮೆಸೇಜ್ ಕಳುಹಿಸಿರುತ್ತಾರೆ. ಅದರಂತೆ, ವರ್ಗಾವಣೆಯಲ್ಲಿ ಸದರಿ ಶಿಕ್ಷಕರದ್ದೇ ಮೊದಲ ಹೆಸರಾಗಿದ್ದು, ಅವರು ಆ ಬಗ್ಗೆ ವಿಚಾರಿಸಲು ನಿನ್ನೆಯ ದಿವಸ ಹೋಗಿದ್ದು, ಅವರ ವರ್ಗಾವಣೆ ಆಗಿರುವುದಿಲ್ಲ. ಅದಕ್ಕೆ ಅಧಿಕಾರಿಗಳು, “ಶೇಕಡ 25 ರಷ್ಟು ಒಳಗಡೆ ಇದೆ, ವರ್ಗಾವಣೆ ಮಾಡುವುದಕ್ಕೆ ಬರುವುದಿಲ್ಲ” ಎಂದು ಕಾರಣ ನೀಡಿರುತ್ತಾರೆ. ಆ ಶಿಕ್ಷಕರ ಮಗುವಿಗೆ ಮೊದಲನೆಯ ಬಾರಿ ತೆರೆದ ಶಸ್ತ್ರ ಚಿಕಿತ್ಸೆ ಮಾಡಿದ್ದು, ಎರಡನೆಯ ಬಾರಿ ಶಸ್ತ್ರ ಚಿಕಿತ್ಸೆಗೆ ಆ ಮಗು ಒಳಗಾಗಬೇಕು. ಅವರಿಗೆ ವರ್ಗಾವಣೆ ನೀಡಿರುವುದಿಲ್ಲ. ಅಂದರೆ, ಹೃದಯಹೀನ ಅಧಿಕಾರಿಗಳು ಮಾಡುವಂತಹ ರೂಲ್ಸ್‌ಗಳ ಇವು. ಈ ಕಾಯಿದೆಗಳಲ್ಲಿ ಅವರಿಗೆ ಇಷ್ಟ ಬಂದ ಹಾಗೆ ಏನೇನು ಸೇರಿಸಬೇಕೋ ಅದನ್ನು ಸೇರಿಸುತ್ತಾರೆ. ಈ ಕಾಯಿದೆಗಳನ್ನು ಮಾಡುವಂತಹ ಅಧಿಕಾರಿಗಳ ಹೆಂಡತಿ ಮಕ್ಕಳಿಗೆ ತೊಂದರೆಯಾದರೆ, ಈ ಯಾವುದೇ ಕಾಯಿದೆಗಳು ಅವರಿಗೆ ಮಾನ್ಯ ಆಗುವುದಿಲ್ಲ. ಇವರಿಗೆ ಎಲ್ಲಾ ಸೌಲಭ್ಯಗಳು ಬೇಕು. ಆದರೆ, ಬೇರೆಯವರ ಹೆಂಡತಿ ಮಕ್ಕಳ ಮೇಲೆ experiment ಮಾಡುವ ರೀತಿ ಮಾಡುತ್ತಾರೆ.

ಆದುದರಿಂದ, ನಾನು ಹೇಳುವುದೇನೆಂದರೆ, ಇದರಲ್ಲಿ ವಿಶೇಷವಾಗಿ ಹೆಲ್ತ್ ಗ್ರೌಂಡ್ಸ್ ಮೇಲೆ ಎಲ್ಲಾ ಕಾಯಿದೆಗಳನ್ನು ಬದಿಗೊತ್ತಿ ಅವರಿಗೆ ವರ್ಗಾವಣೆ ಕೊಡಬೇಕು. ಉದಾಹರಣೆಗೆ, ಕ್ಯಾನ್ಸರ್ ರೋಗಿ ಅಥವಾ ಕಿಡ್ನಿ ರೋಗಿಗಳು ಯಾವ ವರ್ಗಾವಣೆಗಾಗಲಿ ಅಥವಾ ಕೌನ್ಸಿಲಿಂಗ್‌ಗಾಗಲಿ ಕಾಯುವುದಕ್ಕೆ ಆಗುತ್ತದೆಯೇ? ಅವರೆಲ್ಲರಿಗೂ ವಿಶೇಷ ಆದ್ಯತೆ ಕೊಡಬೇಕು. ಏಕೆಂದರೆ, ಕಾಯಿಲೆ ಬರುವಂಥದ್ದು, ಯಾರನ್ನೂ ಹೇಳಿ ಕೇಳಿ ಬರುವುದಿಲ್ಲ. ಅದಕ್ಕೂ ಸಹ, “ವರ್ಗಾವಣೆ ನಿಯಂತ್ರಣ ಮಸೂದೆ ಇದೆಯೆಂದು ಹೇಳಿ, 5 ವರ್ಷ ಅಥವಾ 6 ವರ್ಷ ಆಗಲಿ ನೀನು ಅಲ್ಲಿಯೇ ಸಾಯಿ” ಎಂದು ಹೇಳಿವುದು ಯಾವ ನ್ಯಾಯ? ಅದಕ್ಕೆ ದಯಮಾಡಿ ಈ ತಿದ್ದುಪಡಿಯಲ್ಲಿ ಆ ವಿಷಯವನ್ನು ಸೇರಿಸಬೇಕು. ಇದರ ಜೊತೆಗೆ, ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಯವರಿಗೆ ಒಂದು ಆದ್ಯತೆ ಕೊಡಬೇಕು. ಈ ಬಗ್ಗೆ ತಮಗೆ ಚೆನ್ನಾಗಿ ಗೊತ್ತಿದೆ.

**ಸಭಾಪತಿಯವರು:-** ಕಡ್ಡಾಯ ವರ್ಗಾವಣೆ ಎನ್ನುವುದು ಕಾನೂನಿನಲ್ಲಿ ಇಲ್ಲ. ಅದನ್ನು ಯಾರೋ illegal ಆಗಿ ಮಾಡಿರುತ್ತಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಹೌದು ತಾವು ಹೇಳುವುದು ಸರಿಯಿದೆ. ಇದರಲ್ಲಿಯೂ ಸಹ ಏನು ತೊಂದರೆ ಕೊಡುತ್ತಾರೆಂದರೆ, ಈಗ ವಾಪಸ್ಸು ಹಾಕುತ್ತೇವೆಂದು ಹೇಳಿದ್ದಾರೆ. ಅಂದರೆ, ಅದೇ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ತಾಲ್ಲೂಕು ಅಥವಾ ಅದೇ ಜಿಲ್ಲೆ ಎಂದು ಹಾಕುತ್ತಾರೆ. ಆದರೆ, ಅಲ್ಲಿ ಹುದ್ದೆಗಳು ಖಾಲಿ ಇರದೇ ಭರ್ತಿ ಆಗಿದ್ದರೆ, ಅವರು ಇಲ್ಲಿಗೆ ಬರುವ ಹಾಗೆಯೇ ಇಲ್ಲ. ಅಂದರೆ, ಕಂಡೀಷನ್ ಹೇಗೆ ಮಾಡುತ್ತಾರೆಂದರೆ, ಉದಾಹರಣೆಗೆ ಪತಿ-ಪತ್ನಿ ಪ್ರಕರಣ ಹೇಳಬಹುದು. ಈ ಬಗ್ಗೆ ತಮಗೆ ಗೊತ್ತಿರುತ್ತದೆ. ಅಂದರೆ, ಪ್ರಾಥಮಿಕ ಶಾಲೆಯಲ್ಲಿ ಪತಿ-ಪತ್ನಿ ಪ್ರಕರಣವನ್ನು ಹೈಸ್ಕೂಲ್ ಅನ್ನು ತಾಲ್ಲೂಕನ್ನು ಘಟಕವಾಗಿ ಪರಿಗಣಿಸುತ್ತಾರೆ. ಈ ದೇಶದಲ್ಲಿ ಎಲ್ಲಿಯಾದರೂ ತಾಲ್ಲೂಕನ್ನು ಘಟಕವಾಗಿ ತೆಗೆದುಕೊಂಡಿರುವುದು ಸಾಧ್ಯವಿದೆಯೇ? ಅದು ಡಿವಿಷನ್ ಇದ್ದು, ಯಾವನೋ ತಲೆ ಮಾಸಿದ ಒಬ್ಬ ಕ್ಲರ್ಕ್ ಅದನ್ನು ಘಟಕ ಎಂದು ಸೇರಿಸಿರುತ್ತಾನೆ. ಇದರಿಂದಾಗಿ, ಪತಿ-ಪತ್ನಿ ಪ್ರಕರಣದಲ್ಲಿ ಯಾರು ಬರುವ ಹಾಗೆಯೇ ಇಲ್ಲ. ಅಂದರೆ, ಈ ರೀತಿಯ ಲೆಕ್ಕವನ್ನು ಇವರೆಲ್ಲರೂ ಮಾಡುತ್ತಾರೆ. ಆದುದರಿಂದ, ದಯಮಾಡಿ ಡಿವಿಷನ್ ವೈಸ್ ವರ್ಗಾವಣೆ ಕೊಡಬೇಕು. ಅಂದರೆ, ಕಡ್ಡಾಯ ಮತ್ತು ಹೆಚ್ಚುವರಿ ಉಪನ್ಯಾಸಕರಿಗೆ ವರ್ಗಾವಣೆ ಕೊಡಬೇಕು. ಜೊತೆಗೆ, ಪ್ರಾಂಶುಪಾಲರನ್ನು ಯಾವುದೇ ಕಾರಣಕ್ಕೂ Taluk Headquarters ಮತ್ತು District Headquarters ಗಳ ಎಲ್ಲಾ ಕಾಲೇಜುಗಳಿಗೆ ಭರ್ತಿ ಮಾಡಬೇಕು. ನಂತರ, ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳು ಇರುವ ಕಾಲೇಜುಗಳಿಗೆ ಪ್ರಾಂಶುಪಾಲರನ್ನು ಕೊಡಬೇಕು. ಆದರೆ, ಈಗ ಅದು ಉಲ್ಟಾ ಇದೆ. ದಯಮಾಡಿ ಅದನ್ನು ಮಾನ್ಯ ಸಚಿವರು ಸರಿ ಮಾಡುತ್ತಾರೆಂದು ನಾನು ಭಾವಿಸುತ್ತೇನೆ. ಮಾನ್ಯ ಸಭಾಪತಿಯವರಾದ ತಾವುಗಳೇ ಈ ವಿಧೇಯಕವನ್ನು ತಂದಿದ್ದು, ಆ ಸಂದರ್ಭದಲ್ಲಿ ನಾವೆಲ್ಲರೂ ಸಹ ಇದೇ ಸದನದಲ್ಲಿ ಜಗಳ ಆಡಿ, ಕೊನೆಯದಾಗಿ ಬೆಳಗಿನ ಜಾವ 03.30 ಗಂಟೆಗೆ ವಿಧೇಯಕಕ್ಕೆ ಅನುಮೋದನೆ ದೊರೆತಿರುತ್ತದೆ. ತಾವು ಒಳ್ಳೆಯ ಕಾನೂನನ್ನು ತಂದಿರುತ್ತೀರಿ. ಇದರಿಂದಾಗಿ, ಎಲ್ಲರಿಗೂ ಅನುಕೂಲವಾಗಿರುತ್ತದೆ.

**ಸಭಾಪತಿಯವರು:-** ತಾವು ಆ ಸಮಯದಲ್ಲಿ ಈ ರೀತಿ ಹೇಳಿರುವುದಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಹೌದು. ಆ ಸಮಯದಲ್ಲಿ ಈ ರೀತಿ ಹೇಳಿರುವುದಿಲ್ಲ. ಆಗಲೂ ಇದೇ ವಿಷಯವನ್ನು ಹೇಳಿರುತ್ತೇವೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಸುಮಾರು 06 ತಿಂಗಳವರೆಗೆ ಕೋಲ್ಡ್ ಸ್ಟೋರೇಜ್‌ಗೆ ಹಾಕಿದ್ದರು. ಆ ನಂತರ ಈ ವಿಧೇಯಕವನ್ನು ಅನುಮೋದನೆ ಮಾಡ್ಡಿರುತ್ತಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರೇ ಶಿಕ್ಷಣ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಇದು ಬಹಳ ಸುಲಭವಾಗಿ ಆಗುತ್ತದೆಯೆಂದು, ಹೆಲ್ತ್‌ಗೆ ಮೊದಲು ಆದ್ಯತೆಯನ್ನು ಕೊಡಬೇಕೆಂದು ಕೇಳಿದ್ದೆವು. ನಾವು ಆ ದಿನ ಕೂಡ ಇದೇ ವಿಷಯವನ್ನು ಕೇಳಿದ್ದು, ಈ ದಿನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೂಡ ಅದೇ ವಿಷಯವನ್ನು ಕೇಳುತ್ತಿದ್ದೇನೆ. ಆದುದರಿಂದ, ಆರೋಗ್ಯ ಸಮಸ್ಯೆ ಇರುವವರಿಗೆ ಮೊದಲ ಆದ್ಯತೆ ಕೊಡಬೇಕೆಂದು ನಾನು ನನ್ನ ಸಲಹೆಯನ್ನು ನೀಡಿ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಚಿದಾನಂದ್ ಎಂ. ಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಈ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕ, 2021 ಅನ್ನು ಸ್ವಾಗತಿಸುತ್ತಾ, ಈ ವಿಧೇಯಕದ ಮೇಲೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿರುತ್ತಾರೆ. ಯಾವುದೇ ಮುಖ್ಯವಾದಂತಹ ನಿಯಮಗಳನ್ನು ರೂಪಿಸಬೇಕಾದರೆ ಮೂರು ಅಂಶಗಳನ್ನು ಗಮನಿಸಿಕೊಂಡು ನಿಯಮಾವಳಿಗಳನ್ನು ರೂಪಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ. ಮೊದಲನೆಯದಾಗಿ, ಈಗಾಗಲೇ ಕಡ್ಡಾಯ ವರ್ಗಾವಣೆ ಶಿಕ್ಷೆಗೆ ಯಾವ ಶಿಕ್ಷಕರು ಒಳಗಾಗಿದ್ದಾರೆ ಅವರಿಗೆ ಮೊದಲ ಆದ್ಯತೆ ಕೊಡಬೇಕು. ಅದೇ ರೀತಿ ಪ್ರಾಂಶುಪಾಲರನ್ನು ಈ ವರ್ಗಾವಣೆಯಿಂದ ಹೊರಗಿಟ್ಟು, ಅವರಿಗೆ ಪ್ರತ್ಯೇಕವಾದಂತಹ ವರ್ಗಾವಣೆ ನೀತಿಯನ್ನು ಮಾಡಬೇಕು. ಮೂರನೆಯದಾಗಿ, ಈ 'ಸಿ' ವೃಂದದಲ್ಲಿ ಕೆಲಸ ಮಾಡಿರುವಂತಹ ಶಿಕ್ಷಕರಿಗೆ 'ಡಿ' ಮತ್ತು 'ಬಿ' 'ಎ' ವೃಂದದಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಈ ತಿದ್ದುಪಡಿ ವಿಧೇಯಕದಲ್ಲಿ ಸದರಿ ನಿಯಮಾವಳಿಗಳನ್ನು ತರಬೇಕೆಂದು ಹೇಳಿ, ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಂಡು, ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

(ಮುಂದು)

**(1276) 22.12.2021 6.10 YL-MD (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳು. ಹಲವಾರು ದಿನಗಳಿಂದ ಪಿ.ಯು. ಉಪನ್ಯಾಸಕರುಗಳು ಹಾಗೂ ಪ್ರಾಚಾರ್ಯರುಗಳು ವರ್ಗಾವಣೆಗೆ ಕಾದಿದ್ದು, ಅವರಿಗೆ ವರ್ಗಾವಣೆ ಕಲ್ಪಿಸುವ ದೃಷ್ಟಿಯಿಂದ ತಂದಿರುವ ವಿಧೇಯಕವನ್ನು ಸ್ವಾಗತಿಸುತ್ತೇನೆ. ಆದರೆ, ಸರ್ಕಾರ ಗಮನಿಸಬೇಕಾದ ಎರಡು ಸಂಗತಿಗಳನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಮೊದಲನೆಯದಾಗಿ, ಕೇವಲ 1234 ಸರ್ಕಾರಿ ಪದವಿ-ಪೂರ್ವ ಕಾಲೇಜುಗಳಿರುವುದನ್ನು ಗಮನಿಸಬೇಕಾಗಿದೆ. ಅದಕ್ಕೆ ಮೂರು ಪಟ್ಟು ಹೆಚ್ಚು ಅಂದರೆ, ನಾಲ್ಕೂವರೆ ಸಾವಿರದಷ್ಟು ಅನುದಾನ ರಹಿತ ಪಿ.ಯು. ಕಾಲೇಜುಗಳು ಈ ರಾಜ್ಯದಲ್ಲಿ ನಡೆಯುತ್ತಿವೆ. ಸರ್ಕಾರದ ಪರಿಸ್ಥಿತಿ ಏನಾಗಿದೆ ಎಂದರೆ, ಈ ರೀತಿಯಾಗಿ ವರ್ಗಾವಣೆ ಕಾನೂನು ಮಾಡಿಕೊಂಡು, ಹೆಚ್ಚುವರಿ ಮತ್ತು ಕಡ್ಡಾಯವಾಗಿ ಅತೀ ಹೆಚ್ಚು ವಿದ್ಯಾರ್ಥಿಗಳಿರುವ ಕಾಲೇಜಿನಿಂದ ಅತೀ ಕಡಿಮೆ ವಿದ್ಯಾರ್ಥಿಗಳು ಇರುವ ಕಾಲೇಜಿನ ಕಡೆಗೆ ಉಪನ್ಯಾಸಕರು ಹೊರಟು ಹೋಗಿದ್ದಾರೆ. ಅತೀ ಹೆಚ್ಚು ವಿದ್ಯಾರ್ಥಿಗಳಿರುವ ಕಾಲೇಜಿನಲ್ಲಿ ಶಿಕ್ಷಕರೇ ಇಲ್ಲ, ಏಕೆಂದರೆ, ವರ್ಕ್ ಲೋಡ್ ಜಾಸ್ತಿ ಇದೆ. ಸರ್ಕಾರಕ್ಕೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿನಂತಿಸುವುದೇನೆಂದರೆ, ಎ, ಬಿ, ಸಿ ವಲಯಗಳಾಗಿ ಮಾಡುವಂಥ ಸಂದರ್ಭದಲ್ಲಿ ಕಾಲೇಜುಗಳನ್ನು ಉಳಿಸುವುದನ್ನು ಸಹ ಮನಸ್ಸಿನಲ್ಲಿಟ್ಟುಕೊಂಡು ಎ, ಬಿ, ಸಿ, ವಲಯಗಳಾಗಿ ಮಾಡುವ ಅಗತ್ಯ ಇದೆ ಎನ್ನುವಂಥ ಮಾತನ್ನು ಹೇಳಲು ಬಯಸುತ್ತೇನೆ. ಎರಡನೆಯ ಸಂಗತಿಯೇನೆಂದರೆ, ಅತೀ ಹೆಚ್ಚು workload ಇರುವ ಕಾಲೇಜಿನಲ್ಲಿ ಪ್ರಾಚಾರ್ಯರಿಗೂ ಸಹ ಅತೀ ಹೆಚ್ಚು ತಲೆ ನೋವು ಆಗಿದೆ. ಹೀಗಾಗಿ ಪ್ರಾಚಾರ್ಯರು ಅತೀ ಕಡಿಮೆ workload ಇರುವ ಕಾಲೇಜನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಅಧಿಕಾರವನ್ನು ಸರ್ಕಾರ ತನ್ನ ಕೈಯಲ್ಲಿಟ್ಟುಕೊಳ್ಳಬೇಕು. ಈ ವರ್ಗಾವಣೆ ಸಂದರ್ಭದಲ್ಲಿ counselling ನ್ನು ಹೊರತುಪಡಿಸಿ ವರ್ಗಾವಣೆ ಇಲ್ಲ ಎನ್ನುವಂಥ ಕೆಲಸವಾಗಬಾರದು. ಕೌನ್ಸಿಲನ್ನು ಹೊರತುಪಡಿಸಿ ಆ ಸಂಸ್ಥೆಯಲ್ಲಿ ಯಾರು Administrative Head or Institutional Head ಇರುತ್ತಾರೆ, ಅವರಿಗೆ ವರ್ಗಾವಣೆ ಅಧಿಕಾರವನ್ನು ನಿಯಮದಲ್ಲಿ ಕಲ್ಪಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲು ಬಯಸುತ್ತೇನೆ. ಮಾನ್ಯ ಸಚಿವರಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಈಗಾಗಲೇ ಅದೇ ಕಾಯ್ದೆಯಲ್ಲಿ ತಿದ್ದುಪಡಿ ಮಾಡಲಾಗುತ್ತಿದೆ. ಶೇ.25 ರಷ್ಟು ವ್ಯಾಪ್ತಿಯಿಂದ ಹೊರಗೆ ಹೋಗಲು ಅವಕಾಶ ಕಲ್ಪಿಸುವುದಿಲ್ಲ ಎಂದು ಹೇಳಿರುವುದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಕರಿಗೆ ಸಿಕ್ಕಾಪಟ್ಟೆ ತೊಂದರೆಯಾಗಿದೆ. ಇದರಿಂದ ಅವರು ಕಣ್ಣೀರು ಹಾಕುತ್ತಿದ್ದಾರೆ. ಕೇವಲ 81 ಮುಖ್ಯೋಪಾಧ್ಯಾಯರು ವರ್ಗಾವಣೆಗೊಳ್ಳಲು ಅವಕಾಶವಾಗಿದೆ. ಎಲ್ಲಾ ಶಿಕ್ಷಕರ ಮನವಿಯೇನೆಂದರೆ, ಪಿ.ಯು. ಗಾಗಿ ವರ್ಗಾವಣೆ ತರುವಂಥ ಸಂದರ್ಭದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಕರಿಗೂ ವರ್ಗಾವಣೆ ತರಬೇಕಾಗಿತ್ತು ಎಂದು ಕಣ್ಣೀರು ಹಾಕುತ್ತಿದ್ದಾರೆ. ಆದಷ್ಟು ಬೇಗ ಮುಂದಿನ ಅಧಿವೇಶನದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಕರಿಗೆ ಸಂಬಂಧಿಸಿದಂತೆ ತಿದ್ದುಪಡಿ ತಂದು, ಅವರಿಗೂ ಸಹ relief ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನಿವೇದಿಸಿಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2021ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಸ್ವಾಗತಿಸುತ್ತೇನೆ. ಕಾರಣವೇನೆಂದರೆ, ಬಹಳ ವರ್ಷಗಳಿಂದ ವರ್ಗಾವಣೆ ನೀತಿ ತರಬೇಕೆಂದು ಉಪನ್ಯಾಸಕರ ಹಾಗೂ ಪ್ರಾಂಶುಪಾಲರ ಬೇಡಿಕೆ ಇತ್ತು. ಅವರ ಬೇಡಿಕೆಗೆ ತಕ್ಕ ಹಾಗೆ ಈ ವಿಧೇಯಕದಲ್ಲಿ ತಿದ್ದುಪಡಿ ಮಾಡಲಾಗಿದ್ದು, ಹೃತ್ಪೂರ್ವಕವಾಗಿ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ಈ ಹಿಂದೆ ವರ್ಗಾವಣೆ ಮಿತಿ ಕೇವಲ ಶೇ.5 ರಷ್ಟು, ಶೇ.7 ರಷ್ಟು ಇದ್ದು, ಕಾಲಕಾಲಕ್ಕೆ ಬದಲಾವಣೆ ಮಾಡಿ, ಈಗ ಶೇ. 10 ರಷ್ಟು ಮಾಡಲಾಗಿದೆ. ಇದೊಂದು ಒಳ್ಳೆಯ ಕೆಲಸ. ಅದೇ ರೀತಿ ಕ್ರಮೇಣವಾಗಿ ವರ್ಗಾವಣೆಗೊಂಡು ಮಂಗಳೂರಿನಲ್ಲಿ ಪ್ರಾಂಶುಪಾಲರು ಬಿಜಾಪುರ ಕಡೆಗೆ ಬಂದಿದ್ದು, ಅಂಥವರಿಗೆ counselling ಪೂರ್ವದಲ್ಲಿಯೇ ವರ್ಗಾವಣೆ ಮಾಡುವ ನಿಟ್ಟಿನಲ್ಲಿ ಈ ವಿಧೇಯಕವನ್ನು ತಂದಿರುವುದರಿಂದ ಅದನ್ನು ಸಹ ಸ್ವಾಗತಿಸುತ್ತೇನೆ. ವಿಶೇಷವಾಗಿ ನನ್ನ ಒಂದು ಸಲಹೆಯೇನೆಂದರೆ, ಪ್ರಾಥಮಿಕ ಮತ್ತು ಪ್ರೌಢ ಉಪನ್ಯಾಸಕರ ಹಾಗೂ ಪ್ರಾಂಶುಪಾಲರ ಕಾಯ್ದೆಯೊಳಗೆ ಒಂದು ವಿಶೇಷ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಲಮಿತಿ ಇತ್ತು. ಏಕೆಂದರೆ, ಎಲ್ಲಾ counselling ಮುಗಿದ ನಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ವಿಶೇಷ power ಇತ್ತು. ಆದರೆ, ಈ ವಿಧೇಯಕದಲ್ಲಿ ಅದು ಸೇರ್ಪಡೆಗೊಂಡಿರುವುದಿಲ್ಲ. ಸಾರ್ವಜನಿಕ ಹಿತಾಸಕ್ತಿ ಮತ್ತು ಅವಶ್ಯಕತೆ ಇರುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಉಪನ್ಯಾಸಕರ ಹಾಗೂ ಪ್ರಾಂಶುಪಾಲರನ್ನು ಶೇ. 2 ರಷ್ಟು ಅಥವಾ ಶೇ. 3 ರಷ್ಟು ವರ್ಗಾವಣೆ ಮಾಡಲು manual transfer power ಇತ್ತು. ಅದರ ವ್ಯಾಪ್ತಿಯನ್ನು ಈ ವಿಧೇಯಕದಲ್ಲಿ ಸೇರಿಸುತ್ತಾರೆಯೇ, ಇಲ್ಲವೇ ಗೊತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಅದರಿಂದ ಬಹಳ ದುರುಪಯೋಗವಾಗುತ್ತದೆ. ಅದನ್ನು ತೆಗೆಯಬೇಕಾಗುತ್ತದೆ. ಏಕೆ ಎಂಬುದನ್ನು ನಾನು ಹೇಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, Act ನೊಳಗೆ ಇದೆ. ಅನಿವಾರ್ಯ ಕಾರಣದಿಂದಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಾಥಮಿಕ ಮತ್ತು ಪ್ರೌಢ ಉಪನ್ಯಾಸಕರ ಹಾಗೂ ಪ್ರಾಂಶುಪಾಲರ ವರ್ಗಾವಣೆ ನೀತಿ ಅಳವಡಿಸಿರುವುದಿಲ್ಲ ಹಾಗೂ ಮತ್ತೆ ಈ ವಿಧೇಯಕದಲ್ಲಿ ಸೇರ್ಪಡೆಗೊಳ್ಳುತ್ತದೆಯೇ ಇಲ್ಲವೇ ಎಂಬುದರ ಕುರಿತು ಸ್ಪಷ್ಟೀಕರಣ ನೀಡಬೇಕು.

**ಸಭಾಪತಿಯವರು:-** ನನ್ನ ಒಂದು ಸಲಹೆಯೇನೆಂದರೆ, ಸರ್ಕಾರಿ ನೌಕರರನ್ನು ಮಾತ್ರ ಪತಿ-ಪತ್ನಿಯರು ಎಂದು consider ಮಾಡಲಾಗಿದ್ದು, ಅವರಿಗೆ ಸಂಬಂಧಿಸಿದಂತೆ ಹೇಳುವುದಾದರೆ, 25-30 ವರ್ಷಗಳಾದರೂ ಒಂದೇ ಕಡೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಆದರೆ, ಈ ವಿಧೇಯಕದಲ್ಲಿ ಬಂದಿರುವುದಿಲ್ಲ. ಮುಂದೆ ವಿಧೇಯಕದಲ್ಲಿ ಬಂದರೆ ಅದನ್ನು ಬದಲಾವಣೆ ಮಾಡಬೇಕು. ಜೂನಿಯರ್ ಕಾಲೇಜ್‌ನಲ್ಲಿ ಎಲ್ಲಿ ಮಕ್ಕಳ ಸಂಖ್ಯೆ ಜಾಸ್ತಿ ಇರುತ್ತಾರೆಯೋ ಅಂತಹ ಕಾಲೇಜಿಗೆ counselling ಮೂಲಕ ಯಾರು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಅದಕ್ಕಾಗಿ ಯಾವ ಕಾಲೇಜಿನಲ್ಲಿ ಮಕ್ಕಳ ಸಂಖ್ಯೆ ಜಾಸ್ತಿ ಇರುತ್ತವೆ ಅಂತಹ ಕಾಲೇಜುಗಳನ್ನು ಮೊದಲು ತೋರಿಸಬೇಕು. ಸುಮಾರು 1203 ಪ್ರಾಚಾರ್ಯರು ಮುಷ್ಕರಗಳನ್ನು ಮಾಡಿ ಕೇವಲ 4 ವಿದ್ಯಾರ್ಥಿಗಳು, 5 ವಿದ್ಯಾರ್ಥಿಗಳು ಅಥವಾ 25 ವಿದ್ಯಾರ್ಥಿಗಳು ಇರುವ ಕಡೆ ವರ್ಗಾವಣೆ ಮಾಡಿಸಿಕೊಂಡು ಹೋಗಿರುತ್ತಾರೆ. ಅಂದರೆ, 10 ಕಿಲೋ ಮೀಟರ್ ವ್ಯಾಪ್ತಿಯೊಳಗೆ ಅವಕಾಶ ಇದ್ದರೂ ಸಹ 25 ಕಿಲೋ ಮೀಟರ್‌ವರೆಗೆ ವರ್ಗಾವಣೆ ಮಾಡಿಸಿಕೊಂಡು ಹೋಗಿರುತ್ತಾರೆ. ಆದರೆ, ಒಬ್ಬ ಪ್ರಾಚಾರ್ಯರು ಸಹ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗೆ ಸೇರ್ಪಡೆಗೊಂಡಿರುವುದಿಲ್ಲ. ಈಗ ತಂದಿರುವ ವಿಧೇಯಕವನ್ನು ಪಾಸ್ ಮಾಡೋಣ. ಹಾಗೆಯೇ ವರ್ಗಾವಣೆ ನೀತಿ ಸಲುವಾಗಿ ನಾಲ್ಕು ಮಂದಿ ಸೇರಿಸಿ ಮತ್ತೊಮ್ಮೆ ಸಭೆ ಮಾಡಿ, ಮುಂದಿನ ಅಧಿವೇಶನದೊಳಗೆ ಬದಲಾವಣೆ ಮಾಡುವುದು ಸೂಕ್ತವೆಂದು ನನ್ನ ಅನಿಸಿಕೆ. ಬಹಳಷ್ಟು defect ಇದೆ. ಏಕೆಂದರೆ, ನಾನು ಅದರ ಬಗ್ಗೆ ಬಹಳ ತಲೆ ಕೆಡಿಸಿಕೊಂಡು ಮೂರು-ನಾಲ್ಕು ತಿಂಗಳು ಚರ್ಚೆ ಮಾಡಿದ್ದೇನೆ. ಅದಕ್ಕೆ ಕಾರಣವೇನು ಎಂಬುದನ್ನು ಸಹ ಹೇಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉತ್ತರ ಕರ್ನಾಟಕ ಕಡೆ ಉಪನ್ಯಾಸಕರ ಹಾಗೂ ಪ್ರಾಂಶುಪಾಲರು ಬಂದರೆ ಕೇವಲ ಎರಡು ವರ್ಷ ಮಾತ್ರ ಇದ್ದು, ಮತ್ತೆ ವಾಪಸ್ಸು ಹೋಗುತ್ತಿದ್ದರು. ಇದರಿಂದಾಗಿ ಶಿಕ್ಷಕರು ಇರುತ್ತಿರಲಿಲ್ಲ. ಹಾಗಾಗಿ ಗೋಲ್ಡ್ ಮೆಡಲ್ ಪಡೆದುಕೊಂಡವರು ಉತ್ತರ ಕರ್ನಾಟಕಕ್ಕೆ ಹೋಗಬೇಕಂದರೆ ಸಿ ವಲಯಕ್ಕೆ ಹೋಗಬೇಕು ಎನ್ನುವುದನ್ನು ಮಾಡಲಾಗಿತ್ತು. ನಂತರ ಬದಲಾವಣೆ ಆಗಿತ್ತು. ಇದರಲ್ಲಿ ಬಹಳಷ್ಟು defects ಇದೆ. ಇದು ವಿಧೇಯಕಕ್ಕೆ ಸಂಬಂಧಪಡುವುದಿಲ್ಲ. ಈ ಸಂಬಂಧ ಸರ್ಕಾರವು ಒಂದು ದಿನ ಕಮಿಟಿ ಮಾಡಿ ಸಭೆ ನಡೆಸಿದರೆ ನಾವು ಸಹ ಒಳ್ಳೆಯ ಸಲಹೆಯನ್ನು ನೀಡುತ್ತೇವೆ. ಅದರಿಂದಾಗಿ ಮುಂದಿನ ಅಧಿವೇಶನ ಬರುವ ಪೂರ್ವದಲ್ಲಿ ಒಂದು ಒಳ್ಳೆಯ ಕಾಯ್ದೆ ಮಾಡಿದಂತಾಗುತ್ತದೆ.

**ಡಾ|| ಸಿ.ಎನ್.ಅಶ್ವಥ್ ನಾರಾಯಣ (ಉನ್ನತ ಶಿಕ್ಷಣ ಸಚಿವ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ, ಹೆಚ್ಚುವರಿಯಾಗಿ ಕೌಶಲ್ಯಾಭಿವೃದ್ಧಿ ಸಚಿವರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರ ಸಲಹೆಯನ್ನು ಪಡೆದುಕೊಂಡೇ ಈ ವಿಧೇಯಕದಲ್ಲಿ ತಿದ್ದುಪಡಿ ಮಾಡಲಾಗಿದೆ. ಮಾನ್ಯ ಸದಸ್ಯರು ಪ್ರಮುಖವಾಗಿ ಯಾವ ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಈ priority group ಗಳನ್ನು ಹೊರತುಪಡಿಸಿ ಶೇ. 10 ರಷ್ಟು ನಿಗದಿ ಮಾಡಲಾಗಿದೆ. ಹಾಗೆಯೇ ಮುಖ್ಯೋಪಾಧ್ಯಾಯರ ವಿಚಾರಕ್ಕೆ ಸಂಬಂಧಿಸಿದಂತೆ counselling ನಲ್ಲಿ ಭಾಗವಹಿಸಲು ಅವಕಾಶ ಇರುವುದು ಯಾವಾಗ ಎಂದರೆ, ಯಾವಾಗ ಬಡ್ತಿಯನ್ನು ಪಡೆದುಕೊಳ್ಳುತ್ತಾರೆ, ಅಂತಹ ಸಂದರ್ಭದಲ್ಲಿ ಮಾತ್ರ counselling ನಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ. ಜೊತೆಗೆ ಈಗಾಗಲೇ ವರ್ಗಾವಣೆಗೊಂಡಿರುವ ವ್ಯಕ್ತಿಗಳಿಗೆ ಮರಳಿ ಅವರ ಸ್ಥಾನಗಳಿಗೆ ಹೋಗುವ ಅವಕಾಶ ನೀಡುವಂಥದಾಗುತ್ತದೆ ಎಂದು ಹೇಳಲು ಬಯಸುತ್ತೇನೆ. Zonal Regulation ಬಗ್ಗೆ ಹೇಳುವುದಾದರೆ, zone ಗಳು ಗ್ರಾಮೀಣ, ನಗರ ಪ್ರದೇಶ, ಸಿ ಮತ್ತು ಬಿ ವರ್ಗ ಎನ್ನುವ ಆಧಾರಿತವಾಗಿ ಮಾಡಿಲ್ಲ. ಈ ವಿಧೇಯಕದಲ್ಲಿ ಮಾಡಿರುವುದು ಸಂಖ್ಯಾಧಾರಿತವಾಗಿದೆ. ಎಲ್ಲಿ ಸಂಖ್ಯಾಧಾರಿತವಾಗಿ zone ಅನ್ನು ನಿಯಮದಲ್ಲಿ ಮಾಡುವಂಥದಾಗುತ್ತದೆ. ಹಾಗಾಗಿ ಯಾವುದೇ ಸಮಸ್ಯೆ ಇಲ್ಲದೇ ಎಲ್ಲಿ ವಿದ್ಯಾರ್ಥಿಗಳು ಹೆಚ್ಚಾಗಿ ಇದ್ದಾರೆ, ಅಂತಹ ಕಡೆ ಆದ್ಯತೆ ನೀಡಿ, ಶಿಕ್ಷಕರನ್ನು ಮತ್ತು ಉಪನ್ಯಾಸಕರನ್ನು ಭರ್ತಿ ಮಾಡುವಂಥದಾಗುತ್ತದೆ, ಅನುಪಾತವನ್ನು ಕಾಪಾಡಲಾಗುತ್ತದೆ, student-teacher ratio ಕಾಪಾಡಿಕೊಂಡು ಈ ವರ್ಗಾವಣೆ ಹಾಗೂ ಮಾನ್ಯ ಸದಸ್ಯರ ಎಲ್ಲಾ ಸಲಹೆಯನ್ನು ನಿಯಮಗಳಲ್ಲಿ ಅಳವಡಿಸಿಕೊಳ್ಳುವಂತಹ ಕೆಲಸ ಮಾಡುತ್ತೇವೆ ಎಂದು ಹೇಳುತ್ತಾ, ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 13 ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

“ಖಂಡ 2 ರಿಂದ 13 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 13 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅದಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಡಾ|| ಸಿ.ಎನ್.ಅಶ್ವಥ್ ನಾರಾಯಣ (ಉನ್ನತ ಶಿಕ್ಷಣ ಸಚಿವ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ, ಹೆಚ್ಚುವರಿಯಾಗಿ ಕೌಶಲ್ಯಾಭಿವೃದ್ಧಿ ಸಚಿವರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.”

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.</u>**

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಿಯಮ 330ರ ಮೇರೆಗೆ 'ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಕಾಮಗಾರಿಗಳ ಮೊತ್ತದ ಶೇ. 40 ರಷ್ಟು ಮೊತ್ತ ಲಂಚದ ರೂಪದಲ್ಲಿ ವ್ಯಯವಾಗುತ್ತಿದ್ದು, ಭ್ರಷ್ಟಾಚಾರ ತಾಂಡವಾಡುತ್ತಿರುವ ಕುರಿತು ಚರ್ಚೆಗೆ ತೆಗೆದುಕೊಂಡರೆ ಈಗ ಭಾಷಣ ಮಾಡಲು ಕೂರುತ್ತಾರೆ. ನಾನು ಈಗ ಮತ್ತೊಂದು ಸಭೆಗೆ ಹೋಗಬೇಕಾಗಿದೆ. ನಾಳೆ ಬೇರೆ ನಾವು ಉಪವಾಸ ಇರುವುದರಿಂದ ಕೊನೆಪಕ್ಷ ಮಧ್ಯಾಹ್ನ 3 ಗಂಟೆಯೊಳಗೆ ದಯವಿಟ್ಟು ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳು ನಡೆಯುತ್ತಿಲ್ಲ, ಚಳುವಳಿ ನಡೆಯುತ್ತಿದೆ. ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಲಿಲ್ಲ. ಕೊನೆಪಕ್ಷ ಬರವಣಿಗೆ ಮೂಲಕ ಉತ್ತರ ನೀಡಿದರೆ ತರಗತಿಗಳಾದರೂ ನಡೆಯುತ್ತದೆ ಅಲ್ಲವೇ?

**ಸಭಾಪತಿಯವರು:-** ಆಯಿತು. ಮಾನ್ಯ ಸಭಾನಾಯಕರೆ, ಮಾನ್ಯ ಕೆ.ಟಿ. ಶ್ರೀಕಂಠೇಗೌಡರ ಪ್ರಶ್ನೆಗೆ ನಾಳೆ ಉತ್ತರವನ್ನು ನೀಡಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಧ್ಯಾಹ್ನದೊಳಗೆ ನಿಯಮ 330 ತೆಗೆದುಕೊಳ್ಳಿ. ಗುರುವಾರ ಉಪವಾಸ ಇರುವುದರಿಂದ ದಯವಿಟ್ಟು ಗೋಳು ಹೊಯ್ದುಕೊಳ್ಳಬೇಡಿ.

(ಮುಂದು)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(1277) 22-12-2021 / 6.20 / SK-MD (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ ತಾವು ಮಾತನಾಡಿ.

**10. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**

**ವಿಷಯ:- ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ.**

- - -- - -

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ತಾವು ಹದಿನೈದು ನಿಮಿಷಗಳ ಕಾಲ ಮಾತ್ರ ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅರ್ಧ ಗಂಟೆಯಷ್ಟು ಸಮಯ ಬೇಕಾಗುತ್ತದೆ. ಏಕೆಂದರೆ, ಹೈದರಬಾದ್-ಕರ್ನಾಟಕದಲ್ಲಿ ಜ್ವಲಂತ ಸಮಸ್ಯೆ ಇದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಿದ ತರುವಾಯ ಆ ಭಾಗದ ಸಮಗ್ರ ಅಭಿವೃದ್ಧಿಗೆ ಅವಶ್ಯಕವಿರುವ ಅನುದಾನ ಬಿಡುಗಡೆ ಮತ್ತು ಅನುದಾನದ ಸದ್ಬಳಕೆ, ಶೈಕ್ಷಣಿಕ ಮತ್ತು ಸಾಮಾಜಿಕ ಹಾಗೂ ರಾಜಕೀಯ ಬೆಳವಣಿಗೆಗೆ ಸರ್ಕಾರ ಮುಂದಾಗಬೇಕು ಎನ್ನುವ ವಿಷಯವನ್ನು ಈಗ ಪ್ರಸ್ತಾಪಿಸುತ್ತಿದ್ದೇನೆ.

ಸಂವಿಧಾನಕ್ಕೆ 118 ನೇ ತಿದ್ದುಪಡಿಯನ್ನು ಮಾಡುವ ಮೂಲಕ 371 (ಜೆ) ಅಡಿಯಲ್ಲಿ ರಾಜ್ಯದ ಹೈದರಾಬಾದ್-ಕರ್ನಾಟಕದ ಆರು ಜಿಲ್ಲೆಗಳಿಗೆ ವಿಶೇಷವಾದ ಸ್ಥಾನಮಾನ ನೀಡಲಾಯಿತು. ಈಗ ಬಳ್ಳಾರಿ ಎರಡು ಜಿಲ್ಲೆಯಾಗಿದ್ದರಿಂದ ಏಳು ಜಿಲ್ಲೆಗಳು ಆಗಿವೆ. ಇದನ್ನು ಮಾಡಬೇಕಾದರೆ, ಮೊದಲು ಡಾ|| ನಂಜುಂಡಪ್ಪನವರ ವರದಿಯನ್ನು base ಇಟ್ಟುಕೊಳ್ಳುತ್ತಾರೆ. ಅದರಲ್ಲಿ 35 Assembly Constituencies ಇರುತ್ತದೆ. ಅದರ ಪ್ರಕಾರ ತಾಲ್ಲೂಕುಗಳನ್ನು ವರ್ಗೀಕರಣ ಮಾಡಿ, 21 ತಾಲ್ಲೂಕು ಅತಿ ಹಿಂದುಳಿದಿದ್ದು,

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಐದು ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು ಮತ್ತು ಎರಡು ಹಿಂದುಳಿದ ತಾಲ್ಲೂಕುಗಳಾಗಿ ಗುರುತಿಸಿದ ಹಿನ್ನೆಲೆ ಇರುತ್ತದೆ. ಭಾರತದಲ್ಲಿ ಇದು ಎರಡನೇ ದೊಡ್ಡ ಪ್ರಾಂತ್ಯವಾಗಿರುತ್ತದೆ. ರಾಜ್ಯದ ಶೇಕಡ 23 ರಷ್ಟು ಭೂ ಭಾಗ ಈ ಪ್ರದೇಶವನ್ನು ಹೊಂದಿದೆ. ಶೇಕಡ 23 ರಷ್ಟು ಕೃಷಿಯೇತರ ಭೂಮಿ ಕೂಡ ಈ ಭಾಗದಲ್ಲಿಯೇ ಇದೆ. ಹತ್ತು ವರ್ಷಗಳಲ್ಲಿ ರಾಜ್ಯದಲ್ಲಿ 15.6 ರಷ್ಟು ಜನಸಂಖ್ಯೆ ಹೆಚ್ಚಾದರೆ, ಈ ಭಾಗದಲ್ಲಿ ಶೇಕಡ 17.73 ರಷ್ಟು ಜನಸಂಖ್ಯೆ ಹೆಚ್ಚಾಗಿದೆ. ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇಕಡ 18 ರಷ್ಟು ಜನರು ಈ ಭಾಗದಲ್ಲಿ ವಾಸ ಮಾಡುತ್ತಾರೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀಮತಿ ಭಾರತಿ ಶೆಟ್ಟಿಯವರು ಸಭಾಪೀಠವನ್ನು ಅಲಂಕರಿಸಿದರು)**

ಇವರ ಪೈಕಿ ಶೇಕಡ 24 ರಷ್ಟು ಪರಿಶಿಷ್ಟ ಜಾತಿ ಮತ್ತು ಶೇಕಡ 34 ರಷ್ಟು ಪರಿಶಿಷ್ಟ ಪಂಗಡದವರು ಇರುತ್ತಾರೆ. ಈ ರಾಜ್ಯದ ಸಾಕ್ಷರತೆ ಶೇಕಡ 75.36 ರಷ್ಟಿದ್ದರೆ, ಈ ಭಾಗದಲ್ಲಿ ಸಾಕ್ಷರತೆ ಶೇಕಡ 64.45 ರಷ್ಟು ಇದೆ. ರಾಜ್ಯದಿಂದ ಹೊರಗಡೆ ಉಳಿಯುವಂತಹ ಮಕ್ಕಳ ಸಂಖ್ಯೆ ಶೇ. 2.96 ಇದ್ದರೆ, ಈ ಭಾಗದಲ್ಲಿ ಶೇಕಡ 5.77 ಇದೆ. ಮಹಿಳೆಯರು ಮತ್ತು ಮಕ್ಕಳ ಮರಣ ಪ್ರಮಾಣದ ಶೇಕಡ ಕೂಡ ಈ ಭಾಗದಲ್ಲಿ ಅತಿ ಹೆಚ್ಚಿದೆ. ಈ ಸೆಕ್ಷನ್ ಬಂದಿದ್ದೆ, ಈ ಭಾಗದಲ್ಲಿರುವ ಜನರಿಗೆ ಅನುಕೂಲವಾಗಬೇಕು. ಇಲ್ಲಿ ನಿರುದ್ಯೋಗ ಕಡಿಮೆಯಾಗಬೇಕು. ಸರ್ಕಾರದಲ್ಲಿರುವ ಎಲ್ಲಾ ಹುದ್ದೆಗಳನ್ನು ತುಂಬಬೇಕು. ಮೊದಲು ನಾವು ಕೇಳಿದಾಗ, ಆರ್ಥಿಕ ಇಲಾಖೆಗೆ ಹೋಗಬೇಕೆಂದು ಹೇಳುತ್ತಾರೆ. ಈ ಭಾಗಕ್ಕೆ ಆರ್ಥಿಕ ಇಲಾಖೆಗೆ ಕಡತ ಕಳುಹಿಸುವಷ್ಟು ಇರುವುದಿಲ್ಲ. ಈ KKRDB (Kalyana Karnataka Region Development Board) ನಲ್ಲಿ 371(ಜೆ) ಅನುಚ್ಛೇದದ ಪ್ರಕಾರ ಅಲ್ಲಿಯವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಕಲ್ಬುರ್ಗಿ, ರಾಯಚೂರು, ಯಾದಗಿರಿ ಈ ಮೂರು ಜಿಲ್ಲೆಗಳಿಗೆ ಮಂತ್ರಿಗಳೇ ಇಲ್ಲ, imbalance ಆಗಿದೆ. ಸಾಮಾನ್ಯವಾಗಿ ಒಂದೊಂದು ಜಿಲ್ಲೆಗೆ ಒಬ್ಬೊಬ್ಬ ಮಂತ್ರಿ ಇರಬೇಕು ಎನ್ನುವುದು ಇದೆ. ಈ ಕಲ್ಯಾಣ ಕರ್ನಾಟಕದವರದು ಹೇಗೆ ಎಂದರೆ, ಅವರದ್ದು ಸಮುದ್ರಕ್ಕೆ ನೆಂಟಸ್ಥನ. ಆದರೆ ಉಪ್ಪಿಗೆ ಬರ. ಆ ರೀತಿ ಇವರದಾಗಿದೆ. ಈ ಭಾಗದಲ್ಲಿರುವ ಬೇರೆ ಬೇರೆ ಇಲಾಖೆಗಳಲ್ಲಿ ಇಪ್ಪತ್ತು ಸಾವಿರ ಹುದ್ದೆಗಳು ಖಾಲಿ ಇವೆ. ಹೈದರಬಾದ್-ಕರ್ನಾಟದಲ್ಲಿ ಹುದ್ದೆಗಳನ್ನು ಸರ್ಕಾರ ಏಕೆ ಭರ್ತಿ ಮಾಡುತ್ತಿಲ್ಲ. ಇದಕ್ಕೆ ಇವರೇನು ಆರ್ಥಿಕ ಇಲಾಖೆಗೆ ಹೋಗ್ಗಬೇಕಾಗಿಲ್ಲ. ನಾವು ಏನಾದರೂ ಪ್ರಶ್ನೆಯನ್ನು ಕೇಳಿದರೆ, ಅಲ್ಲಿ ಕಳುಹಿಸಿದ್ದೇವೆ. ಅಲ್ಲಿ ಹೋಗಿ ಕೇಳಿ ಎಂದು ಹೇಳುತ್ತಾರೆ. ಆದರೆ ಇಲ್ಲಿ ಕೇಳುವುದು ಏನಿಲ್ಲ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):**-ಮಾನ್ಯ ಸಭಾಪತಿಯವರೇ, ಇಲ್ಲಿ ಕೇವಲ ಶಿಕ್ಷಕರ ಕೊರತೆಯೇ ಇಪ್ಪತ್ತು ಸಾವಿರದಷ್ಟು ಇದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇಪ್ಪತ್ತು ಸಾವಿರ ಹುದ್ದೆಗಳು ಬೇರೆ ಬೇರೆ ಇಲಾಖೆಯಲ್ಲಿ ಖಾಲಿಯಿವೆ. ಇವರು ಎಲ್ಲಿ ಭರ್ತಿ ಮಾಡುತ್ತಾರೆಂದರೆ, ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಪಂಚಾಯತ್ ಇಲಾಖೆಗೆ ಮಾತ್ರ ಭರ್ತಿ ಮಾಡುತ್ತಾರೆ. ದುಡ್ಡು ಹೊಡೆಯುವುದಕ್ಕೆ ಎಲ್ಲಿ ಖಜಾನೆ ಇದೆಯೋ ಅಲ್ಲಿ ಮಾತ್ರ ಹುದ್ದೆಗಳನ್ನು ಭರ್ತಿ ಮಾಡುತ್ತಾರೆ. ಎಲ್ಲಿ ಶಿಕ್ಷಕರು ಬೇಕು, ಅಲ್ಲಿ ಇಲ್ಲ. ಎಲ್ಲಿ ಗುಮಾಸ್ತರು ಬೇಕು, ಅಲ್ಲಿ ಇಲ್ಲ. 371(ಜೆ) ಅನುಚ್ಛೇದ ಪ್ರಕಾರ KKRDB ಒಂದು Board ಮಾಡಿದೆ. ಯಾವುದೇ ಸರ್ಕಾರವಿರಲಿ, 2013 ರಿಂದ ಇಲ್ಲಿಯವರೆಗೂ ಬಂದಿರುವಂತಹ ಸರ್ಕಾರಗಳು ಸುಮಾರು 8878 ಕೋಟಿ ರೂಪಾಯಿಗಳ ಅನುದಾನ ಎಂದು ಹೇಳುತ್ತದೆ. ಆದರೆ ಇಲ್ಲಿ ಬಿಡುಗಡೆಯಾಗುವ ಅನುದಾನ 6200 ಕೋಟಿ ರೂಪಾಯಿಗಳು ಮಾತ್ರ. ಆ ಅನುದಾನದಲ್ಲಿ ಖರ್ಚಾಗುವುದು 5,900 ಕೋಟಿ ರೂಪಾಯಿಗಳು ಮಾತ್ರ. 2021-22 ರಲ್ಲಿ ಬಜೆಟ್‌ನಲ್ಲಿ 1500 ಕೋಟಿ ರೂಪಾಯಿಗಳ ಅನುದಾನವಿದೆ. ಡಿಸೆಂಬರ್ ತಿಂಗಳಲ್ಲಿ ರೂ.300 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಈ ಅನುದಾನದಲ್ಲಿ ಶೇಕಡ 75 ರಷ್ಟು ಖರ್ಚು ಮಾಡಿದರೆ ಮಾತ್ರ ಬಾಕಿ ಅನುದಾನವನ್ನು ಕೊಡುತ್ತೇವೆಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಆ ಭಾಗದ ಮಂತ್ರಿಗಳು ಈ ಕಲ್ಯಾಣ ಕರ್ನಾಟಕ ಉತ್ಸವ ಮಾಡುವಾಗ, ಈ ಹಣವನ್ನು ಖರ್ಚು ಮಾಡಿದರೆ, ಒಂದಕ್ಕಿಂತ ಡಬಲ್ ಕೊಡುತ್ತೇವೆಂದು ಹೇಳುತ್ತಾರೆ. ಒಂದೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನ ಇರುವಂತಹದ್ದನ್ನು ಮೂರು ಸಾವಿರ ಕೋಟಿ ರೂಪಾಯಿಗಳು. ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಡಿಸೆಂಬರ್ ತಿಂಗಳಿನಲ್ಲಿ ಕೊಡುತ್ತಾರೆ. ಅವರು ಮಾರ್ಚ್ 31 ತಿಂಗಳೊಳಗೆ ಯಾವಾಗ ಖರ್ಚು ಮಾಡಬೇಕು? ಇದು ನಿಜವಾಗಿ ಯಾರಿಗಾದರೂ ಅನುಕೂಲ ಮಾಡುವಂತಹದ್ದು. ಬರಿ ಸುಳ್ಳು ಹೇಳುವುದು. ಇದು ಒಳ್ಳೆಯದಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಕಲ್ಯಾಣ ಕರ್ನಾಟಕದಲ್ಲಿ ಇದಕ್ಕೊಂದು ಸಚಿವಾಲಯವೂ ಕೂಡ ಇಲ್ಲ. ಒಂದು Cabinet Sub Committee ಮಾಡುತ್ತಾರೆ. ಇದಕ್ಕೆ ಮಾನ್ಯ ಶ್ರೀರಾಮುಲುರವರು ಛೇರ್ಮನ್. ಒಂದು ದಿನ ಕಮಿಟಿ ಮೀಟಿಂಗ್ ಕರೆದಿಲ್ಲ. ಆ ಭಾಗದಲ್ಲಿರುವ ಬಿ.ಜೆ.ಪಿ. ಸದಸ್ಯರೇನಾದರೂ ಕರೆದು ಮೀಟಿಂಗ್ ಮಾಡಿದ್ದಾರೆಯೇ ಎನ್ನುವುದು ನನಗೆ ಗೊತ್ತಿಲ್ಲ. ಈ ಸರ್ಕಾರ ಬಂದಾಗಿನಿಂದ ಇವತ್ತಿನವರೆಗೂ KKRDB ಯಲ್ಲಿ official ಆಗಿ ಒಂದು ಮೀಟಿಂಗ ಮಾಡಿಲ್ಲ. ಏಕೆ ಎಂದರೆ ಸಬ್ ಕಮಿಟಿ. KKRDB ಒಂದು Board ಇದೆ. ಆ ಬೋರ್ಡ್‌ಗೆ ಸದಸ್ಯರು ಮತ್ತು officials ಇಲ್ಲ. ಅದಕ್ಕೆ ಏನು ಇಲ್ಲವೇ ಇಲ್ಲ. ಸುಮ್ಮನೇ ಯಾವ ರೀತಿ ಹಣ ಖರ್ಚು ಮಾಡೋದು? ಈ ಸರ್ಕಾರಕ್ಕೆ ಯಾರೂ ಹೇಳೋರಿಲ್ಲ, ಕೇಳೋರಿಲ್ಲ. ಈ ಉತ್ತರ ಕರ್ನಾಟಕ ಭಾಗದ ಜನರು ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆಂದರೆ, ಹೇಳಿ, ಇವರು ಆಡಿದ್ದೇ ಆಟವಾಗುತ್ತದೆ. ಉತ್ತರ ಕರ್ನಾಟಕದ ಬೀದರ್ ಮಂತ್ರಿಯಾದ ಶ್ರೀ ಪ್ರಭು ಚೌಹಣ್‌ರವರೇ, ನಾನೇದರೂ ತಪ್ಪು ಮಾತನಾಡಿದರೆ, ತಾವು ಅದನ್ನು ಸರಿ ಮಾಡಿ. ಕಲ್ಯಾಣ ಕರ್ನಾಟಕದ ಭಾಗದಲ್ಲಿ KKRDB Board ಬಂದ ಮೇಲೆ ಈ ಸರ್ಕಾರ ಬಂದಾಗಿನಿಂದ ಇವತ್ತಿನವರೆಗೂ ಒಂದು ಮೀಟಿಂಗ್ ಮಾಡಿಲ್ಲ. ಮಿಟಿಂಗ್ ಏಕೆ ಮಾಡಲಿಲ್ಲ ಎಂದು ನಾನು ಕೇಳುತ್ತೇನೆ. ರೂ.1500 ಕೋಟಿ ರೂಪಾಯಿಗಳಷ್ಟು ಅನುದಾನವಿದೆ. ಡಿಸೆಂಬರ್ ತಿಂಗಳಿನಲ್ಲಿ ಬರೀ 300 ಕೋಟಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂಪಾಯಿ ಅನುದಾನವನ್ನು ಕೊಡುತ್ತೀರಿ. ಈ ಭಾಗ ಹೇಗೆ ಉದ್ಧಾರವಾಗುತ್ತದೆ? ಈ ಭಾಗದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಎರಡು ಇದೆ. ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಆಸ್ಪತ್ರೆಗಳಲ್ಲಿ ವೈದ್ಯರೇ ಇಲ್ಲ. 'Double Engine ಸರ್ಕಾರ' ಎಂದು ಮಾತನಾಡುವಾಗೆಲ್ಲಾ ಹೇಳುತ್ತೀರಾ. ಇಲ್ಲಿ ಅಭಿವೃದ್ಧಿ ಏಕೆ ಮಾಡುತ್ತಿಲ್ಲ? ಈ ಸರ್ಕಾರಕ್ಕೆ ಏನಾಗಿದೆ?

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಎಲ್ಲರನ್ನು ಒಂದೇ ಬಾರಿ ಗೋಶಾಲೆಗೆ ಹಾಕಿಬಿಡುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಎಲ್ಲರನ್ನು ಒಂದೇ ಗೋಶಾಲೆಗೆ ಹಾಕಲಿ. ಅದನ್ನಾದರೂ ಮಾಡಲಿ. ಯಾವುದಾದರೂ ಒಂದು ಮಾಡಲಿ. ಜನರಿಗೆ ಒಳ್ಳೆಯದಾಗುವಂತಹ ಕೆಲಸ ಯಾವುದು ಮಾಡಿದರೂ ಸಂತೋಷ. ಶ್ರೀರಾಮುಲು ಅಧ್ಯಕ್ಷತೆಯಲ್ಲಿರುವಂತಹ ಕಮಿಟಿ, ಇವತ್ತಿನವರೆಗೂ ಒಂದು ಮೀಟಿಂಗ್ ಮಾಡಲಿಲ್ಲ. ಆ ಕಮಿಟಿಯಲ್ಲಿ ಸದಸ್ಯರೇ ಇಲ್ಲ. ಸಬ್ ಕಮಿಟಿ ಅವರ ಹೆಸರಿನಲ್ಲಿಯೇ ಎಂದು ಮಾಡಿಬಿಟ್ಟು ಬಿಟ್ಟರು. ಇದಕ್ಕೆ ವಿಶೇಷ ಕೋಶ ಎಂದು ಮಾಡಿದರು. ಶೇಷನೇ ಬಂದಿಲ್ಲ. ಇದಕ್ಕೆ ಯಾವುದೂ ಕೋಶನೇ ಇಲ್ಲ. ಇದೇ ರೀತಿ 371 (ಜೆ) ಅನುಚ್ಛೇದ ನಮ್ಮ ದೇಶದ ಬೇರೆ ಬೇರೆ ಭಾಗಗಳಾದ ಜಮ್ಮು-ಕಾಶ್ಮೀರ, ವಿದರ್ಭ, ನಾಗಲ್ಯಾಂಡ್, ತೆಲಾಂಗಣ, ಆಗಿದೆ. Central Government assisted funds ಬೇಕಾದಷ್ಟು ಬರುತ್ತದೆ. ನಮ್ಮವರು ಯಾರು ತೆಗೆದುಕೊಳ್ಳುವವರಿಲ್ಲ ಮತ್ತು ಕೇಳೋರಿಲ್ಲ. ನಮ್ಮ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯ ನಾಯಕತ್ವದಲ್ಲಿ ಮತ್ತು ಬೇರೆಯವರ ಸಹಯೋಗದೊಂದಿಗೆ ಬಹಳ ಕಷ್ಟ ಬಿದ್ದು, ಯು.ಪಿ.ಎ. ಸರ್ಕಾರದಲ್ಲಿ 371(ಜೆ) ಅನ್ನು ಮಾಡಿದರು. ಅದಕ್ಕೆ two third majority ಬೇಕಾಗಿತ್ತು, ನಮಗೆ ಇರಲಿಲ್ಲ. ಬೇರೆ ಪಾರ್ಟಿಯವರ ಕೈಕಾಲು ಹಿಡಿದುಕೊಂಡು 371(ಜೆ) ಅನ್ನು ಮಾಡಿಸಿದರು. ಕೇಂದ್ರದಿಂದ ಇದು ಅನುಷ್ಠಾನ ಮಾಡಿದ ರಾಜ್ಯ ಸರ್ಕಾರದವರು ಇದನ್ನು ಸರಿಯಾಗಿ ಅನುಷ್ಠಾನ ಮಾಡುತ್ತಿಲ್ಲವಲ್ಲ. 371(ಜೆ) ಅನ್ನು ತಂದರೂ ಕೂಡ ಪ್ರಯೋಜನ ಏನಾಯಿತು? ಅಲ್ಲಿರುವಂತಹ ಬೇಕಾದಷ್ಟು ಜನ ಮಕ್ಕಳಿಗೆ ಎಂ.ಬಿ.ಬಿ.ಎಸ್., ಸೀಟ್, ಐ.ಎ.ಎಸ್., ಕೆ.ಎ.ಎಸ್ ಹೋಗುತ್ತಾರೆ. ಅಲ್ಲಿರುವಂತಹವರಿಗೆ ಎಲ್ಲಾ ಅನುಕೂಲ ಸಿಗುತ್ತದೆ. ಅದಕ್ಕೆ ಬೇಕಾದಂತಹ infrastructure ಮಾಡುವುದಕ್ಕೆ ಸರ್ಕಾರಕ್ಕೆ ಏನಾಗಿದೆ? ನಾನು ಒಂದೆರಡು- ಮೂರು ಉದಾಹರಣೆಗಳನ್ನು ಹೇಳುತ್ತೇನೆ. ನಮ್ಮ ಕಾಲದಲ್ಲಿ Railway Division ಮಾಡಬೇಕೆಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತೆಗೆದುಕೊಂಡು ಬಂದರು. ಅದಕ್ಕೆ ಬೇಕಾದಂತಹ ಅನುದಾನವನ್ನು ಇಟ್ಟಿದ್ದರು. ಅದರಲ್ಲಿ ಒಂದಿಷ್ಟು ಕೆಲಸ ಕೂಡ ಆಗಿತ್ತು. ಆದರೆ ಇವತ್ತಿನವರೆಗೂ ಲೋಕಸಭಾ ಸದಸ್ಯರಾಗಲೀ ಮತ್ತು ಸರ್ಕಾರ ಕೂಡ ಉಳಿದಿರುವಂತಹ ಕೆಲಸವನ್ನು ಮಾಡಲಿಲ್ಲ. ಈ ಕರ್ನಾಟಕದಲ್ಲಿ ಮೊದಲನೆಯ ದೂರದರ್ಶನ ಕೇಂದ್ರ ಕಲ್ಬುರ್ಗಿಯದ್ದು. ಅದನ್ನು ಇವರು ಮುಚ್ಚಿ ಹಾಕುತ್ತಾರೆ. ಏಕೆ ಎಂದು ಕೇಳುವುದಿಲ್ಲ? ಅದನ್ನು ಕೇಳಿದರೆ ಅದು, Analog Territorial Transmitter ಆಗಿತ್ತು. Analog Territorial Transmitter ಆಗಿದ್ದರೆ, ಇವತ್ತಿನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಿವಸ Digital Transmitter ಮಾಡುವುದಕ್ಕೆ ಏನಾಗಿದೆ? ನಾವು ಇಲ್ಲಿ ಕುಳಿತುಕೊಂಡರೆ, ಅಮೆರಿಕಾವನ್ನೇ ನೋಡುತ್ತೇವೆ. ನಾನು ಮೊನ್ನೆ Doctors' Conference ಗೆ ಹೋಗಿದ್ದೆ. ನೀವು ಸಾಯುವುದೇ ಇಲ್ಲ ಎಂದು ಅವರು ಹೇಳುತ್ತಿದ್ದರು. ಏಕೆ ಆ ರೀತಿ ಹೇಳುತ್ತೀರಾ ಎಂದು ನಾನು ಕೇಳಿದೆ. ಅಮೆರಿಕಾ ಮತ್ತು ಎಲ್ಲಿಗಾದರೂ ಮೊದಲು Video Conference ಅನ್ನು ಮಾಡುತ್ತೀದ್ದೀರಾ. ಇನ್ನು ಹತ್ತು, ಮೂವತ್ತು-ನಲವತ್ತು ವರ್ಷಗಳು ಹೋದರೆ, ನಿಮ್ಮ parts ಅನ್ನು Scanning Machine ಗೆ ಹಾಕುತ್ತಾರೆ. ಕಣ್ಣು ಹೋದರೆ, ಕಣ್ಣು ಹಾಕುತ್ತಾರೆ. ತಲೆ ಹೋದರೆ, ತಲೆ ಹಾಕುತ್ತಾರೆ. ಕಾಲ ಹೋದರೆ, ಕಾಲು ಹಾಕುತ್ತಾರೆ. So, you will not die. ಇಂತಹ ದಿನ ಬರುವ ಕಾಲದಲ್ಲಿ ಅಲ್ಲಿರುವ ದೂರದರ್ಶನ ಕೇಂದ್ರವನ್ನು Analog Territorial Transmitter ಆಗಿತ್ತು, ನಾವು Digital Transmitter ಇಲ್ಲ ಎಂದು ತೆಗೆದಿದ್ದೇವೆಂದು ಹೇಳುತ್ತಾರೆ. ಇದೇನಾದರೂ ಕ್ಷೋಭೆ ಇವರಿಗೆ ತರುತ್ತದೆಯೇ? Textile Park ಬರಬೇಕಾಗಿತ್ತು. ಅದನ್ನು withdraw ಮಾಡಿದರು. IIIT (Indian Institute of Information Technology) ಬರಬೇಕಾಗಿತ್ತು. ಅಲ್ಲಿ ಅದೂ ಬರಲೇ ಇಲ್ಲ. ಕಲ್ಯಾಣ ಕರ್ನಾಟಕ ಎಂದು Board ಇದೆ. ಇವತ್ತು ಸರ್ಕಾರ parallel ಆಗಿ, ಇನ್ನೊಂದು Board ಮಾಡುತ್ತಿದೆ. ಅವರಿಗೆ ಕೂಡ ಸರ್ಕಾರ ಐದುನೂರು ಕೋಟಿ ರೂಪಾಯಿಗಳನ್ನು announce ಮಾಡುತ್ತದೆ. ಒಂದು ನೂರು ಕೋಟಿ ರೂಪಾಯಿಗಳು ಮಾತ್ರ ಸರ್ಕಾರ ಕೊಟ್ಟಿದ್ದು. ಅದರ ಹೆಸರು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಕೇಂದ್ರ, ಇದು ಏತಕ್ಕೆ? ಇಲ್ಲಿ ಸಿಬ್ಬಂದಿಯೇ ಇಲ್ಲ. ನಾನು ಹೇಳುವುದನ್ನಾ ರೆಕಾರ್ಡ್ ತೆಗೆದುಕೊಳ್ಳಿ. ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಪಂಚಾಯತ್ ಇವೆರಡು ಬಿಟ್ಟರೆ, ಬೇರೆ ಯಾವುದೇ ಇಲಾಖೆಯಲ್ಲಿ ಸಿಬ್ಬಂದಿಯೇ ಇಲ್ಲ. ಇವೆರಡು ಇಲಾಖೆಗಳಿಗೆ ಸಿಬ್ಬಂದಿ ಏಕೆ ಬೇಕೆಂದರೆ, ಇವೆರಡು ಇಲಾಖೆಯಲ್ಲಿ ಹಣ ಬರುವಂತಹದ್ದು. ಇದರಲ್ಲಿ ಏನೇ ಕೆಲಸವಾಗಬೇಕೆಂದರೂ percentage ಇದರಲ್ಲಿಯೇ ಇರುತ್ತದೆ. ಅದಕ್ಕೋಸ್ಕರ ಶೇಕಡ ನೂರರಷ್ಟು ಸಿಬ್ಬಂದಿ ಇರುತ್ತಾರೆ.

(ಮುಂದು)

(1278)22.12.2021/6.30/ಎಂ.ಎಂ-ಎ.ಕೆ

(ವೈಸ್ ಚೇರ್ಮನ್‌ರವರ ಉಪಸ್ಥಿತಿ)

**ಶ್ರೀ ಯು.ಬಿ. ವೆಂಕಟೇಶ್ (ಮುಂದು):-**

ಸಿ.ಆರ್.ಎಫ್ ಫಂಡ್; ಇವತ್ತಿನವರೆಗೂ ಈ ಸರ್ಕಾರ ಬಂದ ಮೇಲೆ ಒಂದು ರೂಪಾಯಿಯ ಸಿ.ಆರ್.ಎಫ್ ಫಂಡ್ ಆ ಭಾಗಕ್ಕೆ ಬರಲಿಲ್ಲ. ಒಂದು ರೈಲ್ವೆ ಕೋಚ್ ಫ್ಯಾಕ್ಟರಿ ಇದೆ. ಅದು ನಮ್ಮ ನಾಯಕರು ಮಾಡಿರುವುದು. ಅಲ್ಲಿ ಪ್ರೊಡಕ್ಷನ್ ಕಡಿಮೆ ಮಾಡಿದ್ದಾರೆ. ನಾವು 100, 150 chassis ಮಾಡುವ ಸಾಮರ್ಥ್ಯವಿದ್ದರೆ ಅದರಲ್ಲಿ ಶೇ.50ರಷ್ಟು ಆಗುತ್ತದೆ. ಇವರನ್ನು ಯಾರೂ ಕೇಳುವವರೇ ಇಲ್ಲ. ಇನ್ನೊಂದು ವಿಚಾರ ಎಂದರೆ, imbalance of ministers. ನಿಮಗೊಂದು ಉದಾಹರಣೆಯನ್ನು ಹೇಳುತ್ತೇನೆ. ಕಲಬುರ್ಗಿ ವಿಮಾನ ನಿಲ್ದಾಣವನ್ನು ಇವರೆಲ್ಲರೂ ಹೋಗಿ ಉದ್ಘಾಟನೆ ಮಾಡಿ ಬಂದರು. ವಿಮಾನ ನಿಲ್ದಾಣವನ್ನು ಇವರ್ಯಾರೂ ಮಾಡಲಿಲ್ಲ, ನಮ್ಮ ನಾಯಕರು, ಕಾಂಗ್ರೆಸ್ ಪಕ್ಷದವರು ಆ ಭಾಗದಲ್ಲಿ 750 ಎಕರೆ ಭೂಮಿಯನ್ನು ತೆಗೆದುಕೊಂಡು ಮಾಡಿದರು. ಕಲಬುರ್ಗಿ ಮತ್ತು ಶಿವಮೊಗ್ಗ ವಿಮಾನ ನಿಲ್ದಾಣವನ್ನು

ಮಾಡಬೇಕೆಂದು ವಿಧಾನಸಭೆಯಲ್ಲಿ ಅನೌನ್ಸ್ ಆಗುತ್ತದೆ. ಇದು ಪೂರ್ಣವಾಗಿ ರೆಡಿಯಾಗಿ ಆದೇಶವಾಗಿ ಓಡಾಡಿದರೂ ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ಕಾಮಗಾರಿ ಇನ್ನೂ ಪೂರ್ಣವಾಗಿಲ್ಲ.

**ವೈಸ್ ಚೇರ್ಮನ್:-** ಶಿವಮೊಗ್ಗದಲ್ಲಿ ಬೇಗ ಆಗುತ್ತದೆ.

**ಶ್ರೀ ಯು.ಬಿ.ವೆಂಕಟೇಶ್**:- ಮಾನ್ಯ ಸಭಾಪತಿಯವರೇ, ಈಗಾಗಲೇ ಜನರು ಇಲ್ಲಿಂದ ದೆಹಲಿಗೆ, ತಿರುಪತಿಗೆ, ಬೆಂಗಳೂರಿಗೆ ಓಡಾಡುತ್ತಿದ್ದಾರೆ. ಒಂದೇ ದಿನ ಅನೌನ್ಸ್ ಆಗಿದ್ದರೂ ನಮ್ಮ ಕಾಲದಲ್ಲಿ ಇದೆಲ್ಲಾ ಆಯಿತು. ನೀವು ಬಂದ ಮೇಲೆ ಆ ಭಾಗಕ್ಕೆ ಯಾಕಿಷ್ಟು ಅಸಡ್ಡೆ? ಬೆಂಗಳೂರಿನಲ್ಲಿ 10 ಜನರನ್ನು ಸಚಿವರನ್ನಾಗಿ ಮಾಡುತ್ತೀರಿ ಆ ಭಾಗದಲ್ಲಿ ಒಬ್ಬೊಬ್ಬರನ್ನು ಸಚಿವರನ್ನಾಗಿ ಮಾಡಿದರೆ; ಅತಿವೃಷ್ಟಿ, ಅನಾವೃಷ್ಟಿ, ಉದ್ಯೋಗ ಇಲ್ಲ. ಒಂದೊಂದು ಅಂಶವನ್ನು ಹೇಳಿದರೆ; ಶಿಕ್ಷಣದ ಕ್ಷೇತ್ರದಲ್ಲಿ ಅತಿ ಹಿಂದುಳಿದ ಸರ್ಕಾರಿ ಶಾಲೆಗಳಿವೆ. ಶಾಲೆಗಳಲ್ಲಿ ಕುಳಿತುಕೊಳ್ಳುವುದಕ್ಕೂ ಪರಿಸ್ಥಿತಿ ಇಲ್ಲ. ಅಲ್ಲಿ ಶಿಕ್ಷಕರಿಲ್ಲ. ಪೌಷ್ಠಿಕಾಂಶದ ಬಗ್ಗೆ ನಾವು ಬೇಕಾದಷ್ಟು ಸಲ ಇಲ್ಲಿ ಮಾತನಾಡಿದ್ದೇವೆ. ಆ ಭಾಗದ ಹೆಣ್ಣು ಮಕ್ಕಳ ಪೌಷ್ಠಿಕಾಂಶದ ಬಗ್ಗೆ ತಾವೂ ಮಾತನಾಡಿದ್ದೀರಿ. ಅಗತ್ಯವಿರುವಂತಹ ಶಾಲೆಗಳಿಲ್ಲ. ಅಲ್ಲಿನ ಜನರು ಗುಳೇ ಹೋಗುತ್ತಾರೆ. ಏತಕ್ಕೆ ಗುಳೇ ಹೋಗುತ್ತಾರೆ ಎಂದರೆ ಅಲ್ಲಿದ್ದರೆ ಏನೂ ಕೆಲಸ ಕಾರ್ಯ ಇರುವುದಿಲ್ಲ. ಈಗ ರಾಜ್ಯವೆಲ್ಲ ಶೇಕಡ 2.77 dropout, ಆ ಭಾಗದಲ್ಲಿ ಅದು ಶೇಕಡ 5.96 ಇದೆ. ಅದಕ್ಕೆ ಕಾರಣವೇನೆಂದರೆ, ಆ ತಾಯಿ ಮಕ್ಕಳನ್ನು ಎತ್ತಿಕೊಂಡು ಬಂದು ಬೇರೆ ಕಡೆಗಳಲ್ಲಿ ಕೂಲಿ ಮಾಡುತ್ತಾರೆ. ಅವರನ್ನು ಎಲ್ಲಿ ಶಾಲೆಗೆ ಸೇರಿಸುವುದು? ವಿದ್ಯೆ, ಬುದ್ಧಿ, ಕೆಲಸವೂ ಇಲ್ಲ. ಅನುಚ್ಛೇದ 371ಜೆ ತೆಗೆದುಕೊಂಡು ಇವರಿಗೆ ಏನು ಬಂದ ಹಾಗಾಯಿತು? ಯಾವುದೇ ಸರ್ಕಾರ ಇರಲಿ 1500 ಕೋಟಿ ಕೊಡುತ್ತೇವೆ ಎಂದಿರಿ, ಒಂದು ವರ್ಷವೂ ನೀವು ಹಣ ಕೊಡುವುದಿಲ್ಲ. ಹಣವನ್ನು ಯಾವಾಗ ಕೊಡುತ್ತೀರಿ? ಹಣ ಯಾವಾಗ ಬಂತು ಚೌಹಾಣ್ ಸಾಹೇಬರೇ? ಈಗ ಡಿಸೆಂಬರ್‌ನಲ್ಲಿ 323 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮಾರ್ಚ್ ಒಳಗೆ 1200 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಹೆಚ್ಚುವರಿಯಾಗಿ 1500 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುತ್ತೀರಾ? ಅನುಮೋದನೆಯಾಗುವುದಕ್ಕೆ ಸಿಬ್ಬಂದಿಗಳಿಲ್ಲ. ಸದನ ನಡೆಯಬೇಕಾದರೆ. ಎ, ಬಿ, ಸಿ, ಡಿ ವರ್ಗದ ಸಿಬ್ಬಂದಿಗಳಿರುತ್ತಾರೆ. ಅಲ್ಲಿ ಯಾವ ಸಿಬ್ಬಂದಿಯೂ ಇಲ್ಲ, ಅಧಿಕಾರಿಯೂ ಇಲ್ಲ. ಅಲ್ಲಿರುವ ಲೋಕೋಪಯೋಗಿ ಇಲಾಖೆಯ ಹತ್ತಿರ, ಇಂಜಿನಿಯರ್‌ಗಳ ಹತ್ತಿರ ಹೋಗಬೇಕು. ಇಷ್ಟು ಹಣ, ಇಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡುವಾಗ ಇದಕ್ಕೋಸ್ಕರ ಒಂದು ಪ್ರತ್ಯೇಕವಾದ K.K.R.D.B (Kalyana Karnataka Region Development Board) ಗೆ; ಇವರ್ಯಾರಾದರೂ ಹೋಗಿ ವಿಧರ್ಭದಲ್ಲಿ, ನಾಗಾಲ್ಯಾಂಡ್‌ನಲ್ಲಿ ಹೇಗೆ ಮಾಡಿದ್ದಾರೆ, ಅವರು ಹಣವನ್ನು ಹೇಗೆ ತರುತ್ತಾರೆ ಅದನ್ನು ನೋಡಬೇಕಲ್ಲವೇ? ಅನುಚ್ಛೇದ 371ಜೆ ತರುವುದಕ್ಕೆ ಈ ಜನರು ಪುಣ್ಯ ಮಾಡಿದ್ದಾರೆ. ಆದರೆ ಅದನ್ನು ಅನುಭವಿಸದೇ ಪಾಪ ಅನುಭವಿಸುತ್ತಿದ್ದಾರೆ. ಏಕೆಂದರೆ, ಪಾಪ ಅಲ್ಲಿ ಇರುವವರ್ಯಾರೂ ಬಾಯಿ ಬಿಚ್ಚುವುದಿಲ್ಲ. ಅವರ ಕರ್ಮನೋ ಏನೋ ನಮಗೆ ಗೊತ್ತಿಲ್ಲ. ಆ ಭಾಗದಲ್ಲಿ ಜನರು ಬಹಳ ಕಷ್ಟದಲ್ಲಿದ್ದಾರೆ. ಸರ್ಕಾರ ನಡೆಸುವವರು ಅವರ ಜೊತೆ ಹೋಗಿ ಈ ಸ್ಥಿತಿ ಬಂದಿದೆ, ಎಷ್ಟಿದೆ ಇದರಲ್ಲಿ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಯಾವ clause ನಲ್ಲಿ ಏನು ಅಭಿವೃದ್ಧಿ ಬೇಕಾದರೂ ಮಾಡಬಹುದು. ಶಿಕ್ಷಣದಲ್ಲಿ, ಗ್ರಾಮೀಣ ಅಭಿವೃದ್ಧಿಯಲ್ಲಿ, ಮಹಾತ್ಮ ಗಾಂಧಿ ಯೋಜನೆಯಲ್ಲಿ, ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿಯಲ್ಲಿ, ಸ್ವಚ್ಛ ಭಾರತದಲ್ಲಿ, ಗ್ರಾಮ ವಿಕಾಸ್ ಯೋಜನೆಯಲ್ಲಿ ಮಾಡಬಹುದು. ಈ ಭಾಗದ ಯಾವ ಯಾವ ತಾಲ್ಲೂಕುಗಳಲ್ಲಿ ಇಲಾಖೆಗಳ ವಿದ್ಯಾರ್ಥಿ ನಿಲಯ, ವಿವಿಧ ವಸತಿ ಶಾಲೆ, ಕಾಲೇಜು ಮಾದರಿ ಶಾಲೆಗಳಾಗಿರುತ್ತವೆ. ಒಂದೇ ಒಂದು ಮಾದರಿ ಶಾಲೆಯಿಲ್ಲ. ನಾವು ಭರವಸೆ ಸಮಿತಿಯಲ್ಲಿ ಹೈದರಾಬಾದ್-ಕರ್ನಾಟಕದಲ್ಲಿ ಏತಕ್ಕೆ ನೇಮಕಾತಿ ಮಾಡಿಕೊಳ್ಳುತ್ತಿಲ್ಲ ಎಂದು ಕೇಳುತ್ತಿದ್ದೆವು ಅದಕ್ಕೆ ಅವರು ಪರ್ಸೆಂಟೇಜ್ ಬರುತ್ತಿಲ್ಲ ಎಂದು ಹೇಳುತ್ತಿದ್ದರು. ಏತಕ್ಕೆ ಪರ್ಸೆಂಟೇಜ್ ಬರುತ್ತಿಲ್ಲ, ನೀವು ಅವರಿಗೆ ಒಂದು ಪರ್ಸೆಂಟ್ ಕಡಿಮೆ ಕೊಡಿ. ಬೆಂಗಳೂರಿಗೆ ಏತಕ್ಕೆ ಕಂಪೇರ್ ಮಾಡುತ್ತೀರಿ? ಆ ಭಾಗದಲ್ಲಿ ಏನು ಪ್ರತಿಕೂಲಿತ ಪರಿಸ್ಥಿತಿ ಇದೆ ಅದಕ್ಕನುಗುಣವಾಗಿ ಅಮೆಂಡ್‌ಮೆಂಟ್ ಮಾಡಿ. ಉದಾಹರಣೆಗೆ ನಾನು ಶೇ.70ರಷ್ಟು ಅಂಕಗಳನ್ನು ಅರ್ಥಶಾಸ್ತ್ರದಲ್ಲಿ ಪಡೆಯುತ್ತೇನೆ, ಕನ್ನಡದಲ್ಲಿ ಶೇ.41ರಷ್ಟು ಅಂಕ ಪಡೆಯುತ್ತೇನೆ. ನೀವು ಅದನ್ನೆ ಏತಕ್ಕೆ ಆಧಾರವಾಗಿಟ್ಟುಕೊಳ್ಳುತ್ತೀರಿ? ಅವರಿಗೆ ಏನು ಹೆಚ್ಚಿಗೆ ಅನುದಾನ ಕೊಡಬೇಕೋ ಅದನ್ನು ಕೊಟ್ಟು ಅಲ್ಲಿನ ಹುಡುಗರನ್ನು ಬರುವ ಹಾಗೆ ಮಾಡಿ ಎಲ್ಲರಿಗೂ ಕೆಲಸ ಕೊಡಿ.

**ವೈಸ್ ಚೇರ್ಮನ್:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ಈಗ ಮೀಟಿಂಗ್ ಇರುವುದರಿಂದ ಐದು ನಿಮಿಷದಲ್ಲಿ ಮುಗಿಸಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನ್ನದು ಮುಗಿಯುವುದಿಲ್ಲ. ಇನ್ನೂ ಅರ್ಧಗಂಟೆಯಾಗುತ್ತದೆ. ಇದೊಂದು ನತದೃಷ್ಟ ಭಾಗವಾಗಿದೆ.

**ವೈಸ್ ಚೇರ್ಮನ್:-** ಹಾಗಾದರೆ ನಾಳೆ ಮಾತನಾಡಬಹುದಲ್ಲವೇ?

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಆಗಬಹುದು.

**ವೈಸ್ ಚೇರ್ಮನ್:-** ಈಗ ಸದನವು ಮುಕ್ತಾಯವಾಗಿ ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರುವುದು.

**(ಸದನವು ಸಂಜೆ 06 ಗಂಟೆ 34 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 23ನೇ ಡಿಸೆಂಬರ್ ಮಾಹೇ 2021ರ ಗುರುವಾರ ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

**<><><>**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”